# ಕರ್ನಾಟಕ ವಿಕಾಸ

ಜನವರಿ 2012 ವಿಶೇಷ ಸಂಚಿಕೆ

महात्मा गांधी नरेगा
Mahatma Gandhi NREGA
ग्रामीण विकास मंत्रालय, भारत सरकार
Ministry of Rural Development, Govt. of India

## ದುಡಿವ ಕೈಗಳಿಗೆ ಕಾಯಕ


### ಬೀದಿ ನಾಟಕಗಳು ಹಾಗೂ ಜನ ಜಾಗೃತಿ ಗೀತೆಗಳು




ew of eFMS
Amita Prasad IAS
#317, 3rd Floor, Vikasa Soudha


MGNREGS
ELECTRONIC FUND MANAGEMENT SYSTEM
Meeting on progress & review of eFMS
In the presence of
Jain IAS
Dr. Amita Prasad IAS
AM to 1.30PM Venue : #317, 3rd Floor, Vikasa Soudha






ಸಂಚಿಕೆಯ ಪರಿಕಲ್ಪನೆ ಹಾಗೂ ಮಾರ್ಗದರ್ಶನ
**ಶ್ರೀ ಪಿ. ಶಿವಶಂಕರ್**
ನಿರ್ದೇಶಕರು
ಮ.ಗಾ.ರಾ.ಗ್ರಾ.ಉ.ಖಾ. ಯೋಜನೆ

ಪ್ರಕಾಶಕರು
**ಶ್ರೀ ಪಿ. ಕುಮಾರ್**
ನಿರ್ದೇಶಕರು (ಪಂ.ರಾಜ್)

ಗೀತೆ ಹಾಗೂ ನಾಟಕಗಳ ಸಂಕಲನ
**ಶ್ರೀ ಸಿ. ಬಸವಲಿಂಗಯ್ಯ**
**ಶ್ರೀಮತಿ ಕೆ.ಆರ್. ಸುಮತಿ**

ಸಂಚಿಕೆಯನ್ನು ರೂಪಿಸುವಲ್ಲಿ ನಮ್ಮೊಂದಿಗೆ
**ಶ್ರೀ ಎಂ. ಗೋವಿಂದನ್**
**ಶ್ರೀ ಟಿ. ವೆಂಕಟೇಶ್**
**ಶ್ರೀಮತಿ ಎಸ್. ಮೈಥಿಲಿ**
**ಶ್ರೀ ಚಂದ್ರಶೇಖರ್ ಮಸಗುಪ್ಪಿ**
**ಶ್ರೀ ಕೆ.ಜಿ. ನಾಗರಾಜ್**
**ಶ್ರೀಮತಿ ಹೆಚ್.ಕೆ. ರತಿಕುಮಾರಿ**
ಮ.ಗಾ.ರಾ.ಗ್ರಾ.ಉ.ಖಾ. ಯೋಜನಾ ನಿರ್ದೇಶನಾಲಯ

ಸಂಚಿಕೆಗೆ ಅಂದ ತಂದುಕೊಟ್ಟ
**ಶ್ರೀ ಪ್ರಕಾಶ್ ಚಿಕ್ಕಪಾಳ್ಯ**
ಕಲೆ ಮತ್ತು ವಿನ್ಯಾಸಕಾರರು, ಮೈಸೂರು

ಪುಟ ವಿನ್ಯಾಸ
**ಬೂವನಹಳ್ಳಿ ನಾಗರಾಜ್**
ಮುಖ್ಯ ಸಂಪಾದಕರು ಹಾಗೂ
ಸಾರ್ವಜನಿಕ ಸಂಪರ್ಕಾಧಿಕಾರಿಗಳು

ಜೊತೆಯಾಗಿ ಸಹಾಯಕ ಸಂಪಾದಕರು
**ಡಾ|| ಎಂ.ಎಸ್. ಮಂಜುನಾಥ**
**ನಾಗರಾಜ್. ಬಿ. ವಾಗಾ**

# ಕರ್ನಾಟಕ ವಿಕಾಸ

## ವಿಶೇಷ ಸಂಚಿಕೆ ಜನವರಿ 2012

**ಸಂಪುಟ : 53** **ಸಂಚಿಕೆ : 2**

## ಈ ಸಂಚಿಕೆಯೊಳಗೆ

## ಈ ಸಂಚಿಕೆಗೆ ಕೊಡುಗೆ ನೀಡಿದ ನಾಡಿನ ಹೆಸರಾಂತ ನಾಟಕ ಮತ್ತು ಗೀತ ರಚನಕಾರರುಗಳು :

**1. ಗೀತ ರಚನಕಾರರು**

ಮಾಯಸಂದ್ರ ಕೃಷ್ಣಪ್ರಸಾದ್
ಡಾ. ಟಿ.ಎಸ್. ವಿವೇಕಾನಂದ
ರಜಿಯಾ ಡಿ.ಬಿ.
ಕೃಷ್ಣಮೂರ್ತಿ ಬಿಳಿಗೆರೆ
ಕೆ.ವೈ. ನಾರಾಯಣಸ್ವಾಮಿ
ಆಲೂರು ದೊಡ್ಡನಿಂಗಪ್ಪ
ರಾಜಪ್ಪ ದಳವಾಯಿ
ಸುಬ್ಬು ಹೊಲೆಯಾರ್
ಮಂಜುನಾಥ್ ಬೆಳಕೆರೆ

**2. ನಾಟಕ ರಚನಕಾರರು**

ಶ್ರೀಮತಿ ಕೆ.ಆರ್. ನಂದಿನಿ ರಂಗಾಯಣ
ಡಾ. ಟಿ.ಎಸ್. ವಿವೇಕಾನಂದ
ಡಾ. ರಾಜಪ್ಪ ದಳವಾಯಿ
ಡಿ.ಎಸ್. ಚೌಗಲೆ
ಮಾಯಸಂದ್ರ ಕೃಷ್ಣಪ್ರಸಾದ್
ಮಂಜುನಾಥ್ ಬೆಳಕೆರೆ
ಪ್ರೊ. ಹೆಚ್.ಎಲ್. ಕೇಶವಮೂರ್ತಿ
ಆಲೂರು ದೊಡ್ಡನಿಂಗಪ್ಪ
ಡಾ. ಟಿ.ಎಸ್. ವಿವೇಕಾನಂದ

**ಕಚೇರಿ ವಿಳಾಸ**
ಮುಖ್ಯ ಸಂಪಾದಕರು, "ಕರ್ನಾಟಕ ವಿಕಾಸ"
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ನಂ. 309, 3ನೇ ಮಹಡಿ, ಗೇಟ್ ನಂ. 1, ಬಹುಮಹಡಿಗಳ ಕಟ್ಟಡ,
ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು – 560 001.
ದೂರವಾಣಿ : (080) 22353857
www.rdpr.kar.nic.in
**email:karnatakavikasa@ymail.com**








**ಶ್ರೀ ಜಗದೀಶ ಶೆಟ್ಟರ**
**ಸನ್ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು**

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಮೂರನೆ ಮಹಡಿ – 'ಸಿ' ಬ್ಲಾಕ್
ಬಹುಮಹಡಿ ಕಟ್ಟಡ,
ಬೆಂಗಳೂರು – 560 001.

***ಕಡಲೆಡೆಗೆ ತುಡಿವೆದೆಯ ಹತ್ತು ದಿಕ್ಕಿಗೆ ಹರಿಸಿ***
***ಯಾವುದೋ 'ಸಹರ'ದಲಿ ಇಂಗಿಸದಿರೋ,***
***ತಂಗು ಒಂದೆಡೆ ನೀನು ಅಣೆಕಟ್ಟುಗಳ ಕಟ್ಟು,***
***ಸುತ್ತ ಬಂಜರುನೆಲವ ಹಸುರಾಗಿಸೋ.***

**– ರಾಷ್ಟ್ರಕವಿ ಡಾ. ಜಿ.ಎಸ್. ಶಿವರುದ್ರಪ್ಪ**

ಪ್ರಿಯ ಬಂಧುಗಳೇ,

ನಮ್ಮ ರಾಜ್ಯದ ಗಣನೀಯ ಪ್ರಮಾಣದ ಜನಸಂಖ್ಯೆಯು ಗ್ರಾಮೀಣ ಜನತಾಣಗಳಲ್ಲಿ ವಾಸವಿದೆ. ಇವರುಗಳು ನಿತ್ಯ ಜೀವನೋಪಾಯಕ್ಕಾಗಿ ತಮ್ಮದೇ ಆದ ವೈವಿಧ್ಯಮಯ ಹಾಗೂ ಶ್ರಮಾಧಾರಿತ ಗ್ರಾಮೀಣ ಚಟುವಟಿಕೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಹಲವಾರು ಪಡಿಪಾಟಲುಗಳ ನಡುವೆಯೂ ಸಹ ಬೆವರು ಹರಿಸಿ ಶ್ರಮವಹಿಸಿ ದುಡಿದರೂ ಹಲವಾರು ಪ್ರಾಕೃತಿಕ ವಿಕೋಪಗಳಿಂದಾಗಿ ತಾನಂದುಕೊಂಡ ಅಭಿವೃದ್ಧಿಯ ನೆಲೆಗೆ ತಲುಪಲು ಸಾಧ್ಯವಾಗದೆ ಬಡತನದ ಬೇಗೆಯಲ್ಲಿ ತ್ರಾಸಪಡುತ್ತಿದ್ದಾನೆ.

ಇಂತಹ ಶ್ರಮ ಜೀವಿಗಳಿಗೆ ಸರ್ಕಾರವು ಎಲ್ಲಾ ಕಾಲಘಟ್ಟಗಳಲ್ಲೂ ಬೆಂಬಲವಾಗಿ ನಿಂತು ಹಲವಾರು ಗ್ರಾಮೀಣ ಅಭಿವೃದ್ಧಿ ಹಾಗೂ ಬಡತನ ನಿವಾರಣಾ ಕಾರ್ಯಕ್ರಮಗಳನ್ನು ರೂಪಿಸಿ ಜನರೊಟ್ಟಿಗೆ ಮುಖಾಮುಖಿಯಾಗುತ್ತಾ ಬರುತ್ತಿದೆ. ಇಂತಹ ಜನಪರವಾದ ಯೋಜನೆಗಳಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯು ಪ್ರಾಮುಖ್ಯವಾಗಿದೆ. ಈ ಯೋಜನೆಯಡಿ ಅಕುಶಲ ದೈಹಿಕ ಕೆಲಸ ಮಾಡಲು ಇಚ್ಛಿಸುವ ಗ್ರಾಮೀಣ ಪ್ರದೇಶದ ವಯಸ್ಕರಿಗೆ ಒಂದು ಆರ್ಥಿಕ ವರ್ಷದಲ್ಲಿ ಕನಿಷ್ಠ 100 ದಿನಗಳ ಉದ್ಯೋಗಾವಕಾಶಗಳನ್ನು ಸ್ಥಳೀಯವಾಗಿ ನೀಡಿ, ಬಡಜನರ ಬದುಕನ್ನು ಹಸನಾಗಿಸುವುದು ಯೋಜನೆಯ ಮುಖ್ಯ ಉದ್ದೇಶವಾಗಿದೆ.

ಈ ಯೋಜನೆಯ ಯಶಸ್ವಿ ಅನುಷ್ಠಾನಕ್ಕಾಗಿ ಸರ್ಕಾರ ಹಲವಾರು ಕ್ರಮಗಳನ್ನು ಅಳವಡಿಸಿಕೊಂಡು ಬರುತ್ತಿದ್ದರೂ ಸಾಧನೆಯ ಬಗ್ಗೆ ನಾವು ನಿರೀಕ್ಷಿಸಿದಷ್ಟು ಪ್ರಗತಿಯನ್ನು ಕಾಣಲು ಸಾಧ್ಯವಾಗಿಲ್ಲ. ಈ ಹಿನ್ನೆಲೆಯಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಬಗ್ಗೆ ಜನರಿಗೆ ಹೆಚ್ಚಿನ ಮಾಹಿತಿಯನ್ನು ನೀಡಿ ಮನಮುಟ್ಟುವಂತೆ ಮಾಡುವ ಅನಿವಾರ್ಯ ಸಮಕಾಲೀನ ಸಂದರ್ಭದಲ್ಲಿ ಪ್ರಸ್ತುತವಿದೆ.

ಹಾಗಾಗಿ ಇಲ್ಲಿಯವರೆವಿಗೂ ಯೋಜನೆಯನ್ನು ಯಶಸ್ವಿಗೊಳಿಸಲು ಅನುಸರಿಸುತ್ತಿರುವ ಕ್ರಮಗಳ ಜೊತೆಗೆ ಎಲ್ಲಾ ಸಂಸ್ಕೃತಿಗಳಿಗೂ, ತಾಯಿಬೇರಾದ ಜಾನಪದ ಸಂಸ್ಕೃತಿಯ ಕಲಾಪ್ರಕಾರಗಳನ್ನು ಯೋಜನೆಯನ್ನು ಪ್ರಚಾರಗೊಳಿಸುವ ಪ್ರಕ್ರಿಯೆಯಲ್ಲಿ ಅಳವಡಿಸಿಕೊಳ್ಳಲು ಪ್ರಯತ್ನಿಸಲಾಗಿದೆ. ಈ ನೆಲೆಯಲ್ಲಿ ಗ್ರಾಮೀಣ ಜನಪದರ ಕಲಾ ಪ್ರಕಾರಗಳಾದ ಬೀದಿ ನಾಟಕಗಳು, ಕಥನ ರೂಪಕಗಳು, ಕಲಾ ಜಾಥಾಗಳು ಇತ್ಯಾದಿಗಳ ಮೂಲಕ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಬಗ್ಗೆ ಜನ, ಜನಪ್ರತಿನಿಧಿ ಹಾಗೂ ಅಧಿಕಾರಿ ಸಿಬ್ಬಂದಿಗಳಿಗೆ ಅರಿವಿನ ಆಳತೆ ಗರಿಷ್ಠವಾಗುವಂತೆ ಮಾಡಿ ಯೋಜನೆಯ ಅನುಷ್ಠಾನದಲ್ಲಿ ಹೆಚ್ಚಿನ ಪ್ರಗತಿಯನ್ನು ನಿರೀಕ್ಷಿಸಲಾಗಿದೆ.

ಸರ್ಕಾರದ ಈ ನೂತನ ಕ್ರಮದಲ್ಲಿ ಭಾಗೀದಾರರಾಗುವ ಮೂಲಕ ಅವರ ಸಾಂಸ್ಕೃತಿಕ ಕಲೆಗಳನ್ನು ಮತ್ತು ಸಾಹಿತ್ಯಕ ಕಥನಗಳನ್ನು ಈ ಪುಸ್ತಕದಲ್ಲಿ ಕಟ್ಟಿಕೊಡುವ ಮೂಲಕ ಯೋಜನೆಯ ಯಶಸ್ವಿ ಅನುಷ್ಠಾನಕ್ಕೆ ಸಹಕರಿಸಿದ ಸಾಹಿತಿ, ಕಲಾವಿದರು, ಸಂಘಟಕರು, ಅಧಿಕಾರಿ, ಸಿಬ್ಬಂದಿಗಳನ್ನು ಅಭಿನಂದಿಸುತ್ತೇನೆ. ಹಾಗೂ ಈ ಸೃಜನಶೀಲ ಪ್ರಕ್ರಿಯೆಯ ಮೂಲಕವಾಗಿ ಅಧಿಕಾರಿ ಸಿಬ್ಬಂದಿಗಳು, ಜನಪ್ರತಿನಿಧಿಗಳು, ಒಬ್ಬರಿಗೊಬ್ಬರು ಒಗ್ಗೂಡಿ ಸಮನ್ವಯದ ನೆಲೆಯಲ್ಲಿ ಜನರೊಟ್ಟಿಗೆ ಮುಖಾಮುಖಿಯಾಗಿ ಅಭಿವೃದ್ಧಿಯ ಹೆಜ್ಜೆಗುರುತುಗಳನ್ನು ಗುರುತರವಾಗುವಂತೆ ಮಾಡುವಲ್ಲಿ ಹಾಗೂ ಯೋಜನೆಯ ಫಲಶೃತಿಯನ್ನು ಅರ್ಹರಿಗೆ ತಲುಪಿಸಲು ಕಾಲಬದ್ಧತೆಯ ಪ್ರಜ್ಞೆಯಲ್ಲಿ ಕ್ರಿಯಾಶೀಲರಾಗಿ ಕಾರ್ಯನಿರ್ವಹಿಸಲಿ ಎಂದು ಹಾರೈಸುತ್ತೇನೆ.

(ಜಗದೀಶ್ ಶೆಟ್ಟರ್)

ಸಚಿವಾಲಯದಿಂದ ಸಂದೇಶ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಮೂರನೆ ಮಹಡಿ – 'ಸಿ' ಬ್ಲಾಕ್
ಬಹುಮಹಡಿ ಕಟ್ಟಡ,
ಬೆಂಗಳೂರು – 560 001.



ಡಾ. ಅಮಿತಾ ಪ್ರಸಾದ್, ಭಾ.ಆ.ಸೇ.
ಸರ್ಕಾರದ ಪ್ರಧಾನ ಕಾರ್ಯದರ್ಶಿ

## ಪ್ರಿಯ ಬಂಧುಗಳೇ,

ಋತುಮಾನ ಸಂಪುಟಗಳಿಗೆ ಅನುಸಾರವಾಗಿ ಗ್ರಾಮೀಣ ಪ್ರದೇಶದಲ್ಲಿ ವರ್ಷದ ಎಲ್ಲಾ ದಿನಗಳಲ್ಲೂ ಕೆಲಸ ಇಲ್ಲದಿರುವುದು, ಇದ್ದರೂ ಕೂಲಿ ನೀಡುವಿಕೆಯಲ್ಲಿ ಲಿಂಗಾಧಾರಿತವಾಗಿ ತಾರತಮ್ಯ ಮಾಡುವ ವಿಷದ ಸಂದರ್ಭಗಳನ್ನು ನಾವು ನೀವೆಲ್ಲರೂ ಕಂಡಿದ್ದೇವೆ. ನೈಸರ್ಗಿಕ ವಿಪತ್ತುಗಳಿಗೆ ತುತ್ತಾದ ಭೂಹಿಡುವಳಿದಾರರು, ಭೂರಹಿತ ಕೃಷಿಕಾರ್ಮಿಕರು ಹಾಗೂ ಅಕುಶಲಿಗರು ಉದ್ಯೋಗಕ್ಕಾಗಿ ಊರಿಂದ ಊರಿಗೆ ಗುಳೆ ಹೋಗುವ ಪರಿಸ್ಥಿತಿಯನ್ನು ನಾವು ಕಾಣುತ್ತಿದ್ದೇವೆ.

ಈ ಎಲ್ಲಾ ಗ್ರಾಮೀಣರ ಬದುಕನ್ನು ಹಸನುಗೊಳಿಸುವ ನಿಟ್ಟಿನಲ್ಲಿ, ದುಡಿಯುವ ಸಾಮರ್ಥ್ಯ, ಅಗತ್ಯತೆ ಮತ್ತು ಲಿಂಗ ಭೇದವಿಲ್ಲದೆ ಒಂದಷ್ಟು ಉದ್ಯೋಗವನ್ನು ದುಡಿಯುವ ಕೈಗಳಿಗೆ ಒದಗಿಸಬೇಕು. ತನ್ಮೂಲಕ ಸ್ವಾವಲಂಬಿ ಬದುಕನ್ನು ಕಟ್ಟಿಕೊಡುವ ವಿಪುಲ ಅವಕಾಶಗಳನ್ನು ಕಲ್ಪಿಸುವುದು ಇವತ್ತಿನ ಕಾಲಘಟ್ಟದ ಮಹತ್ವದ ಆದ್ಯತೆಗಳಲ್ಲಿ ಒಂದಾಗಿದೆ. ತನ್ಮೂಲಕ ಸುಸ್ಥಿರ ಗ್ರಾಮೀಣ ಸಮುದಾಯ ಹಾಗೂ ಸಂತೃಪ್ತ ಸಮಾಜವನ್ನು ಕಟ್ಟುವ ಆಶಯವೂ ಸಹ ಒಳಗೊಂಡಿದೆ.

ಸ್ವಾತಂತ್ರ್ಯಾ ನಂತರದಲ್ಲಿ ರಾಜ್ಯದಲ್ಲಾದ ಪ್ರಜಾಪ್ರಭುತ್ವ ವಿಕೇಂದ್ರೀಕರಣ ಮುನ್ನಡೆ ಹಾಗೂ ಅಭಿವೃದ್ಧಿಯ ನಡಿಗೆಯಲ್ಲಿ ನಿರುದ್ಯೋಗ ನಿವಾರಣೆ, ಹಳ್ಳಿಗಳ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಲಾಗುತ್ತಾ ಬಂದಿರುವುದನ್ನು ಮತ್ತು ಬರುತ್ತಿರುವುದನ್ನು ತಾವುಗಳು ಸಹ ಮನಗಂಡಿದ್ದೀರಿ. ಈ ಹಾದಿಯಲ್ಲಿ ಫೆಬ್ರವರಿ 2006ರಿಂದ ಜಾರಿಗೆಬಂದಿರುವ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಮೊದಲು 5 ಜಿಲ್ಲೆಗಳಲ್ಲೂ, ಏಪ್ರಿಲ್ 2007ರಿಂದ 6 ಜಿಲ್ಲೆಗಳಿಗೆ ವಿಸ್ತರಣೆಗೊಂಡು ನಂತರ 2008ರಿಂದ ರಾಜ್ಯದ ಉಳಿದ ಜಿಲ್ಲೆಗಳಿಗೂ ವಿಸ್ತರಿಸಿ ಯೋಜನೆಯನ್ನು ಪ್ರಸ್ತುತ ದಿನಮಾನದಲ್ಲೂ ಕಾರ್ಯಗತಗಳಿಸಿಕೊಂಡು ಬರಲಾಗುತ್ತಿದೆ.

ಯಾವುದೇ ಗ್ರಾಮೀಣ ಪರವಾದಂತಹ ಯೋಜನೆಗಳು ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳಬೇಕಾದರೆ ಗ್ರಾಮೀಣ ಸರ್ವ ಜನರ

ಸಹಭಾಗಿತ್ವ ಅತ್ಯಗತ್ಯ. ಈ ಪಾಲ್ಗೊಳ್ಳುವಿಕೆ ಲಿಂಗಭೇದವಿಲ್ಲದೆ ಗಣನೀಯವಾಗಿ ಗರಿಷ್ಠಗೊಳ್ಳಲು ಅಧಿಕಾರಿ,ಸಿಬ್ಬಂದಿಗಳ, ಜನ, ಜನಪ್ರತಿನಿಧಿಗಳ ಹೊಣೆಗಾರಿಕೆಯೂ ಅಷ್ಟೇ ಮಹತ್ವದಾಗಿರುತ್ತದೆ.

ಈ ಮಹತ್ವದ ಹೊಣೆಗಾರಿಕೆಯನ್ನು ಗುರುತರವಾಗಿಸಲು ಇಲಾಖೆಯು ತರಬೇತಿಗಳ ಮುಖಾಂತರ ಸುತ್ತೋಲೆ, ಅಧಿಸೂಚನೆ, ಮುದ್ರಣ ಸಾಮಗ್ರಿ ಮತ್ತು ಗೋಡೆ ಬರಹಗಳ ಮೂಲಕ ಅಧಿಕಾರಿ,ಸಿಬ್ಬಂದಿಗಳನ್ನು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನಕ್ಕೆ ಸಜ್ಜುಗೊಳಿಸಲಾಗಿದೆ. ಇದೇ ತೆರನಾದ ಅರಿವಿನ ಕಾರ್ಯತಂತ್ರವನ್ನು ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಚುನಾಯಿತಿ ಪ್ರತಿನಿಧಿಗಳಿಗೆ ಸಹ ಯೋಜನೆಯನ್ನು ಗ್ರಾಮೀಣ ಪ್ರದೇಶದಲ್ಲಿ ಕಾರ್ಯಗತಗೊಳಿಸುವ ಬಗ್ಗೆ ಪರಿಚಯಿಸಲಾಗಿದೆ. ಈ ಎಲ್ಲಾ ಕ್ರಮಗಳಿಂದ ಅಭಿವೃದ್ಧಿಯತ್ತ ಸಾಗುತ್ತಿದ್ದರೂ ಪ್ರಗತಿಯತ್ತ ಇನ್ನಷ್ಟು ದೃಢ ಹೆಜ್ಜೆಗಳನ್ನಿಟ್ಟು ಯೋಜನೆಯನ್ನು ಜನಪರಗೊಳಿಸಿ ಯಶಸ್ವಿ ದಿಕ್ಕಿನತ್ತ ಕೊಂಡೊಯ್ಯಬೇಕಾಗಿದೆ. ಗ್ರಾಮೀಣ ಜನರ ಹಾಗೂ ಗ್ರಾಮೀಣ ಜನತಾಣಗಳನ್ನು ಅಭಿವೃದ್ಧಿಪಡಿಸಬೇಕಾಗಿದೆ.

ಈ ಹಿನ್ನೆಲೆಯಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಸೃಜನಶೀಲ ನೆಲೆಯಲ್ಲಿ ಜನ ಮಾನಸಕ್ಕೆ ಮುಟ್ಟಿಸುವ ಪ್ರಯತ್ನವನ್ನು ಮಾಡಲಾಗಿದೆ. ಈ ಸ್ಪಂದನಶೀಲ ಕಾರ್ಯಕ್ಕೆ ನಾಡಿನ ಹೆಸರಾಂತ ಸಾಹಿತಿ, ಕಲಾವಿದರ ನೆರವನ್ನು ಪಡೆದುಕೊಳ್ಳಲಾಗಿದೆ. ಈ ಕಲಾ ಪ್ರಕಾರಗಳ ಪ್ರಯೋಗವನ್ನು ಸಾಕ್ಷರತ ಆಂದೋಲನದಲ್ಲಿ ಬಳಕೆಯಾಗಿ ಹಾಗೂ ಸಂಪೂರ್ಣ ಸ್ವಚ್ಛತಾ ಆಂದೋಲನದಲ್ಲಿ ಬಳಕೆಯಾಗುತ್ತಿರುವುದನ್ನು ಗಮನಿಸುತ್ತಿದ್ದೇನೆ. ಹಾಗೂ ಇದೇ ಪ್ರಯೋಗವನ್ನು ಹ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಲ್ಲಿ ಬಳಸಿಕೊಳ್ಳಲು ಸರ್ಕಾರವು ಉತ್ಸುಕವಾಗಿದೆ. ಈ ಉತ್ಸುಕತೆಯ ವಾಸ್ತವ ಯಶೋಗಾಥೆಯ ಚಿತ್ರಣವೇ ನಿಮ್ಮ ಕೈಯಲ್ಲಿರುವ ಈ ಪುಸ್ತಕ. ಇದನ್ನು ಉದ್ಯೋಗ ಖಾತರಿ ಯೋಜನೆಯ ಕುರಿತಾಗಿ ಜನರಲ್ಲಿ ಜಾಗೃತಿ ತರುವ ಹಾಡುಗಳು, ಬೀದಿನಾಟಕಗಳ ಚಿತ್ರಣವನ್ನು ಅಕ್ಷರ ರೂಪದಲ್ಲಿ ಕಟ್ಟಿಕೊಡಲಾಗಿದೆ. ಅಕ್ಷರವಂತರು ಇದರಲ್ಲಿರುವ ಆಶಯಗಳನ್ನು ಅರಿತು ಅಕ್ಷರದ ಅರಿವಿಲ್ಲದ ಗ್ರಾಮೀಣ ಜ್ಞಾನವಂತರೊಂದಿಗೆ ಹಂಚಿಕೊಳ್ಳುವ ಪ್ರಾಮಾಣಿಕ ಪ್ರಯತ್ನವನ್ನು ಮಾಡಲು ನಿಮ್ಮನ್ನು ಒತ್ತಾಯಿಸುತ್ತೇನೆ.

ಈ ಒತ್ತಾಯದ ಹಿಂದೆ ಬಹಳಷ್ಟು ಸಾಹಿತಿ ಕಲಾವಿದರ, ಅಧಿಕಾರಿ,ಸಿಬ್ಬಂದಿಗಳ ಶ್ರಮವಿದೆ ಮತ್ತು ಸೃಜನಶೀಲತೆಯಿದೆ. ಎಲ್ಲಕ್ಕೂ ಮಿಗಿಲಾಗಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಫಲಶೃತಿ ಗ್ರಾಮೀಣ ಜನತೆಗೆ ದಕ್ಕಲಿ ಎಂಬ ತುಡಿತವಿದೆ. ತನ್ಮೂಲಕ ಜನರ ಬದುಕ ಹಸನಾಗಲೆಂಬ ಹೃದಯವಂತಿಕೆ ಇದೆ. ಈ ಎಲ್ಲರ ಹೃದಯವಂತಿಕೆ ಮತ್ತು ಸರ್ಕಾರದ ಸದಾಶಯವನ್ನು ಯೋಜನೆಯ ಅನುಷ್ಠಾನದಲ್ಲಿ ತೊಡಗಿಸಿಕೊಂಡಿರುವ ಎಲ್ಲರೂ ಅರ್ಥೈಸಿಕೊಂಡು ಅಭಿವೃದ್ಧಿಗೆ ಹೊಸ ಭಾಷ್ಯ ಬರೆಯಲು ಕೋರುತ್ತೇನೆ. ಈ ಪ್ರಕ್ರಿಯೆಯಲ್ಲಿ ನೀವೆಲ್ಲರೂ ಯಶಸ್ವಿಯಾಗಲಿ ಎಂದು ಹಾರೈಸುತ್ತೇನೆ.

(ಡಾ. ಅಮಿತಾ ಪ್ರಸಾದ್)

# ಕಾರ್ಯದರ್ಶಿಗಳ ಆಶಯ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಮೂರನೆ ಮಹಡಿ – 'ಸಿ' ಬ್ಲಾಕ್
ಬಹುಮಹಡಿ ಕಟ್ಟಡ,
ಬೆಂಗಳೂರು – 560 001.



ಡಾ. ಶಾಲಿನಿ ರಜನೀಶ್, ಐ.ಎ.ಎಸ್.
ಸರ್ಕಾರದ ಕಾರ್ಯದರ್ಶಿ

ಪ್ರಿಯ ಬಂಧುಗಳೇ,

ಬರ ಹಾಗೂ ಪ್ರವಾಹದಂತಹ ನೈಸರ್ಗಿಕ ವಿಕೋಪಗಳಿಂದಾಗಿ ಇಂದು ಜನರು ತತ್ತರಿಸಿ ಹೋಗುತ್ತಿದ್ದಾರೆ. ಉಳುವ ಭೂಮಿ ಹಾಳಾಗಿ, ಫಲವತ್ತತೆಯನ್ನು ಕಳೆದುಕೊಂಡು ಬೆಳೆದ ಬೆಳೆ ಹೊಟ್ಟೆ ತುಂಬಿಸಲು ಸಾಧ್ಯವಾಗುತ್ತಿಲ್ಲ! ಹಾಕಿದ ಬಂಡವಾಳ ಕೈಸೇರುತ್ತಿಲ್ಲ. ಇನ್ನು ಗ್ರಾಮೀಣ ಜನತೆ ಆರ್ಥಿಕವಾಗಿ ಸದೃಢವಾಗುವ ಮಾತೇ ಕನಸಾಗಿದೆ? ಈ ಪರಿಸ್ಥಿತಿಯಲ್ಲಿ ಕೂಲಿ ಮಾಡುವುದೇ ವಾಸಿ ಎನ್ನುವ ಸ್ಥಿತಿಗೆ ರೈತ ಬಂದು ತಲುಪಿದ್ದಾನೆ? ವ್ಯವಸಾಯವನ್ನು ನಂಬಿದವರ ಪರಿಸ್ಥಿತಿಯೇ ಈ ರೀತಿ ದುಸ್ತರವಾದರೆ ಇನ್ನು ಕೃಷಿ ಕೂಲಿಯನ್ನು ನಂಬಿದಂತಹ ಕೃಷಿ ಕಾರ್ಮಿಕರ ಹಾಗೂ ಅಕುಶಲಿಗರ ಪಾಡೇನು? ಜೀವನ ನಿರ್ವಹಣೆಯೇ ದಾರುಣವಾದಾಗ ಮಾಡುವುದೇನು? ಗುಳೆ ಹೋಗಲೇಬೇಕಲ್ಲ ನಗರಗಳತ್ತ ಉದ್ಯೋಗವನ್ನರಸಿ ...!

ಇಂತಹ ವಿಷಮ ಪರಿಸ್ಥಿತಿಯಲ್ಲಿರುವ ಜನರನ್ನು ಸ್ಥಳೀಯವಾಗಿ ಸುಸ್ಥಿರತೆಯ ಕಡೆಗೆ ಕೊಂಡೊಯ್ಯುವ ಹೊಣೆಗಾರಿಕೆ ಹಾಗೂ ಜವಾಬ್ದಾರಿ ಸರ್ಕಾರದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಿಲ್ಲಾ, ತಾಲ್ಲೂಕು ಹಾಗೂ ಗ್ರಾಮ ಮಟ್ಟದಲ್ಲಿ ನಿರ್ವಹಿಸುತ್ತಿರುವ ನಿಮ್ಮ ಮೇಲಿರುತ್ತದೆ.

ರಾಜ್ಯದಲ್ಲಿ ಹಂತ–ಹಂತವಾಗಿ ಮೂರು ಹಂತಗಳಲ್ಲಿ ಜಾರಿಗೆ ಬಂದು ಪ್ರಸ್ತುತ ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳ ಪರಿಧಿಯಲ್ಲಿ ಅನುಷ್ಠಾನದಲ್ಲಿರುವ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ನೈಜತೆಯ ನೆಲೆಗಟ್ಟಿನಲ್ಲಿ ಕಾರ್ಯರೂಪಕ್ಕೆ ತಂದು ಜನಪರವಾಗಿಸಿ ಗ್ರಾಮೀಣ ಜನರ ಆರ್ಥಿಕ ಪರಿಸ್ಥಿಯನ್ನು ಉತ್ತಮಪಡಿಸ ಬೇಕಾಗಿದೆ. ಈ ಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿರುವ ಪಂಚಾಯತ್ ರಾಜ್ ಸಂಸ್ಥೆಗಳ ಪ್ರತಿನಿಧಿಗಳು ಹಾಗೂ ಅಧಿಕಾರಿ, ಸಿಬ್ಬಂದಿಗಳ ಹೊಣೆಗಾರಿಕೆ ಹೆಚ್ಚಿನ ಮಹತ್ವ ಪಡೆದುಕೊಂಡಿದೆ.

ಈ ಮಹತ್ವದ ಹೊಣೆಗಾರಿಕೆಯನ್ನು ಯಶಸ್ವಿಯಾಗಿ ನಿರ್ವಹಿಸಲು ಯೋಜನೆಯ ಉದ್ದೇಶ ಹಾಗೂ ಅನುಷ್ಠಾನದ ಸಂಪೂರ್ಣ ವಿವರಗಳನ್ನು

ಕ್ಷೇತ್ರ ಮಟ್ಟದಲ್ಲಿ ಅನುಷ್ಠಾನದ ಜವಾಬ್ದಾರಿ ಹೊತ್ತಿರುವ ನಿಮಗೆ ಈಗಾಗಲೇ ಸಾಕಷ್ಟು ಮಾಹಿತಿ ಸಾಮಗ್ರಿಯನ್ನು ಕಾಲಕಾಲಕ್ಕೆ ನೀಡಲಾಗಿರುತ್ತದೆ. ಇದರ ಜೊತೆಗೆ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನದಲ್ಲಿ ಯೋಜನೆಯು ಆರಂಭವಾದ ವರ್ಷದಿಂದಲೂ ಕಾಲಕಾಲಕ್ಕೆ ಬಂದಿರುವ ಮಾರ್ಗಸೂಚಿ, ಸುತ್ತೋಲೆ ಹಾಗೂ ಪತ್ರಗಳೆಲ್ಲವನ್ನೂ ಸಂಗ್ರಹಿಸಿ ಕರ್ನಾಟಕ ವಿಕಾಸದ ಮೂಲಕವೂ ಸಹ ತಲುಪಿಸುವ ಪ್ರಯತ್ನವನ್ನು ಮಾಡಲಾಗಿದೆ.

ಇದಲ್ಲದೇ ಯೋಜನೆಯ ಯಶಸ್ವಿ ಅನುಷ್ಠಾನಕ್ಕಾಗಿ ರಾಜ್ಯಮಟ್ಟದಲ್ಲಿ ಸಭೆ ಸಮ್ಮೇಳನಗಳು, ವಿಡಿಯೋ ಕಾನ್ಫರೆನ್ಸ್‌ಗಳು ಮತ್ತು ಸ್ಥಳೀಯವಾಗಿ ಪಂಚಾಯತ್ ರಾಜ್ ಸಂಸ್ಥೆಗಳ ಹಂತಗಳಲ್ಲೂ ನಡೆದಿರಬಹುದಾದ ಕಾರ್ಯಾಗಾರ ಮತ್ತು ತರಬೇತಿ ಶಿಬಿರಗಳಲ್ಲೂ ಹೆಚ್ಚಿನ ಮಾಹಿತಿಯನ್ನು ಪಡೆದು ಈಗಾಗಲೇ ಯೋಜನೆಯನ್ನು ಜಾರಿಗೊಳಿಸುವ ಪ್ರಕ್ರಿಯೆಯಲ್ಲಿ ತಾವೆಲ್ಲರೂ ಕ್ರಿಯಾಶೀಲರಾಗಿ ಅಭಿವೃದ್ಧಿಯ ಪಥದಲ್ಲಿ ಸಾಗುತ್ತಿದ್ದೀರಾ ಎಂದು ನಂಬಿದ್ದೇನೆ. ಈ ಅಭಿವೃದ್ಧಿ ಪ್ರಕ್ರಿಯೆಯನ್ನು ಇನ್ನಷ್ಟು ತೀವ್ರಗೊಳಿಸಬೇಕಾದ ಅವಶ್ಯಕತೆ ಇದೆ. ಇದಕ್ಕಾಗಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಲ್ಲಿ ತೊಡಗಿಸಿಕೊಂಡಿರುವ ಎಲ್ಲರಲ್ಲೂ ಉತ್ಸಾಹ ಮತ್ತು ಕ್ರಿಯಾಶೀಲತೆಗಳನ್ನು ದುಪ್ಪಟ್ಟುಗೊಳ್ಳುವಂತೆ ಮಾಡುವಲ್ಲಿ ಜಾನಪದ ಪ್ರಕಾರಗಳನ್ನು ಸಮಕಾಲೀನ ಸಂದರ್ಭದಲ್ಲಿ ಬಳಸಿಕೊಳ್ಳಲಾಗುತ್ತಿದೆ.

ಈ ಎಲ್ಲಾ ಪ್ರಕಾರಗಳು ಓದುಬರಹ ಬಾರದ ಬುದ್ಧಿವಂತರಿಗೂ ಸುಲಭ ಹಾಗೂ ಶೀಘ್ರವಾಗಿ ಮನಮುಟ್ಟುತ್ತವೆ. ತನ್ಮೂಲಕ ಗ್ರಾಮೀಣ ಜನತೆ ಯೋಜನೆಯ ಫಲಶ್ರುತಿಗಾಗಿ ಪ್ರಶ್ನೆ ಮಾಡುವ ಮತ್ತು ಪ್ರಯತ್ನ ಮಾಡುವ ಎಲ್ಲಾ ಪ್ರೇರಣೆ ಹಾಗೂ ಸ್ಪಂದನೆಗಳನ್ನು ನೀಡುತ್ತವೆ.

ಹಾಗಾಗಿ ಸಂವೇದನಾಶೀಲ ಬರಹಗಾರರ ಮತ್ತು ನಾಟಕಕಾರರ ಗೀತೆಗಳು, ನಾಟಕಗಳು ಈಗಾಗಲೇ ಕಲಾ ಜಾಥದಲ್ಲಿ ಭಿತ್ತರಗೊಂಡು ಜನಮನ್ನಣೆಗಳಿಸಿವೆ. ಪ್ರಸ್ತುತ ಈ ಗೀತೆಗಳು ಮತ್ತು ನಾಟಕಗಳನ್ನು ಪುಸ್ತಕ ರೂಪದಲ್ಲಿ ಮುದ್ರಿಸಿ ನಿಮಗೆ ತಲುಪಿಸಲಾಗಿದೆ. ಇದಕ್ಕೆ ಕಾರಣರಾದ ಎಲ್ಲರನ್ನೂ ಅಭಿನಂದಿಸುತ್ತೇನೆ.

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಯಶಸ್ವಿ ಅನುಷ್ಠಾನಕ್ಕಾಗಿ ಸರ್ಕಾರವು ಮಾಡುತ್ತಿರುವ ಎಲ್ಲಾ ಪ್ರಯತ್ನಗಳಿಗೆ ಬೆಲೆ ಬರುವುದು ಯೋಜನೆಯ ಫಲಶ್ರುತಿ ಗ್ರಾಮೀಣ ಜನತೆಗೆ ಯಥಾವತ್ತಾಗಿ ತಲುಪಿ ಅವರ ಜೀವನಮಟ್ಟ ಸುಧಾರಣೆಯಾದಾಗ ಮಾತ್ರ ಎಂಬುದು ವಾಸ್ತವ. ಈ ವಾಸ್ತವ ಸಂಗತಿಯನ್ನು ಗಮನದಲ್ಲಿಟ್ಟುಕೊಂಡು ಯೋಜನೆಯನ್ನು ಪಾರದರ್ಶಕ ಹಾಗೂ ಜನರ ಸಹಭಾಗಿತ್ವದಲ್ಲಿ ಗ್ರಾಮೀಣ ಜನವಸತಿಗಳ ಅಭಿವೃದ್ಧಿ ಹಾಗೂ ಜನಾಭಿವೃದ್ಧಿಯನ್ನು ಮಾಡಲು ನೀವುಗಳೆಲ್ಲರೂ ಹೆಚ್ಚು ಕ್ರಿಯಾಶೀಲರಾಗುವಂತೆಯೂ ಮತ್ತು ಆ ನಿಟ್ಟಿನ ನಿಮ್ಮ ಪ್ರಾಮಾಣಿಕ ಪ್ರಯತ್ನ ಯಶಸ್ವಿಯಾಗಲೀ ಎಂದು ಹಾರೈಸುತ್ತೇನೆ.

(ಡಾ. ಶಾಲಿನಿ ರಜನೀಶ್)

# ನಿರ್ದೇಶಕರ ಸಂದೇಶ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಮೂರನೆ ಮಹಡಿ – 'ಸಿ' ಬ್ಲಾಕ್
ಬಹುಮಹಡಿ ಕಟ್ಟಡ,
ಬೆಂಗಳೂರು – 560 001.



ಪಿ. ಶಿವಶಂಕರ್
ನಿರ್ದೇಶಕರು
ಎಂ.ಜಿ.ಎನ್.ಆರ್.ಇ.ಜಿ.ಎ

ಪ್ರಿಯ ಬಂಧುಗಳೇ,

ರಾಜ್ಯದಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಮೊದಲನೇ ಹಂತದಲ್ಲಿ 2005ರಿಂದ ಗುಲಬರ್ಗಾ, ರಾಯಚೂರು, ದಾವಣಗೆರೆ, ಚಿತ್ರದುರ್ಗಾ ಹಾಗೂ ಬೀದರ್ 2ನೇ ಹಂತದಲ್ಲಿ 2007 ರಿಂದ ಬೆಳಗಾವಿ, ಬಳ್ಳಾರಿ, ಚಿಕ್ಕಮಗಳೂರು, ಹಾಸನ, ಕೊಡಗು ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿಯೂ 2008ರಿಂದ ಉಳಿದ 18 ಜಿಲ್ಲೆಗಳಲ್ಲೂ ಕಾರ್ಯಾನುಷ್ಠಾನಕ್ಕೆ ತರಲಾಗಿದೆ. ಈ ಯೋಜನೆಯ ಕಾಯಿದೆಬದ್ಧ ಮಾನ್ಯತೆಯನ್ನು ಪಡೆದು, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ 2005ರ ಹೆಸರಿನಲ್ಲಿ ಅಸ್ತಿತ್ವದಲ್ಲಿರುತ್ತದೆ.

ಈ ಯೋಜನೆ ಬಗ್ಗೆ ಪರಿಚಯ ನಿಮಗಿದ್ದರೂ ಈ ಪುಸ್ತಕದ ಆಶಯವನ್ನು ತಿಳಿಸುವ ಪ್ರಸ್ತುತ ಸಂದರ್ಭದಲ್ಲಿ ಸಂಕ್ಷಿಪ್ತವಾಗಿ ತಿಳಿಸುವುದು ಅಗತ್ಯವೆಂದು ಭಾವಿಸಿದ್ದೇನೆ. ಗ್ರಾಮೀಣ ಪ್ರದೇಶದಲ್ಲಿ ಸ್ವಇಚ್ಛೆಯಿಂದ ದೈಹಿಕ ಶ್ರಮವಿಹಿಸಿ ಅಕುಶಲ ಕೆಲಸ ಮಾಡಲು ಇಚ್ಛಿಸುವ ವಯಸ್ಕರಿಗೆ ಒಂದು ವರ್ಷದಲ್ಲಿ 100 ದಿನಗಳ ಉದ್ಯೋಗವನ್ನೊದಗಿಸಿ ಕೂಲಿಯನ್ನು ಲಿಂಗಬೇಧವಿಲ್ಲದೆ ಹೆಚ್ಚು ವಿಳಂಬವಿಲ್ಲದೆ ಪಾವತಿಸಬೇಕು. ಉದ್ಯೋಗವನ್ನರಸಿ ಗುಳೆ/ವಲಸೆ ಹೋಗುವ ಪಾರಂಪರಿಕ ಪದ್ಧತಿಯನ್ನು ಸಂಪೂರ್ಣವಾಗಿ ತಡೆಯಬೇಕಾಗಿದೆ.

ಗ್ರಾಮೀಣ ಜನರ ಜೀವನಕ್ಕೆ ಆರ್ಥಿಕ ಭದ್ರತೆ ನೀಡುವುದು ಅಲ್ಲದೆ ದೀರ್ಘಕಾಲ ಬಾಳಿಕೆ ಬರುವ ಗ್ರಾಮೀಣ ಜೀವನೋಪಾಯದ ಸಂಪನ್ಮೂಲಗಳನ್ನು ಬಲಪಡಿಸಲು ಅಂತರ್ಜಲ ಹೆಚ್ಚಿಸುವ, ಪರಿಸರ ಸಂರಕ್ಷಣೆ ಮಾಡುವ ಅರಣ್ಯ ಕಾಮಗಾರಿಗಳು ಮತ್ತು ಗ್ರಾಮೀಣ ಜನಾಭಿವೃದ್ಧಿಗೆ ಅತಿ ಹೆಚ್ಚು ಪೂರಕವಾದ, ಬಡತನ ರೇಖೆಯ ಕೆಳಗಿರುವ ಪರಿಶಿಷ್ಟ ಜಾತಿ/ಪಂಗಡದ ಜನರಿಗೆ, ಇಂದಿರಾ ಆವಾಸ್ ಹಾಗೂ ಭೂಸುಧಾರಣಾ ಫಲಾನುಭವಿಗಳಿಗೆ ವೈಯಕ್ತಿ ಜಮೀನು ಅಭಿವೃದ್ಧಿ ಹಾಗೂ ನೀರಾವರಿ ಸೌಲಭ್ಯ ನೀಡಿ ಅವರ ಬದುಕನ್ನು ಆರ್ಥಿಕವಾಗಿ ಸದೃಢಗೊಳಿಸುವುದು. ಸಾಂಪ್ರದಾಯಿಕ ಕುಡಿಯುವ ನೀರಿನ ಮೂಲಗಳ ಪುನಶ್ಚೇತನ ಮಳೆ ನೀರು ಕೊಯ್ಲು ಮತ್ತು ಸರ್ವಋತು ರಸ್ತೆ ನಿರ್ಮಾಣದಂತಹ ಕಾಮಗಾರಿಗಳನ್ನು ಕೈಗೆತ್ತಿಗೊಳ್ಳಲು ಅವಕಾಶ ಕಲ್ಪಿಸಲಾಗಿದೆ.

ಯೋಜನೆಯ ಅನುಷ್ಠಾನದಲ್ಲಿ ಹೆಚ್ಚಿನ ಪಾರದರ್ಶಕತೆಯನ್ನು ತರಲು ಕಾಮಗಾರಿ ಸ್ಥಳಗಳಲ್ಲಿ ಕಾಮಗಾರಿಗಳ ವಿವರ ನಮೂದಿಸುವ ಬೋರ್ಡ್ ಹಾಕುವುದು, ಯೋಜನೆಯನ್ನು ಇನ್ನಷ್ಟು ಪರಿಣಾಮಕಾರಿಯಾಗಿಸಲು ಸಾಮಾಜಿಕ ಪರಿಶೋಧನೆಯಲ್ಲಿ ಸಾರ್ವಜನಿಕರು, ಹೆಚ್ಚು ಹೆಚ್ಚು ಭಾಗವಹಿಸುವಂತೆ ಮಾಡುವುದು, ಹಾಗೂ ಗ್ರಾಮ ಸಭೆಗಳನ್ನು ಸರಿಯಾಗಿ ನಡೆಸುವುದು ಗ್ರಾಮ ಪಂಚಾಯತಿಗಳ ಆದ್ಯ ಕರ್ತವ್ಯವಾಗಿದ್ದು ಗ್ರಾಮ ಪಂಚಾಯತಿಗಳ ಮೇಲೆ ಸಾರ್ವಜನಿಕರಿಗೆ ಹೆಚ್ಚಿನ ನಂಬಿಕೆ ಬರುವಂತೆ ಕೆಲಸ ಮಾಡಲು ವಿವಿಧ ಹಂತದ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಯೋಜನೆಯ ಸ್ಪಷ್ಟ ಮಾಹಿತಿಯನ್ನು ಈಗಾಗಲೇ ತಲುಪಿಸಲಾಗಿದೆ.

ಉದ್ಯೋಗ ಕೇಳಿದಾಗ ತಕ್ಷಣವೆ ಉದ್ಯೋಗ ನೀಡದೆ ಅನಗತ್ಯ ವಿಳಂಬ ಮಾಡಿರುವುದು, ಗ್ರಾಮ ಪಂಚಾಯತಿಗಳಿಗೆ ಅನುದಾನವನ್ನು ನೇರವಾಗಿ ವಿಳಂಬವಿಲ್ಲದೆ ಬಿಡುಗಡೆ ಮಾಡಲಾಗಿದ್ದರೂ ಸಹ ಕೂಲಿ ಪಾವತಿಯಲ್ಲಿ ವಿಳಂಬ ಮಾಡಿರುವ ಅನೇಕ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿವೆ. ಹಣ ಪಾವತಿಯಲ್ಲಿ ಇದುವರೆಗೂ ರೂಢಿಯಲ್ಲಿದ್ದ ಪದ್ಧತಿಗಳನ್ನು ಸರಳೀಕರಿಸಿ ಗ್ರಾಮ ಪಂಚಾಯತಿಗಳ ಹಂತದಲ್ಲಿಯೇ ಪಾವತಿಸಲು ಸಮಸ್ತ ಅಧಿಕಾರವನ್ನು ಗ್ರಾಮ ಪಂಚಾಯತಿಗಳಿಗೆ ಪ್ರದತ್ತಗೊಳಿಸಲಾಗಿದೆ. ಇದನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ಯೋಜನೆಯ ಉದ್ದೇಶಗಳನ್ನು ಸಾಧಿಸಲು ಗ್ರಾಮ ಪಂಚಾಯತಿಗಳು ಇನ್ನೂ ಹೆಚ್ಚಿನ ಶ್ರಮ ವಹಿಸಬೇಕು.

ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಕಾರ್ಯಕ್ರಮದಲ್ಲಿ ಭ್ರಷ್ಟಚಾರ ಮತ್ತು ದುರಾಡಳಿತಕ್ಕೆ ಸಂಬಂಧಿಸಿದ ದೂರುಗಳನ್ನು ಪರಿಶೀಲಿಸಲು ಮತ್ತು ಉದ್ಯೋಗ ಕಾರ್ಯಕ್ರಮದಲ್ಲಿ ಪಾರದರ್ಶಕತೆಯನ್ನು ಹೆಚ್ಚಿಸಿ ಅದರ ಕಾರ್ಯದಕ್ಷತೆಯನ್ನು ಹೆಚ್ಚಿಸಲು ಎಲ್ಲಾ ಜಿಲ್ಲೆಗಳಲ್ಲೂ ಒಂಬುಡ್ಸ್‌ಮನ್‌ಗಳನ್ನು ನೇಮಿಸಿಕೊಳ್ಳಲಾಗುತ್ತಿದೆ. ಓಂಬುಡ್ಸ್‌ಮನ್ ಎಂಬ ಸಂಸ್ಥೆಯನ್ನು ಸ್ಥಾಪಿಸಲು ಉದ್ದೇಶಿಸಿದಂತೆ ಈಗಾಗಲೇ 15 ಜಿಲ್ಲೆಗಳಲ್ಲಿ ಓಂಬುಡ್ಸ್‌ಮನ್‌ಗಳನ್ನು ನೇಮಕ ಮಾಡಲಾಗಿದ್ದು, ಅವರುಗಳು ಉದ್ದೇಶಿತ ಕಾರ್ಯದಲ್ಲಿ ಕಾರ್ಯೋನ್ಮುಖರಾಗುವಂತೆ ಮಾಡುವ ಕ್ರಮ ಕೈಗೊಳ್ಳಲಾಗಿದೆ. ಮತ್ತು ಉಳಿದ ಜಿಲ್ಲೆಗಳಿಗೂ ಓಂಬುಡ್ಸ್‌ಮನ್‌ಗಳ ನೇಮಕ ಮಾಡಲಾಗುವುದು. ಈ ಹಿನ್ನೆಲೆಯಲ್ಲಿ ನಿಮ್ಮ ಕಾರ್ಯ ವೈಖರಿ ನಿಯಮಬದ್ಧವಾಗಿದ್ದರೆ ಯಾವುದೇ ತೊಂದರೆಗೆ ಸಿಲುಕುವ ಅಪಾಯ ನಿಮಗಿರುವುದಿಲ್ಲ.

ಹಳ್ಳಿಗಳನ್ನು ಸರ್ವತೋಮುಖವಾಗಿ ಅಭಿವೃದ್ಧಿಪಡಿಸಲು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಲ್ಲಿರುವ ವಿಫುಲ ಅವಕಾಶಗಳು ಬೇರೆ ಇನ್ನಾವುದೇ ಯೋಜನೆಯಲ್ಲಿ ಇರುವುದಿಲ್ಲ. ಈ ಸದಾವಕಾಶವನ್ನು ಸಮಷ್ಠಿ ಪ್ರಜ್ಞೆಯಿಂದ ಬಳಸಿಕೊಂಡು ಹಳ್ಳಿಗಳನ್ನು ಸಮಗ್ರವಾಗಿ ಅಭಿವೃದ್ಧಿಯಾಗುವಂತೆ ಎಲ್ಲರೂ ಕಂಕಣಬದ್ಧರಾಗಬೇಕಿದೆ. ಈ ನಿಟ್ಟಿನಲ್ಲಿ ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳ ಪಾತ್ರ ಮಹತ್ವದ್ದಾಗಿರುತ್ತದೆ. ಜನರಿಗೆ ಗ್ರಾಮೀಣ ಸ್ಥಳೀಯ ಸಂಸ್ಥೆಗಳು ಜನಪರ ನಿಲುವುಗಳನ್ನು ತಳೆದು ಯೋಜನೆಯ ಅನುಷ್ಠಾನಕ್ಕೆ ಹೆಜ್ಜೆ ಇಟ್ಟಾಗ ಹಳ್ಳಿಗಳನ್ನು ಅಭಿವೃದ್ಧಿಯ ದಿಕ್ಕಿನತ್ತ ಕೊಂಡೊಯ್ಯಬಹುದಾಗಿದೆ. ಪಕ್ಷಬೇಧವಿಲ್ಲದೆ ಫಲಾನುಭವಿಗಳ ಆಯ್ಕೆಯನ್ನು ಮಾಡಿ ಸೌಲಭ್ಯಗಳನ್ನು ವಿಸ್ತರಿಸಿದರೆ ಬಡ ಜನರ ಬದುಕನ್ನು ಜತನದಿಂದ ಕಟ್ಟಿಕೊಡಲು ಸಾಧ್ಯವಾಗುತ್ತದೆ.

ಜನ ತಂತ್ರದ ಅಡಿಯಲ್ಲಿ ಸ್ಥಾಪನೆಗೊಂಡ ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಜನ ಪ್ರತಿನಿಧಿಗಳೊಟ್ಟಿಗೆ ಕೆಲಸ ನಿರ್ವಹಿಸುತ್ತಿರುವ ಅಧಿಕಾರಿ, ಸಿಬ್ಬಂದಿಗಳ ಪಾತ್ರ ಮತ್ತು ಕಾರ್ಯನಿರ್ವಹಣೆ ಅಧಿಕವಾಗಿರುತ್ತದೆ. ಜನ ಕಲ್ಯಾಣ ಯೋಜನೆಯಾದ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನದಲ್ಲಿ

ಜಡತ್ವ ತೋರಿದ್ದೇ ಆದಲ್ಲಿ ಜನ ಹಾಗೂ ಜನಪ್ರತಿನಿಧಿಗಳಿಂದ ಅನಾದಾರಕ್ಕೆ ಗುರಿಯಾಗುವ ಅಪಾಯ ಹೆಚ್ಚಿರುತ್ತದೆ. ಈ ಹಿನ್ನೆಲೆಯಲ್ಲಿ ತಮ್ಮ ಕಾರ್ಯನಿರ್ವಹಣೆಯಲ್ಲಿ ಸ್ಪಂದನಶೀಲ ಹಾಗೂ ಕ್ರಿಯಾಶೀಲತೆಯನ್ನು ಮೈಗೂಡಿಸಿಕೊಳ್ಳುವಂತೆ ಒತ್ತಾಯಿಸುತ್ತೇನೆ.

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಕಾರ್ಯಾನುಷ್ಠಾನದಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಸ್ಪಂದನಶೀಲ ಕಾರ್ಯ ನಿರ್ವಹಣೆಗೆ ಪೂರಕವಾಗುವಂತೆ ಸೃಜನಾತ್ಮಕ ಕಲಾ ಪ್ರಕಾರಗಳನ್ನು ಬಳಸಿಕೊಂಡು ಯೋಜನೆಯ ಬಗ್ಗೆ ಮಾಹಿತಿಯನ್ನು ಸರಳವಾಗಿ ಪುಸ್ತಕ ರೂಪದಲ್ಲಿ ಹೊರತಂದು ನಿಮಗೆ ತಲುಪಿಸಲು ಕ್ರಮಕೈಗೊಳ್ಳಲಾಗಿದೆ.

ಈಗಾಗಲೇ ನಿಮಗೆ ತಿಳಿದಿರುವಂತೆ, ನಾಟಕ ಹಾಗೂ ಸಾಹಿತ್ಯಕ ಕಲಾ ಪ್ರಕಾರಗಳು ಕಲಾ ಜಾಥ ಹಾಗೂ ಬೀದಿ ನಾಟಕಗಳ ಮೂಲಕ ಭಿತ್ತರಗೊಂಡಿವೆ. ಈ ಪ್ರಕ್ರಿಯೆಯಲ್ಲಿ ಭಾಗವಹಿಸಿದ ನಾಡಿನ ಹೆಸರಾಂತ ಸಾಹಿತಿ, ಕಲಾವಿದರುಗಳ ಕೊಡುಗೆಯನ್ನು ಅಭಿನಂದಿಸುತ್ತೇನೆ. ಈ ಎಲ್ಲಾ ಸಾಹಿತಿ ಕಲಾವಿದರುಗಳ ಸೇವೆ ಹಾಗೂ ಅವರ ಪಾಂಡಿತ್ಯವನ್ನು ಬಳಸಿಕೊಳ್ಳುವಲ್ಲಿ ಶ್ರೀ ಬಸವಲಿಂಗಯ್ಯನವರ ಸೇವೆ ಅನುಪಮವಾದುದು. ಈ ನೆಲೆಯಲ್ಲಿ ಶ್ರೀ ಬಸವಲಿಂಗಯ್ಯನವರ ಹಾಗೂ ಶ್ರೀಮತಿ ಕೆ.ಆರ್. ಸುಮತಿ ಅವರುಗಳ ಸೇವೆಯನ್ನು ಸ್ಮರಿಸುತ್ತೇನೆ ಹಾಗೂ ಅದನ್ನು ಅಭಿನಂದಿಸುತ್ತೇನೆ. ಈ ಪುಸ್ತಕದಲ್ಲಿರುವ ಅಂಶಗಳು, ಆಶಯಗಳು ನಿಮ್ಮ ಮಸ್ತಕದಲ್ಲಿ ದಾಖಲಾಗಿ ಸಮಾಜದ ಒಳಿತಾಗಿ ಬಹುಪಯೋಗಿಯಾದಲ್ಲಿ ಸರ್ಕಾರದ ಶ್ರಮ ಸಾರ್ಥಕವಾದೀತು ಹಾಗೂ ಯೋಜನೆಯ ಫಲಶ್ರುತಿ ಸಾರ್ವಜನಿಕರಿಗೆ ದಕ್ಕೀತು. ಈ ದಾರಿಯಲ್ಲಿ ನಿಮ್ಮ ಯೊವೊತ್ತಿನ ಪ್ರಾಮಾಣಿಕ ಪ್ರಯತ್ನಗಳು ನಿರಂತರವಾಗಿರಲಿ ಮತ್ತು ಆ ಎಲ್ಲಾ ಪ್ರಯತ್ನಗಳು ಬತ್ತದ ಒರತೆಯಾಗಿರಲಿ ಎಂದು ಹಾರೈಸುತ್ತೇನೆ.

ಶುಭಾಶಯಗಳೊಂದಿಗೆ.



(ಪಿ. ಶಿವಶಂಕರ್)

# ಸೃಜನಶೀಲತೆಯ ಮಾತು .....

ಬೀದಿ ನಾಟಕ ಜನತೆಯ ನಡುವೆ ಸಂವಹನಗೊಂಡ ಚರಿತ್ರೆಗೆ ರಾಷ್ಟ್ರೀಯ ಅಂತರರಾಷ್ಟ್ರೀಯ ನೆಲೆದಕ್ಕಿದೆ. ಸಮೂಹ ಮಾಧ್ಯಮಗಳು ಉಳ್ಳವರ ಖಾಸಗಿ ಸ್ವತ್ತಾಗಿ ಹಣ ಸಂಪಾದನೆಯ ಗುರಿಯಾಗಿ ಪೈಪೋಟಿಗಿಳಿದಿರುವ ಹೈಟೆಕ್–ಇಟೆಕ್ ತಂತ್ರಜ್ಞಾನದ ಯುಗದಲ್ಲಿ ಬಡವರ 'ಬೀದಿನಾಟಕ' ಹಾದಿ ಬೀದಿಯ ದೊಂಬರಾಟವಾಗಿ ಹೈಟೆಕ್ ಬಾಬುಗಳಿಗೆ ನಗೆಪಾಟಲಿನ ಸಂಗತಿಯಾಗಿದೆ. ಆದರೂ, ಗ್ರಾಮೀಣ ಜನತೆಯನ್ನು ನೇರವಾಗಿ ಮುಖಾ ಮುಖಿಯಾಗಿ ಸಂವಹನ–ಸಂವಾದಕ್ಕೆ ವೇದಿಕೆಯಾಗುವ ಶಕ್ತಿ, ಈಗಲೂ ಈ ಮಾದ್ಯಮಕ್ಕೆ ಇದೆ.

ಬೀದಿನಾಟಕ ಪ್ರಕಾರ ಜನ್ಮತಾಳದ್ದೇ ಪ್ರತಿಭಟನೆಯ ಅಸ್ತ್ರವಾಗಿ, ಅಹಿಂಸಾತ್ಮಕ ನೆಲೆಯಲ್ಲಿ ಜನರಲ್ಲಿ ಪ್ರಶ್ನಿಸುವ, ಜಡಗಟ್ಟಿದ ಸಂಪ್ರದಾಯ, ಮತವಿಕಾರಗಳ ವಿರುದ್ಧ ವಿಚಾರಕ್ರಾಂತಿ ಬಿತ್ತುವ ಸಾಧನವಾಗಿ ಬೆಳೆದು ಬಂದಿದೆ. ಸಾಮಾಜದ ನೈತಿಕತೆ, ಶಿಕ್ಷಣ, ಕಲೆ–ಸಂಸ್ಕೃತಿಗಳ ಆಯಾಮಗಳ ಬಗ್ಗೆ ಅರಿವು ಮೂಡಿಸುತ್ತಾ, ಸಮಾಜದ ನೈತಿಕತೆ, ಶಿಕ್ಷಣ, ಕಲೆ–ಸಂಸ್ಕೃತಿ, ಪರಿಸರ ಪ್ರೇಮ ಮುಂತಾದ ವಿಷಯಗಳನ್ನು ಜನರ ನಡುವೆ ನಾಟಕ, ಹಾಡುಗಳ ಮೂಲಕ ಅಭಿವ್ಯಕ್ತಿಸುವ ಮಾಧ್ಯಮ ಬೀದಿ ನಾಟಕ. ಕಲೆ, ಕೇವಲ ಕಲೆಗಾಗಿ ಎಂದು ಚಟವಾಗಿದ್ದ ರಂಗಭೂಮಿಗೆ ಅನ್ಯಾಯ, ಅತ್ಯಾಚಾರಗಳನ್ನು ಖಂಡಿಸುವ ಶಕ್ತಿ ತಂದುಕೊಟ್ಟಿದ್ದು ಬೀದಿ ನದಿಯ ಈ ನಾಟಕ, ಅತ್ಯಾಚಾರಗಳನ್ನು ಖಂಡಿಸುವ ಶಕ್ತಿ ತಂದುಕೊಟ್ಟಿದ್ದು ಬೀದಿ ಬದಿಯ ಈ ನಾಟಕ ಕ್ರಿಯೆ, ಚಳುವಳಿಯ ರೂಪ ನೀಡಿದ್ದು ಬೀದಿ ನಾಟಕ ಪರಂಪರೆ.

ಯಾವ ವ್ಯವಸ್ಥೆ ವಿರುದ್ಧ ನಾಟಕ ಚಳುವಳಿ ಬಂಡಾಯ ಹೂಡಿತ್ತೋ ಆ ವ್ಯವಸ್ಥೆಯೇ ಬೀದಿ ನಾಟಕ ಪ್ರಕಾರವನ್ನು ತನ್ನ ಮಿತ್ರನನ್ನಾಗಿ ಪರಿಗಣಿಸಿ ತನ್ನ ಪ್ರಚಾರ ಸಾಧನವನ್ನಾಗಿ ವ್ಯವಸ್ಥೆ ಬಳಸಿಕೊಳ್ಳುತ್ತದೆ ಎಂಬ ಆರೋಪಗಳಿದ್ದರೂ ವ್ಯವಸ್ಥೆ ಮತ್ತು ಜನತೆಯ ನಡುವೆ ರಾಯಭಾರಿಯಾಗಿ ಸಂವಹನಕ್ಕೆ ಅನಿವಾರ್ಯವಾಗಿದೆ. ಕನಿಷ್ಟ ರಂಗಪರಿಕರಗಳ ಮೂಲಕ ಸರಳವಾಗಿ ಬೀದಿ ಬದಿಯಲ್ಲಿ ಅಭಿನಯಿಸಲ್ಪಡುವ ಬೀದಿ ನಾಟಕಕ್ಕೆ ಆಡಳಿತ ವ್ಯವಸ್ಥೆ ಸಹ ಮಾರು ಹೋಗಿರುವುದು ಅದರ ಶಕ್ತಿಯನ್ನು ಮನದಟ್ಟು ಮಾಡುತ್ತದೆ.

ದೇಶದಲ್ಲಿ ಸಾಕ್ಷರತಾ ಚಳುವಳಿ ಆರಂಭವಾದಾಗ ಬೀದಿ ನಾಟಕ ಪ್ರಕಾರ ಬಹಳ ಯಶಸ್ವಿಯಾಗಿ ಜಗಜಾಗೃತಿಗೆ ಬಳಕೆಯಾಯಿತು. ಗ್ರಾಮೀಣ ಜನತೆಗೆ ಓದು ಬರಹದ ಮಹತ್ವ ತಿಳಿಸಿ ಸಮಾಜದ ಮುಖ್ಯವಾಹಿನಿಗೆ ಬರುವಂತೆ ಪ್ರೇರಣೆ ನೀಡುವಲ್ಲಿ ಸಫಲವಾಯಿತು. ಸಾಮಾಜಿಕ ಅನಿಷ್ಟಗಳ ಬಗ್ಗೆ ಎಚ್ಚರ ನೀಡುವುದು ಮತ್ತು ದುಡಿವ ಜನತೆ ತಮ್ಮ ಹಕ್ಕುಗಳಿಗಾಗಿ ಹೋರಾಡಲು ಸ್ಫೂರ್ತಿ ನೀಡುವ Living Newspaper ನಂತೆ ಕಾರ್ಯನಿರ್ವಹಿಸುವ ಗುಣ, ವಿಚಾರ ಕ್ರಾಂತಿಯನ್ನು ಜನಮನದಲ್ಲಿ ಬಿತ್ತುವುದು ಈ ಮಾಧ್ಯಮದಿಂದ ಸಾಧ್ಯವಾಗಿದೆ. ಪ್ರೊಸೀನಿಯಂ ರಂಗಕ್ಕೆ ಹೋಲಿಸಿದರೆ ಬೀದಿ ನಾಟಕ ಜನತೆಯ ಆಶೋತ್ತರಗಳಿಗೆ ಒತ್ತಾಸೆ ಕೊಡುವಂತಹ ಮಾಧ್ಯಮ. ಪ್ರಾಮಾಣಿಕತೆ, ಜನ ಸಮುದಾಯದ ಕಾಳಜಿ ಜನಪರ ಚಿಂತನೆ ಬೀದಿ ನಾಟಕ ಗಟ್ಟಿಯಾಗಿ ನಿಲ್ಲುವಲ್ಲಿ, ಜನರ ನಡುವೆ ನೇರವಾಗಿ ಸಂವಹನ ಮಾಡುವ ಕ್ರಿಯಯೇ ಮುಖ್ಯವಾದ ಅಂಶಗಳಾಗಿವೆ. ಅಂತೆಯೇ ರಂಗ ನಾಟಕದಂತೆ ಸಂಕೀರ್ಣತೆಗೆ ಬೀಳದೆ ನೇರವಾಗಿ ಮತ್ತು ಸ್ಪಷ್ಟವಾಗಿರುವುದರಿಂದ ಬೀದಿ ನಾಟಕ ಇಂದಿಗೂ ಯಶಸ್ಸು ಕಾಣುತ್ತಿದೆ.

## ಮೂರು ಹಂತಗಳಲ್ಲಿ ಬೀದಿ ನಾಟಕ ಚಳುವಳಿ ಸಕ್ರಿಯವಾಗಿದೆ

1. ಅನ್ಯಾಯದ ವಿರುದ್ಧ ಪ್ರತಿಭಟಿಸುವ ಮನೋಭಾವ ಬಿತ್ತುವಲ್ಲಿ ಜನಜಾಗೃತಿಗಾಗಿ ಅಭಿವ್ಯಕ್ತಿಗೊಳ್ಳುವುದು.

2. ಬೀದಿಯಲ್ಲಿಯೇ ಪ್ರಯೋಗಗೊಂಡು ಸಂಕೀರ್ಣ ಕಲೆಯಂತೆ ಕಲಾತ್ಮಕವಾದ ಎಲ್ಲಾ ರಂಗ ದ್ರವ್ಯಗಳ ನೃತ್ಯ–ಸಂಗೀತ, ಆಂಗೀಕ ವಾಚೀಕ, ಆಹಾರ್ಯ ಅಭಿನಯಗಳನ್ನು ಹಿತಮಿತವಾಗಿ ಬಳಸಿಕೊಂಡು ಪರಿಪೂರ್ಣ ರಂಗಾನುಭವ ಕೊಡುವಲ್ಲು ಸಫಲವಾಗುತ್ತಿರುವುದು.

3. ಜನಪರ ಯೋಜನೆಗಳ ತತ್ವ ಚಿಂತನೆಗಳ ಪ್ರಚಾರ ಮಾಧ್ಯಮವಾಗಿ ಮಾಹಿತಿ ಪೂರೈಸುವ ಗುಣದ ಜೊತೆಗೆ ಪ್ರಶ್ನಿಸುವ, ಕಡಿಮೆ ಅವಧಿಯಲ್ಲಿ ಸಂವಹನಗೊಳ್ಳುವ ಶಕ್ತಿ ಈ ಪ್ರಕಾರಕ್ಕೆ ದಕ್ಕಿದೆ.

ಈ ಪ್ರಕಾರವನ್ನು ಕೇಂದ್ರ, ರಾಜ್ಯ ಸರ್ಕಾರಗಳ ಹಲವಾರು ಇಲಾಖೆಗಳು ತಮ್ಮ ಯೋಜನೆಯ ರೂಪುರೇಷೆಗಳನ್ನು ನಾಡಿನ ಗ್ರಾಮೀಣ ಜನತೆಯ ಮುಂದೆ ಕೊಂಡೊಯ್ಯಲು ಆಶ್ರಯಿಸಿದ್ದು ಅಚ್ಚರಿಯ ಸಂಗತಿಯಲ್ಲ. ದೇಶಕ್ಕೆ ಸ್ವಾತಂತ್ರ್ಯ ದೊರೆತು 6 ದಶಕಗಳೇ ಕಳೆದಿದ್ದರೂ ಇನ್ನು ಪ್ರಜಾಪ್ರಭುತ್ವ ಮೌಲ್ಯಗಳು ಸರ್ವ ಜನರ ಅಭ್ಯುದಯದ ಬಗ್ಗೆ ನಿಖರವಾಗಿ ನಿಲುವು ತಳೆಯಲಾಗಿಲ್ಲ. ಅಧಿಕಾರ ವಿಕೇಂದ್ರಿಕರಣದ ಮೂಲಕ ತ್ವರಿತವಾಗಿ ಗ್ರಾಮೀಣ ಅಭಿವೃದ್ಧಿ ಸಾಧ್ಯ ಎಂಬ ಅರಿವಿನಿಂದ ಮುಖ್ಯವಾಹಿನಿಗೆ ಜನರನ್ನು ತರಲು ಗ್ರಾಮ ಪಂಚಾಯ್ತಿ ವ್ಯವಸ್ಥೆ ಅನುಷ್ಟಾನಗೊಂಡರು ಜನತೆಯ ಕೈಗೆ ಸವಲತ್ತುಗಳು ದೊರೆಯದೆ ನಗರ–ಹಳ್ಳಿಗಳ ಅಂತರ ದಿನೇ ದಿನೇ ಹೆಚ್ಚಾಗುತ್ತಿದೆ. ಗ್ರಾಮೀಣ ಭಾರತ ಇನ್ನು 'ಹಸಿವು' ಎಂಬ ಮಾರಿತೆಕ್ಕೆಯಿಂದ ಹೊರಬರಲಾಗಿಲ್ಲ. ಉದ್ಯೋಗವಿಲ್ಲದ ಜನ ದುಡಿಯಲು ತಮ್ಮ ಹಳ್ಳಿಗಳನ್ನು ತ್ಯಜಿಸಿ ನಗರಗಳಿಗೆ ವಲಸೆ ಹೋಗುವ ಪ್ರಕ್ರಿಯೆ ಅಧಿಕವಾಗುತ್ತಿದೆ. ನಿರುದ್ಯೋಗದಿಂದ ಬಳಲಿದ ಯುವಜನತೆ ದುಡಿಯಲು ಕೈಗೆ ಕೆಲಸವಿಲ್ಲದೆ ವಿವಿಧ ಶಕ್ತಿಗಳ ಒತ್ತಾಸೆಗೆ ಬಲಿಯಾಗುತ್ತಿದ್ದಾರೆ.

ಆರ್ಥಿಕವಾಗಿ ದುರ್ಬಲರಾಗಿರುವ ಬಡ ಜನತೆಗೆ ಉದ್ಯೋಗ ನೀಡಿ ಆರ್ಥಿಕ ಸಭಲತೆ ತರುವ ಸಲುವಾಗಿಯೆ ಸಂವಿಧಾನದಲ್ಲಿ ಶಾಸನವಾಗಿ 'ಉದ್ಯೋಗ ಖಾತರಿ' ಬಡಜನತೆಯ ಮೂಲಭೂತ ಹಕ್ಕುಗಳಲ್ಲಿ ಒಂದಾಗಿ ಸೇರ್ಪಡೆಯಾಗಿದೆ. ಕೇಂದ್ರ ಸರ್ಕಾರ ಶಾಸನಬದ್ಧವಾಗಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ರೂಪಿಸಿ ಜನರು ದುಡಿದುಣ್ಣುವ ಕ್ರಿಯೆಗೆ ಚಾಲನೆ ನೀಡಿದೆ. ರಾಜ್ಯ ಸರ್ಕಾರಗಳು ಆಯಾ ರಾಜ್ಯಗಳಲ್ಲಿ ದುಡಿವ ಕೈಗಳಿಗೆ ಕಾಯಕ ನೀಡಿ ಸ್ವಾಭಿಮಾನದಿಂದ ಬದಕುವ ಮತ್ತು ಹಸಿವಿನಿಂದ ಪಾರಾಗುವ ಯೋಜನೆಯನ್ನಾಗಿ ರೂಪಿಸಿ ಬಡಜನತೆಗೆ ಆಶಾಕಿರಣವಾಗಿದೆ. ಗ್ರಾಮ ಪಂಚಾಯಿತಿಗಳ ಮೂಲಕ ಈ ಯೋಜನೆ ಕಾರ್ಯಗತಗೊಳಿಸಲು ಸರ್ಕಾರಗಳು ಹೆಜ್ಜೆ ಇಟ್ಟಿವೆ. 'ಬಡತನ, ಹಸಿವು' ಹೇಗೆ ಭಾರತವನ್ನು ನಿರಂತರವಾಗಿ ಕಾಡುವ ಅನಿಷ್ಟಗಳಾಗಿವೆಯೋ ಹಾಗೆಯೆ ಭ್ರಷ್ಟಚಾರವು ವ್ಯವಸ್ಥೆಯ ಒಂದು ಅನಿಷ್ಟ ಪರಂಪರೆಯಾಗಿ ಫಲಾನುಭವಿಗಳಿಗೆ ಫಲ ದೊರತಿದೆ. ಅದೇ ದಾರುಣ ಬುದಕಿಗೆ ಗ್ರಾಮೀಣ ಜನತೆ ಬಿದ್ದಿದೆ. 'ಉದ್ಯೋಗ ಖಾತ್ರಿ' ಜನತೆಯ ಮೂಲಭೂತ ಹಕ್ಕಾಗಿದ್ದರು ಅಸಂಖ್ಯ ಜನತೆಗೆ ಅರಿವಿಲ್ಲದೆ ಮದ್ಯವರ್ತಿಗಳ ಕೈಸೇರಿ ಅನ್ಯಾಯ, ವಂಚನೆಯ ಜಾಲ ತಾಂಡವಾಡುತ್ತಿರುವುದರಿಂದ, ಬೀದಿ ನಾಟಕ, ಗೀತ ರೂಪಕ, ಹಾಡುಗಳ ಮೂಲಕ ಜನಜಾಗೃತಿಗೆ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮುಂದಾಗಿರುವುದರಿಂದ 'ದುಡಿದ ಕೈಗಳಿಗೆ ಕಾಯಕ ಕಲಾಜಾಥಾ' ಕಲ್ಪನೆ ಸಾಕಾರಗೊಂಡಿದೆ.

ನಾಡಿನ ಪ್ರಗತಿಪರ ಚಿಂತಕರು ಲೇಖಕರನ್ನು ಒಂದೆಡೆ ಕಲೆ ಹಾಕಿ ಯೋಜನೆಯ ರೂಪುರೇಷೆಗಳನ್ನು ಚರ್ಚಿಸಿ ಜನಜಾಗೃತಿ ಗೀತೆಗಳು ಬೀದಿನಾಟಕ, ರೂಪಕಗಳನ್ನು ರಚಿಸಿಕೊಡಲು ಆಹ್ವಾನಿಸಿ. ಬರಹಗಾರರ ಕಾರ್ಯಗಾರ ಆಯೋಜಿಸಿ, ಆ ಕಾರ್ಯಗಾರದಲ್ಲಿ ಸೃಜನೆಗೊಂಡ ಹಾಡು ನಾಟಕಗಳು, ಜಾಥಾದಲ್ಲಿ ಅಭಿನಯಿಸಿ ಈಗ ಪುಸ್ತಕ ರೂಪದಲ್ಲಿ ಹೊರಬರುತ್ತಿದೆ. ಕಲಾಜಾಥಾ ಕಾರ್ಯಕ್ರಮಕ್ಕೆ ನಾಟಕ ಹಾಡುಗಳನ್ನು ಬರೆದು ಕೊಟ್ಟವರು ಡಿ.ಎಸ್. ಚೌಗಲ್, ಪ್ರೊ। ಎಚ್.ಎಲ್. ಕೇಶವಮೂರ್ತಿ, ಡಾ। ಕೆ.ವೈ. ನಾರಾಯಣಸ್ವಾಮಿ, ಡಾ। ರಾಜಪ್ಪ ದಳವಾಯಿ, ಡಾ। ವಿವೇಕಾನಂದ ಪ್ರಾಧ್ಯಪಕರಾದ ಪ್ರೊ. ಶಿವರಾಮಯ್ಯ, ಶ್ರೀ ಕೃಷ್ಣಮೂರ್ತಿ ಬಿಳಿಗೆರೆ, ಶ್ರೀ ಸುಬ್ಬು ಹೊಲೆಯಾರ್ ರಂಗಾಯಣದ ಕಲಾವಿದರಾದ ಶ್ರೀ ಕೃಷ್ಣ ಪ್ರಸಾದ್ ಮಾಯಸಂದ್ರ,

ಶ್ರೀಮತಿ ನಂದಿನಿ ಶ್ರೀ ಮಂಜುನಾಥ ಬೆಳಕೆರೆ, ಶ್ರೀ ಆಲೂರು ದೊಡ್ಡನಿಂಗಪ್ಪ, ಕವಿಯತ್ರಿಯಾದ ಶ್ರೀಮತಿ ಡಿ.ಬಿ. ರಜಿಯಾ ಅವರುಗಳು ಸಾಹಿತ್ಯ ರಚಿಸಿ ಕಲಾಜಾಥಾ ಯಶಸ್ಸಿಗೆ ಕಾರಣರಾಗಿದ್ದಾರೆ. ಸಾಂಸ್ಕೃತಿಕ ಜಾಥಾದಲ್ಲಿ ಹಲವು ವಿಷಯಗಳನ್ನು ನಾಟಕಗಳ ಮೂಲಕ ಪ್ರಸ್ತಾಪಿಸಲು ನಾಡಿನ ಸಾಹಿತಿಗಳು ನೆರವಾಗಿದ್ದಾರೆ. ವಿವಿಧ ವಸ್ತು ವಿಷಯಗಳ ಬಗ್ಗೆ ರಚಿಸಿಕೊಟ್ಟು ಎಲ್ಲಾ ನಾಟಕ, ಗೀತೆಗಳನ್ನು ಈ ಸಂಕಲನದಲ್ಲಿ ಪರಿಷ್ಕರಿಸಿ ಯೋಜನೆಗೆ ಪೂರಕವಾಗುವಂತೆ ರೂಪಿಸಲಾಯಿತು ಮತ್ತು ಕಲಾಜಾಥಾದಲ್ಲಿ ಪ್ರಯೋಗಿಸಲಾಯಿತು. ಜಾಥಾ ಕಲಾವಿದರ ಕೈಪಿಡಿಯಾಗಿ ಕಾರ್ಯನಿರ್ವಹಿಸಲು ಇಲ್ಲಿನ ರಚನೆಗಳು ಸಹಕಾರಿಯಾಗಿವೆ. ಕೆಲವು ನಾಟಕಗಳ ಮೂಲರಚನೆಗಳನ್ನು ಲೇಖಕರ ಅನುಮತಿ ಪಡೆದು ತಿದ್ದುಪಡಿ ಸಹ ಮಾಡಕೊಳ್ಳಲಾಗಿದೆ. ಮುಖ್ಯವಾಗಿ ಜನತೆಗೆ ನೇರವಾಗಿ 'ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ' ಫಲ ದೊರಕಿಸಿಕೊಡುವ ಮಹತ್ತರವಾದ ಯೋಜನೆಗೆ ಪೂರಕವಾಗಿ ಸ್ಪಂದಿಸಿವೆ.

'ದುಡಿಯುವ ಕೈಗಳಿಗೆ ಕಾಯಕ ಕಲಾಜಾಥಾ' ಉತ್ತರ ಕರ್ನಾಟಕದ ಹತ್ತು ಜಿಲ್ಲೆಗಳಲ್ಲಿ ಹತ್ತು ಕಲಾ ತಂಡಗಳು ಜೊತೆಗೆ ವಿಭಿನ್ನ ಜಾನಪದ ಕಲಾ ಪ್ರಕಾರಗಳ ಸಂಯೋಜನೆಯಿಂದ ಗ್ರಾಮೀಣ ಜನರನ್ನು ತಲುಪಿದೆ. ಈ ಜನಪರ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡಂತಹ ಎಲ್ಲಾ ಲೇಖಕರಿಗೆ ಗೀತ ರಚನಕಾರರಿಗೆ ನಮ್ಮ ಕೃತಜ್ಞತೆಗಳು ಹಾಗೂ ನೆನೆಕೆಗಳು ಸಲ್ಲುತ್ತವೆ.

ಇಂತಹ ಸಾಹಿತಿ ಕಲಾವಿದರನ್ನು ಹಾಗೂ ಅವರುಗಳ ಸೃಜನಶೀಲತೆಯ ಪ್ರಕಾರಗಳನ್ನು ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಕಾರ್ಯಕ್ರಮದ ಅನುಷ್ಠಾನದ ಪ್ರಕ್ರಿಯೆಯಲ್ಲಿ ಬಳಸಿಕೊಂಡಂತಹ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ರವಿ ಕುಮಾರ್, ಡಾ. ಅಮಿತಾ ಪ್ರಸಾದ್, ಸರ್ಕಾರದ ಕಾರ್ಯದರ್ಶಿಗಳಾದ ಶ್ರೀ ನಾರಾಯಣ ಸ್ವಾಮಿ, ಡಾ. ಶಾಲಿನಿ ರಜನೀಶ್ ನಿರ್ದೇಶರುಗಳಾದ ಶ್ರೀ ಪ್ರಸನ್ನ ಕುಮಾರ್, ಶ್ರೀ ಪಿ. ಶಿವಶಂಕರ್, ಜಂಟಿ ನಿರ್ದೇಶಕರುಗಳಾದ ಶ್ರೀ ಏಜಾಜ್ ಅಹ್ಮದ್, ಶ್ರೀ ವೆಂಕಟೇಶ್, ಹಣಕಾಸು ಮುಖ್ಯಸ್ಥರಾದ ಶ್ರೀ ಗೋವಿಂದನ್ ಹಾಗೂ ಇಲಾಖೆಯ ಎಲ್ಲಾ ಸಿಬ್ಬಂದಿ ವರ್ಗದವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಕನ್ನಡ ರಂಗಭೂಮಿ ಆಧುನಿಕೋತ್ತರ ಯುಗದಲ್ಲಿ ಹಲವು ನೂತನ ಪ್ರಯೋಗಶೀಲತೆಗೆ ತೆರೆದುಕೊಂಡಿದೆ. ವೃತ್ತಿ, ಹವ್ಯಾಸಿ ಆಧುನಿಕ ನಾಟಕ ಪ್ರಯೋಗಗಳಿಗೆ ರೆಪರ್ಟರಿಗಳು ಕಾರ್ಯೋನ್ಮುಖವಾಗಿವೆ. ಬೀದಿ ನಾಟಕ ಜನಾಂದೋಲನವಾಗಿ ಮಾರ್ಪಟ್ಟಿದೆ. ಉದ್ಯೋಗ ಖಾತ್ರಿ ಯೋಜನೆಯ ಈ ನಾಟಕಗಳು ಹಾಡುಗಳು ಆ ಆಂದೋಲನದ ಪರಿಣಾಮ ಎನ್ನಬಹುದು.

**ಶ್ರೀ ಸಿ. ಬಸವಲಿಂಗಯ್ಯ**
ಮುಖ್ಯ ಸಲಹೆಗಾರರು

**ಶ್ರೀಮತಿ ಕೆ.ಆರ್. ಸುಮತಿ**
ಸಹಾಯಕ ಸಲಹೆಗಾರರು,
ಸಮುದಾಯ ಜಾಗರೂಕರಣ ಕಲಾಜಾಥ
ಮ.ಗಾಂ.ರಾ.ಗ್ರಾ.ಉ.ಖಾ.ಯೋ, ಬೆಂಗಳೂರು

# ದುಡಿಯುವ ಕೈಗಳಿಗೆ ಕಾಯಕ ಕಲಾಜಾಥ ಪೂರ್ವಸಿದ್ಧತಾ ಕಾರ್ಯಕ್ರಮದ ಒಂದು ನೋಟ

ಶ್ರೀಮತಿ ಸುಮತಿ ಕೆ.ಆರ್. *

'ಗ್ರಾಮೀಣಾಭಿವೃದ್ಧಿ ಸಚಿವರಾದ ಶ್ರೀಯುತ ಜಗದೀಶ ಶೆಟ್ಟರ ರವರು ಧಾರವಾಡದಲ್ಲಿ ದುಡಿಯುವ ಕೈಗಳಿಗೆ ಕಾಯಕ ಕಲಾಜಾಥವನ್ನು ಉದ್ಘಾಟಿಸುವ ಮೂಲಕ ಮೊದಲ ಹಂತದ ಜಾಥಾಕ್ಕೆ ಚಾಲನೆ ನೀಡಲಾಯಿತು.'

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಹಮ್ಮಿಕೊಳ್ಳಲಾಗಿದ್ದ ಸಮುದಾಯ ಜಾಗರೂಕರಣ ಕಲಾಜಾಥ ಕಾರ್ಯಕ್ರಮವನ್ನು ಪ್ರಾರಂಭಿಸುವ ಮೊದಲು ಸಾಕಷ್ಟು ಪೂರ್ವಸಿದ್ಧತೆಗಳನ್ನು ಮಾಡಿಕೊಳ್ಳಲಾಯಿತು. ಕಲಾಜಾಥ ಕಾರ್ಯಕ್ರಮದ ಸಮಗ್ರ ರೂಪುರೇಷೆಯನ್ನು ವಿನ್ಯಾಸಗೊಳಿಸಿ ಅದರಂತೆ ಕಾರ್ಯನಿರ್ವಹಿಸಲು ಮುಖ್ಯ ಸಲಹೆಗಾರರಾಗಿ ಶ್ರೀ ಸಿ.ಬಸವಲಿಂಗಯ್ಯ, ಹಾಗೂ ಸಹಾಯಕ ಸಲಹೆಗಾರರಾಗಿ ಶ್ರೀಮತಿ ಸುಮತಿ.ಕೆ.ಆರ್ ಇವರನ್ನು ನೇಮಿಸಲಾಯಿತು. ನಂತರ ಶ್ರೀ ಪ್ರಸನ್ನ ಕುಮಾರ್, ನಿರ್ದೇಶಕರು, ಮ.ಗಾ.ರಾ.ಗ್ರಾ.ಉ.ಖಾ.ಯೋ, ಇವರ ನೇತೃತ್ವದಲ್ಲಿ ಸಭೆ ಸೇರಿ ಹಮ್ಮಿಕೊಳ್ಳಬೇಕಾದ ವಿವಿಧ ಕಾರ್ಯಕ್ರಮಗಳ ಕುರಿತು ಚರ್ಚಿಸಲಾಯಿತು. ಮೊಟ್ಟಮೊದಲು ಈ ಜಾಥಾ ಕಾರ್ಯಕ್ರಮಕ್ಕೆ **"ದುಡಿಯುವ ಕೈಗಳಿಗೆ ಕಾಯಕ"** ಎಂದು ಹೆಸರಿಸಲಾಯಿತು.

ಮೊದಲಹಂತವಾಗಿ ನಾಡಿನ ಕೆಲವು ಖ್ಯಾತ ಲೇಖಕರನ್ನು ಈ ಯೋಜನೆಯ ಕುರಿತಾದ ನಾಟಕ ಮತ್ತು ಹಾಡುಗಳನ್ನು ರಚಿಸಲು ಆಹ್ವಾನಿಸಲಾಯಿತು. ಯೋಜನೆಯ ಕುರಿತಾದ ಪೂರಕ ಮಾಹಿತಿಯನ್ನು ನೀಡಲು ಮೈಸೂರಿನ ಎಸ್.ಐ.ಆರ್.ಡಿಯಲ್ಲಿ ಎರಡು ದಿನಗಳ ಶಿಬಿರವನ್ನು ಆಯೋಜಿಸಲಾಯಿತು. ಯೋಜನೆಯ ಸಮಗ್ರ ಮಾಹಿತಿಯನ್ನು ನೀಡಲು ವಿವಿಧ ಸಂಪನ್ಮೂಲ ವ್ಯಕ್ತಿಗಳು ಭಾಗವಹಿಸಿದ್ದರು.ಸಾಕಷ್ಟು ಚರ್ಚೆಯೂ ನಡೆದು, ಅಂತಿಮವಾಗಿ ಆಯ್ದ ಕೆಲವು ವಿಷಯಗಳ ಕುರಿತು ನಾಟಕ ಮತ್ತು ಹಾಡುಗಳನ್ನು ರಚಿಸಬೇಕೆಂದು, ಹಾಗೂ ಈ ಕೃತಿಗಳು ಸದರಿ ಯೋಜನೆಯ ಕುರಿತಾಗಿ ಎಲ್ಲಾ ಮಾಹಿತಿಯನ್ನು ಕೊಡುವುದರೊಟ್ಟಿಗೆ ಉದ್ಯೋಗ ಖಾತ್ರಿ ಗ್ರಾಮೀಣ ಜನರ ಹಕ್ಕು, ಇದನ್ನು ಪಡೆದುಕೊಳ್ಳುವ ಕುರಿತಾಗಿ ಅರಿವನ್ನು ಕಲಾಮಾಧ್ಯಮದ ಮೂಲಕ ಮೂಡಿಸಬೇಕು ಎಂದು ತೀರ್ಮಾನಿಸಲಾಯಿತು. ಹದಿನೈದು ದಿನಗಳ ಬಿಡುವಿನ ನಂತರ ಲೇಖಕರು ರಚಿಸಿದ ನಾಟಕ ಮತ್ತು ಹಾಡುಗಳೊಂದಿಗೆ ಮತ್ತೆ ಸೇರುವುದೆಂದು ಕೂಡ ತೀರ್ಮಾನಿಸಲಾಯಿತು. ಹದಿನೈದು ದಿನಗಳ ಬಿಡುವಿನ ನಂತರ ಬೆಂಗಳೂರಿನಲ್ಲಿ ಸಭೆಸೇರಿ ಲೇಖಕರ ಕೃತಿಗಳನ್ನು ಓದಿ ಚರ್ಚಿಸಲಾಯಿತು. ಕೆಲವು ಕೃತಿಗಳನ್ನು ಬದಲಾವಣೆಗಳೊಟ್ಟಿಗೆ ಪುನ: ಬರೆಯಲು ಹೇಳಿದರೆ, ಕೆಲವು ಕೃತಿಗಳಿಗೆ ಅಲ್ಪ ಸ್ವಲ್ಪಬದಲಾವಣೆಗಳನ್ನು ಸೂಚಿಸಲಾಯಿತು. ಕೆಲವನ್ನು ಬದಲಾವಣೆಗಳಿಲ್ಲದೆ ಒಪ್ಪಿಕೊಳ್ಳಲಾಯಿತು. ಇದಾದ ಕೆಲವು ದಿನಗಳಲ್ಲಿ ನಿರ್ದೇಶಕರು, ಮ.ಗಾ.ರಾ.ಗ್ರಾ.ಉ.ಖಾ.ಯೋ, ಇವರ ನೇತೃತ್ವದಲ್ಲಿ ಸಭೆ ಸೇರಿ ಎಲ್ಲಾ ಕೃತಿಗಳನ್ನು ಓದಿ ಚರ್ಚಿಸಿ, ಜಾಥಾದಲ್ಲಿ ಬಳಸಿಕೊಳ್ಳಬಹುದಾದ ನಾಟಕ ಮತ್ತು ಹಾಡುಗಳನ್ನು ಗುರುತಿಸಲಾಯಿತು. ಆಯ್ದ 15 ಹಾಡುಗಳನ್ನು ಸಿಡಿ ರೂಪದಲ್ಲಿ ತರಲು ನಿರ್ಧರಿಸಲಾಯಿತು. ನಾಟಕಗಳು ಉದ್ಯೋಗಖಾತ್ರಿ ಯೋಜನೆಯ ಸಮಗ್ರ ಮಾಹಿತಿಯನ್ನು ನೀಡುವ ಅಂದರೆ, ಉದ್ಯೋಗವನ್ನು ಪಡೆದುಕೊಳ್ಳುವ

* ಸಹಾಯಕ ಸಲಹೆಗಾರರು, ಸಮುದಾಯ ಜಾಗರೂಕರಣ ಕಲಾಜಾಥಾ ಮ.ಗಾ.ರಾ.ಗ್ರಾ.ಉ.ಖಾ.ಯೋ. ಬೆಂಗಳೂರು.

ರೀತಿ, ಜಾಬ್ ಕಾರ್ಡ್ ಕುರಿತಾದ ಮಾಹಿತಿ, ನಿರುದ್ಯೋಗ ಭತ್ಯೆ, ಸಾಮಾಜಿಕ ಲೆಕ್ಕ, ಕೈಗೊಳ್ಳಬಹುದಾದ ಕಾಮಗಾರಿಗಳು, ದುರುಪಯೋಗವಾಗುವ ಬಗೆ ಹೀಗೆ ವೈವಿಧ್ಯಮಯವಾದ ಬೀದಿನಾಟಕ ಮತ್ತು ಹಾಡುಗಳನ್ನು ರಚಿಸಲಾಯಿತು.

ನಂತರದ ಹಂತವಾಗಿ ರಾಮನಗರ ಜಿಲ್ಲೆಯ ಜಾನಪದ ಲೋಕದಲ್ಲಿ ಇಪ್ಪತ್ತು ದಿನಗಳ ತರಬೇತಿ ಕಾರ್ಯಾಗಾರವನ್ನು ಕಲಾಜಾಥಾದ ಮುಖ್ಯ ಸಲಹೆಗಾರರಾದ ಶ್ರೀ ಸಿ. ಬಸವ ಲಿಂಗಯ್ಯನವರ ಮಾರ್ಗದರ್ಶನದಲ್ಲಿ ಆಯೋಜಿಸಲಾಯಿತು. ಆಯ್ಕೆಯಾದ 15 ಹಾಡುಗಳಿಗೆ ಶ್ರೀಯುತ ಇಸ್ಮಾಯಿಲ್ ಗೋನಾಳರವರು ಸಂಗೀತ ನಿರ್ದೇಶನ ಮಾಡಿ, ಹಾಡುಗಾರರನ್ನು ತರಬೇತುಗೊಳಿಸಿ ನಂತರ ಸಿಡಿ ರೂಪದಲ್ಲಿ ಧ್ವನಿಮುದ್ರಿಸಿಕೊಳ್ಳಲಾಯಿತು. ಹಾಗೆಯೇ ಇದೇ ಶಿಬಿರದಲ್ಲಿ ತಲಾ 15 ಪರಿಣಿತ ಕಲಾವಿದರ ಎರಡು ತಂಡಗಳಿಗೆ 8 ಬೀದಿನಾಟಕಗಳು,ಎರಡು ರೂಪಕಗಳು ಮತ್ತು ಹಾಡುಗಳನ್ನು ಕಲಿಸಿ ತರಬೇತಿ ನೀಡಲಾಯಿತು. ಕಲಾವಿದರ ಜೊತೆಗೆ ಡೊಳ್ಳು, ಗೊರವರು  ಮತ್ತು ಜಗ್ಗಲಿಗೆ ಜನಪದ ಪ್ರಕಾರಗಳ ಕಲಾವಿದರನ್ನು ಬಳಸಿಕೊಳ್ಳಲಾಯಿತು. ಇದರ ಮುಂದುವರಿಕೆಯಾಗಿ ಕರ್ನಾಟಕ ವಿಜ್ಞಾನ ಕೇಂದ್ರ, ಗದಗ ಇಲ್ಲಿ ಮತ್ತೆ 15 ದಿನಗಳ ತರಬೇತಿ ಕಾರ್ಯಾಗಾರ ನಡೆಸಿ ಉತ್ತರ ಕರ್ನಾಟಕ ಭಾಗದ ಹತ್ತು ಜಿಲ್ಲೆಗಳಾದ ಧಾರವಾಡ, ಹಾವೇರಿ, ಗದಗ, ಕೊಪ್ಪಳ, ಬಿಜಾಪುರ, ಬಾಗಲಕೋಟೆ, ಗುಲ್ಬರ್ಗ, ಬೀದರ, ಯಾದಗಿರಿ ಹಾಗೂ ರಾಯಚೂರು ಜಿಲ್ಲೆಗಳಿಂದ ತಲಾ 15 ಕಲಾವಿದರ ತಂಡವನ್ನು ಅಂದರೆ ಒಟ್ಟು ಹತ್ತು ಕಲಾ ತಂಡಗಳನ್ನು ತರಬೇತಿಗೊಳಿಸಲಾಯಿತು. ನವೆಂಬರ್ 26.2010 ರಂದು ಗ್ರಾಮೀಣಾಭಿವೃದ್ಧಿ ಸಚಿವರಾದ ಶ್ರೀಯತ ಜಗದೀಶ ಶೆಟ್ಟರ್‌ರವರು ಧಾರವಾಡದಲ್ಲಿ ದುಡಿಯುವ ಕೈಗಳಿಗೆ ಕಾಯಕ ಕಲಾಜಾಥವನ್ನು ಉದ್ಘಾಟಿಸುವ ಮೂಲಕ ಮೊದಲ ಹಂತದ ಜಾಥಾಕ್ಕೆ ಚಾಲನೆ ನೀಡಲಾಯಿತು. ಇಪ್ಪತ್ತು ದಿನಗಳ ಕಾಲ ಸದರಿ ಜಿಲ್ಲೆಗಳ ಗ್ರಾಮೀಣ ಭಾಗದಲ್ಲಿ ನಡೆದ ಈ ಜಾಥಾಕ್ಕೆ ಸ್ಥಳೀಯ ಚುನಾವಣೆಗಳ ಹಿನ್ನಲೆಯಲ್ಲಿ ಬಿಡುವು ನೀಡಲಾಯಿತು.

ಮೊದಲ ಹಂತದ ಜಾಥಾದ ಸಾಧಕ ಬಾಧಕಗಳನ್ನು ತಿಳಿದುಕೊಳ್ಳಲು ಜಾನಪದಲೋಕದಲ್ಲಿ ಮೂರು ದಿನಗಳ ಪುನರ್‌ಮನನ ಶಿಬಿರವನ್ನು ಆಯೋಜಿಸಲಾಯಿತು. ಈ ಶಿಬಿರದಲ್ಲಿ ಸದರಿ ಹತ್ತು ಜಿಲ್ಲೆಯ ಕಲಾತಂಡದ ನಾಯಕರುಗಳು, ಒಬ್ಬ ಪುರುಷ ಕಲಾವಿದ, ಒಬ್ಬ ಮಹಿಳಾ ಕಲಾವಿದೆ ಹಾಗೂ ಜನಪದ ಕಲಾವಿದರನ್ನು ಆಹ್ವಾನಿಸಲಾಗಿತ್ತು. ನಿರ್ದೇಶಕರು, ಮ.ಗಾ.ರಾ.ಗ್ರಾ.ಉ.ಖಾ.ಯೋ,  ಮುಖ್ಯ ಸಲಹೆಗಾರರು, ಸಹಾಯಕ ಸಲಹೆಗಾರರು, ಜಂಟಿನಿರ್ದೇಶಕರು, ಮ.ಗಾ.ರಾ.ಗ್ರಾ.ಉ.ಖಾ.ಯೋ, ಸಹಾಯಕ ನಿರ್ದೇಶಕರು, ಮ.ಗಾ.ರಾ.ಗ್ರಾ.ಉ.ಖಾ.ಯೋ, ಮತ್ತು ಸಂಪನ್ಮೂಲ ವ್ಯಕ್ತಿಗಳು ಭಾಗವಹಿಸಿದ್ದ ಈ ಶಿಬಿರದಲ್ಲಿ ಸಾಕಷ್ಟು ಚರ್ಚೆಗಳು ನಡೆದವು. ನಂತರ ಮುಂದಿನ ಹಂತದ ಜಾಥಾದಲ್ಲಿ ಕೆಲವು ಬದಲಾವಣೆಗಳನ್ನು ಮಾಡಿ, ಜನವರಿಯಲ್ಲಿ ಎರಡನೇ ಹಂತದ ಜಾಥಾ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು. ಸತತ ಇಪ್ಪತ್ತು ದಿನಗಳ ಕಾಲ ನಡೆದ ಈ ಜಾಥಾ ಕಾರ್ಯಕ್ರಮ ಐದು ದಿನಗಳ ಬಿಡುವಿನ ನಂತರ ಮೂರನೇ ಹಂತವನ್ನೂ ಪ್ರಾರಂಭಿಸಿ ಇಪ್ಪತ್ತು ದಿನಗಳ ಕಾಲ ನಿರಂತರವಾಗಿ ಕಾರ್ಯಕ್ರಮ ನೀಡಿ ಸಮಾರೋಪಗೊಳಿಸಲಾಯಿತು. ಈ ಮೂರೂ ಹಂತದ ಜಾಥಾ ಕಾರ್ಯಕ್ರಮಕ್ಕೆ ವ್ಯವಸ್ಥಿತ ರೂಪದಲ್ಲಿ ಮಾರ್ಗಸೂಚಿಯನ್ನು ಆಯಾ ಜಿಲ್ಲಾಪಂಚಾಯತಿ ಅಧಿಕಾರಿಗಳೇ ತಯಾರಿಸಿ ಕೊಟ್ಟಿದ್ದರು.

ಉತ್ತರ ಕರ್ನಾಟಕ ಭಾಗದ ಹತ್ತು ಜಿಲ್ಲೆಗಳಲ್ಲಿ ಮೂರು ಹಂತದ ಜಾಥಾ ಕಾರ್ಯಕ್ರಮವನ್ನು ಮುಗಿಸಿದ ನಂತರ ಪುನ: ಜಾನಪದಲೋಕದಲ್ಲಿ ಎರಡನೇ ಹಂತದ ಜಾಥಾದ ಅಂದರೆ, ಬೇರೆ ಇಪ್ಪತ್ತು ಜಿಲ್ಲೆಗಳಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳುವ ಸಲುವಾಗಿ ಪೂರ್ವಭಾವಿ ತಯಾರಿ ಶಿಬಿರವನ್ನು ಹತ್ತು ದಿನಗಳ ಕಾಲ ಆಯೋಜಿಸಲಾಯಿತು. ಎಲ್ಲಾ ಹತ್ತು ತಂಡಗಳ ನಾಯಕರು ಹಾಗೂ ಜನಪದ ಕಲಾವಿದರು ಭಾಗವಹಿಸಿದ್ದ ಈ ಶಿಬಿರದಲ್ಲಿ ಮೂರು ಹಂತದ ಕಲಾಜಾಥಾದ ಸಾಧಕ ಬಾಧಕಗಳನ್ನು ಚರ್ಚಿಸಲಾಯಿತು. ಮೊದಲು ಧ್ವನಿಮುದ್ರಿಸಿಕೊಳ್ಳಲಾಗಿದ್ದ ಹಾಡುಗಳ ಸಿಡಿಯನ್ನು ಮತ್ತಷ್ಟು ಪರಿಷ್ಕರಿಸಿ ಧ್ವನಿಮುದ್ರಿಸಿಕೊಳ್ಳಲಾಯಿತು. ಶಿಬಿರದಲ್ಲಿ ಭಾಗವಹಿಸಿದ್ದ ಕಲಾವಿದರೊಟ್ಟಿಗೆ ಶ್ರೀಯುತ ರವಿಕುಮಾರ್, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶ್ರೀಯುತ ನಾರಾಯಣಸ್ವಾಮಿ, ಸರ್ಕಾರದ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು ಇವರು ನೇರ ಸಂವಾದ ನಡೆಸಿ ಸಾಕಷ್ಟು ಮಾಹಿತಿಗಳನ್ನು ಪಡೆದುಕೊಂಡರು. ಜಾಥಾದ ಮೂಲಕ ಸದರಿ ಯೋಜನೆಯ ಮಾಹಿತಿಗಳು ಗ್ರಾಮೀಣ ಭಾಗದ ಜನರನ್ನು ತಲುಪಿದ ವಿಚಾರವನ್ನು ಮನಗಂಡ ಅಧಿಕಾರಿಗಳು ಆದಷ್ಟು ಶೀಘ್ರವಾಗಿ ಇನ್ನಷ್ಟು ಜಿಲ್ಲೆಗಳಿಗೆ ಈ ಕಾರ್ಯಕ್ರಮವನ್ನು ವಿಸ್ತರಿಸುವ ಆಶಯವನ್ನು ವ್ಯಕ್ತಪಡಿಸಿದರು.

❑

ಕಾವ್ಯ ವಿಕಾಸ

– ಮಾಯಸಂದ್ರ ಕೃಷ್ಣಪ್ರಸಾದ್

## 1. ಹಾಡು

ಗುಳೇ ಹೋಗೋ ಮಂದಿಗೆಲ್ಲ ಸವಿಮಾತ ಹೇಳುತೀವಿ
ಹಳ್ಳಿ ಬಿಟ್ಟ ಹೋಗ್ತೀ ನಂತ ಹೇಳಬ್ಯಾಡಿರೋ
ಒಂದು ಹೊತ್ತು ಉಂಡು ಮಲಗೋ ಮಂದಿಗಂತ ಹೇಳತೀವಿ
ಎರಡು ಹೊತ್ತು ಊಟ ಐತೆ ಅಳಬ್ಯಾಡಿರೋ

ನಿಮ್ಮ ಹಳ್ಳಿ ಕೇರಿಯಲ್ಲೇ ಕೆಲಸ ಉಂಟು ನಂಬಿ ಬನ್ನಿ
ಆಳಿಗೊಂದು ನೂರಾ ಇಪ್ಪತ್ತೈದು ಕೂಲಿ ಕಾಣಿರೋ
ದುಡಿವ ಮಂದಿಗಿಂದು ಭಯವು ಕಾಣಿ ದೇವರಾಣಿ
ನಗುವ ಹೊತ್ತು ಬಂದೀತೆಂದು ಕುಣಿಯ ಬನ್ನಿರೋ

ನಗುತ ನಲಿವ ಮಂದಿ ಹಿಂದೆ ಕಿತ್ತು ತಿನ್ನೋ ಮಂದಿ ಅವ್ರೆ
ಜಾಬು ಕಾರ್ಡು ಚೆಕ್ಕು ಬುಕ್ಕು ಜೋಕೆ ಮಾಡಿರೋ
ನಿಮ್ಮ ಬುದ್ಧಿ ನಿಮ್ಮ ಕೈಲಿ ಕೆಟ್ಟ ಮಂದಿ ದೂರ ಇರಲಿ
ದುಡಿವ ಕೈಯ ಕಟ್ಟದಂತೆ ದುಡಿಯ ಬನ್ನಿರೋ

ನಿಮ್ಮ ಉಳಿವೇ ದೇಶದುಳಿವು ಶಿವನಾಣೆ
ಅಳಿಸದಂತೆ ನಿಮ್ಮ ಹಳ್ಳಿ ಬದುಕ ಮಾಡಿರೋ
ಉದ್ಯೋಗ ಖಾತರಿ ಯೋಜನೆಯಂತೂ ನಿಮ್ಮ ಹಕ್ಕು ಸತ್ಯ ಕೇಳಿ
ಬಿಡದಂತೆ ದುಡಿದು ಬದುಕಿ ಧನ್ಯರಾಗಿರೋ

* * *

## 2. ಹಾಡು

ಕೇಳೋ ತಮ್ಮ ಕೇಳೋ ಅಣ್ಣ
ಅರಿವಿನ ಮಾತನು ಕೇಳು
ಗುಳೇ ಹೋಗಿ ಹಾಳಾಗಬೇಡ
ಹಳ್ಳಿಯ ಚಂದ ಕಾಣೋ

ದೂರದ ಬೆಟ್ಟ ನುಣ್ಣಗೆ ತಮ್ಮ
ಹತ್ತಿರ ಹೋದರೆ ಬೆಂಗಾಡು
ಪಟ್ಟಣ ನಿನಗೆ ಎಟುಕದ ಬೀಡು
ಕಷ್ಟ ವ್ಯಸನದ ಸುಡುಗಾಡು
ನಿನ್ನಯ ಗುರುತು ಸಿಗದಹಾಗೆ
ಕಳೆದೂ ಹೋಗುವೆ ಅಲ್ಲಿ
ಪಡೆಯುವ ಕೂಲಿ ಬೊಗಸೆ ತುಂಬದೆ
ಸೋರಿ ಹೋಗುವುದಲ್ಲಿ

ಹೃದಯವಂತಿಕೆ ಕಾಣೋದಿಲ್ಲ
ಮಾನವೀಯತೆ ಇಲ್ಲವೇ ಇಲ್ಲ
ಏನೂ ಸಿಗದ ಪಟ್ಟಣದಲ್ಲಿ
ಶಿವನೂ ಕೂಡ ಇಲ್ಲ, ಪರಶಿವನೂ ಕೂಡ ಇಲ್ಲ

ಅಂಗೈ ಅಗಲ ಭೂಮಿಯೇ ಸಾಕು
ದುಡಿದು ತಿನ್ನುವ ಮನಕೆ
ಉದ್ಯೋಗ ಖಾತರಿ ಯೋಜನೆ ಸಾಕು
ನೀನೂ ಉಳಿಯಕ್ಕೆ ಈ ಹಳ್ಳಿ ಉಳಿಸಕ್ಕೆ

* * *

## 3. ಹಳ್ಳಿಯ ಮುಂದೆ ಬೆಳ್ಳಿಯು ಮೂಡಿ

**– ಡಾ॥ ಟಿ.ಎಸ್. ವಿವೇಕಾನಂದ**

ಅಕ್ಕಾ ಮಾಡೇ ಕಾಯಕ ಓ... ಅಣ್ಣಾ ಮಾಡೋ ಕಾಯಕ
ಇದು ಕಲ್ಯಾಣದ ಕನಸೋ ಇದು ಬಸವಣ್ಣನ ಕನಸೋ ॥ ಪ ॥

ಸಂಚನು ತೊರೆದು ಮಿಂಚುತ ಬಂತೊ
ಉದ್ಯೋಗ ಖಾತ್ರಿಯ ವರಮಾನ
ಹಳ್ಳಿ ಬದುಕಿಗೆ ಬೆಳ್ಳಿ ಕಿರಣವಾಗಿ
ಬಡವರಿಗೆಲ್ಲಾ ವರದಾನ
ನಮ್ಮ ಬಡವರಿಗೆಲ್ಲಾ ವರದಾನ ॥ ಪ ॥

ಶತ ಶತಮಾನದ ಹಸಿವಿನ ನೋವಿನಿಂದ
ಬಡವರ ಮಾನ ಬೀದಿಯ ಪಾಲು
ಕಾಯಕ ನೀಡಿ ಕೈಲಾಸ ತರುವ
ಹಳ್ಳಿಗಳುಳಿಸುವ ಹೊಳೆಸಾಲು
ನಮ್ಮ ಹಳ್ಳಿಗಳುಳಿಸುವ ಹೊಳೆ ಸಾಲು ॥ ಪ ॥

ಉದ್ಯೋಗ ಖಾತ್ರಿಯು ಬೆಳಕಾಗಿ
ಬಡವರ ಬದುಕಿನ ಬಡತನ ನೀಗಿ
ಒಡಲಿನ ಬೆಂಕಿಗೆ ಜಲವಾಗಿ
ಹಳ್ಳಿಯ ಬೆಳಗಲು ಹಸನಾಗಿ
ನಮ್ಮ ಹಳ್ಳಿಯ ಬೆಳಗಲು ಹಸನಾಗಿ ॥ ಪ ॥

## 4. ಸುಟ್ಟಂಥ ಹಳ್ಳಿ

**– ಡಾ॥ ಟಿ.ಎಸ್. ವಿವೇಕಾನಂದ**

ಸುಮ್ಮನೆ ಮಲಗಿತ್ತು
ಸುಟ್ಟಂಥ ಹಳ್ಳಿ
ಕಣ್ಣೀರ ಕರೆದಿತ್ತು
ಕೆಟ್ಟಂಥ ಹಳ್ಳಿ ॥ಪ॥

ಮಳೆಯಿಲ್ಲ ಬೆಳೆಯಿಲ್ಲ
ತಾಯಂಥ ನೆಲದಲ್ಲಿ
ಬಿತ್ತಿ ಬೆಳೆದಂಥ ಜೀವಗಳು
ಬೇಸತ್ತೂ ಹೋದವೋ ॥ಪ॥

ತುತ್ತು ತುತ್ತಿಗೂ ತತ್ವಾರ
ಎತ್ತ ಹೋದರೂ ತಾತ್ಸಾರ
ಬೇಡಲಾರವೋ ಜೀವ
ತಾಳಲಾರವೋ ಒಡಲು ॥ಪ॥

ಎದೆಯಲ್ಲಿ ಹಾಲಿಲ್ಲ
ಹೊಳೆಯಲ್ಲಿ ನೀರಿಲ್ಲ
ಕೊಡುವಂಥಾ ಕೈಗಳು
ಹುಡುಕಿದರೂ ಒಂದಿಲ್ಲ ॥ಪ॥

ಕೈಯೆತ್ತಿ ಬೇಡಿದವು
ರೋಸಿದಾ ಜೀವಗಳು
ಶಿವನೇಕೋ ಬರಲಿಲ್ಲ
ಸುಟ್ಟಂಥ ಹಳ್ಳಿಗೆ ॥ಪ॥

ಹಿಂಡು ಹಕ್ಕಿಯ ಮರಕೆ
ಕಲ್ಲಾನು ಒಗೆದಂಗೆ
ಚದುರಿದ ಜೀವಗಳು
ಹೊರಟವು ಗುಳೆ ಸಾಲು ॥ಪ॥

ದಾಟಿ ಹೊರಡಲು ಅಗಸೆಯ ಬಾಗಿಲು !
ಅಲ್ಲೊಂದು ಕಿರು ಬೆಳಕು !!
ಮೈದಡವಿ ಕೇಳಿತು, ಕೇಳಿತು
ಕೆಲಸ ಬೇಕೇ ? ಕೂಲಿ ಬೇಕೇ ? ॥ಪ॥

ಬೆರಗಾದ ಜೀವಗಳು
ಭೀತಿಯಿಂದಲೇ ಕೇಳಿದವು
ಯಾರು ನೀನು ? ಯಾರು ನೀನು ?
ಏನು ತಂದೆ ? ಇದೇನು ತಂದೆ ? ॥ಪ॥

ನನ್ನ ಹೆಸರು, ನನ್ನ ಹೆಸರು
ಉದ್ಯೋಗ ಖಾತ್ರಿ ಉದ್ಯೋಗ ಖಾತ್ರಿ
ನಿಮಗಾಗಿ ಬಂದೆ, ತಂದೆ
ಕೂಲಿ ಖಾತ್ರಿ ಉದ್ಯೋಗ ಖಾತ್ರಿ ॥ಪ॥

ಚಿಮ್ಮನೆ ಚಿಗುರಿತ್ತು
ಸುಟ್ಟಂಥ ಹಳ್ಳಿ
ನವರೂಪ ಧರಿಸಿತ್ತು
ಕೆಟ್ಟಂಥ ಹಳ್ಳಿ ॥ಪ॥

## 5. ಮಣ್ಣ ನೆನಪಿನಾಳ...

– ರಜಿಯಾ ಡಿ.ಬಿ.

ಯಾಕೆ ಈ ಕಣ್ಣೀರು
ಬಂದೇ ಬರುತ್ತಾರೆ ನಿನ್ನೋರು
ಮಳೆ–ಬಿಸಿಲು ಲೆಕ್ಕಿಸದೆ
ವಲಸೆ ಹೊರಟವರು ಒಂದ್ಹೊತ್ತಿನ
ಅನ್ನಕೆ ಹಾಹಾಕಾರವಾಗೆ
ಹೊತ್ತು ಗೊತ್ತಿಲ್ಲದಂತೆ ಅ ವೇಳೆಯಲೂ
ದಣಿಯುವವರು; ಇವರು ದುಡಿಯುವವರು
ಕೋಟಿ ಕೋಟಿ

ಅಂತಸ್ತುಗಳ ಅಡಿಪಾಯ ದಡಿ ತುಳಿಸಿಕೊಂಡು
ಅಡಿಗಡಿಗೂ ನಲುಗುವವರು
ನೆರಳಿಲ್ಲದೆ ಬೆಚ್ಚನೆ ಸೂರಿಲ್ಲದೆ
ನಿಸ್ಸೂರಾಗೆ ಆಸೆಯ ಬಿತ್ತಿಕೊಂಡವರು ॥ 2 ॥

ತನ್ನವರ ಹಳಿತಪ್ಪಿದ ದೀನ ಬದುಕಿಗೆ
ಹೊಸಹಾದಿ ಹುಡುಕುತ್ತಾ ಮಣ್ಣ ನೆನಪಿನಾ ಘಮಲಿನೊಳು
ಮಮಕಾರ ಮುರುಟಿಕೊಂಡೆ ಕನಲುವವರು
ಆಪ್ತ ಬಳಗ ಕಳಕೊಂಡು ಕಲ್ಲೆದೆಯಾಗೆ ॥ 3 ॥

ಕಾಯಕ ಧರ್ಮಕ್ಕೆ ಕರ್ಮ ಎನ್ನದೇ
ನಿರ್ಬಂಧಗಳ ಗಡಿದಾಟಿ
ದಾಪುಗಾಲು ಹಾಕ–ಬಯಸಿ (ರುವವರು)
ವ್ಯವಸ್ಥೆಯ ಅಸ್ಥವ್ಯಸ್ಥತೆಗೆ
ವ್ಯಸನಿಯಂತೆ ಬಲಿಯಾಗದೆ
ಮಣ್ಣ ನೆನಪಿನಾಳಕ್ಕೆ ಹಲುಬುವವರು ॥ 4 ॥

* * *

## 6. ಸಾಗುತ್ತಲೇ ಇದೆ ......

– ರಜಿಯಾ .ಡಿ.ಬಿ

ಸಾಗುತ್ತಲೇ ಇದೆ ಬದುಕು
ಸಾಗುತ್ತಲೇ ಇದೆ ಬದುಕು
ನಂಬೀ ಸಾಗುತ್ತಲೇ ಇದೆ ಬದುಕು ॥ಪ॥

ನಾಳೆಯು ಸಾಗುತ್ತಲಿದೆ ಬದುಕು
ಸಾಗುತ್ತಲೇ ಇದೆ ಇಲ್ಲಿ ।
ಮನಸು ಮನಸಿನಲಿ ಮುಸುಕಿರುವ ॥2॥

ಅರಿವೆ ಕತ್ತಲನು ಕೊಲ್ಲಲು ಹವಣಿಸಿ
ಸಾಗುತ್ತಲೇ ಇದೆ ಬದುಕು ॥ಪ॥

ಕೊಳೆತ ಕಲ್ಪನೆಗಳ ದುರ್ಬಲರ
ಮುಸುಕಿದ ಬಲೆಗಳ
ಸಂಚು ಸಂಶಯ ಹೊಂಚಿ ॥2॥

ಎಲ್ಲೆಲ್ಲೂ ನೆಯ್ದ ಜಾಲಗಳಡಿಯಲ್ಲಿ ॥ಪ॥

ಕೆಸರು ಕೊಚ್ಚೆಗಳಲ್ಲಿ
ಸೂಸುವ ಸುಗಂಧದ
ಆಶೋತ್ತರಗಳನ್ನರಸುತ್ತ ॥2॥

ಪುನಶ್ಚೇತನವಾಗುವುದೇ ಈ ಬದುಕು ॥ಪ॥

* * *

## 7. ಲೋಕವೆಲ್ಲ ಲಾಕು ಲೇಕು

– ಕೃಷ್ಣಮೂರ್ತಿ ಬಿಳಿಗೆರೆ

ಲೋಕವೆಲ್ಲ ಲಾಕು ಲೇಕು ಲಾಕು ಆಗೈತೆ
ಲಾಕು ಆಗೈತೆ ಕಂಪ್ಯೂಟರ್ ಲಾಕು ಆಗೈತೆ
ಬೆವರಿನ ಲೆಕ್ಕ ಮಾಡಲಾಗದೆ ಗುನ್ನ ಗೂರೈತೆ
ದುಡ್ಡು ದುಡ್ಡು ದುಡ್ಡು ಅಂತೆಕೇಕೆ ಆಕೈತೆ

ಕೋಟಿ ಕೋಟಿ ಲೆಕ್ಕದಲ್ಲಿ ದುಡ್ಡು ಹರಿದೈತೆ
ಅಧಿಕಾರೆಪ್ಪನ ಮನಸಿನ ಒಳಗೆ ಏನು ತುಂಬೈತೆ
ಅಧ್ಯಕ್ಷಪ್ಪನ ಕನಸಿನ ಒಳಗೆ ಏನು ನಡೆದೈತೆ
ಲೂಟಿ ಲೂಟಿ ಲೂಟಿ ಅಂತ ನಗೆಯ ಬೀರೈತೆ

ಸೆಕ್ರೆಟ್ರಿ ಲೆಕ್ಕ ಚುಕ್ತಾ ಆಗಿ ರೈತರ ಲೆಕ್ಕ ಗೋತಾ ಹೊಡೆದು
ಕಂಟ್ರಾಟುದಾರನ ಕಂತ್ರಿ ಬುದ್ಧಿ ಬಯಲಿಗೆ ಬಿದ್ದೈತೆ
ಎತ್ತು ಗಾಡಿ ಗುದ್ಲಿ ಮಂಕ್ರಿ ಸುದ್ದಿಯು ಮುಗದೈತೆ
ಹಿಟಾಚಿ ಟ್ರ್ಯಾಕ್ಟರ್ ಯಂತ್ರ ತಂತ್ರದ ಸುಗ್ಗಿ ನಡದೈತೆ

ಗಾಂಧಿ ಮನುಷ್ಯನ್ ಊರಿಗೆ ತಂದ್ರೆ ಜನಗಳ ಕಷ್ಟಕ್ ಯೋಜನೆ ಬಂದ್ರೆ
ಜನಗಳಿಗರ್ತ ಆಗದೆ ಹೋದ್ರೆ ಒಳ್ಳೆ ಜನರು ನಿದ್ದೆ ಹೋದ್ರೆ
ಗ್ರಾಮ ಸಭೆಗೆ ಹೋಗದೆ ಇದ್ರೆ ಚಂಗಿಬಿಂಗಿ ಆಡ್ತಾ ಇದ್ರೆ
ರಣಹದ್ದುಗಳಾರಿ ಬಂದು ಬಡವರ ಕಣ್ಣು ಕುಕ್ಕತ್ತೆ

ಹೊತ್ತು ಹೊತ್ತಿಗೆ ಕದ್ದು ತಿಂದ್ರೆ ಬಾಯಿಗೆ ಭದ್ರ ಬೀಗ ಇದ್ರೆ
ಊರಿಗೆ ಊರೆ ಸೂರೆ ಆದ್ರೆ ಮಕ್ಕಳು ಮರಿಗಳು ಬತ್ತಿ ಹೋದ್ರೆ
ಸುಮ್ನೆ ಕುಂತು ನೋಡ್ತಾ ಇದ್ರೆ ತಪ್ಪು ಯಾರದಾಗುತ್ತೆ
ಒಳಕ್ಕೆ ಹೋಗಿ ಎಂಜಲು ತಿಂದ್ರೆ ಯೋಜನೆ ಗೋತ ಹೊಡೆಯುತ್ತೆ

ಕಮಂಗಿಯಂಗೆ ಕಣ್ ಕಣ್ ಬಿಟ್ರೆ ಮಂಗ್‌ನಂಗೆ ನೆಗಿತಾ ಇದ್ರೆ
ನೂರು ಯೋಜನೆ ಬಂದ್ರು ಒಂದೇ ಬರದೇ ಹಾಳಾಗಿ ಹೋದ್ರು ಒಂದೆ
ಕೆಲಸ ಇದ್ರು ಕೆಲಸ ಮಾಡ್ದೆ ಮಾಡೋ ಕೆಲಸ ಮಾಡ್ದೆ ಇದ್ರೆ
ಬಡವರ ಬಗ್ಗರ ಜೀವನವೆಲ್ಲಾ ಬರಬಾದಾಗಿ ಹೋಗುತ್ತೆ

ಲೋಕವೆಲ್ಲಾ ಲಾಕು ಲೇಕು ಲಾಕು ಆಗೈತೆ
ಬಿಲ್ಲಿಗಾಗಿ ತಿರುಗಿ ಮೆಟ್ಟು ಸವೆದು ಹೋಗೈತೆ
ಹಳ್ಳಿ ಕಷ್ಟ ಲೆಕ್ಕ ಹಾಕೋದ್ ಕಷ್ಟವಾಗೈತೆ
ಲಾಕು ಆಗೈತೆ ಸಿಸ್ಟಮ್ ಲಾಗೌಟ್ ಆಗೈತೆ

ಕಾವ್ಯ ವಿಕಾಸ

## 8. ಬೆವರಿನ ಮೈಗಳೇ......

– ಕೆ. ವೈ. ನಾರಾಯಣಸ್ವಾಮಿ

ಬೆವರಿನ ಮೈಗಳೇ ದುಡಿಯುವ ಕೈಗಳೇ ॥2॥
ಶ್ರಮವೇ ದೇವರು ಬಾಳಿಗೆ
ದುಡಿಮೆಯೇ ದೇಶದ ಏಳಿಗೆ ॥ಪ॥

ಪ್ರಜೆಗಳು ನಾವು ಪ್ರಭುಗಳು ನಾವು
ಪ್ರಜಾರಾಜ್ಯವು ನಮ್ಮಯ ಹೆಮ್ಮೆ
ಬಡತನ ನೀಗಲು ದುಡಿಮೆಯೆ ದಿಕ್ಕು
ಕಾಯಕ ಇಂದು ನಮ್ಮಯ ಹಕ್ಕು ॥ಪ॥

ಬಂಜರು ಭೂಮಿ ಬಿರುಕಿನ ಓಡು
ಒಣಗಿದ ಹಕ್ಕಲು ಸುಡು ಸುಡು ಕಾಡು
ಒಣಗಿದ ಕೆರೆಯ ಅಂಗಳ ಓಡು
ಬತ್ತಿದ ಬಾವಿ ಹೊಲಗದ್ದೆಗಳು ॥ಪ॥

ಬೆವರಿನ ನದಿಗಳು ಹರಿಯಲಿ ಇಲ್ಲಿ
ಹಸಿರ ಮಣ್ಣು ಹಸಿಯಾ ಕಣ್ಣು
ನೆನ್ನೆಯ ಪಾಡೇ ನಾಳಿನ ಹಾಡು
ಕಣ್ಣಾ ಮುಚ್ಚೆ ಕನಸಿನ ನಾಡು ॥ಪ॥

* * *

## 9. ನಮ್ಮದೇ ಹಳ್ಳಿ

– ಆಲೂರು ದೊಡ್ಡನಿಂಗಪ್ಪ

ನಮದೇ ಹಳ್ಳಿ । ನಮ್ಮದೇ ಬಳ್ಳಿ ।
ನಮ್ಮದೇ ನೆಲ । ನಮ್ಮದೇ ಜಲ ॥2॥

ನಮ್ಮದೇ ಹಸಿರು ನಮ್ಮದೇ ಉಸಿರು ।
ನಮ್ಮದೇ ಭಾವ । ನಮ್ಮದೇ ಜೀವ ।
ನಮ್ಮದೇ ನೆಲ । ನಮ್ಮದೇ ಜಲ ॥ಪ॥

ನಮ್ಮದೇ ದುಡಿಮೆ । ನಮ್ಮದೇ ನಗುವು ।
ನಮ್ಮದೇ ಯೋಜನೆ ನಮ್ಮದೇ ಕೂಲಿ ।
ನಮ್ಮದೇ ಖಾತೆ । ನಮ್ಮದೇ ಜಾಬ್ ಕಾರ್ಡ್ ।
ನಮ್ಮದೇ ದಾರಿ । ನಮ್ಮದೇ ಹೆಜ್ಜೆ ॥ಪ॥

ನಮ್ಮದೇ ಮನಸು । ನಮ್ಮದೇ ಕನಸು ।
ನಮ್ಮದೇ ಕಣ್ಣು । ನಮ್ಮದೇ ನೋಟ ॥
ನಮ್ಮದೇ ಬೀದಿ । ನಮ್ಮದೇ ಹಾದಿ ।
ನಮ್ಮದೇ ದೀಪ । ನಮ್ಮದೇ ಬೆಳಕು ॥ಪ॥

* * *




## 10. ಗ್ರಾಮ ಸಭೆಗೆ ಹೋಗೋಣ

– ಆಲೂರು ದೊಡ್ಡನಿಂಗಪ್ಪ

ಗ್ರಾಮ ಸಭೆಗೆ ಹೋಗೋಣ
ಮನವಿಯೊಂದ ಮಾಡೋಣ
ಕುಂದು ಕೊರತೆ ಹೇಳೋಣ
ದುಡಿಯಲು ಕೆಲಸ ಕೇಳೋಣ । ನಾವು । ॥ಪ॥

ಜಾಬು ಕಾರ್ಡು ಪಡೆಯೋಣ
ಬ್ಯಾಂಕು ಖಾತೆ ತೆರೆಯೋಣ ॥2॥
ವಲಸೆ ಯಾಕೆ ಹೋಗೋಣ........
ಇಲ್ಲೇ ಕೂಲಿ ಮಾಡೋಣ ॥ ಗ್ರಾಮ ॥

ನೀರ ಹೊಂಡ ತೆಗೆಯೋಣ
ಮಳೆಯ ನೀರ ಹಿಡಿಯೋಣ
ನಮ್ಮ ಹಳ್ಳೀಲೇ ಬಾಳೋಣಾ.......
ದಲ್ಲಾಳಿಗಳ ತಡೆಯೋಣ ॥ ಗ್ರಾಮ ॥

ಇಂಗು ಗುಂಡಿ ತೋಡೋಣ
ಬತ್ತಿ ಹೋದ ನೆಲದಲ್ಲಿ
ಹನಿ ಹನಿ ನೀರ ಇಂಗಿಸೋಣ
ನಮ್ಮ ಕೂಲಿ ನಾವು ಪಡೆಯೋಣ । ॥ ಗ್ರಾಮ ॥

* * *

## 11. ಖಾತರಿ ಕೆಲಸ

– ರಾಜಪ್ಪ ದಳವಾಯಿ

ಖಾತರಿ ಕೆಲಸ ಇದ್ದರೂ ಸೈತ
ಕೈಚೆಲ್ಲಿ ಕುಂತಾನ ದುಡಿವಾತ ॥ಪಲ್ಲವಿ॥

ಎಂಜಲು ಕೊಡುವ ಜನರನು ನಂಬಿ
ದುಡಿವ ಕೈಗಳ ಮುರಿದೆಣ್ಣ
ಸುಮ್ಮ ಸುಮ್ಮಕ ಕಾಸನು ಬಯಸಿ
ಕೆಟ್ಹೋದೆಯಲ್ಲೋ ಕೂಲೆಣ್ಣ ॥1॥

ನಿನ್ನ ಬೆವರಿಗೆ ನೀನೆ ಬೆಲೆಯನು
ನಿಗದಿ ಮಾಡಿಕೊಳ್ಳೋ ದುಡಿವಾತ
ಮಾನಪಮಾನದ ಹಂಗನು ತೊರೆದು
ಉಳಿಸಿಕೋ ಉದ್ಯೋಗ ಖಾತರಿಯ ॥2॥

ಕೂಲಿ ನಿನ್ನದು ಕುಂಬಳ ನಿನ್ನದು
ಈ ಯೋಜನೆ ನಿಮಗೆ ವರವಂತೆ
ಕೈರೊಟ್ಟಿಯು ಜಾರಿಬಿದ್ದರೆ
ನರಿ ನಾಯಿಗಳಾ ಪಾಲಂತೆ ॥3॥

* * *

## 12. ಉಸಿರು ತೊರೆಯುವ ಮುನ್ನ

– ಡಾ॥ ಟಿ.ಎಸ್. ವಿವೇಕಾನಂದ

ಮಾತು ಕೇಳಕ್ಕಯ್ಯ ಮಾತು ಕೇಳೆ
ಊರು ತೊರೆಯುವ ಮುನ್ನ ಕೂತು ಕೇಳೆ ॥ಪ॥

ಬಂದು ನೋಡಕ್ಕಯ್ಯ ಬಂದು ನೋಡೆ
ಕೆರೆ ಹಳ್ಳ ಬಾವಿಗಳ ಇಣುಕಿನೋಡೆ ॥
ಊರೀನ ಜಲಹಿಂಗಿ ಹಿಸಿದುನೋಡೆ
ನೆಲದಲ್ಲಿ ಪಸೆಯಿಲ್ಲ ಬಗೆದುನೋಡೆ ॥ಪ॥

ಕತ್ತಲು ಉಕ್ಕಿತಲ್ಲ ಬಂದುನೋಡೆ
ಹಸಿರೀಗೆ ಉಸಿರಿಲ್ಲ ಸಿಗಿದುನೋಡೆ ॥
ತುಸುಮುನ್ನ ತುಸುಮುನ್ನ ಎದ್ದುನೋಡೆ
ದುಡಿಮೆಯ ಕನಸನ್ನು ಬಿತ್ತಿನೋಡೆ ॥ಪ॥

ವರ್ಷಕ್ಕೆ ನೂರುದಿನ ಖಾತ್ರಿ ಕಾಣೆ
ಹೆಣ್ಣು–ಗಂಡಿಗು ಒಂದೇ ಕೂಲಿ ಕಾಣೆ
ಹದಿನೈದು ದಿನದೊಳಗೆ ಕೂಲಿ ಪಕ್ಕಾಕಾಣೆ
ಹಸಿದಂತ ಬಡವರ ನಿತ್ಯ ದೀಪ ಕಾಣೆ ॥ಪ॥

ಹಳ್ಳಕ್ಕೆ ನೀರಾಗಿ ಹರಿದುನೋಡೆ
ಬಳ್ಳಕ್ಕೆ ಕಾಳಾಗಿ ಅಳೆದುನೋಡೆ ॥
ಕೆರೆಹಳ್ಳ ಬಾವಿಗಳ ತುಂಬಿನೋಡೆ
ಹಳ್ಳಿಗೆ ಹಸಿರುಡಿಸಿ ನಿಂತುನೋಡೆ ॥ಪ॥

## 13. ಕಾಯಕ ಮಾಡೋ ಕಾಯಕ

### ಒಂದು ತತ್ವಪದ

– ರಾಜಪ್ಪ ದಳವಾಯಿ

ಕಾಯಕ ಮಾಡೋ ಕಾಯಕ
ಸೋಮಾರಿಯಾಗ ಬ್ಯಾಡ ಸಾಯಕ್ಕ ॥ಪಲ್ಲವಿ॥

ಕೂತು ತಿಂದರೆ ಸಾಲದೋ ಅಣ್ಣ
ಕಣಜ ಹೊನ್ನು ಕರಗುತ್ತೈತೋ
ತೂತು ಚೀಲದ ದವಸದಂತೆ
ಸೋರಿ ಹೋಯಿತು ಬದುಕೆಲ್ಲ ॥1॥

ಶರಣರು ಅಂದು ಹೇಳ್ಯಾರು ಕಾಯಕ
ಕೂಡಿ ದಾಸೋಹ ಉಣಬೇಕು
ಚಿಂತೆ ಸಂತಿಗೊಂದು ಮಂಟಪ
ಅನುಭವ ಇದ್ದವ ಮಹಾನುಭಾವ ॥2॥

ಕೂತು ಗೆದ್ದಲ ಹಿಡಿದು ಬಿಟ್ಟೆಲ್ಲೋ
ಅಯ್ಯೋ ! ಸಂಪಾದನೆ ಶೂನ್ಯವಾಯ್ತಲ್ಲೋ
ಭರವಸೆ ಬದುಕು ದೂರವಾಯ್ತಲ್ಲೋ
ದುಡಿಮೆ ನಮ್ಮ ದೈವವಾಯ್ತಲ್ಲೋ ॥3॥

* * *

## 14. ಗ್ರಾಮ ತಾಯಿಯ ತೇರ ಎಳೆಯಿರಿ

– ಸುಬ್ಬು ಹೊಲೆಯಾರ್

ಉಸಿರು ಉಸಿರನ್ನು ಕುಡಿದು
ಉಸಿರಿಗೊಂದು ಮಾತು ಕೊಡುವ
ಉಸಿರಿಗೊಂದು ನೆಡಿಗೆ ಕೊಡುವ
ಜೀವಕ್ಕೊಂದು ಜೀವಕೂಡುವ ತಾಯೇ ಭೂ ತಾಯೇ
ಓ,,,,, ತಾಯೇ,,,,, ಭೂ ತಾಯೆ ॥ಪ॥

ಕಡಲು ಕಡಲಿಗಿಂತ ನಿನ್ನೊಡಲು ದೊಡ್ಡದಮ್ಮ
ತಿಂಗಳೊಂಬಂತ್ತು ನೆಲವ ಹೊತ್ತು
ಮೈತುಂಬ ಮುತ್ತಿನ ಬಟ್ಟೆಯನ್ನುಡಿಸಿ
ತಾಯೇ,,,,,,,, ಭೂ ತಾಯೇ
ಬಂಧು ಬಳಗ ಊರು ಕೇರಿ
ಹೊಲ ಗದ್ದೆ ತೋಟ ತುಡಿಕೆ
ಕರುಳ ಬಳ್ಳಿ ದುಡಿದುಣ್ಣುವ
ಕರುಣೆ ತೋರು ತಾಯೇ.. ಭೂ ತಾಯೇ,, ಓ ತಾಯೇ

ಗ್ರಾಮ ಗ್ರಾಮಕ್ಕೂ ಜೀವನದಿ ಹರಿದು
ಬರದ ಬವಣೆ ಕಳೆದು
ಉದ್ಯೋಗ ಖಾತ್ರಿಯ ತೇರು ಬಂದಿದೆ
ಹೂಡ ಬನ್ನಿ ಬದುಕಿನ ಬಂಡಿ ಎಳೆಯಿರಿ

ಗ್ರಾಮ ತಾಯಿಯ ತೇರ ಎಳೆಯಿರಿ॥2॥

* * *

## ಕಾವ್ಯ ವಿಕಾಸ

## 15. ಗಾಂಧಿ ಬಂದರು

**– ಸುಬ್ಬು ಹೊಲೆಯಾರ್**

ಗಾಂಧಿ ಮಹಾತ್ಮರ ಕನಸಿದೋ
ಉದ್ಯೋಗ ಖಾತ್ರಿಯ ಬಳಸಿಕೊಳ್ಳಿರೋ ॥2॥ ॥ಪ॥

ಸತ್ಯ ಕಾನೂನುಗಳ ಹಾದಿ ಹಿಡಿಯಿರೋ
ಪ್ರಜೆ ಇರಲಿ ಅಧಿಕಾರಿ ಮಂತ್ರಿ ಇರಲಿ
ಕಾನೂನಿನ ಕಣ್ಣಿಗೆ ಎಲ್ಲರೂ ಸಮಾನರು ॥ಪ॥

ಪ್ರತಿ ಗ್ರಾಮಕೂ ಕಾಯಕದ ಕಾಯಕಲ್ಪ ಬಂದಿದೆ
ಹಸಿವು ಅಸಮಾನತೆಯ ತಾರತಮ್ಯ ನೀಗಲು
ಬರಗಾಲದ ಊರಿಗೆ ಪ್ರೀತಿಯ ನಗೆ ಬೀರಲು ॥ಪ॥

ಮೋಸ ವಂಚನೆಯ ಲೆಕ್ಕ ಕೇಳುತಾರೆ ಇಲ್ಲಿ
ಸುಳ್ಳು ಹೇಳಿದರೆ ದುಡಿಮೆ ದೇವರಾಣೆ
ಬಾಬಾ ಸಾಹೇಬರ ಸ್ವಾಭಿಮಾನದ ಆಣೆ ॥ಪ॥

ಗಂಡಿರಲಿ ಹೆಣ್ಣಿರಲಿ ಜಾತಿ ಯಾವುದೇ ಇರಲಿ
ಕಾಯಕದ ನಾಯಕರು ನೀವಾಗಿರೋ
ದುಡಿವ ಜನರ ಬೆವರಿಗೆ ಕೂಲಿ ಪಡೆಯಿರೋ ॥2॥ ॥ಪ॥

* * *

## 16. ಊರು ಬಿಟ್ಟರೆ ಏನು ಸೊಗಸಿದೆ

**– ಕೃಷ್ಣಮೂರ್ತಿ ಬಿಳಿಗೆರೆ**

ಧಿಕ್ಕಾರ ಧಿಕ್ಕಾರ ಹಸಿವಿನ ಮಾತಿಗೆ ಧಿಕ್ಕಾರ ॥3॥

ನಾಡಿಗೆ ನಾಡೆ ಕೂಗಿ ಹೇಳುತಿದೆ
ಕಾಯಕದಕ್ಕು ಅಧಿಕಾರ
ಅನ್ನದ ದಾರಿಯ ಬಾಗಿಲು ತೆರದಿದೆ
ಹಸಿವಿನ ಮಾತಿಗೆ ಧಿಕ್ಕಾರ

ಬದುಕಿನ ಬಂಡಿ ಮೂರು ದಿನ
ಕೆಲಸವು ಗ್ಯಾರಂಟಿ ನೂರು ದಿನ
ಹಕ್ಕು ಸಿಕ್ಕಿದೆ ದಕ್ಕಲೆ ಬೇಕಿದೆ
ಊರು ಬಿಟ್ಟರೆ ಏನು ಸೊಗಸಿದೆ

ಊರಿನ ಗಾಳಿ ಊರಿನ ನೀರು
ಸ್ವಾಭಿಮಾನದ ಬದುಕು ಬೇಕಿದೆ
ತಂದೆ ತಾಯಿ ಬಂಧು ಬಳಗದ
ನಿತ್ಯ ನಿರಂತರ ನಂಟು ಬೇಕಿದೆ

ಒದಗದೆ ಹೋದರೆ ಉದ್ಯೋಗ
ನಿರುದ್ಯೋಗದ ಭತ್ಯೆ ಇದೆ
ಪಕ್ಕದ ಊರಿಗೆ ಕೆಲಸಕೆ ಹೋದರೆ
ಸಾರಿಗೆ ವೆಚ್ಚ ಬೇರೆ ಇದೆ

ಒಂದು ಕಣ್ಣಿಗೆ ಬೆಣ್ಣೆಯ ನೀತಿ
ಒಂದು ಕಣ್ಣಿಗೆ ಸುಣ್ಣದ ಭೀತಿ
ಇಲ್ಲಾ ಇಲ್ಲಿ ಬಾಳಿಗೆ ಗೋಳು
ಗಂಡು ಹೆಣ್ಣಿಗೆ ಸಮಾನ ವೇತನ

ಆಡುವ ಮಕ್ಕಳ ಆಸರೆಗೆ
ನೀರಿದೆ ನೆರಳಿದೆ ಭಯವಿಲ್ಲ
ಕೆಲಸದ ವೇಳೆ ಗಾಯಗಳಾದರೆ
ಔಷಧವಿದೆ ಇದು ಸುಳ್ಳಲ್ಲ

* * *

## 17. ಈ ಬದುಕು ನೀಸಲೆಂದೆ

– ರಜಿಯಾ ಡಿ.ಬಿ.

ಪ್ರಕೃತಿಯ ಆರ್ಭಟದೊಳಗು
ನೆಲೆಯೂರಲು ತಡವರಿಸುವಂತೆ
ದೀನ ಬದುಕು . . . .
ಅನಿರೀಕ್ಷಿತ ಕಷ್ಟ ಬರೆ ಎಳೆದಂತೆ
ಬಂದೊದಗಿ –

ಕೊಳಕು ಮನಸ್ಸಿನ
ಲಾಭ ಬಡುಕುತನವೂ
ಕಿತ್ತು ತಿನ್ನುತ್ತಲೆ . . . . ಕಂಗಾಲಾಗಿಸಿ;
ಮಾನವೀಯತೆಯ ಮುಖವಾಡದ
ನುಂಗಣ್ಣಗಳು ನರಿಗಳಂತೆ;
ನಾಜೂಕಾಗೆ ಹಕ್ಕಿನ ತೊತ್ತು
ಕಿತ್ಕೊಯುವಾಗ
ಬೆವರು ಸುರಿಸಿದ ಸೋತ ಜೀವ
ದುಗುಡ ಮರೆತು
ನೊಂದ ಪರಿಯ _

ಒಡಲಾಳದ ಅಗ್ನಿ
ಲಾವಾರಸವಾಗೆ
ದಹಿಸಿತೋ !ssss
ದಮನಿತರ ಕಲಕದಿರು
ಹಸಿವಿನಾ ತೊತ್ತು ಕಸಿಯದಿರು;

*(ನೀರುಣಿಸಿ ಉಸಿರು ಕೊಡು
ರೆಂಬೆ ಬೇರು ಚಿಗುರುವಂತೆ
ಟಿಸಿಲೊಡೆಯಲಿ ಬಾಳ್ವೆ)*

* * *

## 18. ಬಯಲಿನೊಳು ಬೆಳಕ ದೀಪ

– ರಜಿಯಾ ಡಿ.ಬಿ.

ಇತಿ ಮಿತಿಗಳ
ನಡುವೆಯು
ನಮ್ಮ ಬದುಕು ಅರಳುತ್ತಲಿದೆ . . . .
ಅರಿವಿನಾ ಬೆಳಕು ಚಿಮ್ಮಿದಂತೆ
ಬವಣೆಯ ಉರಿಯ
ದಹಿಸುವ ಮೊದಲುss
ಆಸರೆಯ ಯೋಜನೆಯು
ಜೀವ ತುಂಬಲಿss
ದುಡಿಮೆಯೇ ಧ್ಯೇಯವೆಂದೂ
ಸೊಂಟಕಟ್ಟಿ ಶ್ರಮಿಸಿ
ಅಧಿಕಾರ ಹಕ್ಕಿನಿಂದಲೇ
ಫಲಾನುಭವಿಯಾಗಿss
ಭ್ರಷ್ಟ ಪೀಡನೆಯ ಗುಡಿಸಿ
ಕಸುಬಿನ ಕುಶಲತೆಯಾ
ಸಾಕಾರಗೊಳಿಸುತ್ತಾss
ಸವಲತ್ತಿನ ಮಹತ್ವ ತಿಳಿಯುತ್ತಾ
ಸ್ವಾವಲಂಬನೆಯ, ಬಾಳ್ವೆ ಮಾಡೋಣ
ಅರಿವಿನಾ ಬೆಳಕು ಚಿಮ್ಮಿದಂತೆ ___
ಇಣುಕಲಿ ಬಯಲಿನೊಳಗೂ
ಎಳೆ ಬೆಳಕದೀಪ

* * *

## 19. ವಿಕಾಸದೆಡೆಗೆ

– ರಜಿಯಾ ಡಿ.ಬಿ.

ಬನ್ನಿ ಬನ್ನಿ ಹೋಗೋಣ
ನನ್ನಕ್ಕ ತಂಗಿಯರೆ ಕೇಳೋಣ
ಬಾಳ್ವೆಗೆ ಬಲ ನೀಡುವಂತ
ಭರವಸೆಯ ಯೋಜನೆಯ
ಫಲಾನುಭವಿಯಾಗಿ ಅಧಿಕಾರ ಹಕ್ಕುಗಳ
ಅರಿಯೋಣ . . . .
ಬದುಕು ಹಸನಾಗಿಸುವ ಹಾದಿ ಹಿಡಿಯೋಣ
ಭ್ರಷ್ಟತೆಯ ಗುಡಿಸಿ
ದಿಟ್ಟ ಹೆಜ್ಜೆಯಿಕ್ಕೋಣ . . . .
ಇತಿಷ್ಟು ನನಗೆ
ಇತಿಷ್ಟು ನಿನಗೆಂಬ
ಗುಳುಂ ಕುಳುಗಳ ಜಾಲಾಡಿ
*(ಯೋಜನೆಯ ಸಂಯೋಜನೆಗೆ)* ಸೊಂಟಕಟ್ಟಿ ಶ್ರಮಿಸಿ
ಪರಿಶ್ರಮದ ಸರಿಪಾಲು ಗಳಿಸೋಣಽಽ
ನೆತ್ತಿಗೇರಿರುವ ಬಿಸಿಲಿಗೆ ___
ಆಡು ಮಕ್ಕಳ ಲಾಲನೆ ಪಾಲನೆಗೆ
ಸರೀಕಳ ನಿಯೋಜನೆಯಾ ಫಲಹೊಂದೋಣ;
ಕಸುಬಿನ ಕುಶಲತೆಯಾ
ಸಾಕಾರಗೊಳಿಸಿ ಬೇಧವ ಅಳಿಸಿ
ಇಕ್ಕಟ್ಟಿನೊಳಗಿರುವಂತ
ವಯೋವೃದ್ಧರಿಗೆ ಆಸರೆಯಾ ಬಲ ನೀಡೋಣ
ಅಂಗವಿಕಲರಿಗೂ, ಒತ್ತಾಸೆಯಾ ಚೇತನವಾಗಿ
ತತ್ತರಿಸುವಂತ ನಿರುದ್ಯೋಗಿಯ
ಭತ್ಯೆ ಕೇಳಿ
ಸ್ವಾವಲಂಬಿಯಾಗೆ ಒಟ್ಟಾಗೆ ಹೆಜ್ಜೆಗಳ ಹಾಕೋಣ
ಬನ್ನಿ ಬನ್ನಿ ಹೋಗೋಣ
ಸ್ವಾಭಿಮಾನದೊಳು ಹೊಸ ಬದುಕು ಕಟ್ಟೋಣಽಽ

* * *

## 20. ಧ್ಯೇಯ

– ರಜಿಯಾ ಡಿ.ಬಿ.

ಸುಮ್ಮನಿರಲಾಗುವುದಿಲ್ಲಾ
ಸಾಂತ್ವಾನ ನಮಗೆ ಬೇಕಿಲ್ಲಾ
ಯಾಕಿಲ್ಲಾ ಸಮಪಾಲು ?
ಶ್ರಮಿಕಳಾದ ನನಗೂ ಧಕ್ಕಲಿ
ನನ್ನ ಹಕ್ಕಿನಾ ಫಲ . . . .
ಪುರುಷ ಸಾಮರ್ಥ್ಯದಂತೆಯೇ
ದುಡಿಯುವ ನಮ್ಮ ಕೈಗಳು
ಬಲಗೊಳ್ಳುತ್ತಿರುವಾಗ
ಬಲಹೀನಳೆಂದು ಹೀಗಳಿಯುವ
ಏಂಗಡನೆಗೆ ಕುಗ್ಗದೇ
ಕಸುಬಿನ ಕುಶಲತೆಯನ್ನು
ಸಕಾರಗೊಂಡು ಸಾರ್ಥಕ್ಯ ಕಂಡು
ಸಾಕುತ್ತಿಲ್ಲವೇ ಮಕ್ಕಳ ಮರಿಗಳ;
ಸೋಬಾನೆ – ಜೋಗುಳ
ಹಾಡುತ್ತಲೆ ಬೀಸಲಿಲ್ಲವೇ
ಕಷ್ಟಗಳ ಸರಮಾಲೆ ___
ದಾಖಲೆಗೆ ಸಿಕ್ಕದಂತಾ ಧಾರುಣ ನೋವುಂಡು
ಜಾಡಿಸಿಕೊಳ್ಳಲಿಲ್ಲವೇ ಬಾಳ್ವೆ
ಕುಡುಕನ ಕಡೆಗಣಿಸಿಯೂ
ಉತ್ತು ಬಿತ್ತು ಬೆಳೆ ತೆಗೆದು
ಏಳು ಬೀಳುಗಳು ಸುರುಳಿಯಾಗೆ
ಬಳುವಳಿಯಂತೆ ಸುತ್ತುತ್ತಲೆ
ಇದ್ದಾಗಲು ___
ದಿಟ್ಟ ಹಾದಿಯ ಗಟ್ಟಿಗೊಳಿಸಿಕೊಳ್ಳಲು
ಅಚಲರಾಗೆ, ಇನ್ನು ಸುಮ್ಮನಿರಲಾಗುವುದಿಲ್ಲ

* * *

## ಕಾವ್ಯ ವಿಕಾಸ

## 21. ಮೆಟ್ಟುವೆವು ಅವಸ್ಥೆಯ

– ರಜಿಯಾ ಡಿ.ಬಿ.

ನಮ್ಮದೆ ಹೊಸ
ಜಗತ್ತು ಕಟ್ಟಿಕೊಳ್ಳುವುದು
ತೂತುಬಿದ್ದ ಈ ಸೂರನ್ನೇ
ಮೆತ್ತಿಕೊಳ್ಳುವುದು;
ಬಿಟ್ಟುಬಿಡು ಹಾಗೆಂದು
ಹೀಗೆಂದು ಕಳೆದಂತ
ಗೊಂದಲ–ಗೋಜಲು–ಗೋಜಲು
ಬದುಕು ಮೂರು ಕಾಸಿನದಲ್ಲ
ವಿಸ್ತರಿಸಿಕೊಳ್ಳಲು ಅಗಾಧ ಅವಕಾವಿರುವಾಗ
ಅನಂತಾಕಾಶದ ಎದುರು
ಹೊಳೆದಂತ ಅರ್ಥಕ್ಕೆ
ಜೀವಗತಿಯು ಬದಲಾಗಿಸುವಂತೆ
ಸಂಕಲ್ಪ ಸಿದ್ಧಿಗಳು
ನಮ್ಮೊಳಗೆ ಬದ್ಧವಾಗಿ
ಸಾಗಲಿ ಬದುಕು . . . . ನಂಬಿಕೊಂಡೆ ___
ಕೊಳೆತಿರುವ ___ ಕಲ್ಪನೆ ಕನಸ್ಸುಗಳು
ನೇಯ್ದ ಜಾಲಗಳು ಮೆಟ್ಟುವಂತ
ತ್ರಾಣ ಅವಾಹಿಸಿಕೊಂಡೆ

* * *

## 22. ಹಾಡು

– ಮಾಯಸಂದ್ರ ಕೃಷ್ಣಪ್ರಸಾದ್

ಅನ್ನ ಕೊಡುವ ಕೈಯನ್ನೆ ಕಚ್ಚೋ ಸರ್ಪ ಆದ್ಯಲ್ಲ
ಹಳ್ಳಿ ನೀರು ಕುಡಿದು ವಿಷವಕಕ್ಕಿ ಹೋದ್ಯಲ್ಲ
ಮಾನವೀಯತೆ ಇಲ್ಲದ ಬದುಕು ಏಕೆ
ಹೇಳಲ್ಲೆ ಸೆಕ್ರೆಟ್ರಿ ಹೇಳಲ್ಲೆ

ಜಾಬು ಕಾರ್ಡು ಅಡಗಿಸಿಟ್ಟು ಚೆಕ್ಕು ಬುಕ್ಕು ನುಂಗಿಬಿಟ್ಟು
ಎಟಿಎಂ ಕಸಿದುಕೊಂಡು ದೂರ್ತನಾಗಿ ನಿಂತೆಯಲ್ಲ
ಏಕೆ ಇಂತ ಬದುಕು ಹೇಳಲ್ಲೆ
ಹೇಳಲ್ಲೆ ಕಂಟ್ರಾಕ್ಟುದಾರ ಹೇಳಲ್ಲೆ

ಮೂವತ್ತು ಮಾತ್ರ ಕೈಯ್ಲಿಟ್ಟು
ಎಪ್ಪತ್ತನ್ನು ನೀನು ನುಂಗಿ
ಸಿಕ್ಕಿದ್ದೆಲ್ಲಾ ನುಂಗೋ ಸೈತಾನನಂತೆ ನಿಂತೆಯೇಕೆ
ಹೇಳಲ್ಲೆ ಮಂತ್ರಿ ಹೇಳಲ್ಲೆ

ದುಡಿವ ಕೈಗಳು ಇರುವಾಗ
ಯಂತ್ರ ಬಳಸಿ ಕೂಲಿನುಂಗೆ
ಹಸಿದ ಹೊಟ್ಟೆ ಮೇಲೆ ಹೊಡೆದು
ಜೀವ ಹಿಂಡೋರ ಹಿಂದೆ ನಿಂತೆ ಏಕೆ
ಹೇಳಲ್ಲೆ ಕಂಟ್ರಾಕ್ಟುದಾರ ಹೇಳಲ್ಲೆ

* * *

## 23. ಹಾಡು–4

– ಮಾಯಸಂದ್ರ ಕೃಷ್ಣಪ್ರಸಾದ್

ಅನ್ನ ಕೊಡುವ ಬಂಧು ವಿಷವ ಕುಡಿಯಬೇಡ
ನೀ ದೇಶದ ಆಸ್ತಿ ಅಸ್ಥಿಯಾಗಬೇಡ
ಮರೆತು ಬಿಡು ನೋವ ಉಳಿಸಿಕೋ ಜೀವ
ಬಂದೈತೆ ಉದ್ಯೋಗ ಖಾತರಿ ನಿನಗುದ್ಯೋಗ ಖಾತರಿ

ಉರಿಬಿಸಿಲಲಿ ದುಡಿದೆ ಕಾಳ್ಗೆಲ್ಲಿ ನಿಂತೆ
ಹನಿ ಬೀಳದಿದ್ದಾಗ ಕಂಗೆಟ್ಟೆ ಗೋಳಿಟ್ಟೆ
ಒರಿಸಿಕೋ ಕಣ್ಣ ಉಳಿಯಿತು ಜೀವ
ಬಂದೈತೆ ಉದ್ಯೋಗ ಖಾತರಿ ನೀ ಬದುಕುವುದು ಖಾತ್ರಿ

ಮುಗಿಲು ನೋಡದ ಹಸ್ತ ಇರುವ ತನಕ ಕೊಟ್ಟೆ
ಬೇಡಕ್ಕೆ ಬಿಡುವುದಿಲ್ಲ ಉದ್ಯೋಗ ಖಾತರಿ
ನಿನಗೆ ನಿಮ್ಮವರಿಗೆ ಉದ್ಯೋಗ ಖಾತ್ರಿ
ಮೈ ಮುರಿದು ದುಡಿದು ನಿದ್ರಿಸು ರಾತ್ರಿ

ನಿನ್ನ ಹಕ್ಕು ಬಿಸಿದು ಕರೆ ಕಟ್ಟು
ಕೆರೆಯ ಹೂಳೆತ್ತಿ ಹಸಿರ ಬೆಳೆಸು
ನೀ ಕಟ್ಟಿದಾ ಶಾಲೆ ಅಂಗಳದಿ ನಿನ್ನ ಮಗು
ಉದ್ಯೋಗ ಖಾತ್ರಿಯಡಿ ಎಂಥಾ ಸೊಬಗು

* * *

## 24. ಏನಂತ ಹೇಳಾಲೋ ....

– ಡಾ|| ಟಿ.ಎಸ್. ವಿವೇಕಾನಂದ

ಏನಂತ ಹೇಳಾಲೋ ನಮ್ಮೂರ ಕಥೆಯಾ
ಕರಗೀ ಸೊರಗೀದ ಊರೂರ ವ್ಯಥೆಯಾ ॥
ಕಾಲಕ್ಕೆ ಬಾರದಾ ಮುಂಗಾರು ಮಳೆಯೂ
ಬಂದಂತೆ ಹೊಯ್ತೆಲ್ಲೋ ಹಿಂಗಾರು ಮಳೆಯೂ ॥ಪ॥

ಬೆಳೆದಂಥ ಬೆಳೆಗೆಲ್ಲ ಬೆಲೆಗಳ ಶಾಪ
ಭೂಮಿಯ ಒಳಗೆಲ್ಲಾ ಹುಳುಗಳ ಕ್ವಾಪ ॥
ಭೂಮಿಯೇ ಇಲ್ಲದ ಜನಗಳ ತಾಪ
ಸಾವಿನ ನೆರಳಲ್ಲಿ ಬದುಕ್ಯಾರೋ ಪಾಪ ॥ಪ॥

ಎಲ್ಲಿ ಹೋದವೋ ನಮ್ಮೂರ ಬೆಳ್ಳಕ್ಕಿ ಹಿಂಡು
ಎಲ್ಲಿ ಹೋದವೋ ನಮ್ಮೂರ ಮರಗಿಡ ದಂಡು ॥
ಮನೆಯೊಳಗೇ ಇದ್ದಂತ ಗುಬ್ಬಚ್ಚಿ ಹಿಂಡು
ಉಂಡುಟ್ಟು ಕುಣಿದಿದ್ದ ನವಿಲು ನೀರಕ್ಕೆ ದಂಡು ॥ಪ॥

ಎಲ್ಲ ಎಲ್ಲ ಹೋಗಿ ನೀವು ನೀವೇ ಆಗಿ
ಎಲ್ಲಿಗೆ ಹೊರಟೀರಿ ಸಾವಿಗೆ ಬಾಗಿ ॥
ಉಸಿರುಗಂಟಿದ ಬಸುರಿ ಹೆಂಗಸ ತೊರೆದು
ಬಿಟ್ಟಾನೆ ಸುಡು ಸೂರ್ಯ ಈ ಪಾಪ ಹಿರಿದು ॥ಪ॥

ನೆಲಕೊಂದು ಮರವಾಗಿ ಊರಿಗೆ ಉಸಿರಾಗಿ
ಊರೆಲ್ಲಾ ಒಂದಾಗಿರಿ ಒಗ್ಗಟ್ಟು ಹಿರಿದು ॥
ಊರಿಂದ ಊರಾಗಿ ಊರ ಜನರೆಲ್ಲಾ ಕೂಡಿ
ಊರಕಟ್ಟಿರಿ . . . . ಊರಕಟ್ಟಿರಿ . . . .
ಬೇರಾಗಿ ಬಂದೈತೊ ಉದ್ಯೋಗ ಖಾತ್ರಿ ॥ಪ॥

* * *

## 25. ಚಿಲುಮೆಯ ದಾರಿ

**– ಡಾ॥ ಟಿ.ಎಸ್. ವಿವೇಕಾನಂದ**

ಜನಾದಿ ಜನತಂತ್ರ ಜನಗಳು ಮಾಡಿದ ಜನತಂತ್ರ
ಕೆಲಸದ ಹಕ್ಕುಂಟು ನಮಗೆ ಗಳಿಸುವ ಹಕ್ಕುಂಟು ॥ಪ॥

ಧ್ವನಿ 1 : ಬರಬಂದ ನೆಲದಾಗೆ ನಾನೆಂಗೆ ಕೂಲಿ ಮಾಡ್ಲವ್ವಾ
ಹಸಿದು ಬಂದೇನೋ ಅಕ್ಕ ದುಡಿಯಲು ಕೊಡಿರವ್ವ ॥
ನೆರೆಬಂದ ನೆಲದಾಗೆ ನಾನೆಂಗೆ ಬಾಳುವೆ ಮಾಡ್ಲವ್ವಾ
ಬಸಿದು ಬಂದೇನೋ ಅಕ್ಕ ಕೂಲಿಯ ಕೊಡಿರವ್ವ ॥ಪ॥

ಧ್ವನಿ 2 : ಮಳೆಯಿಲ್ಲ ಬೆಳೆಯಿಲ್ಲ ಫಸಲೀಗೆ ಬೆಲೆಯಿಲ್ಲಾ
ಕೂಲಿಯು ಎಲ್ಲಿಂದಾ ತಂಗಿ ನಾಲಿಯು ಎಲ್ಲಿಂದ ॥
ನೆರೆಬಂದು ತೂರೋಯ್ತು ಬರಬಂದು ಹಾರೋಯ್ತು
ಕೈಯಲ್ಲಿ ಕಾಸಿಲ್ಲಾ ತಂಗಿ ಕಣಜದಿ ಕಾಳಿಲ್ಲಾ ॥ಪ॥

ಧ್ವನಿ 1 : ಸಾವಂಥ ಹಸಿವಕ್ಕಾ ಮನಸೀಗೆ ದಣಿವಕ್ಕಾ
ಪಂಚಭೂತಗಳೂ ಮೋಸದ ಮೂಡೆಗೂಡೆಗಳು ॥
ಮನೆತುಂಬ ಮಕ್ಕಾಳು ಸೋತಂಥ ಯಜಮಾನಾ
ಬಾಕಿನ ತಿವಿತಗಳೂ ಅಕ್ಕಾ ಮೂಕಿನ ಗುದ್ದುಗಳೂ ॥ಪ॥

ಧ್ವನಿ 2 : ಯಾಕಿಂಥ ನರಳಾಟ ಇಲ್ಲವೆ ಒಳನೋಟ
ಎಂತೆಂಥ ಕೆಲಸಗಳೂ ಇಲ್ಲಿವೆ ದಾರಿಗಳು ॥
ಉದ್ಯೋಗಕ್ಕೆ ಇದೆಯೊಂದು ಯೋಜನೆ
ಅರ್ಜಿಯ ತುಂಬಮ್ಮಾ ತಂಗಿ ಜಾಬ್‌ಕಾರ್ಡ್ ಪಡೆಯಮ್ಮಾ ॥ಪ॥

ಧ್ವನಿ 1 : ಏನೆಂಥ ಜಾಬ್‌ಕಾರ್ಡ್ ಪಡೆದೇನು ಮಾಡ್ಲಮ್ಮ
ಸರ್ಕಾರಿ ಮಾತಮ್ಮಾ ನನಗೆ ನಂಬಲು ಭಯವಮ್ಮ ॥
ಹಸಿಹಸಿ ಬಾಣಂತಿ ನನಗೆ ಹಸಿವಿನ ಸುಸ್ತಮ್ಮ
ಜೊತೆಯಲಿ ಕೂಸೆರಡು ನಾನು ಬಿಟ್ಟೇಗೆ ಬರಲಮ್ಮ ॥ಪ॥

ಧ್ವನಿ 2 : ಜಾಬ್‌ಕಾರ್ಡ್ ಎಂದರೆ ನಿನ್ನ ಹಕ್ಕಿನ ಗುರುತಮ್ಮ
ದೇಶದ ಗಳಿಕೆಯಲಿ ನಿನ್ನ ದುಡಿಮೆಯ ಪಾಲಮ್ಮ ॥
ಬಾಣಂತಿ ಮಕ್ಕಾಳು ನಿಮಗೆ ಆಸರೆ ಇದೆಯಮ್ಮ
ದುಡಿಯಲು ಭಯವಿಲ್ಲಾ ತಂಗಿ ಕೂಲಿಯು ಸಮವಮ್ಮ ॥ಪ॥

ಧ್ವನಿ 1 : ಇಂಥ ಭವರವಸೆಯು ಬಾಳಿಗೊಂದು ಆಸರೆಯು
ಬಡವರ ಬದುಕಿನಲಿ ಇದುವೆ ಚಿಲುಮೆಯ ನೀರಮ್ಮ ॥
ಈ ಚಿಲುಮೆಯ ನೀರಿನಲಿ ಬಡತನ ತೊಳೆಯಲಿ
ಇಂದೇ ಹೋಗುವೆನು ಅಕ್ಕಾ ಜಾಬ್‌ಕಾರ್ಡ್ ಪಡೆಯುವೆನು ॥ಪ॥

ಧ್ವನಿ 1–2 :ಜಾಬು ಅಂದಾರೆ ಉದ್ಯೋಗ ಅಂತಮ್ಮ
ಕಾರ್ಡ್ ಅಂದಾರೆ ಒಂದು ಕಾಗ್ದದ ತುಣುಕಮ್ಮ ॥
ಉದ್ಯೋಗ ಚೀಟ್ಯಮ್ಮ ಅದುವೇ ದುಡಿಮೆಗೆ ಗುರುತಮ್ಮ
ಇಂದೇ ಪಡೆಯಮ್ಮ ನೀನು ಜಾಬ್‌ಕಾರ್ಡ್ ಪಡೆಯಮ್ಮ ॥ಪ॥

ಒಂದು ವಾರದ ನಂತರ ಬ್ಯಾಂಕ್ ಖಾತೆಯಲ್ಲಿ ನಿನ್ನ ಕೂಲಿ ಜಮೆಯಮ್ಮ ಹಳ್ಳಿ ಪಕ್ಕದಲ್ಲಿ ಯೋಜನೆ ನಡೆದಿದ್ದು ಅಲ್ಲಿ ನೂರಾರು ಜನರು ಉದ್ಯೋಗ ಪಡೆದಿದ್ದು ಅವರಿಗೆಲ್ಲ ಸಿಕ್ಕಿದ ಸುಖ ನೆಮ್ಮದಿ ನೀನೂ ಅವರಲ್ಲಿ ಒಬ್ಬಳಾಗಮ್ಮ

* * *

## 26. ಬೆವರಿನ ಖಜಾನೆಯಿದು

**– ಸುಬ್ಬು ಹೊಲೆಯಾರ್**

ದುಡಿವ ದೇವರ ಹುಂಡಿ ಕದ್ದರೆ
ಬಂಡ ಬದುಕಿಗೆ ದಂಡವಿದೆ
ವಚನವಿದು ಬಹುವಚನವಿದು
ಎಲ್ಲರ ಹಣೆಯ ಬೆವರಿನ ಖಜಾನೆಯಿದು ॥ವಚನ॥

ಶಾಲೆ ಕಟ್ಟಿರೇ ಕಂದಮ್ಮಗಳ ಕಲರವ
ಗಿಡವ ನೆಟ್ಟರೇ ಮರಗಳ ಚಿಲಿಪಿಲಿ
ಕೆರೆಯ ಕಟ್ಟರೇ ಜಲದ ಝುಳು ಝುಳು
ದುಡಿದಷ್ಟೇ ಉಣ್ಣಬೇಕು ॥ವಚನ॥

ತಿಳಿಯದಿದ್ದರೆ ತಿಳಿಯಬೇಕು
ಗ್ರಾಮ ಪಂಚಾಯಿತಿಗೆ ಹೋಗಬೇಕು
ಹೇಳದಿದ್ದರೆ ಕೇಳಬೇಕು
ನೀತಿ ನಿಯಮದ ಕಾಲದಲ್ಲಿ ಹೆಜ್ಜೆ
ತಪ್ಪಿ ನಡೆಯದಂತೆ ವಚನವಿರಲಿ ॥ವಚನ॥

ಅಣ್ಣ ಬಸವಣ್ಣ ಹೇಳಿದ ಕಾಯಕವಿದು
ಬಾಬಾ ಸಾಹೇಬರು ಹೇಳಿದ ಸಾಮಾಜಿಕ ನ್ಯಾಯವಿದು
ಹಳ್ಳಿ ಗೆದ್ದರೆ ದೇಶ ಗೆದ್ದಿತು
ಗಾಂಧೀ ಹೇಳಿದ ಕಾವ್ಯವಿದು ॥ವಚನ॥

* * *

## 27. ಆದಿ ಕುಲದ ನಾದ ಒಂದೇ

**– ಸುಬ್ಬು ಹೊಲೆಯಾರ್**

ನೆಲದ ಮಾತು ಮನದ ಮಾತು
ಮಾತು ಮಾತು ಮೊಳಕೆಯೊಡೆದು
ಬಳ್ಳಿ ಚಿಗುರಿ ಹೂ ಕಾಯಾಗಿ
ಕೊರಳ ತುಂಬ ಒಂದೇ ಹಾಡು

ಜೀತ ಗೀತ ಸಂಕೋಲೆ ಕಿತ್ತು
ಮುತ್ತಿನಂತ ಮೂರಕ್ಷರ ಕಲಿತು
ಸಹಿ ಹಾಕುವ ಸಿಹಿ ಕನಸು
ಲೆಕ್ಕ, ಹಕ್ಕು, ಎಲ್ಲರಿಗೊಂದು ಬೀಜ ಮಂತ್ರವು

ಕಾಡಿ ಬೇಡುವ ಕಾಲಮುಗಿದು
ನಮ್ಮ ಕೈಗೆ ನಮ್ಮ ಕೆಲಸ
ನಮ್ಮ ಹೆಜ್ಜೆ ನಮ್ಮ ಗೆಜ್ಜೆ
ನೂರ ದಿನ ಊರ ಸುತ್ತ ನಮ್ಮ ಸುಗ್ಗಿಯೋ
(ದುಡಿಮೆಯೋ)

ಸಕಲ ಸಂಪತ್ತಿನ ಜನಕುಲ ನಾವು
ಹಲವು ಯೋಜನೆಯ ಖಜಾನೆಯ
ಖಾತ್ರಿ ಬಂದಿದೆ ನಮ್ಮ ಊರಿಗೆ
ಬೆಳ್ಳಿಗೆರೆಯನ್ನೇ ತಂದಿದೆ

ಕಾಡ ಕೊಳಲು ಊರ ಕೊರಳು
ಆದಿ ಕುಲದ ನಾದ ಒಂದೇ
ನುಡಿಸೋ ಏಕನಾದ ಒಂದೇ

ಗ್ರಾಮ ಗ್ರಾಮೀಣ ಯೋಜನೆಯ
ಗಾಂಧೀ ಕನಸು ಒಂದೇ

* * *

ಕಾವ್ಯ ವಿಕಾಸ

## 28. ಕಲ್ಯಾಣಮ್ಮನ ಕನಸು

– ಸುಬ್ಬು ಹೊಲೆಯಾರ್

ಕಲ್ಯಾಣಮ್ಮನ ಕನಸು ಇಷ್ಟಿಷ್ಟೇ
ಇರುವೆ ಹೊತ್ತುಕೊಂಡು ಹೋಗಿ ಕೂಡಿಟ್ಟಷ್ಟು
ಗರಿಕೆ ಮೇಲಿನ ಇಬ್ಬನಿ ಬೆಳಕಿನಷ್ಟು

ಮೊದಲ ಮಳೆಗೆ ನೆಲ ಘಮ್ಮೆಂದು
ನವಿಲು ಕುಣಿದು
ಕಲ್ಯಾಣಮ್ಮನ ಮನಸ್ಸು ಮಲ್ಲಿಗೆಯಾಗಿ

ಮುಗಿಲು ಮುರಿದು ಮಳೆ ಬಂದ ಘಳಿಗೆ
ಜೀವ ಸಂಕುಲವೆಲ್ಲ ತಣಿದು
ಕಲ್ಯಾಣಮ್ಮನ ಎದೆಯ ತುಂಬಿ
ಊರ ಓಣಿಯಲಿ ನೀರ ಹರಿದಿತ್ತು

ಊರು ಕೇರಿಯಲ್ಲಿ ಹೊಸ ನೀರು
ಹೊಸ ಮಾತು, ರಾತ್ರಿಯ ಕನಸಿನಲ್ಲಿ
ಜನಕುಲವೆಲ್ಲ ಒಟ್ಟಾಗಿ ದುಡಿದ ಬೆಳಕಿನ ಹಾಡು

ಕಲ್ಯಾಣವೆಂದರೆ ಲೋಕ ಕಲ್ಯಾಣವೇ
ಗಂಗೆ ಶಿವನ ಕಲ್ಯಾಣವೇ
ಆಕಾಶ ಭೂಮಿ ಒಂದಾದ ಶುಭ ಘಳಿಗೆಯೇ

ಮಳೆ ಬಂತು ಕಳೆ ತಂತು
ಹಳ್ಳಿ ಗ್ರಾಮಗಳ ಸೋಮಾರಿ ಕೈ ಗೊಂಬೆಗಳೆಲ್ಲಾ ಚಿಗುರಿ
ಹೊಸ ಋತುಮಾನದ ಕಲ್ಯಾಣವಾಯಿತು
ಹಸಿರು ಸೀರೆಯ ಉಡಿಸಿ ತಲೆ ತುಂಬ
ಹೂ ಮುಡಿಸಿ ನೀರೆಯರು ನೀರು ತುಂಬಿ
ಕಲ್ಯಾಣಮ್ಮ ಕನಸು ಕಣ್ಣ ತುಂಬಿ
ಊರಿನ ಸಿರಿಗೆ ಮಳೆಗೆ ಬಂತು
ಕಲ್ಯಾಣಮ್ಮನ ಕಾಲ ಗುಣದಿಂದ

ಕಲ್ಯಾಣದ ಹಾಡಿಗೆ ಮಳೆಯೇ ಮುನ್ನುಡಿಯಾಗಿತ್ತು
ಮಣ್ಣಿನ ಮಕ್ಕಳೆಲ್ಲಾ ಮಣ್ಣಿನ ತೊಟ್ಟಿಲಲ್ಲಿ
ಬಿದ್ದು ಏಳುವಂತಾಯಿತು

ಊರು ಕವಿಗಳ ಒಂದು ಮಾಡಿದ
ಮಳೆ ನೀರು ಮೇಲಿಂದ ಕೆಳಗೆ ಹರಿದು
ಕೆರೆ ಕಟ್ಟೆಯ ಹೊಟ್ಟೆ ತುಂಬಿ
ಪಶುಪಕ್ಷಿಗಳು ಕುಡಿದು
ಆನಂದದಲ್ಲಿ ಆಕಾಶಕ್ಕೆ ಹಾರಿ
ಮಳೆಯೆಂದರೆ ಮಳೆಯೇ
ನೆಲ ನೀರು ಗಾಳಿ ಬೆಳಕು
ಹೂ ಅರಳಿ ಲೋಕ ಬೆಳಗುವ
ಕಲ್ಯಾಣಮ್ಮನ ಮಕ್ಕಳು ನಾವೆಲ್ಲ
ಹರಳಯ್ಯನ ಕುಡಿಗಳು ಲೋಕವೆಲ್ಲ

* * *

## 29. ಹಕ್ಕು

– ಸುಬ್ಬು ಹೊಲೆಯಾರ್

ಸರಳವೊ ಇದು ವಿರಳ ಇದು
ಉದ್ಯೋಗ ಖಾತ್ರಿಯ ಪಡೆಯಲು
ಬೇಕು ಹೆಣ್ಣು ಗಂಡುಗಳ ಭಾವಚಿತ್ರವೂ
ಹಸಿದ ಹೊಟ್ಟೆಗೆ ಉಗಾದಿಯೂ

ಗುತ್ತಿಗೇದಾರನು ಇಲ್ಲ ಗತ್ತು ಘಮ್ಮತ್ತಿನ
ಗಾಡಿಕೆ ಪಟೇಲನು ಇಲ್ಲ ಯಂತ್ರ ಮಂತ್ರವೂ ಇಲ್ಲ
ಯೋಜನೆ ಇದು ನಿರಂತರ ಮನುಜ ಕುಲದ ಕಣಜವೂ
ನಿರುದ್ಯೋಗವನ್ನು ನೀಗುವ ನಿಜ ಯೋಜನೆಯು

ದುಡಿದು ಉಂಡರೆ ಬದುಕು ದೊಡ್ಡದು
ಬುರುಡೆ ಮಾತಿಗೆ ಬೆಲೆಯಿಲ್ಲದೂ
ಶಾಲೆ ಇರಲಿ ಸಮುದಾಯ ಭವನವಿರಲಿ
ನಮ್ಮ ನಿಮ್ಮ ಹೊಲಗದ್ದೆ ತೋಟ
ಕೆರೆಕುಂಟೆ ಕಾಮಗಾರಿ ಇರಲಿ
ನಮ್ಮ ದುಡಿಮೆ ನಮ್ಮ ರೊಟ್ಟಿ

ನಮ್ಮ ಹಕ್ಕು ನಮ್ಮ ಕೆಲಸ
ಕೂಲಿಯೆಂದರೆ ಕೂಲಿಯಲ್ಲ
ನಾವು ದುಡಿವ ಬೆವರ ಹನಿಯಾ
ಮುಗಿಲ ಮೇಲಿನ ಮಳೆ ಹನಿಯಾ

ಹಣವೆಂದರೆ ಹಣವಲ್ಲ
ನಮ್ಮ ಶ್ರಮದ ಜೀವಫಲವೂ

* * *

## 30. ಕಲ್ಪವೃಕ್ಷದ ಬುಡದಲ್ಲಿ

– ಸುಬ್ಬು ಹೊಲೆಯಾರ್

ಕಾರ ಕಾರಕ್ಕಿಂತ ಸರ್ಕಾರ ದೊಡ್ಡದು
ದಾನ ದಾನಕ್ಕಿಂತ ಸಂವಿಧಾನ ದೊಡ್ಡದು
ತಲೆಬಾಗಬೇಕು ಹಕ್ಕು ಕಾನೂನುಗಳಿಗೆ
ಕಳ್ಳಕಾಕರ ಸುಳ್ಳ ದಘಾಕೋರರ
ಆಚೆ ತಳ್ಳಬೇಕು

ದುಡಿಯಬೇಕು ನುಡಿಯಬೇಕು
ನಾಡ ಕಟ್ಟುವ ಕೆಲಸ ನಮ್ಮದಾಗಬೇಕು
ಕಲಿಯಬೇಕು ಉಲಿಯಬೇಕು
ನಮ್ಮ ಗುರಿಯ ನಾವೇ ತಲುಪಬೇಕು

ನೆಲದ ತುಂಬಾ ಕನಸ ಬೀಜ ಚೆಲ್ಲುವ
ಹಣದ ನೀರು ಹರಿದೈತೆ
ಕಾಲುವೆ ಮಾಡಿ ಕೇರಿ ಕಟ್ಟೆ
ಗಿಡ ಮರಗಳಿಗೆ ನೀರುಣಿಸಬೇಕು

ಶಾಸ್ತ್ರ ಪುರಾಣಕ್ಕಿಂತ ಅರ್ಥಶಾಸ್ತ್ರ ಮಾತೇ ಮೇಲು
ದುಡಿವವನೇ ದೇವರು
ಹಣೆಯ ಮೇಲೆ ಬೆವರ ಸಾಲು
ಬೊಗಸೆ ತುಂಬಾ ಶ್ರಮ ಪಾಲು

ಅರ್ಥಕ್ಕೊಂದು ಅರ್ಥವಿದೇ
ಹಸಿವಿನಾಚೆಗು ಅರಿವಿದೆ
ಬುದ್ಧಿ ಬಲದ ಕೆಲಸವಿದೆ
ಹಳ್ಳಿ ಬದುಕ ನಂಬಿ ನಿಂತರೆ
ಕಲ್ಪವೃಕ್ಷ ಕಾಲ ಬುಡದಲ್ಲಿ

* * *

# 31. ಈ ಊರಿಗೇನಾತು

– ಕೃಷ್ಣಮೂರ್ತಿ ಬಿಳಿಗೆರೆ

ಭೂಮಿಯ ನರನಾಡಿ ಹರಿದು ಚಿಂದಿಯಾಗಿ
ಹಸಿರಿನ ಒಡನಾಡಿ ಉರಿದು ಬೂದಿಯಾಗಿ

ಸುಮ್ಮನೆ ಹಬ್ಬಿದ ಮಲ್ಲಿಗೆ ಬಳ್ಳಿಗಳು
ಕೊಪ್ಪಲು ಸಾಲಿನ ಸೊಪ್ಪಿನ ಮಡಿಗಳು
ಸುಳ್ಳು ಬೆಂಕಿ ತಗುಲಿ ಬೂದಿಯೊಂದೇ
ಈ ಊರಿಗೇನಾತು ಈ ಊರಿಗೆಂತಾತೋ

ಹಕ್ಕಿ ಪಕ್ಷಿಗಳೆಲ್ಲ ಹಸಿವ ಹಲ್ಗೆಗೆ ಸಿಕ್ಕಿ
ಬೆವರು ಸಾಕ್ಷಿಗಳೆಲ್ಲ ಇರಿವ ಕಣ್ಣಿಗೆ ಸಿಕ್ಕಿ
ಹಾದಿ ಬೀದಯ ತುಂಬಾ ಕೆಂಡಾ ಇಟ್ಟಾಡಿದೋ
ಈ ಊರಿಗೇನಾತು ಈ ಊರಿಗೆಂತಾತೋ

ಬೀಜ ಇಟ್ಟುಕೊಂಡು ಬೇರು ಬಿಟ್ಟುಕೊಂಡು
ಹೈನ ಕಟ್ಟಿಕೊಂಡು ಮೈನಾಗಿ ಇತ್ತಲ್ಲ
ಕಣ್ಣು ಕಳೆದುಕೊಂಡು ರೆಪ್ಪೆ ಉಳಿಸಿಕೊಂಡ
ಈ ಊರಿಗೇನಾತು ಈ ಊರಿಗೆಂತಾತೋ

ಯಾರು ಕುಡಿದರು ನೀರ ಯಾರು ಕುಡಿದರು ಊರ
ಯಾರು ಕುಡಿದರು ಬೇರ ಆಕಾಶದ ಸೂರ
ಈ ಊರ ಗಾಳಿ ಮಸೆದು ಈ ಊರ ಸತುವ ಹಿಂಡಿ
ಈ ಊರ ಅನ್ನ ಕದ್ದು ಈ ಊರ ಋಣವ ಹೊದ್ದು

ಕೆರೆಯ ಕಳಸದ ತುಂಬಾ ಗೋಡು ಬೀಟೆಯ ಸೂಡಿ
ಕಟ್ಟೆ ತಟ್ಟೆಯ ತುಂಬಾ ಕಲ್ಲನ್ನ ಇಟ್ಟಾಡಿ
ಹಲ್ಲಲ್ಲು ಕಿರಿದಾವು ಹತ್ತಿಕೊಂಡುರಿದಾವು
ಈ ಊರಿಗೇನಾತು ಈ ಊರಿಗೆಂತಾತೋ

ಇಂಥ ಈ ಹೊತ್ತಿನಲ್ಲಿ ಇಂಥ ಕೇಡುಗಾಲದಲ್ಲಿ
ಬಾಯಾರಿ ಬಸವಳಿದಂಥ ಹಕ್ಕಿ ಹಿಂಡು ಹಾರಿ ಬಂದು
ಸಾವಿನಂಥ ಬಾವಿಯೊಳಗೆ ಹಕ್ಕಿಗಳು ಸಿಕ್ಕಿದವಲ್ಲ
ಹಕ್ಕಿ ಹಿಂಡ ಹಿಂಡಿತಲ್ಲ ರಕ್ತ ತುಂಬಿ ಬಂದಿತಲ್ಲ

ಅವರು ಇವರು ಎಲ್ಲಾ ಸೇರಿ ರಕ್ತಕೊಂದು ಚಾನಲ್ಲು ಮಾಡಿ
ಆವರಿಸಿ ಅಗಲವಾಗಿ ಬಾಯಿ ಆತು ನಿಂತರಲ್ಲ
ಯಾರು ಕುಡಿದರು ನೀರ ಯಾರು ಕುಡಿದರು ಊರ
ಯಾರು ಕುಡಿದರು ಬೇರ ಆಕಾಶದ ಸೂರ

* * *

# 32. ಈಗಲಾದರು ಉತ್ತರ ಬೇಕಿದೆ

– ಕೃಷ್ಣಮೂರ್ತಿ ಬಿಳಿಗೆರೆ

ಎಚ್ಚರ ತಂಗಿ ಎಚ್ಚರ ಬಲು ಎಚ್ಚರ
ಎಚ್ಚರ ತಮ್ಮ ಎಚ್ಚರ ಬಲು ಎಚ್ಚರ
ದಿಲ್ಲಿಯೆ ಹಳ್ಳಿಗೆ ಬಂದು ಕೂಗುತಿದೆ
ಎಚ್ಚರ ಬಲು ಎಚ್ಚರ

ಕೋಟಿ ರೂಪಾಯಿ ರೊಕ್ಕ ಬಂದಿದೆ
ಭರವಸೆ ಬಣ್ಣದ ಪುಕ್ಕ ತಂದಿದೆ
ಹಳ್ಳಿಯ ಬಾಗಿಲು ತಟ್ಟುತಿದೆ
ಈಗಲಾದರೂ ಉತ್ತರ ಬೇಕಿದೆ

ಬಾವಿಯೊಳಗಿನ ಜನ ಬರಿದಾಗಿದೆ
ಕೆರೆಯ ಅಂಗಳ ನೀರೇ ಮಂಗಳ
ನೀರಿಗೆ ಬದಲು ಹೂಳು ತುಂಬಿದೆ
ಈಗಲಾದರು ಉತ್ತರ ಬೇಕಿದೆ

ಜಾತಿಯ ಝಳಕೆ ಊರು ಬೆಂದಿದೆ
ಹಸಿವಿನ ರೋಗಕೆ ಊರು ಸೊರಗಿದೆ
ಅಕ್ಷರದನ್ನಕೆ ಮಣ್ಣು ಬೆರೆತಿದೆ
ಈಗಲಾದರು ಉತ್ತರ ಬೇಕಿದೆ

ಅಜ್ಜನ ಸಾವಿಗೆ ಅಜ್ಜಿಯ ನೋವಿಗೆ
ಅಪ್ಪ ಅವ್ವರ ಖಾಲಿ ಮನಸಿಗೆ
ಊರಿನ ಉಸಿರಿಗೆ ಗಾಯವಾಗಿದೆ
ಈಗಲಾದರು ಉತ್ತರ ಬೇಕಿದೆ

ಊರಿಗೆ ಊರೆ ಸೂರೆಯಾಗಿದೆ
ಊರಿಗೆ ಊರೆ ಸೋರಿ ಹೋಗಿದೆ
ಮನೆಯ ಮಾಳಿಗೆ ಹಾರಿ ಹೋಗಿದೆ
ಈಗಲಾದರು ಉತ್ತರ ಬೇಕಿದೆ

ದನ ಕರುಗಳ ಮಾರಿ ಆಗಿದೆ
ಇದ್ದ ಭೂಮಿಯು ಇಲ್ಲವಾಗಿದೆ
ಬೀಜದ ಹಕ್ಕು ಹಾರಿಹೋಗಿದೆ
ಈಗಲಾದರು ಉತ್ತರ ಬೇಕಿದೆ

* * *

## 33. ಮನುಷ್ಯ ಗುನುಗಿದ್ದು ಕೇಳಿ ಹಳ್ಳವೂ ಗುಡುಗಿತು

– ಕೃಷ್ಣಮೂರ್ತಿ ಬಿಳಿಗೆರೆ

ಮನುಷ್ಯನ ಗುನುಗು:
ಏನಾಯಿತೋ ಸ್ವಾಮಿ ಏನಾಯಿತೋ
ಏನಾಯಿತೋ ದೇವ ಏನಾಯಿತೋ
ಎಷ್ಟುದ್ದ ಎಷ್ಟಗಲ ಹರಡಿದ್ದ ಹಳ್ಳವು
ಎಲ್ಲೋಯಿತೋ ಸ್ವಾಮಿ ಎಲ್ಲೋಯಿತೋ

ಜುಳ ಜುಳ ಹರಿದಿತ್ತು ಫಳಫಳ ಹೊಳೆದಿತ್ತು
ಹಕ್ಕಿ ಪಕ್ಷಿಗಳಿಗೆ ತಿಳಿನೀರು ಕೊಡುತ್ತಿತ್ತು
ಜನಗಳು ದನಗಳು ಕರುಗಳು ಕುರಿಗಳು
ಅನ್ನ ನೀರುಗಳ ಕೇಳಿ ಪಡೆದಿದ್ದೋ

ಅಲ್ಲಲ್ಲೆ ಗುಂಡಿಗಳು ಅಲ್ಲಲ್ಲೆ ಗೊಟರುಗಳು
ಮರಿಗಳೊಂದಿಗೆ ಮೀನು ಪಾಡುತ್ತಿದ್ದೋ
ಹೊಂತೆಯ ಮರಗಳು ಹಂಗಂಗೆ ಬೆಳೆದಿದ್ದೋ
ನೆರಳಿನ ಮೋಡಗಳು ತೇಲುತ್ತಿದ್ದೋ

ಹನಿಯಾಗಿ ಇಳಿದಿತ್ತೋ, ನೀರಾಗಿ ಹರಿದಿತ್ತೋ
ಹಳ್ಳದ ತೆನೆಯಾಗಿ ಮೂಡಿತಲ್ಲೋ
ತಾನೇ ತಾನಾಗಿ ಹುಟ್ಟಿ ಹರಿದಿತ್ತಲ್ಲೋ
ತನ್ನ ದಾರಿಯ ತಾನು ಕಂಡುಕೊಂಡಿತ್ತಲ್ಲೋ
ಕಟ್ಟಿದ ಕೆರೆಗಳಿಗೆ ಹುಟ್ಟಿದ ಕಟ್ಟೆಗೆ
ದಿಟ್ಟ ಹೆಜ್ಜೆ ಇಟ್ಟು ಹೊರಟಿತ್ತಲ್ಲೋ

**ಹಳ್ಳದ ಗುಡುಗು:**
ಹಾಡು ಕಟ್ಟುತ್ತೀಯ ರಾಗ ಹಾಕುತ್ತೀಯ
ಸ್ವಾಮಿ ಸ್ವಾಮಿ ಎಂದು ಸಾಯುತ್ತೀಯ

ಕೈಯಾರ ಕಲ್ಲಾಕಿ ಕೈಯಾರ ಮಣ್ಣಾಕಿ
ನಿನ್ನ ಮೈ ನೀನೇ ಪರಚಿಕೊಳ್ಳುತ್ತೀಯ
ನಿನ್ನ ಎಲ್ಲೆಯ ದಾಟಿ ನಿನ್ನ ನೀನೆ ದಾಟಿ
ಹಮ್ಮು ಬಿಮ್ಮಿನ ಕುಣಿತ ಕುಣಿಯುತ್ತೀಯ

ನನ್ನ ಕೇಳಿದರೇನು ಕೇಳದಿದ್ದರೆ ಏನು
ಕೇಡ ಜಾಡ ಹಿಡಿದು ನಡೆದಿದ್ದೀಯ
ಕಲ್ಲು ಚಪ್ಪಡಿ ಅಡಿಗೆ ಕೈಯ್ಯ ಕೊಟ್ಟವ ನೀನು
ಎಚ್ಚರ ತಪ್ಪಿದರೆ ಏನ ಮಾಡಲಿ ನಾನು

* * *

## 34. ರಾಶಿ ಮಾಡೋಣ ಬನ್ನಿರಿ

**– ಕೃಷ್ಣಮೂರ್ತಿ ಬಿಳಿಗೆರೆ**

ರಾಶಿ ಮಾಡೋಣ ಬನ್ನಿರಿ
ನಾವೆಲ್ಲರು ರಾಶಿ ಮಾಡೋಣ ಬನ್ನಿರಿ
ಮಳೆಯ ನೀರ ಕಾಳನ್ನು
ಇಳೆಯ ಊರ ಪಣ್ಯವನು

ಆಕಾಶದ ಬೆವರ ನೀರು
ಉಪ್ಪಲ್ಲ ಸಿಹಿ ಕಾಣೋ
ಇಂಥ ನೀರು ಕುಡಿಯೋದು
ತಪ್ಪಲ್ಲ ಸರಿಕಣೋ

ಮಳೆಯ ನೀರು ಹಿಡಿಯೋಣ
ಹೊಟ್ಟೆತುಂಬ ಕುಡಿಯೋಣ
ಫ್ಲೋರೋಸಿಸ್ ಭಯವಿಲ್ಲ
ನಾರೋಸಿಸ್ ! ಮೊದಲೇ ಇಲ್ಲ

ಕಟ್ಟೆಯ ತಟ್ಟೆಯೊಳಗೆ
ಕಪ್ಪೆ, ಮೀನು ಬೆಳೆಯೋಣ
ಮಳೆಯ ಜೇನು ಬಿಚ್ಚೋಣ
ತುಪ್ಪದಂತೆ ಬಳಸೋಣ

ಮಳೆಯ ನೀರ ದಾರಿಯಲ್ಲಿ
ಮರದ ಊರ ಕಟ್ಟೋಣ
ಮೋಡ ಗೂಡ ನಿಗೂಢವನು
ಕಾಡ ಕಟ್ಟಿ ಕರಗಿಸೋಣ

* * *

## 35. ಓಡುವ ನೀರಿನ ಕಾಲಿಗೆ ಬಿದ್ದು

**– ಕೃಷ್ಣಮೂರ್ತಿ ಬಿಳಿಗೆರೆ**

ಓಡುವ ನೀರಿನ ಕಾಲಿಗೆ ಬಿದ್ದು
ನೀರಿನ ಕಾಲನು ಹಿಡಿಯೋಣ
ಸುರಿವ ಮಳೆಯಲಿ ನೆನೆಯುತ ಎಲ್ಲ
ನೀರ ದಾರಿಯ ಹಿಡಿಯೋಣ

ಬಳಕುತ ಇಳಿಯುವ ಗುಡ್ಡದ ನೀರಿಗೆ
ಹಳ್ಳದ ಹಾದಿಯ ತೋರೋಣ
ಮಳೆಯ ಹಬ್ಬಕೆ ನೀರೇ ಔತಣ
ಮಿಂಚಿನ ಹೂವ ಮುಡಿಯೋಣ

ಕಣದಲಿ ಕಾಳ ಒಕ್ಕುವ ರೀತಿ
ಕಾಳಿಗೆ ಚೀಲ ಒಡ್ಡುವ ನೀತಿ
ಮಳೆಗೆ ಬೊಗಸೆಯ ಒಡ್ಡೋಣ
ಆಗಸದಾಲನು ಕುಡಿಯೋಣ

ಮಣ್ಣಕಣಜದ ಅಂತರಂಗಕೆ
ಜೀವಜಲವನು ಬಿತ್ತೋಣ
ಹಳ್ಳದ ಕಂಗಳ ಹೊಂಗನಸುಗಳ
ನಮ್ಮ ಒಳಗೆ ನಾವ್ ಇಳಿಸೋಣ

* * *

## 36. ಮನೆ ಬಾಗಿಲಿಗೆ ಕೆಲಸ

ಬಂತವ್ವ ಬಂತಕ್ಕ ಬಂತೇ ರೈತನ ಮಗಳೆ
ಬಂತಣ್ಣ ಬಂತಪ್ಪ ಬಂತೋ ಬಡವರ ಮಗನೆ
ಮನೆ ಬಾಗಿಲಿಗೆ ಕೆಲಸ ಕೊಡುವ ಯೋಜನೆ
ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆ ॥

ಮೋಡ ಕಟ್ಟಲಿಲ್ಲ ಮಳೆಯೂ ಬರಲಿಲ್ಲ
ಕೆರೆಯಲ್ಲಿ ನೀರಿಲ್ಲ ಹಳ್ಳ ಹರಿಯಿಲ್ಲ
ಭೂತಾಯಿ ತಣಿಯಲಿಲ್ಲ ಗರಿಕೆ ಚಿಗುರಲಿಲ್ಲ
ರಂಟೆಗುಂಟೆಗಳು ಮೌನವಾದವಲ್ಲ
ದುಡಿಯೋ ಕೈಗೆ ಕೆಸರಾಗಲಿಲ್ಲವಲ್ಲ
ಚಿಂತೆ ಇನ್ನಿಲ್ಲ ಕೆಲಸ ಉಂಟಲ್ಲ
ನಮ್ಮ ಹಳ್ಳಿ ಕೆಲಸ ನಾವೇ ಅದಕ್ಕೆ ಅರಸ ॥

ನಮ್ಮ ಕೆಲಸಕ್ಕೆ ನಮ್ಮದೇ ನಿರ್ಧಾರ
ಇಲ್ಲಿ ಇಲ್ಲ ಯಾರು ಸಾಹುಕಾರ
ಸರಕಾರವೇ ನಮ್ಮ ಸರದಾರ
ಸಹಕಾರವೇ ನಮ್ಮ ಆಧಾರ
ನಮ್ಮ ಹಳ್ಳಿ ಉದ್ಧಾರ ನಮ್ಮ ಉದ್ಧಾರ
ನಮ್ಮ ದೇಶದ ಉದ್ಧಾರ ನಮ್ಮ ಬದುಕು ಹೂವಿನ ಹಾರ
ಗಾಂಧಿ ಕಂಡ ಕನಸು,ನನಸು ಮಾಡುವ ಬಾರ॥

ಇನ್ನ್ಯಾಕೆ ನಮಗೆ ಗುಳೆ ಹೋಗುವ ಚಿಂತೆ.
ಚಿಂತೆಯಿಲ್ಲದೆ ಮಾಡೋಣ ಬಾರೋ ಸಂತೆ.॥

* * *

ಕಾವ್ಯ ವಿಕಾಸ

## 37. ಗುಳೆ ಹೋದವರ ಕಥೆ ವ್ಯಥೆ

**– ಮಂಜುನಾಥ ಬೆಳಕೆರೆ**

ಮೊದಲಿಗೆ ಅಲ್ಲಮ ಪ್ರಭುವಿಗೆ ಶರಣೋ
ಕೂಡಿಕುಂತ ಸಭಕ್ಕೆಲ್ಲಾ ನಮ ನಮನ
ಗುಳೆ ಹೋದರಂತವರ ಕಥೆಯ ವಿಸ್ತಾರವ
ತಿಳಿಸಿ ಹೇಳುವೆ ಕೇಳಬೇಕ್ರಿ ಜನ ॥ ಗೀ ಗೀ ॥

ಹೇ ಸುರುಪುರ ಪಟ್ಟಣ ಶಿವಪುರ ಎಂಬ ಹಳ್ಳಿ
ಇಂತೊಂದು ಅಲ್ಲಿ ಸಂಸಾರ । ಹೇ ಸಿವನೆ ಕೇಳು ಅವರ ಬಡವರ
ಹೊನ್ನಯ್ಯ, ಚಿನ್ನವ್ವ ಗಂಡ ಹೆಂಡರ ಹೆಸರ
ಎರಡು ಮಕ್ಕಳು ಅವರದು ಸಂಸಾರ
ಬಸವಣ್ಣ ಎಂಬುದು ದೊಡ್ಮಗನ ಹೆಸರ
ಗೌರವ್ವ ಎಂಬುದು ಚಿಕ್ಕಮಗಳ ಹೆಸರ
ಹಾಲ್ಗಲ್ಲದ ಹುಡುಗ ಆಡಿಕೊಳ್ಳೋ ವಯಸ್ಸು
ಗೌರವ್ವ ಇನ್ನೂ ಚಿಕ್ಕವಳು । ಚಿನ್ನವ್ವನಿಗೆ ಅವಳು ಕೈಕೂಸು.

ಹೇ...ಕೂಡಿಕುಂತ ಸಭಕ್ಕೆಲ್ಲಾ ಕೈ ಮುಗಿದು ಕೇಳುತ್ತೇವೆ
ಕೇಳಬೇಕ್ರಿ ಮುಂದಿನ ಕಥೆ ಸಾರ
ಅಯ್ಯ ಮಾಡಿಬೇಡ್ರಿ ನೀವು ತಾತ್ಸರ. ॥ ಗೀ ಗೀ ॥

ಹೇ...... ಹೊನ್ನಯ್ಯ ಚಿನ್ನವ್ವಗ ಇಂತೊಂದು ಗುಡಿಸಲಾ
ಇರಲಿಲ್ಲ ಅಂಗೈ ಅಗಲ ಹೊಲ ಕೂಡಾ
ಗುಡಿಸಲಾ ಸೂರೊಳಗ ನಕ್ಷತ್ರ ಕಂಡಾವು
ನೆರಕಿಯೊಳಗ ಕೊತ್ತಿ ಕುಣಿದಾವು.
ಹೇ ಮೂರು ಗೇಣಿನ ಹೊಟ್ಟಿ ತುಂಬಿಕೊಳ್ಳಾಕ ಆಧಾರ ।
ಕಂಡವರ ಹೊಲದೊಳಗ ದುಡೀಬೇಕಾ
ಅವರು ಕೊಟ್ಟಷ್ಟು ಕೂಲಿ ಪಡೀಬೇಕಾ ।
ಕೆಲಸ ಮುಗಿದ ಮ್ಯಾಲಾ ಬಕಪಕ್ಷಿಯಂಗ
ಮುಂದಿನ ಕೆಲಸಕ ಕಾಯಬೇಕಾ
ಹೇ ಶಿವನ ಉಳ್ಳವರು ಕೆಲಸಕ ಕರೆದರೆ ಗಂಟಲಿಗೆ ಗಂಜಿ
ಕರೆಯದಿದ್ದರೆ ಅಂತೂ ತಣ್ಣೀರ ಬಟ್ಟೆ.

ಹೇ...ಕೂಡಿಕುಂತ ಸಭಕ್ಕೆಲ್ಲಾ ಕೈ ಮುಗಿದು ಕೇಳುತ್ತೇವೆ
ಕೇಳಬೇಕ್ರಿ ಮುಂದಿನ ಕಥೆ ಸಾರ
ಅಯ್ಯ ಮಾಡಿಬೇಡ್ರಿ ನೀವು ತಾತ್ಸರ. ॥ ಗೀ ಗೀ ॥

ಸಪ್ಪಟ್ಟು ಸಮರಾತ್ರಿ ಕಲ್ಲುನೀರು ಕರಗೋ ಹೊತ್ತು
ಮಲಗಿದ ಹೆಂಡ್ತಿನ ಎಬ್ಬಿಸ್ಯಾನ । ಹೊನ್ನಯ್ಯ
ಮಲಗಿದ ಚಿನ್ನವ್ವನ ಎಬ್ಬಿಸ್ಯಾನ
ಕೇಳು ನನ್ನ ಮಡದಿ ಕೈಯಾಗ ಕೆಲಸ ಇಲ್ಲ
ಅನ್ನಕ ಗತಿ ಇಲ್ಲ ಎದೆಹಾಲು ಬತ್ತೇವಲ್ಲ
ಹಿಂಗಾದ್ರ ಮುಂದ ಹೆಂಗ ? ನಮ್ಮ ಬದುಕು ಸಾಗದೋ ಹೆಂಗ?

ಊರಾಗ ಮಂದಿ ಗುಳೆ ಹೊಂಟಾರ
ಕೆಲಸ ಹುಡಿಕೊಂಡು ಶಹರ ಹೊಕ್ಕಾರ
ನಾವು ಹೋಗೋಣ ನಡೆ ಕೆಲಸ ಹುಡಕೋಣ ನಡೆ
ಶಹರದಾಗ ಕೂಡಿ ದುಡಿಯೋಣ ನಡೆ
ನಾವು ರೊಕ್ಕ ಮಾಡೋಣ ನಡೆ
ಬ್ಯಾಡ ನನ್ನ ದೂರೆ ದೂರದೂರು ಕಣ್ಣಿಗೆ ನುಣ್ಣಗೆ
ಉದ್ಯೋಗ ಖಾತರಿಯಲ್ಲಿ ಕೆಲಸ ಕೇಳೋಣ
ನಂ ಪಂಚಾತಿ ಕೆಲಸ ಇಲ್ಲೇ ಮಾಡೋಣ
ಅಂತಂತ ಬೇಡ್ಯಾಳೋ ಮಡದಿ ಚಿನ್ನವ್ವ । ಬೇಡ್ಯಾಳೋ
ಮಡದಿಯ ಬುದ್ದಿಮಾತು ಮನಕೆ ಬರಲಿಲ್ಲ

ಬಲವಂತ ಮಾಡಿ ಮಡದಿಯ ನಡುರಾತ್ರಿ ಒಪ್ಪಿಸ್ಯಾನಲ್ಲ
ಗುಳೆ ಹೋಗುವುದಕ್ಕ ನಿರ್ಧಾರ ಮಾಡ್ಯಾನಲ್ಲ ।

ಹೇ...ಕೂಡಿಕುಂತ ಸಭಕ್ಕೆಲ್ಲಾ ಕೈ ಮುಗಿದು ಕೇಳುತ್ತೇವೆ
ಕೇಳಬೇಕ್ರಿ ಮುಂದಿನ ಕಥೆ ಸಾರ
ಕಥೆ ಕೇಳಿ ಮಾಡಿಬೇಡ್ರಿ ನೀವು ತಾತ್ಸರ. ॥ ಗೀ ಗೀ ॥

ಹೊತ್ತು ಹುಟ್ಟೋ ಮುನ್ನ ಬೆಳಕು ಕಾಣೋ ಮುನ್ನ
ಮಡದಿ ಮಕ್ಕಳ ಜತೆ ಹೊಂಟಾನ
ಹುಟ್ಟಿದ ಊರು ಬೆಳೆದ ಊರ ಬಿಟ್ಟಾನ
ರೋಡಿಗೆ ಬಂದ ಲಾರಿ ಹತ್ತ್ಯಾನ
ಬೆಂಗಳೂರು ಪಟ್ಟಣ ಸೇರ್‍ಯಾನ.

ಕಾಡ ಹಕ್ಕಿ ನಾಡಿಗೆ ಬಂದು
ದಿಕ್ಕು ಕಾಣದೇ ಅಲೆಯುವಂಗ
ಹುಟ್ಟಿದೂರ ಬಿಟ್ಟು ಬಂದು
ಕಾಣದೂರಲ್ಲಿ ಅಲೆಯುತ್ತಾನ
ರಸ್ತೆಬದಿಯಲ್ಲಿ ಮರದ ಕೆಳಗೆ
ಮಕ್ಕಳೊಂದಿಗೆ ಮಲಗುತ್ತಾನ

ವಾರಗಟ್ಟಲೆ ಕೆಲಸಕ್ಕಾಗಿ ಅಲೆದೇ ಅಲೆಯುತ್ತಾನ
ಕಂಡ ಕಂಡವರಲ್ಲಿ ಬೇಡೇ ಬೇಡುತ್ತಾನ
ದಲ್ಲಾಳಿ ಇಲ್ಲದೇ ಧಾರ ಕೂಡ ಅಲುಗದು ಇಲ್ಲಿ
ದಲ್ಲಾಳಿಗೆ ರೊಕ್ಕ ಕೊಡದೇ ಕೆಲಸ ಸಿಗದು ಇಲ್ಲಿ
ಅಂತು ಇಂತು ಸಿಕ್ಕನೊಬ್ಬ ದಲ್ಲಾಳಿ
ರೊಕ್ಕ ಕೊಟ್ಟನು ಹೊನ್ನಯ್ಯ ಮಾರಿ ತಾಳಿ
ಗಂಡ ಹೆಂಡರಿಗೆ ಗಾರೆ ಕೆಲಸ ಕೊಡಿಸಿದ ದಲ್ಲಾಳಿ ॥

ಹೇ...ಕೂಡಿಕುಂತ ಸಭಕ್ಕೆಲ್ಲಾ ಕೈ ಮುಗಿದು ಕೇಳುತ್ತೇವೆ
ಕೇಳಬೇಕ್ರಿ ಮುಂದಿನ ಕಥೆ ಸಾರ
ಕಥೆ ಕೇಳಿ ಮಾಡಿಬೇಡ್ರಿ ನೀವು ತಾತ್ಸರ. ॥ ಗೀ ಗೀ ॥

ಆಕಾಶಕ್ಕ ಮುಖ ಮಾಡಿದ ಕಟ್ಟಡ ಕೆಲಸವಣ್ಣ
ಖುಷಿಯಲ್ಲಿ ಗಂಡಹೆಂಡರಿಬ್ಬರು ಕೆಲಸಕ್ಕೆ ಹೊಂಟರಣ್ಣ
ಹೊಸ ಕಟ್ಟಡದ ಕೆಳಗಿನ ಜಾಗೆಯಲ್ಲಿ ಇವರ ವಸತಿಯಣ್ಣ
ಆಡೋ ಹುಡುಗನಿಗೆ ಕಾಡುವ ಕೂಸು ಕಾಯೋ ಕೆಲಸವಣ್ಣ

ಕೆಲಸ ಸಿಕ್ಕ ಹದಿನೈದು ದಿನ ಎಲ್ಲ ಚೆಂದ ಇತ್ತು.
ದಣಿದ ದೇಹಕ್ಕ ಮಕ್ಕಳ ನಗು ಎಲ್ಲ ಮರೆಸುತ್ತಿತ್ತು.
ಹೆಚ್ಚಿನ ಕೂಲಿ ಕಣ್ಣೊಳಗ ಕನಸು ತಂದಿತು.
ಬಿಟ್ಟು ಬಂದ ಹಳ್ಳಿಯ ನೆನಪು ಮಾಸೇ ಹೋಗಿತ್ತು.॥

ಬಟವಾಡೆ ದಿನ ಕೈ ತುಂಬಾ ರೊಕ್ಕ ಬಂದಿತ್ತು.
ಖುಷಿ ಎಂಬುದು ಅವರ ಸುತ್ತ ಸುಳಿದೇ ಸುಳಿಯುತ್ತಿತ್ತು
ಅದು ಎಲ್ಲಿದ್ದನೋ ಹೆಂಗೆ ಬಂದನೊ
ಧುತ್ತಂತ ಬಂದನವನು ದಲ್ಲಾಳಿ.

ಬರುವ ಕೂಲಿಯಲ್ಲಿ ಕಮಿಶನ್ ಕೊಡಲೇಬೇಕೆಂದ.
ಬೆವರು ಸುರಿಸಿ ದುಡಿದ ದುಡ್ಡಿನಲ್ಲಿ ಪಾಲು ಕೊಡಿ ಎಂದ
ಪಾಲು ಕೊಡದಿದ್ರೆ ನಾಳೆ ಕೆಲಸ ಇಲ್ಲ ಎಂದ
ನಿಂತ ನೆಲ ಬಿರದಂತಾಗಿ ಎದೆಗೆ ಹಾರೆ ಕೋಲು
ಬೆವರು ಸುರಿಸಿದ ಕೂಲಿಯಲ್ಲಿ ಹೆಂಗೆ ಕೊಡಲಿ ಪಾಲು
ಕೊಡದ್ದಿದ್ರೆ ನಮ್ಮ ಬದುಕೆ ಇನ್ನೂ ಬೀದಿಪಾಲು
ಕಣ್ಣೀರು ಹಾಕುತ್ತಾ ದಲ್ಲಾಳಿಗೆ ಕೊಟ್ಟ ಅವರು ಕೂಲಿ ಪಾಲು.

ಹೇ...ಕೂಡಿಕುಂತ ಸಭಕ್ಕೆಲ್ಲಾ ಕೈ ಮುಗಿದು ಕೇಳುತ್ತೇವೆ
ಕೇಳಬೇಕ್ರಿ ಮುಂದಿನ ಕಥೆ ಸಾರ
ಕಥೆ ಕೇಳಿ ಮಾಡಿಬೇಡ್ರಿ ನೀವು ತಾತ್ಸರ. ॥ ಗೀ ಗೀ ॥

ಶಹರದೊಳಗ ಎಲ್ಲದಕ್ಕೂ ಕೊಡಬೇಕಯ್ಯ ಇಲ್ಲಿ ಕಾಸು
ದಲ್ಲಾಳಿಯಂತೂ ಬಿಡುತ್ತಿರಲಿಲ್ಲ ಕಮಿಷಶನ್ ಕಾಸು
ದುಡಿದ ಕೂಲಿಯಲ್ಲಿ ಉಳಿಯಲಿಲ್ಲವಯ್ಯ ಒಂದು ಬಿಡಿಗಾಸು
ಮಕ್ಕಳಿಬ್ಬರ ಹಾಲಿಗೂ ಉಳಿಯೋದಿಲ್ಲವಯ್ಯ ಕಾಸು॥
ಅತ್ತರೆ ಇಲ್ಲಿ ಕೇಳೋರಿಲ್ಲ ನಕ್ಕರೆ ಇಲ್ಲಿ ನೋಡೋರಿಲ್ಲ
ಸಂಬಂಧದ ಮಾತೇ ಮೊದಲೇ ಇಲ್ಲ
ಮನುಷ್ಯ ಜೀವಕ್ಕ ಬೆಲೆಯೇ ಇಲ್ಲ
ಕನಸು ಹೊತ್ತು ನಗರಕ್ಕೆ ಬಂದರೆ ನನಸಾಗಲೇ ಇಲ್ಲ
ನಗರ ಜೀವನ ಇಲ್ಲಿ ನರಕವಾಯ್ತಲ್ಲ ॥

ಹೊನ್ನಯ್ಯನ ಮುಂಗೈ ಹಿಡಿದು ಚಿನ್ನವ್ವ ಹೇಳ್ತಾಳ
ಬ್ಯಾಡ ನನ್ನ ದೂರೆಯೇ ಈ ನಗರದ ಕೆಲಸ
ನಮ್ಮ ಹಳ್ಳಿಗೆ ಹೋಗೊಣ ನಡಿ
ನಾವು ಅಲ್ಲೇ ದುಡಿಯೋಣ ನಡಿ.
ಉದ್ಯೋಗ ಖಾತರಿ ಯೋಜನೆಯಲ್ಲಿ ಕೆಲಸ ಮಾಡೋಣ ನಡಿ
ನಮ್ಮ ಗ್ರಾಮ ಪಂಚಾತಿ ಕೆಲಸ ನಮ್ಮ ಕೆಲಸ ನಡಿ

ಅಂತಂತ ಅನ್ನುತಾಳ ಕಣ್ಣೀರು ಹಾಕುತ್ತಾಳ
ಚೆನ್ನಿ ಮುಂದಿಟ್ಟು ಹೆಜ್ಜೆ ಹಿಂದಿಡೋದು ಹೆಂಗ
ಸರೀಕರ ಮುಂದೆ ತಲೆ ಎತ್ತೋದು ಹೆಂಗ
ಕಷ್ಟನೋ ಸುಖವೋ ಬದಕೋಣ ಇಲ್ಲಿ
ಅಂತಂತ ಹೆಂಡ್ತಿ ಮುದ್ದು ಮಾಡ್ಯಾನ

ಹೇ...ಕೂಡಿಕುಂತ ಸಭಕ್ಕೆಲ್ಲಾ ಕೈ ಮುಗಿದು ಕೇಳುತ್ತೇವೆ
ಕೇಳಬೇಕ್ರಿ ಮುಂದಿನ ಕಥೆ ಸಾರ
ಕಥೆ ಕೇಳಿ ಮಾಡಿಬೇಡ್ರಿ ನೀವು ತಾತ್ಸರ. ॥ ಗೀ ಗೀ ॥

ಒಂದು ದಿನ ಮಟಮಟ ಮಧ್ಯಾಹ್ನ
ಹೊನ್ನಯ್ಯ ಚಿನ್ನವ್ವ ಕೆಲಸ ಮಾಡುವಾಗ
ಮಕ್ಕಳು ಬಂದು ಹಟ ಮಾಡಿದವು
ತಿಂಡಿ ಬೇಕೆಂದು ರೊಚ್ಚೇ ಹಿಡಿದಾವು
ಮಕ್ಕಳಿಗೆ ತಿಂಡಿ ಕೊಡಿಸಲು ಹೊಂಟಾಳೋ

ಒಮ್ಮಲೇ ಸುಳಿಗಾಳಿ ಬಿರುಗಾಳಿ ಬಂತೋ
ಬರ್ರಿಡಿಲು ಬಡಿದು ಭೋರೆಂದು ಮಳೆ ಸುರಿದು
ನೆಲವೆಲ್ಲ ಅದುರಿ ಕಟ್ಟಡವೂ ನಡು ನಡುಗಿ ನೆಲಕ್ಕಚ್ಚಿತ್ತಲ್ಲ
ಗೋಳಾಟ ಚೀರಾಟ ಮುಗಿಲ ಮುಟ್ಟಿತ್ತಲ್ಲ
ಕಟ್ಟಡದೊಳಗೆ ಸಿಕ್ಕವರ್ಯಾರೋ ಸತ್ತವರ್ಯಾರೋ
ಬದುಕುಳಿದವರ್ಯಾರೋ ಆ ಶಿವನೇ ಬಲ್ಲ..

ಓಡಿ ಬಂದಳು ಚಿನ್ನವ್ವ ಮಕ್ಕಳ ಕೂಡಿ
ಹುಡುಕಿ ಹುಡುಕುತ್ತಾಳ ಗಂಡನ ಬೋರಾಡಿ
ತಡಕಾಡುತ್ತಾಳ ಗಂಡನ ಕೂಗಾಡಿ
ಬಿದ್ದ ಕಟ್ಟಡದ ಕೆಳಗೆ ಹೊನ್ನಯ್ಯ ಅಸುನೀಗಿದ್ದ

ಶಿವನೆ ಪ್ರಾಣ ಬಿಟ್ಟಿದ್ದ ಅಯ್ಯೋ ಸತ್ತೇ ಹೋಗಿದ್ದ
ಕಂಡು ಗಂಡನ ದೇಹವ ಬಾಚಿ ಕೊಂಡಾಳೋ
ಮಕ್ಕಳ ಎದೆಗವಚಿಕೊಂಡು ಗೋಳ್ಯಾಡಳೋ

ಅವಳ ಕೇಳುವವರ್ಯಾರೋ ಶಿವನೆ
ಮುಗಿಲ ಮುಟ್ಟಿತು ಆ ರೋಧನ
ಸುರಿಯುವ ಮಳೆ ಹನಿಯಲ್ಲಿ
ಸೇರಿ ಹರಿಯಿತು ಅವಳ ಕಣ್ಣೀರು

ಸಭಕ್ಕೆಲ್ಲಾ ಕೈ ಮುಗಿದು ಹೇಳುತ್ತೇವೆ ಮುತ್ತಿನ ಮಾತೊಂದು
ಹೊಟ್ಟೆಯೊಳಗಿಟ್ಟು ಕೊಳ್ರಿ ನಮ್ಮಯ ಮಾತೊಂದು
ಕೈಯ ಮುಗಿದು ಹೇಳುತ್ತೇವೆ ನೀವು ಗುಳೆ ಹೋಗಬ್ಯಾಡರಿ.
ಕೆಲಸ ಇಲ್ಲದ ಹೊತ್ತಿನಲ್ಲಿ ಕೆಲಸ ಕೇಳಿ ಪಡೆಯಿರಿ
ಸರಕಾರ ನಿಮಗಾಗಿ ನೀಡಿದೆ ವರ ಇಂದು
ಒಂದು ಕುಟುಂಬಕ್ಕೆ ನೂರು ದಿನದ ಉದ್ಯೋಗ ಎಂದು
ನಿಮ್ಮ ಊರ ಪಂಚಾಯಿತಿಯಲ್ಲಿ ಕೆಲಸ ಸಿದ್ದ ಎಂದು
ಊರ ಕೆಲಸ ನಿಮ್ಮ ಉದ್ಧಾರ ಅನುದಿನವಿಂದು॥

* * *

# ಸಣ್ಣಕ್ಕ – ದೊಡ್ಡಕ್ಕ

– ಶ್ರೀಮತಿ ಕೆ.ಆರ್. ನಂದಿನಿ, ರಂಗಾಯಣ

(ವೃತ್ತದ ಹೊರಗೆ ಕಲಾವಿದರು ಕುಣಿಯುತ್ತಿರುತ್ತಾರೆ. ಒಳವೃತ್ತದಲ್ಲಿ ಜೋತಮ್ಮನವರು ಇರುತ್ತಾರೆ.)

**– ಹಾಡು –**

*ಬಡತನವು ಸಿರಿತನವು*
*ಯಾವುದಲ್ಲ ಸ್ಥಿರವು*
*ಮಾನವನ ಜೀವನ*
*ನೆರಳಿನ ಸಮವು*
*ಹುಟ್ಟೆಷ್ಟು ನಿಶ್ಚಿತವೋ*
*ಸಾವಷ್ಟೆ ಖಚಿತ.*
*ಬೇಧವಿಲ್ಲ ಹೆಣ್ಣು ಗಂಡಿಗೆ*
*ಎಲ್ಲರೂ ಹೋಗುವುದು ಮಣ್ಣಿಗೆ*

(ಹಾಡು ಹೆಜ್ಜೆ ಮುಗಿಯುತ್ತಿದ್ದಂತೆ ಕಲಾವಿದನೊಬ್ಬ )

ಒಬ್ಬ : ಎಲ್ಲಾರೂ ಹೋಗೋದು ಮಣ್ಣಿಗೆ

ಎಲ್ಲರೂ : ಮಣ್ಣಿಗೆ .... ಓ...

ಜ್ಯೋತಿ 1 : ಓ... ಓ.. ಓ... ಇದೇನಿದೂ ಇಷ್ಟೋತ್ತಾದ್ರೂ ಅವಳು ಬರಲೇ ಇಲ್ಲ ?

ಜ್ಯೋತಿ 2 : ಯಾರು ಬರಬೇಕಿತ್ತು ?

ಒಬ್ಬ : ಜಂಭಕ್ಕ ......

ಇನ್ನೊಬ್ಬ : ಅದೋ ಜಂಭಕ್ಕ ಬಂದ್ಲು...

(ಜಂಭಕ್ಕ ಕುಣಿಯುತ್ತಾ ಪ್ರವೇಶ)

ಜ್ಯೋತಿ 1 : ಯಾಕ್ ಜಂಭಕ್ಕ ಇಷ್ಟೋತ್ತು ಮಾಡಿಬಿಟ್ಟೆ ?

ಜ್ಯೋತಿ 2 : ಅಂಥಾ ಘನಂದಾರಿ ಕೆಲಸ ಏನಿತ್ತೋ ?

ಜಂಭಕ್ಕ : ಯಾವ ಕೆಲಸ ಬಿಡ್ರೆ. ನನ್ನ ಕಥೆ ಹಂಗಿರ್‍ಲಿ. ಇದ್ಯಾಕೆ ಎಲ್ರು ಮುಖಾನು ಸಪ್ಪಗವೆ ? ಅಂಥದೇನಾಯ್ತು ?

ಜ್ಯೋತಿ 1 : ಅಯ್ಯೋ, ಅದ್ನೇನ್ ಕೇಳ್ತಿ ಬಿಡು ಜಂಭಕ್ಕ ನಮ್ಮನೆ ಮಂದಿಯೆಲ್ಲ ಈ ಹಳ್ಯಾಗ್ ಸಿಕ್ಕೋ ಕೂಲಿ ಹೊಟ್ಟೆಗೂ ಬಟ್ಟೆಗೂ ಸಾಕಾಗೊಲ್ಲ ಅಂತ ಹೇಳಿ ಪಟ್ನಕ್ಕೊಂಟೋಗವ್ರೆ. ಮನೇಲಿ ದೀಪ ಹಚ್ಚೋಕು ಇಲ್ದಂಗ್ ಆಗೇತಿ.

ಜಂಭಕ್ಕ : ಎಯ್ ಸುಪನಾತಿ, ನಿಂದೇನೆ ಕಥಿ ?

ಜ್ಯೋತಿ 2 : ಅಯ್ಯೋ ನಮ್ಮ ಕಥಿ ಇದ್ದಿದ್ದೆ, ಮೊದ್ಲು ನೀನ್ಯಾಕೆ ತಡವಾಗಿ ಬಂದೆ ಅದ್ನೇಳು ?

ಜಂಭಕ್ಕ : ಅಯ್ಯೋ ನಿಮ್ಮನಿ ಕಥೀನಾರ ಬೇಕು ನಮ್ದು ಎಂಥಾಕು ಬೇಡ. ನಮ್ಮನ್ಯಾಗ ಅವೆಯಲ್ಲ ಎರಡು ಹೆಣ್ಣು ಮಕ್ಳು

ಜ್ಯೋತಿ 1–2 : ಯಾರದು ?

ಜಂಭಕ್ಕ : ಸಣ್ಣಕ್ಕ–ದೊಡ್ಡಕ್ಕ ಅಂತಾ! ದೊಡ್ಡಕ್ಕ ಅಂದ್ರೆ ಬರೀ ಹೆಸರಿಗಷ್ಟೇ ದೊಡ್ಡಕ್ಕ ಗುಣಾದಾಗೆ ಸಣ್ಣಕ್ಕ. ಇನ್ನು ಸಣ್ಣಕ್ಕ ಅಂದ್ರೆ ಹೆಸರ್ಯಾಗಷ್ಟೇ ಸಣ್ಣಕ್ಕ ಗುಣದಾಗೆ ದೊಡ್ಡಕ್ಕ. ಒಬ್ಬಳು ಪೂರ್ವ ಆದ್ರೆ ಇನ್ನೊಬ್ಬಳು ಪಶ್ಚಿಮ.

**– ಹಾಡು –**

(ಹಾಡಿನಲ್ಲಿ ಇಬ್ಬರೂ ಕುಂಟಬಿಲ್ಲೆ ಆಟವಾಡ್ತ ಜಗಳವಾಡುವುದು)

*ಒಂದೂರಲಿಬ್ರು ಅಕ್ಕ ತಂಗಿಯರಿದ್ರು*
*ಅಕ್ಕನ ಹೆಸ್ರು ದೊಡ್ಡಕ್ಕ*
*ಅಕ್ಕನ ಹೆಸ್ರು ದೊಡ್ಡಕ್ಕ ಆದ್ರೆ*
*ತಂಗಿಯ ಹೆಸ್ರು ಸಣ್ಣಕ್ಕ .*

*ಸಣ್ಣಕ್ಕ ಹೆಸರಿಗೆ ಸಣ್ಣಕ್ಕಳಷ್ಟೆ*
*ಗುಣ–ನಡತೆಯಲಿ ದೊಡ್ಡವಳು /ಸಣ್ಣಕ್ಕ*
*ಸತ್ಯದ ಹಾದಿಯ ಸಮಧಾನಿ*

*ದೊಡ್ಡಕ್ಕ ಹೆಸರಿಗೆ ದೊಡ್ಡಕ್ಕಳಷ್ಟೆ*
*ಸಣ್ಣ ಮನಸಿನ ದೊಡ್ಡಕ್ಕ /ಸ್ವಭಾವ ಮಾತ್ರ*
*ಪೂರ್ವ – ಪಶ್ಚಿಮ.*

ಇನ್ನೊಬ್ಬ : ಅಕ್ಕ ಪೂರ್ವ, ತಂಗಿ ಪಶ್ಚಿಮ ಅಂದ್ರೆ ಅವರಿಬ್ರೂ ಒಟ್ಟೊಟ್ಟಿಗೆ ಹೆಂಗಿರ್ತಿದ್ರು ?

ಜಂಭಕ್ಕ : ಇನ್ನೆಂಗ್ ಇರ್ತಿದ್ರು ? ಬೆಂಕಿಗೆ ನೀರ್ ಆಗಲ್ಲ ನೀರ್ ಕಂಡ್ರೇ ಬೆಂಕಿಗಾಗಲ್ಲ ಅದೇ ರೀತಿ ದೊಡ್ಡಕ್ಕನಿಗೆ ಸಣ್ಣಕ್ಕನ್ ಕಂಡ್ರೆ ಆಗ್ತಾ ಇರ್ಲಿಲ್ಲ. ಯಾವಾಗ್ಲೂ ಜಗಳ ಮಾಡ್ತಿದ್ಲು. ಊರೋರ್ಗೆಲ್ಲ ಕೆಲ್ಸ ಕೊಡ್ಸೊ ನೆಪದಲ್ಲಿ ಅಡ್ಡ ವ್ಯವಹಾರ ಮಾಡೋ ದಲ್ಲಾಳಿ ಜೊತೆ ಸೇರ್ಕೊಂಡು ಮೋಸದ ವ್ಯವಹಾರ ಶುರು ಮಾಡಿದ್ಲು. ಸಾಲದ್ದಕ್ಕೆ ತನ್ನ ಗಂಡನನ್ನೂ ತನ್ನ ಕಳ್ಳ ವ್ಯವಹಾರದಲ್ಲಿ ಭಾಗಿ ಮಾಡ್ಕೊಂಡಿದ್ಲು.

ಒಬ್ಬ : ದಲ್ಲಾಳಿ ಅಂದ್ರೇ ಯಾರು?

ಜಂಭಕ್ಕ : ದಲ್ಲಾಳಿನ ಅದೇ ಅವನೇ. . . .

(ದಲ್ಲಾಳಿ ಸೂಟ್ಕೇಸ್‌ನೊಂದಿಗೆ ಕುಣಿಯುತ್ತಾ ಪ್ರವೇಶಿಸುವನು )

*ಜರಿಜರಿಜರಿಜರಿ. . . . . .ಹ್ಹಾ..ಹ್ಹಾ..ಹ್ಹಾ...*
*ಜರಿ ಜರಿ ಬಟ್ಟೆ ಮಿರಿ ಮಿರಿ ವಾಚು*
*ತಳುಕು ತಳುಕಿನ ಕನ್ನಡಕ*
*ಕಪ್ಪಾನೆ ಕಪ್ಪಿನ ಕಂಗಳ ಹಿಂದೆ*
*ಕರಾಳ ಕತ್ತಲೆ ಲೆಕ್ಕಾಚಾರ*
*ಬಾಯಲಿ ಮಾತ್ರ ಆಚಾರ? । 2 ॥*

*ಬೆಣ್ಣೆಯಂಥ ಮನುಷ್ಯ ಇವನು*
*ಬಣ್ಣ ಬಣ್ಣದ ಮಾತಿನವನು*
*ಮಾತಿನ ಜಾಲ ಹರಡುತ್ತಾನೆ ಜೇಬಿಗೆ ತೂತು ಕೊರೆಯುತ್ತಾನೆ ॥ಜರಿ ಜರಿ॥*

( ಹಾಡು ಮುಗಿಯುತ್ತಿದ್ದಂತೆ ದೊಡ್ಡಕ್ಕನ ಪ್ರವೇಶ )

ದಲ್ಲಾಳಿ : ನಮಸ್ಕಾರ ದೊಡ್ಡಕ್ಕ ಹೇಗಿದಿಯಾ ?

ದೊಡ್ಡಕ್ಕ : ಏನೋ ನಿಮ್ಮ ದಯೆಯಿಂದ ಹೀಗಿದೀನಿ ನೋಡ್ ಬಸಣ್ಣ.

ದಲ್ಲಾಳಿ : ನಾನು ಬೆಂಗ್ಳೂರಿಂದ ಒಂದ್ ಪೋನ್ ಮಾಡಿದ್ ಕೂಡ್ಲೆ ಇಷ್ಟೊಂದು ಜನಾನ ಸೇರ್ಸಿಬಿಟ್ಟಿದ್ದೀಯಾ ದೊಡ್ಡಕ್ಕ. ಭಲೇ... ಭಲೇ.

ದೊಡ್ಡಕ್ಕ : ಮತ್ತೆ . . . ನಾನು ಅಂದ್ರ ಏನು ಅಂನ್ಕೊಂಡೆ ಬಸಣ್ಣ

(ಗುಂಪಿನಲ್ಲಿ ಒಬ್ಬ ಸೂಟ್‌ಕೇಸ್ ಎತ್ತಿಕೊಳ್ಳುವನು)

ದೊಡ್ಡಕ್ಕ : ಮಡಗ್ಲಾ ಅಲ್ಲಿ . ಮಡುಗು ಅಂದೆ.

ಜನ : ಸೂಟ್‌ಕೇಸ್. . . .ಸೂಟ್‌ಕೇಸ್ (ಹಾಡು)
ಸೂಟ್‌ಕೇಸ್ ಸೂಟ್‌ಕೇಸ್
ಸೂಟ್‌ಕೇಸ್ ಸೂಟ್‌ಕೇಸ್
ಸೂಟ್‌ಕೇಸ್ ನಲ್ಲಿ ಏನುಂಟು ಸ್ವಾಮಿ

ಮೇಳ : ಏನುಂಟು ಸ್ವಾಮಿ ಏನುಂಟು ಸ್ವಾಮಿ
ಝಣ ಝಣ ಝಣ ಝಣ ಕಾಂಚಾಣ
ಅಲ್ಲಾ ಅಲ್ಲಾ ಅಲ್ಲಾ
ಓಲೆ ಬೆಂಡೋಲೆ,
ಅಲ್ಲಾ ಅಲ್ಲಾ ಅಲ್ಲಾ
ರೇಶಿಮೆ ಧಿರಿಸು
ಅಲ್ಲಾ ಅಲ್ಲಾ ಅಲ್ಲವೆ ಅಲ್ಲಾ
ಹೇಳಕ್ಕ ಬೇಗ ಹೇಳಕ್ಕ
ಕಾರ್ಡ್ ಸ್ವಾಮಿ ಜಾಬ್ ಕಾರ್ಡ್ ಸ್ವಾಮಿ । 2 ।

ಕೆಂಚ, ಬೋರ, ಕರಿಯ, ನಿಂಗ
ತಿಮ್ಮಿ, ನಾಗಿ, ಬೈರಿ, ಕೆಂಚಿ
ಎಲ್ಲರ ಜಾಬ್ ಕಾರ್ಡ್ ಇಲ್ಲಿವೆ
ಸೂಟ್‌ಕೇಸ್ ನಲ್ಲಿ ಸೇಪಾಗಿವೆ.

(ಮೇಳದವರು ಹ್ಹಾಂ . . . ಎಂದು ನೆಲಕ್ಕೊರಗುವರು )

ದಲ್ಲಾಳಿ : ಬಾಯಿಲ್ಲಿ ದೊಡ್ಡಕ್ಕ . ನೋಡು ಇದಾಗ 30% ನಂದು, ಇನ್ನು 20% ನಿಂದು.

ದೊಡ್ಡಕ್ಕ : ಏನೋ ಬಸಣ್ಣ ಒಟ್ಟಿನಲ್ಲಿ ನಮ್ಮ ವ್ಯವಹಾರ ಚೆನ್ನಾಗಿರ ಬೇಕು ಅಷ್ಟೆ.

ದಲ್ಲಾಳಿ : ಹಂಗಾರ ಇವರ್ನೆಲ್ಲಾ ಎಬ್ಸಿ ನಂಜೊತೆ ಕಳ್ಸು ಮತ್ತೆ.

ದೊಡ್ಡಕ್ಕ : ಏ, ಎದ್ದೇಳ್ರೋ ಮೇಲೆ. ಹ್ಹಾಂ! ನೋಡಪ್ಪ ಹೆಚ್ಚಿಗೆ ಕೂಲಿ ಬೇಕು ಅನ್ನೋರು ಬಸಣ್ಣನ ಜೊತೆ ಬೆಂಗ್ಳೂರಿಗೆ ಹೋಗ್ರಿ. ಇಲ್ಲೆ ನಂಜೊತೆ ಕಡಿಮೆ ಕೂಲಿಗೆ ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ ಕೆಲ್ಸ ಮಾಡ್ತೀವಿ ಅನ್ನೋರು ಇಲ್ಲೇ ಇರಿ.

ಗುಂಪು 1 : ಅಕ್ಕ ಹೆಚ್ಚೀಗೆ ಕೂಲಿ ಸಿಗುತ್ತೇ ಅಂದ್ರೆ ನಾನು ಹೊಗ್ತೀನಕ್ಕ. (ಅವನ ಜೊತೆ ಒಂದಷ್ಟು ಜನ ಹೋಗಲು ಅನುವಾಗುವರು)

ಗುಂಪು 2 : ನಾವು ಹೋಗಾಕ್ಕಿಲ್ಲ ಅಕ್ಕ, ಇಲ್ಲೇ ಉದ್ಯೋಗ ಖಾತ್ರಿ ಅಡಿ ಕೆಲ್ಸ ಮಾಡ್ಕೊಂಡು ನೆಮ್ಮದಿಯಾಗಿರ್ತೀವಿ. ಏ ಬರ್ರಲಾ ಹೋಗುವಾ ..

ದೊಡ್ಡಕ್ಕ : ಹೋಗ್ರಿ .. ಹೋಗ್ರೀ ... ಏನೋ ಊರಿಗೆ ಒಳ್ಳೇದಾಗ್ಲೀ ಅಂತ ಹೇಳಿದ್ರೆ .. ನಿಮ್ಮ್ ಹಣೆಬರಹ ಅನುಭವಿಸ್ಕಳಿ, ನೋಡ್ರಪ್ಪಾ ನೀವು ಬಸಣ್ಣ ಹೇಳ್ದಂಗೆ ಕೇಳ್ಬೇಕು. ಹುಷಾರು ಇನ್ನು ದಯಾಮಾಡ್ಸಿ ಎಲ್ರು.

ಹಿನ್ನಲೆ ಹಾಡು : ಕಾಯಾಕ ಮಾಡೋ ಕಾಯಾಕ

ಬೆಂಗ್ಳೂರಿಗ್ ಹೋಗ್‌ಬ್ಯಾಡ್ರಿ ಸಾಯಾಕ

(ದಲ್ಲಾಳಿ ಜನರನ್ನು ಕರೆದೊಯ್ಯುವ ಮಾರ್ಗದಲ್ಲಿ ಸಣ್ಣಕ್ಕ ಮತ್ತು ಗುಂಪು 2 ಎದುರಾಗುತ್ತದೆ)

ಸಣ್ಣಕ್ಕ : ಏನ್ರಣ್ಣ, ಎಲ್ರೂ ಗಂಟು ಮೂಟೆ ಕಟ್ಕಂಡು ಎಲ್ಲಿಗೊಂಟೀರಿ.

ಗುಂಪು 1 : ಅಕ್ಕ ಬೆಂಗ್ಳೂರಿಗೆ ದುಡಿಯಾಕ ಹೊಂಟೀವಿ.

ಸಣ್ಣಕ್ಕ : ನಮ್ಮೂರ್‍ನಾಗೆ ಕೆಲ್ಸ ಇರುವಾಗ ದುಡಿಯೋಕಂತ ಬೇರೆ ಊರಿಗ್ ಯಾಕ್ ಹೋಗ್ಬೇಕು.

ವ್ಯಕ್ತಿ 1 : ನಮ್ಮೂರ್‍ನಾಗೆ ದುಡಿಯೋಕ್ ಏನ್ ಕೆಲ್ಸ ಐತಕ್ಕ.

ಸಣ್ಣಕ್ಕ : ನಮ್ಮೂರ್‍ನಾಗೆ ಏನ್ ಕೆಲ್ಸ ಐತಿ ಅಂತ ಕೇಳ್ತಿಯಲ್ಲಣ್ಣ. ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಕೆರೆ ಹೂಳೆತ್ತೋದು. ಇಂಗು ಗುಂಡಿ ತೆಗೆಯೋದು, ಕೃಷಿ ಹೊಂಡ ತೆಗ್ಸೋದು, ರಸ್ತೆ ಕಾಮಗಾರಿ ಮಾಡೋದು ಇನ್ನೂ ಮೊದಲಾದ ಕೆಲ್ಸ ಅವೆ. ಇಷ್ಟೆಲ್ಲ ಸೌಲಭ್ಯವಿದ್ದು ಯಾಕಣ್ಣ ನಮ್ಮೂರು ಬಿಟ್ಟು ಹೋಗ್ಬೇಕು. ಎಲ್ರೂ ಕೈ ಜೋಡ್ಸಿ ಕೆಲಸ ಮಾಡಿದ್ರೇನೆ ನಮ್ಮೂರು ಅಭಿವೃದ್ಧಿಯಾಗೋದು.

ದಲ್ಲಾಳಿ : ಏ ಬರ್ರಲೇ . . . ಏನ್ ಮಾತಾಡ್ತಾ ನಿಂತುಬಿಟ್ರಿ.

ಸಣ್ಣಕ್ಕ : (ಸಿಟ್ಟಿನಿಂದ) ಏ ಮುಚ್ಚುಬಾಯಿ. ಇದಕ್ಕೂ ನಿನಗೂ ಸಂಬಂಧ ಇಲ್ಲ. ನಮ್ಮೂರ್ ಜನರ ಜೊತೆ ನಾನ್ ಮಾತಾಡ್ತೀನಿ. ನೋಡ್ರಣ್ಣಾ. . . ನಮ್ಮೂರ್‍ನಾಗೆ ಕೈ ತುಂಬಾ ಕೆಲ್ಸ ಇಟ್ಕಂಡು ಯಾಕಣ್ಣ ಹೋಗ್ತೀರಿ. ಇಲ್ಲೆ ಹೆಚ್ಗೆ ಕೂಲೀನೂ ಸಿಗ್ತದಲ್ಲ. ನೋಡ್ರಾಪ್ಪ ಯೋಚ್ನೆ ಮಾಡಿ.

ಗುಂಪು : ಸುಮ್ನಿರಕ್ಕ. ಇಲ್ಲಿ ಕೆಲ್ಸಕ್ಕೆ ಹೋದ್ರೆ ಆ ದೊಡ್ಡಕ್ಕ 50 ರೂಪಾಯಿ ಮಾತ್ರ ಕೊಡ್ತಾಳೆ.

ಸಣ್ಣಕ್ಕ : ಅಯ್ಯೋ ಏನ್ ಹೇಳ್ಲಿ ನಿಮ್ಮ್ ಬುದ್ಧಿಗೆ. ನಿಮ್ ಜಾಬ್ ಕಾರ್ಡ್‌ನೆಲ್ಲಾ ಇವ್ನ ಕೈಗೆ ಕೊಟ್ಟು ನಿಮ್ಮ ಹಕ್ಕು ಮತ್ತು ಕರ್ತವ್ಯ ಏನು ಅನ್ನೋದನ್ನೇ ಮರ್‍ತುಬಿಟ್ಟಿದ್ದೀರಲ್ಲಾ.

ಗುಂಪು : ಸಾಕು ಸುಮ್ನಿರಕ್ಕ. ನಾವು ಬೆಂಗ್ಳೂರಿಗ್ ಹೋಗೋದೇ ಅಂತ ನಿರ್ಧಾರ ಮಾಡ್ ಆಗ್ಯದೆ. ನಾವು ಹೋಗೋದೆ ಸೈ. (ಎಲ್ಲರೂ ಹೊರಡುವರು)

ಹಿನ್ನೆಲೆ ಹಾಡು : ಕಾಯಕ ಮಾಡೋ ಕಾಯಾಕ

ಬೆಂಗ್ಳೂರಿಗೋಗ್ಬೇಡ ಸಾಯಾಕ

ಸಣ್ಣಕ್ಕ : (ಗುಂಪು 2 ರ ಜನರಿಗೆ ) ಅಣ್ಣಾ ನಡೀರಿ ನಾವಾದ್ರೂ ನಮ್ಮೂರಿಗ್ ಬಂದಂತಹ ಉದ್ಯೋಗ ಖಾತ್ರಿ ಯೋಜನೆಯಲ್ಲಿ ದುಡಿಯೋಣ. ನಮ್ಮ ಹಳ್ಳೀಲೆ ನೆಮ್ಮದಿಯಾಗಿರೋಣ.

ಹಾಡು : ಗಾಂಧೀ ಮಹಾತ್ಮರ ಕನಸಿದೋ ಉದ್ಯೋಗ ಖಾತ್ರಿಯ ಬಳಸಿಕೊಳ್ಳಿರೋ (ಈ ಹಾಡು ಬರುತ್ತಿರುವಾಗ ಗುಂಪು ವಿವಿಧ ಕಾಮಗಾರಿಗಳನ್ನು ಮಾಡುತ್ತಿರುತ್ತದೆ)

(ಹಾಡು ಮುಗಿಯುತ್ತಿದ್ದಂಗೆ ಒಬ್ಬಳು ಮಹಿಳೆ ಚೀರಿ ಕೊಳ್ಳುವಳು)

ಮಹಿಳೆ : (ಮಗುವನ್ನು ಹುಡುಕುತ್ತಾ) ಅಯ್ಯೋ ... ನನ್ ಮಗು ಕಾಣ್ತಾ ಇಲ್ಲ, ಇಲ್ಲೇ ಆಡ್ತಾ ಇತ್ತು. ನನ್ ಮಗ ಕಾಣಿಸ್ತಿಲ್ಲ. ... ( ಗುಂಪಿನಿಂದ ಒಬ್ಬ ವ್ಯಕ್ತಿ ಬಂದು)

ವ್ಯಕ್ತಿ : ಅಕ್ಕೋ. . . ನಿನ್ ಮಗಾ ನೋಡಲ್ಲಿ ಆ ಮರದ ಕೆಳಗೆ ಆಡ್ತಾ ಐತೆ .

ಮಹಿಳೆ : ನಾನು ಇಲ್ಲೇ ನನ್ನ್ ಮಗುನ್ನ ಕೂರ್‍ಸೋಗ್ಬಿದ್ದೆ ಅಲ್ಲೆಂಗ್ ಹೋಯ್ತು.

| | | |
|---|---|---|
| ವ್ಯಕ್ತಿ | : | ಖಾತ್ರಿ ಯೋಜನೆ ಅಡಿ ಕೆಲ್ಸ ಮಾಡೋ ಜಾಗದಲ್ಲಿ ಐದು ಮಕ್ಳಿಗಿಂತ ಜಾಸ್ತಿ ಜನ ಇದ್ರೆ ಅವರನ್ನ ನೋಡ್ಕೊಳ್ಳೋಕೆ ಅಂತಾನೆ ಅವರಿಗೂ ನಮ್ಮಷ್ಟೇ ಕೂಲಿ ಕೊಟ್ಟು ನೇಮಕ ಮಾಡ್ಕೊಂಡಿರ್‍ತಾರೆ. ನಾನೆ ನಿನ್ನ ಮಗನ್ನ ಅಲ್ಲಿ ಬಿಟ್ಟು ಬಂದದ್ದು. ಹೋಗು ಕೆಲ್ಸ ನೋಡ್ಕೋಗು. |
| ಮಹಿಳೆ | : | ಅಬ್ಬಾ ! ನನಗೆ ಈಗ ಸಮಾಧಾನ ಆಯ್ತು ಅಕ್ಕ. . . . |
| ಹಾಡು | : | (ಗಾಂಧಿ ಮಹಾತ್ಮರ ಕನಸಿದೋ. . . ಮುಂದುವರಿದ ಭಾಗ)<br>(ಹಾಡು ಮುಗಿಯುತ್ತಿದ್ದಂತೆ ಸ್ಟೇಜಿನ ಮಧ್ಯಭಾಗದಲ್ಲಿ ದೊಡ್ಡಕ್ಕ ನೆಲದಲ್ಲಿ ತಲೆಬಾಗಿಸಿ ಕುಳಿತಿರುತ್ತಾಳೆ. ಅವಳ ಸುತ್ತಾ 4 ವಿಕಾರ ರೂಪ(ಆಕೃತಿ)ಗಳು ಕಿರುಚುತ್ತಾ ನರ್ತಿಸುತ್ತಿರುತ್ತವೆ.) |
| ದೊಡ್ಡಕ್ಕ | : | (ಜೋರಾಗಿ ಚೀರುತ್ತಾ) ಅಯ್ಯೋ. . . ಯಾರು ನೀವು? ನನ್ನನ್ನು ಯಾಕೆ ಹೀಗ್ ಹಿಂಸೆ ಮಾಡ್ತಿದೀರಿ. ಯಾಕ್ ಹಿಂಗ್ ಕಾಡ್ತೀಕ್ಕತ್ತೀರಿ. ನಾನು ಯಾವ ತಪ್ಪು ಮಾಡಿಲ್ಲ. ನನ್ನನ್ನು ಬಿಟ್ಬಿಡಿ.ನೀವೇನು ದೆವ್ವಾನೋ, ಭೂತಾನೋ ? |
| ಆಕೃತಿಗಳು | : | ಹೌದು ನಾವು ದೆವ್ವಾನೆ. ನಿನ್ನ ಮನಸಿನೊಳಗಿನ ದೆವ್ವಗಳು. |
| ದೊಡ್ಡಕ್ಕ | : | ಅಯ್ಯೋ.. ನನ್ನನ್ನು ಕ್ಷಮಿಸಿ. ತಪ್ಪು ಮಾಡ್ಬಿಟ್ಟೆ. ಆ ದಲ್ಲಾಳಿ ಜೊತೆ ಸೇರ್‍ಕೊಂಡು ಸಗಣಿ ತಿನ್ನೋ ಕೆಲ್ಸ ಮಾಡ್ಬಿಟ್ಟೆ. ತಪ್ಪಾಯ್ತು ನನ್ನನ್ನು ಬಿಟ್ಬಿಡಿ. ನನ್ನನ್ನು ಕ್ಷಮಿಸಿ ಬಿಡಿ. |
| ಆಕೃತಿಗಳು | : | ನಿನ್ನನ್ನು ಕ್ಷಮಿಸಬೇಕಾಗಿರೋದು ನಾವಲ್ಲ. ಈ ಊರಿನ ಜನಾನೆ ನಿನ್ನನ್ನು ಕ್ಷಮಿಸಬೇಕು. (ಎಂದು ಕಿರುಚುತ್ತಾ ನರ್ತಿಸುತ್ತಾ ನಿರ್ಗಮಿಸುತ್ತದೆ.) |
| ದೊಡ್ಡಕ್ಕ | : | ಹೌದು! ನನ್ನನ್ನು ಕ್ಷಮಿಸಿಬಿಡಿ. ದುಡ್ಡಿನ ಆಸೆಗೆ ಬಲಿಬಿದ್ದು ನಿಮಗೆಲ್ಲಾ ಅನ್ಯಾಯ ಮಾಡಿದೆ. ಇನ್ಯಾವತ್ತು ಇಂಥಾ ಕೆಲ್ಸ ಮಾಡಲ್ಲ, ನಿಮ್ಮ ಮನಿ ಮಗಳು ಅಂತ ತಿಳ್ಕೊಂಡು ಕ್ಷಮಿಸಿಬಿಡಿ. (ಹೋಗುತ್ತಾಳೆ) |

(ಸ್ಟೇಜಿನಲ್ಲಿ ಗುಂಪಾಗಿ ಕುಳಿತು ಎಲ್ಲಾರೂ ಚರ್ಚೆಮಾಡುತ್ತಿರುತ್ತಾರೆ. )

| | | |
|---|---|---|
| ವ್ಯಕ್ತಿ 1 | : | ಏ ನಿಂಗಣ್ಣಾ ಬಾ ಇಲ್ಲಿ ನೋಡು ನಾನು ಉದ್ಯೋಗ ಖಾತ್ರಿ ಯೋಜನೆಯಡಿ ಕೆಲ್ಸಕ್ಕೆ ಹೋಗಿದ್ರಿಂದ 20 ದಿನಕ್ಕೆ 2000 ಸಾವಿರ ದುಡ್ಡು ಕೊಟ್ಟಾರೆ. |
| ವ್ಯಕ್ತಿ 2 | : | ಹೌದು ಅಕ್ಕ. ನಾನು ಏಳು ದಿನ ಅಷ್ಟೆ ಕೆಲ್ಸಕ್ಕೆ ಹೋಗಿದ್ದು 700 ರೂಪಾಯಿ ಕೊಟ್ಟವ್ರೆ. |
| ವ್ಯಕ್ತಿ 3 | : | ಅಣ್ಣಾ ಇಲ್ಲಿ ಕೇಳ್ರೀಲ್ಲಿ. ನಾನು ಹತ್ತು ದಿನ ಅಷ್ಟೆ ಕೆಲ್ಸಕ್ಕೆ ಹೋಗಿದ್ದು. ಸಾವಿರ ರೂಪಾಯಿ ಕೊಟ್ಟಾರ. ಅಷ್ಟೆ ಅಲ್ಲಪ್ಪ, ಕೆಲ್ಸ ಮಾಡ ಟೈಮಲ್ಲಿ ಹುಷಾರ್ ಇಲ್ದಂಗಾಗಿತ್ತು. ಅವರೇ ಪುಕ್ಸಟ್ಟೆ ಔಷಧೀನೂ ಕೊಟ್ಟಿದ್ರಪ್ಪಾ. ಈಗ ಆರಾಮಾಗಿದ್ದೀನಿ. |
| ಮಹಿಳೆ 1 | : | ಅಣ್ಣಾ ತಗ್ಳಿ, ನಮ್ಮ ತೋಟದಲ್ಲೇ ಬೆಳೆದಿರೋ ಹಣ್ಣು. ನಾನು ನಮ್ಮ ತೋಟದಲ್ಲಿ ಉದ್ಯೋಗ ಖಾತ್ರಿ ಯೋಜನೆಯಡಿ ಕೃಷಿ ಹೊಂಡ ತೋಡ್ಸಿದ್ನಲ್ಲಾ ಅದರ ಪ್ರತಿಫಲಾನೆ ಇದು. ಅದರ ಮೊದಲ ಫಸಲು ಇದು. ಅದಕ್ಕೆ ಎಲ್ಲರಿಗೂ ಕೊಡೋಣ ಅಂತ ತಂದೆ. |
| ಮಹಿಳೆ 2 | : | ಅಕ್ಕ ನಾನುವೆ ಈ ಸಾರಿ ನಮ್ಮ ಎರಡೆಕ್ರೆ ಗದ್ದೇಲಿ ಕೃಷಿ ಹೊಂಡ ತೆಗ್ಸಿ ಬೆಳೆಬೆಳ್ದಿದ್ದೀನಿ.<br>(ಅಷ್ಟರಲ್ಲಿ ದೊಡ್ಡಕ್ಕ ಕೆಮ್ಮುತ್ತಾ ಬರುವಳು) |
| ಗುಂಪು | : | ಅಯ್ಯೋ. . . ದೊಡ್ಡಕ್ಕ . . . ನಮ್ಮವ್ವ ಕಣವ್ವ. ಮಾಡಬಾರದ್ದು ಮಾಡಿದ್ರೆ ಆಗಬಾರದ್ದು ಆಗುತ್ತೆ. ಥೂ . . . ನಿನ್ನ ಜನ್ಮಕಷ್ಟು. |

(ದೊಡ್ಡಕ್ಕನ ಹಿಂದೆ ಬೆಂಗಳೂರಿಗೆ ಹೋದವರು ತಲೆತಗ್ಗಿಸಿ ಬಂದು ನಿಂತಿರುವರು.)

| | | |
|---|---|---|
| ಗುಂಪು | : | ಅಲೇಲೇ. . . . ಇವರು ಯಾರಪ್ಪಾ, ತೋರ್‍ಸರಲಾ ನಿಮ್ಮ ಮುಖಾವ ಒಂದೀಟು. |
| ವ್ಯಕ್ತಿ 1 | : | ನಾನು ಅಣ್ಣಾ. |
| ಗುಂಪು | : | ಅಯ್ಯೋ . . . ಕೆಂಚಣ್ಣ ಇದೇನಿದು ಹಿಂಗೆ. ದೊಡ್ಡದಾಗಿ ಬೆಂಗಳೂರಿಗೆ ಹೋಗಿದ್ರಿ. ಈಗೇನಾತ್ರಪ್ಪಾ. |

ಕೆಂಚ : ಅಣ್ಣಾ, ಆ ದಲ್ಲಾಳಿ ನಮ್ಮನ್ನೆಲ್ಲಾ ಕರ್‍ಕೊಂಡ್ಹೋಗಿ ಚೆನ್ನಾಗಿ ದುಡಿಸ್ಕೊಂಡು ಸರಿಯಾಗಿ ದುಡ್ಡು ಕೊಡ್ದೆ ಮೋಸ ಮಾಡ್ಬಿಟ್ಟ ಕಣಣ್ಣಾ.

ಗುಂಪು : ಮುಖಾ ನೋಡು ಮುಖಾವ, ಹಸ್ಕಂಡು ತಿರ್ಕಂಡು ಬಂದವ್ರೆ ಬಾ ಬಾ ಬಾಳೆಹಣ್ಣ ತಿನ್ನ ಬನ್ನಿ. ನೋಡ್ರೋ ನಮ್ಮ ಸಣ್ಣಕ್ಕನ ದಯೆಯಿಂದ ನಾವು ನೆಮ್ದಿಯಾಗಿ ಬಾಳೆಹಣ್ಣು, ಮಾವಿನಹಣ್ಣ ಅಂತ ತಿನ್ಕಂಡು ನಾವು ಸಂತೋಷವಾಗಿದ್ದೀವಿ (ಅಷ್ಟರಲ್ಲಿ ಅಲ್ಲಿ ಪಿ.ಡಿ.ಓ. ಸಾಹೇಬರ ಆಗಮನ)

ಗುಂಪು : ಏ . . . . . ಸಾಹೇಬ್ರು ಬಂದ್ರು.

ವ್ಯಕ್ತಿ 1 : ಯಾಕ್ ಬಂದವ್ರಂತೆ ?

ವ್ಯಕ್ತಿ 2 : ಯಾಕ ಅಂದ್ರ . . . . ಇಲ್ ನಿಂತಳಲ್ಲಾ ಈ ದೊಡ್ಡಕ್ಕ ಊರು ಜನ್ರುದ್ದು ದುಡ್ಡು ತಿಂದವಳೆ ಅಂತ ಹಿಡ್ಕಂಡು ಹೋಗ್ಲಿಕ್ಕೆ ಬಂದಿರ್ಬೇಕು.

ದೊಡ್ಡಕ್ಕ : ಅಯ್ಯೋ. . . ಬುದ್ಧಿ. . . ಬುದ್ಧಿ. . . ನನ್ ಕ್ಷಮಿಸಿ ಬುಡಿ ಬುದ್ದಿ, ನನ್ನನ್ ಮಾತ್ರ ಹಿಡ್ಕಂಡ್ ಹೋಗ್ ಬ್ಯಾಡ್ರೀ ಬುದ್ಧಿ. ತಿಳಿದೆ ತಪ್ಪು ಮಾಡ್ಬಿಟ್ಟೆ . ನಿಮ್ಮ ಕಾಲಿಗ್ ಬೀಳ್ತೀನ್ ಬುದ್ಧಿ. ನಿಮ್ಮ ದಮ್ಮಯ್ಯ ಅಂತೀನಿ.

ಸಾಹೇಬ್ರು : ಯಾಕಮ್ಮಾ ಏನಾಯ್ತು ? ಏಳು ಮೇಲೆ. ಯಾಕೆ ಹೀಗೆ ಗಾಬರಿ ಆಗಿದ್ದೀಯಾ ? ಅಲ್ಲ ನಾನೇಕ್ ನಿನ್ನನ್ನ ಹಿಡ್ಕೊಂಡ್ ಹೋಗ್ಲಿ ?

ದೊಡ್ಡಕ್ಕ : ಸ್ವಾಮಿ, ನಾನು ಈ ಊರು ಜನರ ದುಡ್ಡು ತಿಂದೆ ಅಂತ, ನನ್ನನ್ನು ಜೈಲಿಗೆ ಕರ್ಕಂಡು ಹೋಗ್ತಾರೆ ಅಂತ ಇವರೆಲ್ಲಾ ಮಾತಾಡ್ತೌರೆ ತಪ್ಪಾಯ್ತು ಸಾಮಿ . ಕ್ಷಮಿಸಿ ಬಿಡಿ.

ಸಾಹೇಬ್ರು : ಛೇ. . . ಛೇ. . ಹಾಗೇನಿಲ್ಲಮ್ಮ. ನಾನು ನಿಮ್ಮನ್ನು ಹಿಡ್ಕೊಂಡು ಹೋಗ್ಲಿಕ್ಕೆ ಬಂದಿಲ್ಲ. ನಾನು ಪೋಲಿಸ್ನೋನು ಅಲ್ಲ. ನಾನು ಜಿಲ್ಲಾ ಪಂಚಾಯತ್ ವತಿಯಿಂದ ಈ ಹಳ್ಳೀಲಿ ಉದ್ಯೋಗ ಖಾತ್ರಿ ಯೋಜನೆ ಅಡಿ ಕೆಲ್ಸ ಹೇಗಾಗ್ತಾ ಇದೆ ಅಂತ ನೋಡ್ಕೊಂಡು ಹೋಗೋಣ ಅಂತ ಬಂದಿದೀನಿ ಅಷ್ಟೆ. ಹೌದು ..... ಇಲ್ಲಿ ಸಣ್ಣಕ್ಕ ಅಂದ್ರೆ ಯಾರು ?

ಗುಂಪು : ಓಹೋ. . . ನಮ್ಮ್ ಸಣ್ಣಕ್ಕ . . ಇಲ್ಲಿ ನಿಂತವ್ಳಲ್ಲಾ ಸ್ವಾಮಿ ಈ ದೊಡ್ಡಕ್ಕನ ತಂಗೀನೆ ನಮ್ಮ ಸಣ್ಣಕ್ಕ. ಅಕಾ. . . ., ನಮ್ಮ ಸಣ್ಣಕ್ಕನೆ ಬಂದ್ರು,

ಸಾಹೇಬ್ರು : ನಮಸ್ಕಾರ ಸಣ್ಣಕ್ಕ.

ಸಣ್ಣಕ್ಕ : ನಮಸ್ಕಾರ ಸಾಹೇಬ್ರಿಗೆ.

ಸಾಹೇಬ್ರು : ನೀವೇನ ಸಣ್ಣಕ್ಕ . ನೋಡಪ್ಪಾ, ಈ ಸಣ್ಣಕ್ಕನ ತರ ಒಂದೊಂದು ಹಳ್ಳೀಗೂ ಓರ್ವ ಆದರ್ಶ ಮಹಿಳೆ ಇರ್ಬೇಕು. ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಬರುವಂತಹ ಎಲ್ಲಾ ತರದ ಕೆಲಸಗಳನ್ನು ಬಹಳ ಅಚ್ಚುಕಟ್ಟಾಗಿ ನಿರ್ವಹಿಸಿ ಈ ಊರನ್ನೇ ಒಂದು ಮಾದರಿ ಹಳ್ಳಿಯನ್ನಾಗಿ ಮಾಡಿದ್ದಾಳೆ. ಇವರ ಈ ಸಾಧನೆ ಕಂಡು ಸರ್ಕಾರದಿಂದ ಮುಂದಿನ ತಿಂಗಳು ಸನ್ಮಾನ ಇಟ್ಕೊಂಡಿದ್ದಾರೆ.

(ಗುಂಪು ಹೇ. . ಎಂದು ಕೇಕೆ ಹಾಕುತ್ತಾ ಕುಣಿದಾಡುವರು)

ಸೆಕ್ರೆಟರಿ : ಸಾಹೇಬ್ರೇ, ಈಕೆ ಸಾಮಾಜಿಕ ಲೆಕ್ಕ ಪರಿಶೋಧನಾ ಸಮಿತಿಯೊಳಗ ಓರ್ವ ಸದಸ್ಯೆನೂ ಕೂಡ ಹೌದ್ರಿ.

ಸಾಹೇಬ್ರು :– ಹೌದೆನಮ್ಮ, ಸಂತೋಷ.

ದೊಡ್ಡಕ್ಕ :– ಸಣ್ಣಕ್ಕ ನೀನು ಸಣ್ಣಕ್ಕ ಅಂತ ಹೆಸ್ರಿಟ್ಕೊಂಡು ಊರಿಗೆ ದೊಡ್ಡಕ್ಕ ಆಗ್ಬಿಟ್ಟೆ ತಾಯಿ. ನಾನು ತಪ್ಪ್ ಮಾಡ್ಬಿಟ್ಟೆ ಕ್ಷಮಿಸಿ ಬಿಡವ್ವ.

ಸಣ್ಣಕ್ಕ :– ಅಕ್ಕ .. ಹಾಗೆ ಹೇಳಬೇಡ ಅಕ್ಕ, ನಿನ್ನ ತಪ್ಪಿನ ಅರಿವು ನಿನಗಾಯ್ತಲ್ಲ ಅಷ್ಟು ಸಾಕು.

( ಅಕ್ಕ ತಂಗಿ ಇಬ್ಬರೂ ತಬ್ಬಿಕೊಳ್ಳುವರು )

ಹಾಡು :– ಅಕ್ಕಾ ಮಾಡೆ ಕಾಯಕ
ಓ ಅಣ್ಣಾ ಮಾಡೇ ಕಾಯಕ

* * *

# ಕಲ್ಯಾಣದ ಕನಸು

– ಡಾ|| ಟಿ.ಎಸ್. ವಿವೇಕಾನಂದ

## ದೃಶ್ಯ – 1

(ಶಿವನ ಪ್ರವೇಶ)

ಶಿವ : ಭೂಮಿ ಸತ್ತಿದೆ ಬಡವರು ಸಾಯುತ್ತಿದ್ದಾರೆ.

(ವೀರಗಾಸೆಯವರ ಪ್ರವೇಶ ಮತ್ತು ಕುಣಿತ)

ವೀರಗಾಸೆ 1 : ಅಹಹಹಾ ರುದ್ರ. ಹಿಂದೆ ನಮ್ಮ ಶಿವ, ನಮ್ಮ ಬಡವರ ಶಿವ ದಕ್ಷನ ಮಗಳಾದ ದಾಕ್ಷಾಯಿಣಿಯನ್ನು ಮದುವೆಯಾದನು. ಆ ನಂತರದಲ್ಲಿ ದಕ್ಷನ ಮಹತ್ತರವಾದ ದಕ್ಷಯಜ್ಞವನ್ನು ಏರ್ಪಡಿಸಿದನು. ಆ ದಕ್ಷಯಜ್ಞಕ್ಕೆ ನಮ್ಮ ಶಿವನಿಗೆ ಆಹ್ವಾನ ಕೊಡಲಿಲ್ಲ. ಮಗಳಾದ ದಾಕ್ಷಾಯಿಣಿಯನ್ನು ಕರೆಯಲಿಲ್ಲ. ಈ ಅವಮಾನವನ್ನು ಸಹಿಸಲಾರದ ದಾಕ್ಷಾಯಿಣಿಯು ದಕ್ಷನ ಆಸ್ಥಾನದಲ್ಲಿ ಯಜ್ಞಕುಂಡಕ್ಕೆ ಹಾರು ಪ್ರಾಣ ತ್ಯಾಗ ಮಾಡಿದಳು.. .. .. .. ..

ಶಿವ : ನಿಲ್ಸಿ ನಿಮ್ ಕಥೇನ. ಹಿಂದೆ ಆಗಿಹೋದ, ಗತಿಸಿಹೋದ, ಮುಗಿದುಹೋದ ಕಥೆಗಳೆಲ್ಲಾ ಬೇಕಾಗಿಲ್ಲ ಈಗ. ಈಗಿನ ಜನಕ್ಕೆ ಬೇಕಾಗಿರೋದು ಈಗಿನ ಕಾಲದ್ ಕಥೆ. ಹಸಿವಿನ ಕಥೆ ಹೇಳಿ. ದುಡಿಯುವ ಕೈಗೆ ಕೆಲಸ ಕೊಡೋ ಕಥೆ ಹೇಳಿ. ಬಡತನವನ್ನ ಓಡಿಸೋ ಕತೆ ಹೇಳಿ. ಇಂಥ ಕತೆ ಹೇಳಿ ಹಳ್ಳಿಹಳ್ಳಿಯಲ್ಲಿ ಜಾಗೃತಿ ಮೂಡಿಸಿ. ಮುಂದಿನ ಹಳ್ಳಿಗೆ ಹೋಗಿ ಈಗ.

(ಯಾಕೆ ಈ ಕಣ್ಣೀರು ಹಾಡು. ಎಲ್ಲರ ಪ್ರವೇಶ)

## ದೃಶ್ಯ – 1

ವೀರಗಾಸೆ 1 : ಅಲ್ವಲಾ ದೇಶದ್ ತುಂಬಾ ಉದ್ಯೋಗ ಖಾತ್ರಿ ಯೋಜನೆ ಬಂದು ಬಡಬಗ್ಗರಿಗೆಲ್ಲಾ ಕೈತುಂಬಾ ಕೂಲಿ ನಾಲಿ ಸಿಕ್ಕೋವಾಗ್ ಈ ಬಡವರಿಗೇನ್ಲಾ ಧಾಡಿ ? ವರ್ಷಕ್ಕೆ ನೂರು ದಿನಾ ಅಂತೂ ಕೂಲಿ ಗ್ಯಾರಂಟಿ ಅಲ್ವೇನಪ್ಪಾ . . . . ? ಯಾವಾಗ ಬೇರೆ ಕೆಲ್ಸ ಇರಲ್ವೋ ಆವಾಗ ಈ ಕೂಲಿ ಮಾಡಿದ್ರಾಯ್ತು.

ವೀರಗಾಸೆ 2 : ಹೌದಲ್ವೇನ್ಲಾ ? ಆದ್ರೂ ಯಾಕ್ ಈ ಹಳ್ಳಿ ಹಿಂಗೈತೆ ?

ವೀರಗಾಸೆ 1 : ಎಂಗೈತೆ . . . . ?

ವೀರಗಾಸೆ 2 : ಸೋಂಭೇರಿ ಸಂತೆ ಇದ್ದಂಗೈತೆ !

ವೀರಗಾಸೆ 1 : ಏ . . . . ತಗಾ . . . . ಸುಮ್ ಸುಮ್ಮನೆ ಯಾಕೆ ಅಂದೀಯಾ ? ಅವ್ರಿಗೆ ಗೊತ್ತೋ ಇಲ್ವೋ ? ಯಾರಿಗ್ ಗೊತ್ತು?

ವೀರಗಾಸೆ 2 : ಸರಿಯಾಗಂದೆ . . . . ನಿನ್ನ ಮುಸುಡಿ ಇದ್ದಂಗೆ. ಅಲ್ವಲಾ ಈ ಕಾಲ್ದಾಗೆ ಇಂಥಾ ಪ್ಲಾನ್ ತಿಳಿದೇ ಇರೋಂತ ಮಂದಿ ಇದ್ದಾರೇನ್ಲಾ ? ಅದೇನೋ ಹೇಳ್ತಾರಲ್ಲಾ . . . . 'ಜಗ ತೂಗೋರ್ಗೆ ಮಗಾ ತೂಗಾಕೆ ಬರಾಲ್ಲ' ಅಂತಾ, ಅಂಗಾತು.

ವೀರಗಾಸೆ 1 : ಏ . . . . ತಗಾ ಯಾರೇನಾನ ಮಾಡ್ಕಳ್ಳಿ. ನಮ್ಮ ಸ್ಥಿತಿ ಹೇಳು ?

ವೀರಗಾಸೆ 2 : ನಿನ್ದೇನ್ಲಾ ಸ್ಥಿತಿ . . . . ? ನಿಂಗೇನಾಯ್ತು ?

ವೀರಗಾಸೆ 1 : ಏ . . . . ತಗಾ . . . . ಈ ಯೋಜನೆ ಗೊತ್ತಿರೋ ಹಳ್ಳಿಗೋದ್ರೆ ಜನ ಎಲ್ಲಾ ಕೂಲಿಗೋಗಿರ್ತಾರೆ, ನಮ್ಮ ಕರೆಸಿ ಆಟ ಆಡಿಸೋರಿಲ್ಲ. ಇಂಥ ಹಳ್ಳಿಗೆ ಬಂದ್ರೆ ಇವ್ರಿಗೆ ಯೋಜನೇನೇ ಗೊತ್ತಿಲ್ಲಾ ಅಂತಿದ್ದೀಯಾ ! ಇಲ್ಲಿ ಆಟಕ್ಕೆ ಕರೆಯೋರು ಇಲ್ಲ. ಇದನ್ನ ಏನಂತೀಯಾ ? ಜನಾನೇ ನಂಬಿಕೊಂಡು ಬದುಕೋ ನಮ್ಮ ಕಲೆಯ ಕತೆ ಏನು ಅಂತಾ ? ಕಲಿತ ವಿದ್ಯೇನಾ ಹತ್ತು ಜನ್ರ ಮುಂದೆ ತೋರಿಸಿದ್ರಾ ಎಲ್ರಿಗೂ ಸಂತೋಷ ಆಗೋಲ್ವಾ ?

ವೀರಗಾಸೆ 2 : ಅರೆರೆರೆ . . . . ಏನ್ಲಾ ಮುಂದಾಲೋಚನೆ ನಿಂದು ? ವೀರಗಾಸೆ ಬದುಕುತ್ತಾ ಬಿಡ್ಲಾ . . . ., ನಿನ್ನಂಗೇ ಯೋಚ್ನೆ ಮಾಡಿದ್ರೆ ಅದು ಸಾಯೋಕಿಲ್ಲ ಬಿಡ್ಲಾ . . . . ?

ನೀನು ಹೇಳೋದೇನೋ ಸರಿ, ಆದ್ರೆ ನಾವು ಭಗವಂತನ ಗೌರಿಸೋರು, ಜನರ ಕಷ್ಟ ಸುಖನು ಗೌರವಿಸ್ಬೇಕು ತಾನೇ ?!

ವೀರಗಾಸೆ 1 : ಗೌರವಿಸ್ಬೇಕಪ್ಪಾ. ಹಾಗಿದ್ರೆ ಮುಂದಿನ ಊರಿಗೆ ಹೋಗೋಣ.

ವೀರಗಾಸೆ 2 : ಏ ಅಜ್ಜಾ ಏ ಆಜ್ಜಾ ನಿನ್ನನ್ನೇ ಕೂಗಿದ್ದು. ಇ ಹೆಣ್ಣುಮಕ್ಕಳೇಕೆ ಹೀಗೆ ತಲೆ ಮೇಲೆ ಕೈಹೊತ್ತು ಕೂತರ? ಇವ್ರ ಗಂಡ ಬಿಟ್ಟು ಓಡಿ ಹೋದ್ನ ಅಂತ. ಅಥವಾ ದೆವ್ವ ಮೆಟ್ಕೊಂಡ್ಯೆತಾ?

ಮುದುಕ : ಅಂಥದ್ದೇನಿಲ್ಲಪ್ಪಾ. ಅದ್ನ ಹೇಳಿದ್ರು ನೀನೇನ್ ಆರಿಸೋನ ತೀರಿಸೋನ?

ವೀರಗಾಸೆ 2 : ಆರಿಸೋದು ತೀರಿಸೋದು ಹಾಗಿರ್‍ಲಿ ಮೊದ್ಲು ಏನಾಗ್ಯೆತೆ ಅಂತ ಹೇಳು.

ಮುದುಕ : ಈ ಮಂದಿಗೆ ದುಡಿಬೇಕಂದ್ರೆ ಕೆಲ್ಸ ಇಲ್ಲ. ಕೆಲ್ಸ ಇಲ್ಲ ಅಂದ್ರೆ ಕೂಲಿ ಇಲ್ಲ. ಕೂಲಿ ಇಲ್ಲ ಅಂದ್ರೆ ಹೊಟ್ಟೆಗೆ ಹಿಟ್ಟಿಲ್ಲ. ಮಳೆ ಬಂದು 2ವರ್ಷ ಆಯ್ತು. ಬರಗಾಲ ಬೇರೆ. ಹೊಟ್ಟೆ ಹಸಿವಪ್ಪ. ಹಸಿವು.

ವೀರಗಾಸೆ 2 : ಏ . . . . ಅಹಹಾ ರುದ್ರ . . . . ಅಹಹಾ ದೇವಾ . . . .

ವೀರಗಾಸೆ 1 : ಊರಾದಿ ಊರು, ಕೇರ್‍ಯಾದಿ ಕೇರಿ, ಮನೆಯಾದಿ ಮನೆಯಾಗಿರೋ ಜನವೆಲ್ಲಾ ಜೇನು ನೊಣ ನೆರ್‍ದಂಗೆ ನೆರೆದ್ರೆ . . . . ನಾವೊಂದು ಕಥೀ ಹೇಳ್ತೀವಿ. ಕಲ್ಯಾಣದ ಕಥೆ . . . .

**ಕುಣಿತ . . . .**

ವೀರಗಾಸೆ 2 : (ಕುಣಿತ ನಂತರ) ಭಾರತವೆಂಬೋ ಭಾರತದೇಶದೊಳಗೆ ವಾಸವಾಗಿರತಕ್ಕ ಜನ ಅಂಬೋ ಜನ ಸದಾ ಹಸಿರಾಗಿ ಬದುಕ್ಲೀ ಅಂತಾ ಬಾಬಾ ಸಾಹೇಬ ಅಂಬೇಡ್ಕರ್ ಅನ್ನೋ ಮನುಷ್ಯ ಸಂವಿಧಾನ ಅಂತಾ ಒಂದು ಬರೆದಿದ್ದಾನಪ್ಪಾ. **ಕುಣಿತ** . . . . (ಮುಂದಿನ ಕತೆಯುದ್ದಕ್ಕೂ ಅಗತ್ಯವಿರುವ ಕಡೆ ಅಹಹಾ . . . . ರುದ್ರ . . . ., ಅಹಹಾ ದೇವ . . . . ಎಂಬ ಪಲ್ಲವಿಯನ್ನು ಹೇಳುತ್ತಾ . . . . ಸಂಭಾಷಣೆಗಳನ್ನು ವೀರಗಾಸೆ ಶೈಲಿಯಲ್ಲಿ ಪ್ರಸ್ತುತ ಪಡಿಸಬಹುದು, ಕುಣಿತ ಆಟದ ಲಯಕ್ಕೆ ಬಿಟ್ಟಿದ್ದು)

ವೀರಗಾಸೆ 1 : ಅಹಹಾ . . . . ರುದ್ರ . . . . ಏನಂತಾ ಬರೆದಾನು . . . . ಯಾಕಂತಾ ಬರೆದಾನು ?

ವೀರಗಾಸೆ 2 : ಅಹಹಾ . . . . ದೇವ . . . . ಅದಕ್ಕೆ ನಾನಾ ಉತ್ತರ ಹೇಳ್ತೀನಿ . . . . !

ವೀರಗಾಸೆ 1 : ಆಹಹಾ . . . . ರುದ್ರ . . . . ಯಾರು ಹೇಳಿದ್ರೇನ. ಉತ್ತರ ಚಲೋ ಇದ್ರ ಆತ.

**ಕುಣಿತ . . . .**

ವೀರಗಾಸೆ 2 : ಅಹಹಾ . . . . ದೇವ . . . . ಬಾಬಾ ಸಾಹೇಬರು ಬರೆದಂಥ ಸಂವಿಧಾನದಾಗ ಈ ಭಾರತ ಭೂಮೀಲಿ ಹುಟ್ಟೋ ಎಲ್ರೂ ಸಮಾನ್ರೂ, ಈ ಸಮಾನ ಜನರಿಂದ, ಜನರಿಗಾಗಿ, ಜನರಿಗೋಸ್ಕರ ಇರೋ ಅಂತಾ ದೇಶದಲ್ಲಿ ಆಡಳಿತ ಮಾಡೋಂತಾ ಸರ್ಕಾರ ಸಕಲ ಜನರ ಯೋಗಕ್ಷೇಮ ನೋಡ್ಕೋಬೇಕು ಅಂತಾ ಬರೆದು ಬಿಟ್ರು.

ವೀರಗಾಸೆ 1 : ಅಹಹಾ . . . . ರುದ್ರ . . . . ಯೋಗಕ್ಷೇ ಅಂದ್ರೆ . . . . ಸರ್ಕಾರ ಅನ್ನೋದು ಜನರ ಮನೆ ಬಾಗ್ಲಿಗೆ ಹೋಗಿ . . . . ನೀ ಚಲೋ ಇದ್ದೀ ? ನಿಂಗ ಬ್ಯಾನಿ ಬಂದದಾ ? ನಿನ್ನ ಮಗಳ ಮದ್ವಿ ಮಾಡ್ದಿ ? ನೀ ಉಂಡ್ಯಾ . . . . ನೀ ತಿಂದ್ಯಾ . . . . ಅಂತಾ ಕೇಳೋ ಅಂತಾದ್ದೇನಪ್ಪಾ ?

ವೀರಗಾಸೆ 2 : ಅಯ್ಯೋ ತಿಳಿಗೇಡಿ ಭದ್ರಾ . . . . ಸಮುದ್ರದ ನೀರ್‍ನಾ ಸಿಹಿ ನೀರು ಮಾಡೊ ಮಾತಾಡ್ತಿದ್ದೀ ನೀನು. ವಿಷಯ ಅಂಗಲ್ಲಾ ತಿಳ್ಕೋ . . . . ! ಸಂವಿಧಾನ ಹೇಳ್ತದ ನಮ್ಮದು 'ಕಲ್ಯಾಣ ರಾಜ್ಯ' ಅಂತಾ.

ವೀರಗಾಸೆ 1 : ಅಹಹಾ . . . . ರುದ್ರ . . . . ಬಸವಕಲ್ಯಾ ನಾವು ಕಂಡಿಲ್ವಾ ! ಅಲ್ಲಿ ರಾಜ್ಯ ಎಲ್ಲಿದ್ದಾತು ? ಕಲ್ಯಾಣಿ ಎಲ್ಲಿದ್ದಾತು ?

ವೀರಗಾಸೆ 2 : ಅಯ್ಯೋ ತಿಳಿಗೇಡು ಭದ್ರಾ . . . . ಕಲ್ಯಾಣ ರಾಜ್ಯ ಅಂದ್ರೆ ದೇಶದಲ್ಲಿರೋ ಪ್ರಜೆಗಳ ಹಸಿವು, ಆರೋಗ್ಯ, ಆತ್ಮ ಗೌರವಗಳನ್ನು ಕಾಪಾಡ್ತಾ ಅವರ್‍ನ ಉಳಿಸಿ, ಬೆಳೆಸೋದು ಅಂತಾ ಅರ್ಥ.

**ಕುಣಿತ . . . .**

ವೀರಗಾಸೆ 1 : ಏ . . . . ತಗಾ, ಹಸಿದುಕೊಂಡಿರೋರು ನಮ್ಮ ಕಣ್ಣೆದ್ರಿಗೇ ಬಿದ್ದು ಒದ್ದಾಡ್ತಾ ಇರೋವಾಗ . . . . ಕಲ್ಯಾಣವಂತೆ ! ರಾಜ್ಯವಂತೆ . . . . ! ಎಲ್ಲೈತಪ್ಪಾ ಅದು ?

ವೀರಗಾಸೆ 2 : ಅಯ್ಯೋ ತಿಳಿಗೇಡು ಭದ್ರಾ . . . . ಕಲ್ಯಾಣ ರಾಜ್ಯ ಇಲ್ಲೇ ಐತಿ ! ಇಲ್ಲೀ ಜನಕ್ಕೆ ಸರ್ಕಾರದ ಯೋಜನೆ ಬಗ್ಗೇನೇ ತಿಳಿದಿಲ್ಲ ಅಂದ್ರೆ ಯಾರೇನು ಮಾಡಾಕಾಗುತ್ತೆ ?!

ವೀರಗಾಸೆ 1 : ಅಹಹಾ . . . . ರುದ್ರ . . . . ನಮಗೇನು ತಿಳಿದಿಲ್ಲ ಹೇಳು ? ನಿನ್ನ ಕಲ್ಯಾಣ ರಾಜ್ಯದ ಕಲ್ಯಾಣ ಗುಣ. ನೂರು ಜನ ಹಸಿದೋರ್ಮೆಲೆ ಮೂರು ಜನ ಸಿರಿವಂತರಿರೋ ದೇಶ. ಕರ್ಪಷನ್ನು ಅನ್ನೋ ಕತ್ತಿ ಮೇಲೆ ಬಡವರ್ನ ನಿಲ್ಸಿ, ಇಂಚಿಂಚಾಗಿ ಪಾದ ಕತ್ತರಿಸೋ ದೇಶ. ಮಾಡೋರಿಗೆ ಕೆಲ್ಸ ಇಲ್ದೆ, ಬದುಕೋರಿಗೆ ಸೂರಿಲ್ದೆ, ಬೀದಿ ಬೀದೀಲಿ ಜನ ಮಲ್ಗೋ ಅಂತಾ ದೇಶ . . . . ವಗೈರೆ ವಗೈರೆ ಅಂತಾ . . . . !!

ವೀರಗಾಸೆ 2 : ಅಯ್ಯೋ ತಿಳಿಗೇಡು ಭದ್ರಾ . . . . ನೀನು ಈ ದೇಶಾನಾ ತುಂಬಾ ಹಳತಾಗಿ ತಿಳಕೊಂಡಿದ್ದೀ. ದೇಶದ ಇತ್ತೀಚಿನ ನಡವಳಿಕೆ ನಿನಗೆ ತಿಳಿದೇ ಇಲ್ಲಾ ಬಿಡು.

ವೀರಗಾಸೆ 1 : ಏ . . . . ತಗಾ, ನೂರು ವರ್ಷ ಮಾಡದಿದ್ದೋನು, ಮೂರು ವರ್ಷದಾಗೆ ಏನ್ ಮಾಡ್ಯಾನು ?

ವೀರಗಾಸೆ 2 : ಅಯ್ಯೋ ತಿಳಿಗೇಡು ಭದ್ರಾ ತಿಳ್ಕೋ . . . . 2005ರಲ್ಲಿ ಕೇಂದ್ರ ಸರ್ಕಾರ 'ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ' ಅಂತಾ ಜಾರಿಗೆ ತಂತು.

ವೀರಗಾಸೆ 1 : ಅಹಹಾ . . . . ರುದ್ರ . . . . ಅದೇನೇನು ಹೇಳ್ತೀಯೋ ? ನಮಗಾ ನೀ ಹೇಳಿದ್ರಲ್ಲಿ ಗಾಂಧಿ ಮಹಾತ್ಮ ಗೊತ್ತು, ರಾಷ್ಟ್ರ ಗೊತ್ತು, ಯೋಜನಾ ಗೊತ್ತು . . . . ಆದ್ರೆ ಅದೇನೋ ಅಂದ್ಯಲ್ಲ . . . . ಖಾತ್ರಿ . . . .! ಈ ಖಾತ್ರಿ ಪಾತ್ರಿ ಗೊತ್ತಿಲ್ಲ ನೋಡು. ಸರ್ಕಾರಿ ಭಾಷೆಯಾಗ ನಾವೆಂದೂ ಇದನ್ನ ಕೇಳಿದ್ದಿಲ್ಲ.

ವೀರಗಾಸೆ 2 : ಅಯ್ಯೋ ತಿಳಿಗೇಡು ಭದ್ರಾ ತಿಳ್ಕೋ . . . . ಅದಾ ಈ ಯೋಜನೆಯ ಆತ್ಮ. ಮೊದ್ಲು ಬಡಬಗ್ಗರಿಗೆ ಉದ್ಯೋಗ ಒದಗಿಸ್ಬೇಕು ಅಂತಾ ಇತ್ತು. ಸರ್ಕಾರಾನೂ ಅದನ್ನೂ ಇದನ್ನೂ ಮಾಡಿ ನೋಡ್ತು . . . . ಐವತ್ತು ವರ್ಷ ಕಳದ್ರೂ ಗಿಟ್ಲಿಲ್ಲ ನೋಡು. ಅದಕ್ಕೆ ಬೇರೆ ಥರಾ ಯೋಚ್ನಾ ಮಾಡಿ ಉದ್ಯೋಗದ ಹಕ್ಕನ್ನು ಖಾತ್ರಿ ಮಾಡಿ ಕಾನೂನು ತಂತು ನೋಡು.

ವೀರಗಾಸೆ 1 : ಅಹಹಾ . . . . ರುದ್ರ . . . . ಯಾವ ಕಾನೂನು ತಂದ್ರೇನು ? ಎಲ್ಲಾ ಅಂಗೇಯಾ ! ಈ ಕಾಯ್ದೆ ಏನು ಮಾಡ್ಯಾತೇಳು ? ಇಂಥವು ಎಷ್ಟಿಲ್ಲ ?

ವೀರಗಾಸೆ 2 : ಅಯ್ಯೋ ತಿಳಿಗೇಡಿ ಭದ್ರಾ . . . . ಅದಾ ನೋಡು ನೀ ತಿಳಿದಿರೋ ತಪ್ಪು. ಇದು ಅಂತಿಂಥಾ ಕಾಯಿದೀ ಅಲ್ಲ. ಯಾರಾದ್ರೂ ಒಬ್ಬ ಕೂಲಿ ಕೆಲಸದ ಅಗತ್ಯ ಇರೋನು ಹೋಗಿ 'ನನಗ ಕೆಲ್ಸ ಬೇಕು' ಅಂದ್ರಾ . . . ಕೆಲ್ಸ ಕೊಡ್ಲೇಬೇಕು ನೋಡಾ ! ಕೆಲ್ಸ ಕೊಡಿಲ್ಲಾ ಅಂದ್ರ ನಿರುದ್ಯೋಗ ಭತ್ಯ ಕೊಡ್ಬೇಕು ನೋಡಾ ! ಅಂಥಾ ಕಾಯಿದೆ. ಈ ದೇಶದಲ್ಲಿರೋ ಯಾವ ಪ್ರಜೆ ಆದ್ರೂ ಸರಿ, ಅವ್ರು ಕೂಲಿ ಪಡೀಬೌದು.

ವೀರಗಾಸೆ 1 : ಅಯ್ಯೋ ಶಿವಾದಿ ಶಿವ ರುದ್ರಾ . . . . (ಮೂರ್ಛೆ ಬೀಳುವವನಂತೆ ನಟಿಸುತ್ತಾ) ಅಲ್ಲಲೇ ತಿಳಿಗೇಡಿ ನೀನು ಯಾವ ದೇಶದ ಕತಿ ಹೇಳಕ್ಕತ್ಯಲೇ ?

ವೀರಗಾಸೆ 2 : ಅಯ್ಯೋ ಬುದ್ಧಿಗೇಡಿ . . . . ನಾನು ನಮ್ಮದಾ ದೇಶದ ಕತಿನೇ ಹೇಳಾಕತ್ತೀನಿ.

**ಕುಣಿತ . . . .**

ಮುದುಕ : ನಮ್ಮದಾ ದೇಶದ ಕತಿ ಹೇಳಿಕತ್ತೀಯಲ್ಲಾ ? ಬಾ . . . . ನನಗೆ ಈಗ ಕೂಲಿ ಅಗತ್ಯಾ ಅದ. ಕೊಡಿಸು ಬಾ . . . . !!

ವೀರಗಾಸೆ 2 : ಕೊಡಸ್ತೀನಿ . . . . ! ಆದ್ರಾ . . . . ಮೊದಲೇಳು, ನೀನು ಈ ಪಂಚಾಯ್ತಿ ವ್ಯಾಪ್ತಿಯಲ್ಲಿರೋ ಮತದಾರ್ನಾ ?

ಮುದುಕ : ಅಲ್ಲಾ . . . . ನಾನು ಪಕ್ಕದ ಪಂಚಾಯ್ತಿಯೋನು.

ವೀರಗಾಸೆ 2 : ಹಾಗಾದ್ರೆ ನೀನು ನಿಮ್ಮ ಪಂಚಾಯ್ತಿ ಒಳಗ ಅರ್ಜಿ ಸಲ್ಲಿಸು. ಈಗ ಈ ಪಂಚಾಯ್ತಿ ವ್ಯಾಪ್ತಿಲಿರೋ ಯಾರ್ನಾದ್ರೂ ಮುಂದಕ್ಕೆ ಕರೆ. (ಕರೆದುಕೊಂಡು ಬರುತ್ತಾನೆ)

ವೀರಗಾಸೆ 1 : ನಿಂಗೆ ಜಾಬ್ ಕಾರ್ಡ್ ಅಂದ್ರೆ ಗೊತ್ತಾ?

ಹುಡುಗ : ಜಾಬ್ ಕಾರ್ಡ್? ಇದ್ಯಾವ್ದಿದು? ರೇಷನ್ ಕಾರ್ಡ್ ಗೊತ್ತು, ಎಂಪ್ಲಾಯ್‌ಮೆಂಟ್ ಕಾರ್ಡ್ ಗೊತ್ತು ಡೆತ್ ಕಾರ್ಡ್ ಗೊತ್ತು, ಸಿಮ್ ಮಾರ್ಡ್ ಗೊತ್ತು, ಮೆಮೊರಿ ಕಾರ್ಡ್ ಗೊತ್ತು. ಇದ್ಯಾವ್ದಪ್ಪ ಹೊಸದು?

ವೀರಗಾಸೆ 1 : ಇಷ್ಟೆ ಇದೆಲ್ಲ ತಿಳಿಸಿಕೊಡ್ತೀವಿ ನಿಮ್ಮೋರಿನ ಗ್ರಾಮ ಪಂಚಾಯಿತಿಗೆ ಬನ್ನಿ.

(ಗ್ರಾಮ ಪಂಚಾಯಿತಿ ಆವರಣ)

ವೀರಗಾಸೆ 2 : ಅಹಹಹಹಾ ರುದ್ರ. ಈ ಗ್ರಾಮ ಪಂಚಾಯಿತಿಯಲ್ಲಿ ಕಾರ್ಯದರ್ಶಿಯವರೇ ಕಾಣ್ತಾಯಿಲ್ಲವಲ್ಲ.

ವೀರಗಾಸೆ 1 : ಅದೋ ಅಲ್ಲಿ ನಿಂತಿದ್ದಾರಲ್ಲ ಅವರೇ ಕಾರ್ಯದರ್ಶಿಗಳು.

ವೀರಗಾಸೆ 2 : ಅಹಹಾ . . . . ಕಾರ್ಯದರ್ಶಿಗಳೇ ಇಲ್ಲಿ ಇರೋ ಉದ್ಯೋಗ ಗ್ಯಾರಂಟಿ ಯೋಜನೆಯೊಳಗ ಜಾಬ್ ಕಾರ್ಡ್ ಮಾಡಿಸ್ಬೇಕು ಅಂದ್ರಾ ಏನೇನ್ ಅರ್ಹತೆ ಇರ್ಬೇಕು ಹೇಳ್ತೀರಾ ?

ಕಾರ್ಯದರ್ಶಿ : ಅಂತಾ ವಿಶೇಷವಾದ ಅರ್ಹತೆ ಏನೂ ಬೇಕಾಗಿಲ್ಲ. ಅವ್ರು ನಮ್ಮ ಪಂಚಾಯ್ತಿ ವ್ಯಾಪ್ತಿಯ ಮತದಾರರಾಗಿರ್ಬೇಕು. ಹೆಣ್ಣಾಗಲೀ–ಗಂಡಾಗಲೀ 18 ವರ್ಷ ತುಂಬಿರ್ಬೇಕು.

ವೀರಗಾಸೆ 1 : ಒಬ್ರು ಇಲ್ಲೇ ವಾಸ ಇದಾರೆ, ಆದರೆ ಅವ್ರ ಹೆಸರು ಮತದಾರರ ಪಟ್ಟೀಲಿ ಇಲ್ಲ ಅಂದ್ರೆ ಅಥವಾ ಇನ್ನೊಬ್ಬರ ಹತ್ರ ಮತದಾರರ ಗುರುತಿನ ಚೀಟಿ ಇಲ್ಲಾ ಅಂದ್ರೆ ಏನ್ಮಾಡ್ತೀರಿ.

ಕಾರ್ಯದರ್ಶಿ : ಏನೂ ಮಾಡೋಲ್ಲ, ಅವ್ರಿಗೆ ಜಾಬ್ ಕಾರ್ಡ್ ಕೊಡ್ತೀನಿ. ಅವ್ರು ನಮ್ಮ ಪಂಚಾಯ್ತಿ ವ್ಯಾಪ್ತೀಲಿ ವಾಸ ಮಾಡೋರು ಅಂತಾ ಪಂಚಾಯ್ತಿಗೆ ಮನವರಿಕೆ ಆದ್ರೆ ಸಾಕು.

ವೀರಗಾಸೆ 1 : ನೀವು ಒಳ್ಳೇ ಜನ ಬಿಡಿ ಸ್ವಾಮಿ, ಇಂಥಾ ಯೋಜನೇನ ನಾವೆಂದೂ ಕಂಡಿದ್ದಿಲ್ಲ.

ಕಾರ್ಯದರ್ಶಿ : ಇದು ನಮ್ಮ ಒಳ್ಳೇತನ ಅಲ್ಲ ಸ್ವಾಮಿ. ಉದ್ಯೋಗ ಖಾತ್ರಿಯ ನಿಯಮಾನೇ ಅಂಗಂತ ಹೇಳುತ್ತೆ !

(ತಿಕ್ಕಲನಂತೆ ಕಾಣುವ ಒಬ್ಬ ವ್ಯಕ್ತಿ ಎಲ್ಲರನ್ನೂ ಬಗೆ ಮಾಡುತ್ತಾ ಗುಂಪಿನಲ್ಲಿ ತೂರಿ ಮುಂದಕ್ಕೆ ಬರುವನು, ಅವನ ಕೈಯಲ್ಲೊಂದು ತಗಡಿನ ಡಬ್ಬ ಮತ್ತು ಕೋಲು ಇರುತ್ತದೆ)

ವೀರಗಾಸೆ 2 : ಹಾಗಾದ್ರೆ ಸರಿ, ಇವ್ರು ಸ್ವ–ಇಚ್ಛೆಯಿಂದ ಉದ್ಯೋಗ ಕೋರಿ ಬಂದಿರುವ ವ್ಯಕ್ತಿ. ಇವ್ರಿಗೆ ಜಾಬ್ ಕಾರ್ಡ್ ಸಿಗ್ಬೇಕು ಅಂದ್ರೆ ಏನ್ ಮಾಡ್ಬೇಕು ಹೇಳಿ ?

ಕಾರ್ಯದರ್ಶಿ : ಕೂತ್ಕೊಳ್ಳಿ, ಹೆಚ್ಚಿಗೆ ಏನೂ ಮಾಡ್ಬೇಕಾದ್ದಿಲ್ಲ, ಈ ಅರ್ಜಿನಾ ತುಂಬಿ ಕೊಟ್ರೆ ಸಾಕು. ಇದನ್ನ ನಮೂನೆ–1 ಅನ್ತಾರೆ. (ಅರ್ಜಿ ಕೊಡುವನು)

ವೀರಗಾಸೆ 2 : ತಗೊಳ್ಳಿ . . . . ಇದನ್ನು ಭರ್ತಿ ಮಾಡಿ, ಇದರಲ್ಲಿ ಏನೇನಿದೆ ಅಂದ್ರೆ . . . . (ಓದುವನು) ಹೆಸರು, ವಿಳಾಸ, ವಯಸ್ಸು, ಮನೆಯಲ್ಲಿರುವ ವಯಸ್ಕರ ಸದಸ್ಯರ ಹೆಸರು

ವೀರಗಾಸೆ 1 : ಇಷ್ಟು ತುಂಬಿದ್ರೆ ಸಾಕೋ (ಕಾರ್ಯದರ್ಶಿಯನ್ನು ಉದ್ದೇಶಿಸಿ)

(ಈ ಹಿಂದೆ ಬಿದ್ದು ಹೋಗಿದ್ದ ಹೆಣ್ಣು ಮಗಳು ಅದನ್ನು ತುಂಬುತ್ತಿರುವಳು. ಅಪ್ಪ ಹೇಳುತ್ತಿರುವನು. ಉಳಿದ ಹೆಣ್ಣು ಮಕ್ಕಳು ಅವಳೊಂದಿಗೇ ಇರುವರು.)

ಕಾರ್ಯದರ್ಶಿ : ಸಾಕು. ಆ ಎರಡೂ ಪ್ರತಿಗಳನ್ನು ತುಂಬಿಕೊಟ್ರೆ ಮುಂದಿನ ಜವಾಬ್ದಾರಿ ನಮ್ದು.

ವೀರಗಾಸೆ 2 : ತಗೊಳ್ಳಿ . . . . ಮುಂದೇನಾಗುತ್ತೆ ಅಂತಾ ಹೇಳಿ.

ಕಾರ್ಯದರ್ಶಿ : ತೆಗೆದುಕೊಳ್ಳುತ್ತಾ . . . . ಇನ್ನು 15 ದಿನಗಳೊಳ್ಗೆ ಇವ್ರಿಗೆ ನಮೂನೆ–4ರಲ್ಲಿರುವಂತೆ ಉದ್ಯೋಗ ಚೀಟಿ ಕೊಡುತ್ತೇವೆ. ಅದರಲ್ಲಿ ಇವ್ರ ಫೋಟೋ ಕೂಡಾ ಇರುತ್ತೆ.

ವೀರಗಾಸೆ 2 : ಅಹಹಾ . . . . ಭದ್ರಾ . . . . ಈಗ ಮಹೂರ್ತ ನಿಶ್ಚಯ ಆಯ್ತಾ . . . . ?

ವೀರಗಾಸೆ 1 : ಅಹಹಾ . . . . ರುದ್ರ . . . . 15 ದಿನಾನಾ, ಈಗ್ಲೇ ತಿಂಗಳಿನಿಂದ ಕೆಲ್ಸ ಇಲ್ಲಾ ಅಂತಾ ಒದ್ದಾಡ್ತಾ ಅವ್ರೆ ಜನ.

ಕಾರ್ಯದರ್ಶಿ : ಅಂಗೇನಿಲ್ಲ, 15 ದಿನ ಅನ್ನೋದು ಒಂದು ನಿಯಮ. ಆದ್ರೆ ಅವಕಾಶ ಇದ್ರೆ ನಾಳೆಯಿಂದಲೇ ನಿಮ್ಗೆ ಕೂಲಿ ಕೊಡಬ್ಬುದು. (ಅಷ್ಟರಲ್ಲಿ ತಿಕ್ಕಲನಂತೆ ಕಾಣುವ ವ್ಯಕ್ತಿ ತಮಟೆಯಿಂದ ಡಬ್ಬವನ್ನು ಬಡಿಯುತ್ತಾ, ಸಾರುವವನಂತೆ . . . .)

ತಿಕ್ಕಲ ವ್ಯಕ್ತಿ : ಕೇಳ್ರಪ್ಪೋ ಕೇಳ್ರಿ . . . . ಜಾಬ್ ಕಾರ್ಡ್ ಬರೀ ಜಾಬ್ ಕಾರ್ಡ್ ಅಲ್ಲ ಕಣ್ರಪ್ಪೋ . . . . ಇದೊಂದು ದಂಧೆ ಕಣ್ರಪ್ಪೋ, ಯಾಮಾರೀದ್ರಾ ಕೆಲಸ ಯಾರ್ಗೋ . . . . ಕೂಲಿ ಯಾರ್ಗೋ . . . . ಹೋಗುತ್ತಪ್ಪೋ, ನಿಮ್ಮ ಕೈಗೆ ಚಿಪ್ಪು ಸಿಗುತಪ್ಪೋ . . . . ಹುಶಾರಪ್ಪೋ ಹುಶಾರೂ . . . . ಹುಶಾರಪ್ಪೋ ಹುಶಾರೂ . . . .

| | | |
|---|---|---|
| ಜನ | : | ಲೇ . . . . ಲೇ . . . . ಲೇ . . . . ನಿಲ್ಸೋ ನಿನ್ ಪುರಾಣಾನಾ. ಯಾತುದ್ದಲಾ ಅದು ನೀನು ಒದುರ್‍ತಾ ಇರಾದು ? ಯಾರ್‍ಲಾ ಅಂಗ ಮಾಡೌರೆ ? ಎಂಗಲಾ ಮಾಡ್ತಾರೆ ? |
| ತಿಕ್ಕಲ ವ್ಯಕ್ತಿ | : | ವಿಕಟವಾಗಿ ನಗುತ್ತಾ . . . . ಯಾರು ಮಾಡ್ತಾರಾ ? ಎಂಗೆ ಮಾಡ್ತಾರಾ ? ಇಂಗೆ . . . . ಎನ್ನುತ್ತಾ (ಡಬ್ಬದ ಮುಚ್ಚಳವನ್ನು ತೆಗೆದು ಸುರಿಯುವನು. ಅದರಿಂದ ಅನೇಕ ಜಾಬ್ ಕಾರ್ಡ್‍ಗಳು ಉದುರುವುವು) |
| ಕಾರ್ಯದರ್ಶಿ | : | (ಎತ್ತಿಕೊಂಡು ನೋಡುತ್ತಾ) ಊನ್ರಪ್ಪಾ ಜಾಬ್ ಕಾರ್ಡೇ !! |
| ವೀರಗಾಸೆ 1 | : | ಎಲ್ಲಿಂದ್ಲಾ ಬಂದ್ವು ಇವು ನಿನ್ನತ್ರ ?! ಯಾರ್‍ಲಾ ಕೊಟ್ರು ನಿಂಗೆ ? |
| ತಿಕ್ಕಲ ವ್ಯಕ್ತಿ | : | ವಿಕಟವಾಗಿ ನಗುತ್ತಾ . . . . ಯಾರು ಕೊಡ್ತಾರೆ ? ಯಾರೂ ಕೊಡೋಲ್ಲ ! ಕಿತ್ಕೋಬೇಕಾಗುತ್ತೆ . . . . ಕಸ್ಕೋಬೇಕಾಗುತ್ತೆ . . . . ! |
| ವೀರಗಾಸೆ 2 | : | ಯಾರತ್ರ ಕಿತ್ಕೊಂಡೋ ? |
| ತಿಕ್ಕಲ ವ್ಯಕ್ತಿ | : | ಇನ್ನ್ಯಾರತ್ರ . . . . ನಮ್ಮೂರಾಗೆ ಔನಲ್ಲಾ . . . . ಕಂತ್ರಾಟ್ ಕುರುಗೇಶ ಅವ್ನತ್ರ. |
| ವೀರಗಾಸೆ 1 | : | ಅವ್ನತ್ರ ಯಾಕಿದ್ವೋ ಇಷ್ಟೊಂದ್ ಕಾರ್ಡು ? |
| ತಿಕ್ಕಲ ವ್ಯಕ್ತಿ | : | ಕಳ್ಳನ್ಮಗಾ . . . . ಸೆಕೆಟ್ರಿನಾ ಒಳಿಕಾಕ್ಕಂಡು ಊರಾಗಿರೋರ ಹೆಸ್ರಲೆಲ್ಲಾ ಕಾರ್ಡ್ ಮಾಡ್ಸಿಕೊಂಡು, ಯಾರ್‍ಯಾರಕೈಲೋ ಕೆಲ್ಸ ಮಾಡ್ಸೋದು, ಅವ್ರೂ ಇಲ್ಲಾ ಅಂದ್ರೆ ಜೆಸಿಬೀಲಿ ಕೆಲ್ಸ ಮಾಡ್ಸಿ, ಎಲ್ಲಾರ ಕೂಲಿನೂ ಗುಳುಂ ಮಾಡ್ತಿದ್ದ. ಇನ್ನೊಂದಷ್ಟು ಜನಕ್ಕೆ ಎಂಜಲು ಕಾಸಿನ ಆಸೆ ತೋರ್ಸಿ, ಕಾರ್ಡ್ ಇಸ್ಕೋತಿದ್ದಾ . . . |
| ವೀರಗಾಸೆ 2 | : | ಎಂಗ್ಲಾ ಅದು . . . . ? |
| ತಿಕ್ಕಲ ವ್ಯಕ್ತಿ | : | ಕಳ್ಳನ್ಮಗಾ . . . . ಎಂಗೆ ಅಂತಾ ಏನು ಹೇಳಾದು ? ಕಾರು ಇಕ್ಕೊಂಡಿರೋ ಅವ್ನ ಹೆಂಡ್ತಿ, ಮಕ್ಕಳ ಹೆಸರ್‍ನೆಲ್ಲಾ ಸೇರ್‍ಸಿದ್ದ. ಊರಾಗೆ ಯಾರ್‍ಯಾರಿಗೆ ಇಂಥ ಕೂಲಿ ನಾಲಿ ಬೇಕಾಗಿಲ್ವೋ ಅವ್ರ ಹೆಸ್ರಲ್ಲೂ ಕಾರ್ಡ್ ಮಾಡ್ಸಿ ಮಡಿಕಂಡಿದ್ದ. ಅಷ್ಟೇ ಏನು ? ಈ ಯೋಜನೆ ಬಗ್ಗೆ ಗೊತ್ತಿಲ್ದೋರ ಹೆಸರಿನ ಕಾರ್ಡೆಲ್ಲಾ ಅವನತ್ರಾನೇ ಇದ್ವು . . . . |
| ವೀರಗಾಸೆ 1 | : | (ಚಕಿತನಾಗಿ) ಆಮೇಲೆ . . . . |
| ತಿಕ್ಕಲ ವ್ಯಕ್ತಿ | : | ಕಳ್ಳನ್ಮಗಾ . . . ., ಒಂದ್ಸಾರಿ ಸಾಮಾಜಿ ಲೆಕ್ಕ ಪರಿಸೋಧನಾ ಸಮಿತಿ ಅಂತಾ ಐತಲ್ಲಾ ಅದ್ರ ಕೈಗೆ ಸಿಕ್ಕಾಕೊಂಡ ನೋಡು . . . . ! ಆವಾಗ ಊರ್‍ಮುಂದೆ ಜನ ಹಿಡ್ಕೊಂಡು ರುಬ್ಬಾರುಬ್ಬನ ರುಬ್ಬಿದ್ರು ನೋಡು . . . . ಆವಾಗ್ಲೇ ಅವ್ನ ಬ್ಯಾಗ್ ಬ್ಯಾಗ್‍ನೇ ನಾನು ಕಿತ್ಕೊಂಡು ಬಿಟ್ಟೆ. ಬೇಕಾದೋರದೆಲ್ಲಾ ಅವ್ರವ್ರಿಗೆ ಕೊಟ್ಟು, ಬ್ಯಾಡವಾದೋರದೆಲ್ಲಾ ಈ ಡಬ್ಬದಾಗಿ ತುಂಬಿಕೊಂಡು ಹೊರ್‍ಟೆ . . . . ಸುತ್ತಾ ಮುತ್ತಲ ಜನಕ್ಕೆ ಇದನ್ನ ಹೇಳಿ, ಅವರೂರಲ್ಲೂ ಜನ ಮೋಸ ಹೋಗಾದು ತಪ್ಸಾನಾ ಅಂತಾ . . . . |
| | | ಜನ ಚಕಿತರಾಗಿ ಅವನತ್ತ ನೋಡುವರು, ಮುಖ್ಯ ಪಾತ್ರದಾರಿ, ಅವನನ್ನು ಹೆಮ್ಮೆಯಿಂದ ನೋಡುತ್ತಾ, ಅಪ್ಪಿಕೊಳ್ಳುವನು. |
| ತಿಕ್ಕಲ ವ್ಯಕ್ತಿ | : | ಜನರೇ . . . . ನೀವು ಮಾತ್ರ ಜಾಬ್ ಕಾರ್ಡ್ ತಗೊಂಡ್ರೆ ಆಗೋಲ್ಲ. ಉಳ್ಳೋರ ಮೇಲೂ ಒಂದು ಕಣ್ಣಿಟ್ಟಿರ್‍ಬೇಕು. ಇಲ್ಲಾಂದ್ರೆ ಕೆಲವರು ಅದನ್ನ ದುರುಪಯೋಗ ಮಾಡಾಕೆ ಕಾಯ್ತಿರ್‍ತಾರೆ. ಹಾಗೆ ಮಾಡಿದ್ರೆ ಯೋಜನೆಯ ಉದ್ದೇಶ ಸಫಲ ಆಗೋದಿಲ್ಲ, ಸಿಗ್ಬೇಕಾದೋರಿಗೆ ಫಲ ಸಿಗೋದಿಲ್ಲ . . . . ನೆನಪಲ್ಲಿ ಇಟ್ಕೊಳ್ಳಿ. ನಾನು ಬಂದ ಕೆಲ್ಸ ಮುಗೀತು. ನಾನು ಬರ್‍ತೀನಿ . . . . ನಮಸ್ಕಾರ. (ಗುಂಪಿನಿಂದ ನಿರ್ಗಮಿಸುವನು. ಜನ ಕ್ಷಣಕಾಲ ಅವನತ್ತ ನೋಡುವರು, ಕೆಲವರು ಹಿಂದಿನಿಂದಲೇ ನಮಸ್ಕರಿಸುವರು) |
| ಉಳಿದ ಜನ | : | (ಕಾರ್ಯದರ್ಶಿಯತ್ತ ತಿರುಗಿ) ಅದ್ಸರೀ . . . . ಊರಾಗೆ ಒಬ್ರು ಅರ್ಜಿ ಕೊಟ್ರೆ, ಎಲ್ರೂಗೂ ಕೂಲಿ ಕೋಡ್ತೀರೇನ್ರೀ ?! |
| ಕಾರ್ಯದರ್ಶಿ | : | ನಿಮ್ಮಲ್ಲಿ ಒಬ್ರಿಗೆ ಲಗ್ನ ಕಟ್ಸೆ ಊರ ಮಂದೀಗೆಲ್ಲಾ ಮದ್ವಿ ಮಾಡ್ತೀರೇನ್ರೀ ? |
| ಜನ | : | ಅದೆಂಗಾದಾತು ಹೇಳಿ !! ಮತ್ತೆ ಅವರೂರಲ್ಲಿ ಅದೆಲ್ಲಾ ಎಂಗಾತು ? |

ಕಾರ್ಯದರ್ಶಿ : ಅಲ್ಲಿ ಎಂಗಾತೋ ನನ್ಗೆ ಗೊತ್ತಿಲ್ಲ. ಆದ್ರೆ ಇಲ್ಲಿ ಯಾರ್ಗೆ ಕೂಲಿ ಅಗತ್ಯ ಇದ್ಯೋ ಅವ್ರು ಬಂದು ಅರ್ಜಿ ಕೊಟ್ಟು ತಮ್ಮ ಹೆಸ್ರ ನಮೂದು ಮಾಡ್ಸಿದ್ರಾನಾ . . . . ಅವ್ರಿಗೆ ಕೆಲ್ಸ ಗ್ಯಾರಂಟಿ ನೋಡ್ರಿ !!

ಜನ : ಕೆಲ್ಸ ಬೇಕೂಂದ್ರ, ನಮೂದು ಮಾಡ್ಸಾದು ಅಷ್ಟೊಂದು ಮುಖ್ಯಾನೇನ್ರೀ ?

ಕಾರ್ಯದರ್ಶಿ : ಅದೇನೋ ಅಂತಾರಲ್ಲಾ . . . . ರಾತ್ರಿ ಎಲ್ಲಾ ರಾಮಾಯಣ ಕೇಳಿ ಬೆಳ್ಗಾಗತ್ಲೂ ರಾಮಂಗು ಸೀತೆಗೂ ಏನಾಗ್ಬೇಕು ಅಂತ ಕೇಳ್ದಂಗಾತು. ಅದ್ರ ಮಹಾತ್ಮೆನಾ ಈವರ್ಗೂ ಕೇಳಿಲ್ಲಲ್ವೇನ್ರೀ ! ಅದು ಬರೀ ನಮೂದಲ್ಲ ನೋಡ್ರೀ, ಜಾಬ್ ಕಾರ್ಡ್ . . . . ಪಡಕೊಳ್ಳೋದು ಮತ್ತು ಅದನ್ನ ಸದುಪಯೋಗ ಪಡಿಸಾದು ಮುಖ್ಯ ನೋಡ್ರೀ ! ಅದಕ್ಕೆ ನಾನು ಹೇಳಾದು ನೀವು ಒಮ್ಮೆ ಉದ್ಯೋಗ ಚೀಟಿ ಪಡ್ಕೊಂಡ್ರಾಂದ್ರಾ ನಮ್ಗೆ ಬಂತು ತಲೀಬೇನಿ ಅಂತಾನೇ ಅರ್ಥ.

ಜನ : ಯಾಕಾ, ನಾವು ಉದ್ಯೋಗ ಚೀಟಿ ಪಡೆದ್ರ ನಿಮಗ್ಯಾಕ ಬರುತ್ತಾ ತಲೀಬೇನಿ ?

ಕಾರ್ಯದರ್ಶಿ : ಒಂದೂ ಈಗ ಕೇಳಿದ್ರಲ್ಲಾ ಅಂಗಾಗುತ್ತಾ, ಆವಾಗ್ಲೂ ಅದು ನಮ್ಮ ತಲೆಗೆ ಬರುತ್ತಾ. ಅಲ್ದೇ ಸರ್ಕಾರದ ಇನ್ನೊಂದು ಕಾನೂನಿದ್ಯಪ್ಪಾ . . . . ನಾವೇನೂ ಮಾಡೋಹಂಗಿಲ್ಲ. ನೀವು ಅರ್ಜಿ ಹಾಕಿ, ಉದ್ಯೋಗ ಚೀಟಿ ಪಡೆದ 30 ದಿನಗಳೊಳ್ಗಾ ನಾವು ನಿಮ್ಗ ಕೆಲ್ಸ ಕೂಲಿ ಕೊಡ್ಲಿಲ್ಲಾಂದ್ರಾ . . . .

ಒಬ್ಬ : (ಆತುರವಾಗಿ) ಏನಾಗತ್ತೈತಿ ?

ಕಾರ್ಯದರ್ಶಿ : ನಾವು ನಿಮ್ಗೆ ನಿರುದ್ಯೋಗ ಭತ್ಯ ಕೊಡ್ಬೇಕಾತ್ತೈತಿ !!

ಕೆಲವರು : ಅಂಗಾ . . . . ?! ಅಂಗಾದ್ರಾ ಇದ್ಯಾವುದೋ ಚಲೋ ಕಾಯಿದಿ ಅದಾ !! ಬಿಡ್ರೀ ಈಗ ನೀವು ನಮಗಾ ಜಾಬ್ ಕಾರ್ಡ್ ಕೊಡ್ರಿ, ನೀವೇನೂ ಕೆಲ್ಸ ಕೊಡ್‌ಬ್ಯಾಡ್ರೀ . . . . 30 ದಿನ ಆದ್ ಮ್ಯಾಲ ನಿರುದ್ಯೋಗ ಭತ್ಯ ಕೊಟ್ಟು ಬಿಡ್ರಿ. ಅಲ್ವೇನ್ರಲ್ಲಾ ?

ಮತ್ತೆ ಕೆಲವರು : ಥೂ . . . . ನಿಮ್ಮ ಜನ್ಮಕ್ಕಿಷ್ಟು ಬೆಂಕಿ ಹಾಕ್ತು ?! ನಾವು ಕೂಲಿ ಸಿಕ್ಕಿದ್ರೆ ಸಾಕಪ್ಪಾ ಅಂತಾ ಕಾಯ್ತಾ ಇದ್ರೆ, ಕಳ್ಳಾಟ ಹೇಳಿಕೊಡ್ತೀರಾ ? ಮುಠಾಳ್ರಾ . . . . (ಉಳಿದವರು ಅದೂ ಇದೂ ಬೈಯುವರು)

ಅಷ್ಟರಲ್ಲಿ ಅಲ್ಲಿದ್ದ ಹಳ್ಳಿ ಜನರೆಲ್ಲಾ ಒಬ್ಬೊಬ್ಬರಾಗಿ ಅರ್ಜಿ ಪಡೆದು, ತುಂಬಲು ಆರಂಭಿಸುವರು, ತುಂಬಿ ಮುಗಿದ ನಂತರ ಕೈಯಲ್ಲಿದ್ದ ಅರ್ಜಿಯನ್ನೇ ಎತ್ತಿ ಹಿಡಿದು ನಿಲ್ಲುವರು.

ಮೊದಲು ಬಿದ್ದ ಹುಡುಗಿ ವೀರಭದ್ರನ ಭುಜವೇರುವಳು.

*ವೀರಗಾಸೆಯ ತಂಡ ಜನಗಳನ್ನುದ್ದೇಶಿಸಿ . . . .*
*ಜನಗಳೆ ಜನಗಳೆ ಜಾಬ್ ಕಾರ್ಡ್*
*ಪಡೆಯಿರಿ ಪಡೆಯಿರಿ ಜಾಬ್ ಕಾರ್ಡ್*
*ಜಾಬ್ ಕಾರ್ಡ್, ಜಾಬ್ ಕಾರ್ಡ್, ಜಾಬ್ ಕಾರ್ಡ್ ॥*
*ಜಾಬಿಕೆ ಮೂಲ ಜಾಬ್ ಕಾರ್ಡ್*
*ಕೆಲಸಕೆ ಬೇಕು . . . . ಕೂಲಿಗೆ ಬೇಕು . . . .*
*ಮೊದಲಿಗೆ ಬೇಕು . . . . ಜಾಬ್ ಕಾರ್ಡ್*
*ಜಾಬ್ ಕಾರ್ಡ್, ಜಾಬ್ ಕಾರ್ಡ್, ಜಾಬ್ ಕಾರ್ಡ್ ॥*

*ದೊರೆಗಳೆ ದೊರೆಗಳೆ ಜಾಬ್ ಕಾರ್ಡ್*
*ಪಡೆಯಿರಿ ಪಡೆಯಿರಿ ಜಾಬ್ ಕಾರ್ಡ್*
*ದೊರೆಗಳೆ ದೊರೆಗಳೆ ಜಾಬ್ ಕಾರ್ಡ್ ॥*
*ಹಾಡುತ್ತಾ ಕುಣಿಯುವರು, ಜನರೂ ಅವರ ಜೊತೆಗೂಡುವರು.*

* * *

# ಜೆ.ಸಿ.ಬಿ. (ಸಾಮಾಜಿಕ ಲೆಕ್ಕ)

– ಡಾ|| ರಾಜಪ್ಪ ದಳವಾಯಿ

**(ನಾಟಕದ ಪ್ರಾರಂಭಕ್ಕೆ ಸ್ಟೇಜ್ ಮೇಲೆ ಮೂವರು ಜೆ.ಸಿ.ಬಿ.ಯ ಹಾಗೆ ನಿಂತಿರುತ್ತಾರೆ. ಅವರನ್ನು ಎಲ್ಲಾ ಕಲಾವಿದರು ಸುತ್ತುವರಿದಿರುತ್ತಾರೆ.ಡೊಳ್ಳಿನವರು 3ನೇ ಬೆಲ್ ಹೊಡೆಯುತ್ತಿದ್ದಂತೆ ಸಿಂಗಾರಿ ಓಡಿ ಬಂದು.**

ಸಿಂಗಾರಿ : ಓಯ್ ಮಹಾ ಜನಗಳೆ ಇವತ್ತು ನವ್ ಊರಿಗೆ ಹೊಸ ಜೆ.ಸಿ.ಬಿ. ಬಂದಿದೆ. ನವ್ ಊರಿನ ಕಂಟ್ರಾಕ್ಟರ್ದಾರನಾದ ಚೆನ್ನಂಜಯ್ಯ ಇದನ್ನು ತಂದಿದ್ದಾನೆ. ಈ ಜೆ.ಸಿ.ಬಿ. ನೂರು ಜನ ಮಾಡೊ ಕೆಲ್ಸನ ಇದೊಂದೆ ಮಾಡುತ್ತೆ.ನೋಡಿ ಅಲ್ಲಿ ಚೆನ್ನಂಜಯ್ಯ ಹಾಗೂ ಗ್ರಾಮ ಪಂಚಾಯತ್ ಸೆಕ್ರೆಟರಿ ಮೆರವಣಿಗೆ ಮುಖಾಂತರ ಬರುತ್ತಿದ್ದಾರೆ.

**(ಡೊಳ್ಳಿನವರು ಮೆರವಣಿಗೆಯಲ್ಲಿ ಊರ ಜನರನ್ನು ಕರೆದುಕೊಂಡು ಬರ್ತಾರೆ ಎಲ್ಲಾ ಸೇರಿ ಜೆ.ಸಿ.ಬಿ ಗೆ ಪೂಜೆ ಮಾಡ್ತಾರೆ.)**

(ಈಶಣ್ಣ ಹೋಟೆಲ್ ಮಾಲೀಕ ಕಂ ಕುಕ್ ಕಂ ಕ್ಲೀನರ್ ಕಂ . . . . ಹೋಟೆಲಿನ ಎಲ್ಲಾ ಕೆಲಸಗಳ ಕಾರಣ ಪುರುಷನಾಗಿರತಕ್ಕಂತ ಈಶಣ್ಣನು ಗಂಭೀರ ಮುಖ ಮುದ್ರೆಯ ಮನುಷ್ಯ. ಆ ಹೊಟೇಲ್ಲು ಇತ್ತ ಮನೆಯ ಪಕ್ಕಕ್ಕೇ ಇದ್ದರೂ ಮನೆಯಿಂದ ಪ್ರತ್ಯೇಕಗೊಂಡು ಇದೆ. ಎಷ್ಟೋ ಬಾರಿ ಬಾಯಲ್ಲಿ ಬೀಡಿ ಕಚ್ಚಿಯೋ ಟೀ ಅಂದವರಿಗೆ ಟೀಯನ್ನು, ಇಡ್ಲಿ ಎಂದವರಿಗೆ ಇಡ್ಲಿಯನ್ನು, ಬೋಂಡಾ ಮಂಡಕ್ಕಿ ಎಂದವರಿಗೆ ಅವನ್ನೂ ನೀಡುತ್ತಿರುತ್ತಾನೆ. ಹಣೆಯಲ್ಲಿ ಸದಾ 3 ವಿಭೂತಿ ಪಟ್ಟೆ ಮಾತ್ರ ಈಶಣ್ಣ ಮಕ ತೊಳೆಯದಿದ್ದರೂ ರಾಜಾಜಿಸುತ್ತಿದ್ದವು. ಕ್ಯಾಶ್ ಗಿರಾಕಿಗಳಿಗೆ ಮಾತ್ರ ಸ್ಮೈಲ್ ಮಾಡುವ ಈಶಣ್ಣ ಉದ್ರಿ ಗಿರಾಕಿಗಳಿಗೆ ಮಾತ್ರ ಮುಖದಲ್ಲೇ ಗುಡುಗು ಮಿಂಚು ಎಲ್ಲವನ್ನೂ ಸೃಷ್ಟಿಸಿಬಿಡುತ್ತಿದ್ದ. ಅದರಲ್ಲೂ ಉದ್ರಿ ಪಟ್ಟಿ ಯಾವ ಮಟ್ಟಕ್ಕೆ ಬೆಳೆದಿರುತ್ತೆ ಆ ಮಟ್ಟಕ್ಕೆ ತಕ್ಕನಾಗಿ ಅವನ ಸಿಟ್ಟು ಏರು–ಪೇರು ಆಗುತ್ತಿರುತ್ತದೆ. ಹೋಟೆಲಿನಲ್ಲಿ ಹಲವರು ಇದ್ದಾರೆ. ಸಿಂಗಾರಿ ಹೋಟೆಲಿಗೆ ಬಂದು

ಸಿಂಗಾರಿ : ಈಸಣ ಮಂಡಕ್ಕಿ ಬೋಂಡಾ ತತಾ (ಈಶಣ್ಣನ ಪಿತ್ತ ನೆತ್ತಿಗೇರಿ ದುರುದುರು ಸಿಂಗಾರಿಯನ್ನು ನೋಡುತ್ತಾನೆ.)

ಅದ್ಯಾಕಣ್ಣೋ ಹಂಗ್ ನೋಡೀಯಾ ? (ಮತ್ತೂ ದುರು ದುರು ನೋಡಲು)

ಪಟ್ಟಿ ದೊಡ್ಡದಾಗಿ ಬೆಳ್ದೈತೆ ಅಂತ್ಲಾ ? (ಈಶಣ್ಣ ಜಾಸ್ತಿ ಕೋಪ ಮಾಡಿಕೊಳ್ತಾನೆ)

ನಿನ್ನ ಹೋಟ್ಲಾಗು ಪಟ್ಟಿ ಬೆಳ್ಸಾಕೆ ದಮ್ ಇರ್ಬೇಕೇಳು !

ಮುಂದಿನ ವಾರಕ್ಕೆ ಎಲ್ಲಾ ಫೈಸ್ಲು.

ಒಬ್ಬ : ಏನ್ ಒಡೀತಪ್ಪಾ ಅಂತಾ ಬಂಪರ್ರು ?

ಸಿಂಗಾರಿ : ಅವೆಲ್ಲಾ ಹೇಳಾಕಾಗುತ್ತಾ ?

ಇನ್ನೊಬ್ಬ : (ಒಬ್ಬನನ್ನ ಕುರಿತು) ಟೀ ಹೇಳು ಮತ್ತೆ !

ಒಬ್ಬ : ಹೇಳಿದ್ರಾತು ತಗಾ. ಬಂಪರ್ರು ಏನಂತಾ ಹೇಳ್ಲ ಸಿಂಗಾರಿ !

ಸಿಂಗಾರಿ : ಸ್ಕೀಮು ಗೌರ್ಮೆಂಟ್ದು

(ಹಾಡು:– ಚಿಂತಿ ಸಂತಿಯೊಳಗ ಹಾಡು– ನೃತ್ಯ ಮಾಡುತ್ತಾರೆ)

## ದೃಶ್ಯ –2

ಒಂದು ಕಡೆ ನಟರಲ್ಲನೇಕರು ಜೆಸಿಬಿ ಯಂತ್ರದಂತೆ ಸಂಯೋಜಿತವಾಗಿದ್ದಾರೆ. ಅದನ್ನು ಕಂಟ್ರೋಲ್ ಮಾಡಲು ಎಲ್ಲರ ಮೇಲೊಬ್ಬ ಕುಳಿತ್ತಿದ್ದಾನೆ. 3 ಜನ ತಮ್ಮ ಕೈಗಳನ್ನು ಜೋಡಿಸಿ ಜೆಸಿಬಿ ಅಗೆಯುವ ಹಲ್ಲುಗಳಂತೆ ನಿಂತಿದ್ದಾರೆ. ಏನನ್ನಾದರೂ ಅಗೆಯುವ ಶೈಲಿ ಅವರದು. ಮುಂದಕ್ಕೆ ಚಲಿಸಲು ವಿಚಿತ್ರವಾದ ಸದ್ದು ಮಾಡುತ್ತಿರುತ್ತಾರೆ. ಒಟ್ಟಿನಲ್ಲಿ ಜೆಸಿಬಿಯ ಎಲ್ಲಾ ಗುಣ ಲಕ್ಷಣಗಳನ್ನು ನಟರು ಅನುಕರಿಸಬೇಕು. ಅವರಲ್ಲಿ ಒಬ್ಬ ತನ್ನ ಕತೆಯನ್ನು ಜೆಸಿಬಿ ಹೇಳಿಕೊಳ್ಳುವಂತೆ . . . .

ಜೆಸಿಬಿ : (ಜೆಸಿಬಿ ಮಾತಾಡುತ್ತದೆ) ಅಯ್ಯೋ ಶಿವನೇ ಪರಮಾತ್ಮ ನನಗ್ಯಾಕಪ್ಪ ಇಂಥ ನಾಯಿ ಪಾಡು ತಂದ್ಬಿಟ್ಟೆ. ಅಲ್ಲಾ ! ನಾನು ಎಂಥಾ ವೈಭವದಿಂದ ಮೆರೆದವನು. ರಾಜ, ರಾಜ ಇದ್ದಂಗಿದ್ದವನು. ಈಗ ಆಳಿಗಿಂತ ಕಡೆಯಾಗಿ ಹೋಗ್ಬಿಟ್ಟೆನಲ್ಲ. (ಅಳುತ್ತದೆ.) ಕೂಲಿ ನಾಲಿ ಮಾಡೋ ಆಳು ಮಕ್ಕಳ ಹೊಟ್ಟೆ ಮೇಲೆ ಹೊಡೆದು ಅವ್ರ ಅನ್ನಾನೆಲ್ಲಾ ಕಿತ್ಕಂತಿದ್ನಲ್ಲ (ಸೊರ್ ಸೊರ್ ಎಂದು ಮೂಗಿನಲ್ಲಿ ದುಃಖ ವ್ಯಕ್ತಪಡಿಸುತ್ತದೆ.)

ಇದನ್ನು ಒಬ್ಬ ಕಲಾವಿದ ಅನುಭವಿಸುವುದು. ಇನ್ನೊಬ್ಬ ಕಲಾವಿದ ಅಯ್ಯೋ ಶಿವಶಿವ ಹರಹರ ಹರೋಹರ . . . . ಎಂದು ಜೋರಾಗಿ ಕಿರಚುತ್ತಾನೆ.

ಎರಡನೇ ಮಹಾಯುದ್ಧದಲ್ಲಿ ನನ್ನ ಗಮ್ಮತ್ತೇನು ? ಇಡೀ ಜರ್ಮನೀನ ಸರ್ವನಾಶ ಮಾಡಿದ ಟ್ಯಾಂಕರ್ ನಾನು. ಅಮೇರಿಕಾದ ಕ್ಯಾಟರ್‌ಪಿಲ್ಲರ್ ಕಂಪನಿ ನನ್ನ ತಯಾರ್‍ಮಾಡಿತ್ತು. (ದುಃಖಿಸುತ್ತಾ) ಸ್ವಲ್ಪ ದಿವಸ ಆದ್ಮೇಲೆ ನನ್ನ ಬಾಂಬು ನಳಿಕೆಯೊಳಗೆ ಗುಬ್ಬಿ ಗೂಡು ಕಟ್ತು. ನನ್ನನ್ನು ಪೆಂಟಗಾನ್ ಬಿಲ್ಡಿಂಗ್ ಮುಂದೆ ಷೋಗಿಟ್ಟರು. ನನ್ನ ಮೈನೆಲ್ಲಾ ತುಕ್ಕು ತಿಂತಾ ಬಂತು. ಮೇಲೆ ಬಣ್ಣ ಹೊಡೆಯೋರು. ಒಳಗೆ ತುಕ್ಕು ತಿಂತಾ ಬಂತು. ಏನ್ ಹೇಳ್ಲಿ ನನ್ನ ಪಾಡಾ ?

(ಮತ್ತೊಬ್ಬ ಸತ್ತವರ ಮುಂದೆ ಅಳುವ ಶೈಲಿಯಲ್ಲಿ) ಅಯ್ಯೋ . . . . ಆ ಹಿರೋಶಿಮಾ ನಾಗಸಾಕಿ ನಾಶವಾದ್ಮೇಲೆ ಜಪಾನಿಗಳು ಅಂಥಾ ಟ್ಯಾಂಕರ್ ಆಗಿದ್ದ ನನ್ನನ್ನ ಹಿಟಾಚಿ ಕಂಪನಿ ಒಳಗೆ ಹಾಕಿ ನುಜ್ಜುಗುಜ್ಜು ಮಾಡಿ ಯುದ್ಧ ಮಾಡೋ ಕೆಲ್ಸಕ್ಕೆ ರಾಜೀನಾಮೆ ಕೊಡ್ಸಿ (ಜೋರಾಗಿ ಅಳು) ಮಣ್ಣ ಅಗಿಯೋ ಕೆಲ್ಸಕ್ಕೆ ತಂದ್ಬುಟ್ರಲ್ಲಾ ! ಇದೇ ಅಲ್ವಾ ನನ್ ಪಾಡು. (ಸಿಟ್ಟಿನಿಂದ)

ನೂರಾರು ಜನರ ಅನ್ನ ಕಸ್ಕಂಡ ನಾನು ಬಡವರ ಶಾಪ ತಟ್ಟಿ ಈ ತರ್‍ವಾದೆ ! ಜನ ಕೆಲ್ಸ ಮಾಡಿ ಕೂಲಿ ತಗೊಳ್ಳಿ ಅಂತಾ ಸರ್ಕಾರ ಉದ್ಯೋಗ ಖಾತ್ರಿ ಯೋಜನೆ ತಂದ್ರೂ, ನನಿಗಾದ್ರೂ ಪುರಸೊತ್ತೆಲ್ಲಿದೆ ? ಮತ್ತೂ ನೂರಾರು ಜನ್ರ ಕೆಲ್ಸಕ್ಕೆ ನನ್ನ ಬಳಸಬಾರ್‍ದು ಅಂತಾ ಕಾನೂನಿದ್ರೂ (ಕರುಣೆಯಿಂದ)

ಭಾರತದಾಗೆ ಕಾನೂನು ತಪ್ಪಾದ್ಮೇಲೆ ಜಾರಿ ಆಯ್ತುವೆ. ತಪ್ಪೇ ನಡೀದಂಗೆ ಈ ದೇಶ ಯಾವಾಗ ಆದಾತೋ ಏನೋ ? ಗೊಳೊ ಎಂದು ಅಳುತ್ತಾ, ಮೂಗು ಒರೆಸಿಕೊಳ್ಳುತ್ತಾ. ಅಂತಾ ದಿನಗಳನ್ನ ನೋಡೋ ಭಾಗ್ಯ ನನ್ಗೆ ಇದ್ದಾತೋ ಇಲ್ವೋ, ಆ ದೇವ್ರೇ ಬಲ್ಲ. (ಸಿಟ್ಟಿನಿಂದ)

ಅಮೇರಿಕಾದಾಗೆ ಹುಟ್ಟಿ ಜಪಾನ್ನಾಗೆ ಮರುಹುಟ್ಟು ಪಡ್ದು ಈ ಪ್ರಕಾರ್‍ವಾಗಿ ಈ ಭಾರತವೆಂಬ ಬಡವರ ದೇಶಕ್ಕೆ ಬಂದೆ. ಇಲ್ಲಿನ ಜನ್ರ ನೋಡಿದ್ರೆ ಹೊಟ್ಟೆಗೆ ಸಂಕಟ ಆಗ್ತದೆ. ಮುಗ್ಧರು, ಅಮಾಯಕರು, ಈ ಜನಾನೆಲ್ಲಾ ಮುಕ್ಕಿ ತಿಂತವ್ರಲ್ಲಪ್ಪೋ ದಲ್ಲಾಳಿಗಳು, ರಾಜಕಾರಣಿಗಳು, ಬಣ್ಣ ಹಚ್ದೇ ನಾಟಕ ಆಡಿದ್ರೆ, ಅವ್ರ ಏಜೆಂಟ್ರು ಹಳ್ಳೀಲಿ ಬಣ್ಣ ಹಚ್ಚಿಸ್ಕೊಂಡೇ ನಾಟ್ಕ ಆಡ್ತಾರೆ. ಒಟ್ನಲ್ಲಿ ಸುತ್ತ ಮುತ್ತ ಬರೀ ನಾಟಕವೇ ನಡೀತೈತೆ. (ಅಳುತ್ತದೆ) ಅಮಾಯಕರನ್ನ ಕೇಳೋರ್‍ಯಾರು ತಂದೆ !

*ಹಾಡು :*

*ಹಿಟಾಚಿ ಕಂಪನಿ ಜೆಸಿಬಿ*
*ನಿನಗಿರುವ ಮರುಕ ನಮ್ಮ ಜನಕ್ಕಿಲ್ಲ ॥*

*ಯುದ್ಧವ ಬಿಟ್ಟು ಅಭಿವೃದ್ಧಿ ಮಂತ್ರ ಹಿಡಿದು*
*ಹೊಸ ವೇಷ ತೊಟ್ಟು ಬಂದೆ*
*ಆ ಲೋಕದ ವಿಚಿತ್ರ ಜೀವಿ ನಿನದೆಂತ ಮನಸು*
*ಈ ಲೋಕದ ನೋವಿಗೆ ನಿನ್ನಾ ಮನವು ಕರಗಿ*

## ದೃಶ್ಯ –3

(ಜೆಸಿಬಿ ಬಳಸಿ ಹೂಳು ಎತ್ತುವ ಕೆಲಸ ಮಾಡುತ್ತಿದ್ದಾರೆ ಒಂದು ಕಡೆ ಕಂಟ್ರಾಕ್ಟರ್ ಚನ್ನಂಜಯ್ಯ ಟ್ರಿಮ್ಮಾಗಿ ವೈಟ್ ಅಂಡ್ ವೈಟ್‌ನಲ್ಲಿದ್ದಾನೆ [ಬಿಳಿ ಪಂಚೆ, ಬಿಳಿ ಅಂಗಿ, ಬಿಳಿ ಟವಲ್] ಕರೀ ಖದೀಮನ ತರಾ ಇದ್ದಾನೆ. ಒಬ್ಬ ಜೆಸಿಬಿ ಕಂಟ್ರೋಲ್ ಮಾಡ್ತಿದ್ದಾನೆ. ಸಿಂಗಾರಿ ಅಲ್ಲಿಗೆ ಆಗಮನ.)

ಸಿಂಗಾರಿ : ಓಹೋ, ಚನ್ನಂಜಯ್ಯ ನಿನ್ನ ಜೆಸಿಬಿ ಚಲೋ ಕೆಲ್ಸ ಮಾಡ್ತದಪ. ಅಲ್ಲಾ ಅದು ಮಣ್ಣ ಕೆರಿಯೋದೇನು ? ಎತ್ತಿ ಒಗೆಯಾದೇನು ? ಈ ಕೆರೆನೆಲ್ಲಾ ಇನ್ನೊಂದು ವಾರ್ದಾಗೆ ಎಲ್ಲಾ ಅಗ್ದುಬಿಡ್ತದಾ ಹೆಂಗೆ ?

ಚನ್ನಂಜಯ್ಯ : ಏನ್ಲಾ ಸಿಂಗಾರಿ ! ಇಲ್ಲಿಗಂಟಾ ಬಂದಿದ್ದೀಯಾ ಮಾಡಾಕ್ಕೆ ಏನ್ ಕೇಮಿಲ್ವಾ ?

ಸಿಂಗಾರಿ : ಇರಾ ಕೆಲ್ಸಾನೆಲ್ಲಾ ನಿನ್ನ ಜೆಸಿಬಿ ಕಿತ್ಕಂತಲ್ಲಪ್ಪಾ !

ಚನ್ನಂಜಯ್ಯ : (ಚನ್ನಂಜಯ್ಯನಿಗೆ ಕಸಿವಿಸಿಯಾಗುತ್ತದೆ.) ಮಾಡಯ್ಯ, ನೀನ್ ಕೆಲ್ಸ್ ಮಾಡ್ತೀನಿ ಅಂದ್ರೆ ಕೆಲ್ಸಿಲ್ವೆ. ಮಕ್ಳು ಕೆಲ್ಸ ಮಾಡ್ಲಾಗ್ದೇ ಹೋತ್ಲಾ ಹೊಡ್ಕಂಡಿದ್ದೀರಾ, ಅದ್ಕೆ ನಿಮ್ಮ ಕೆಲ್ಸಾನೆಲ್ಲಾ ಇದ್ರ ಕಡೀಂದ ಮಾಡಿಸ್ಬೇಕಾಯ್ತು. ನಿಮ್ಮ ಕೆಲ್ಸ, ನಿಮ್ಮ ದುಡ್ಡು, ಕೆಲ್ಸ ಮಾಡದಿದ್ರೂ ನೂರ್ ಇಪ್ಪತ್ತೈದು ರೂಪಾಯನ್ ನಂಬಿ ನೀವೇ ತಾನೆ ಕೆಡ್ತಾ ಇರಾದು ! ನನ್ಗೇನ್ರಯ್ಯ ಈ ಊರು ಇಲ್ಲಾ ಇನ್ನೊಂದು ಊರು. ಒಂದಲದಿದ್ರ ಇನ್ನೊಂದು ಜೆಸಿಬಿ ಹದಿನೆಂಟು ಮಡಿಗಿದ್ದೀನಿ ಹದಿನೆಂಟ ಅಗಿಯದು ಕಡದು ಕಟ್ಟೆ ಹಾಕಾದು, ಎಷ್ಟೈತೆ ಅಂತಾ ಗೊತ್ತಾ (ಜೆಸಿಬಿ ತೋರಿಸುತ್ತಾ) ಇದೇ ನನ್ನ ಭಾಗ್ಯಲಕ್ಷ್ಮಿ. ಇದಾ ತಗಂಡೇ ತಗಂಡೆ ನನ್ನ ಗ್ರಾಚಾರ್ವೇ ಬ್ಯಾರೆ ಆಯ್ತು. ನಾನು ನಿನ್ನಂಗೆ ಮೊದ್ಲೆಲ್ಲಾ ಡ್ಯಾಮಿಗೆ ಚಪ್ಪಡಿ ಹೊರ್ತಿದ್ದೆ ಗೊತ್ತೊ ?

ಸಿಂಗಾರಿ : (ಮೆಲ್ಲಗೆ) ಅವ್ನೆಲ್ಲಾ ಈಗ ನಮ್ಮ ತಲೆ ಮ್ಯಾಲೆ ಹಾಕ್ತಾ ಇದಿಯಾ !

ಚನ್ನಂಜಯ್ಯ : ಆ . . . . ಏನಂದೇ ?

ಸಿಂಗಾರಿ : ಚನ್ನಂಜಯ್ಯ ಈ ಕೆಲ್ಸ ಉದ್ಯೋಗ ಖಾತ್ರೀದು ತಾನೆ ?

ಚನ್ನಂಜಯ್ಯ : ಯಾಕೆ ? ಯಾತ್ರದ್ ಆದ್ರೆ ನಿನ್ಗೇನು ?

ಸಿಂಗಾರಿ : ಮಾಹಿತಿಗಾಗಿ ಕೇಳ್ದೇ. ಹೌದು ತಾನೇ ?

ಚನ್ನಂಜಯ್ಯ : (ಸಿಟ್ಟಿನಿಂದ) ಹೌದು ಏನೀಗ ? ನಿಂಗೇನ್ಬೇಕು ?

ಸಿಂಗಾರಿ : ಈ ಸ್ಕೀಮು ಒಟ್ಟು ಎಷ್ಟು ದುಡ್ಡಿಂದು ?

ಜೆಸಿಬಿ : ಸಿಂಗಾರಿ ಸಖತ್ತಾಗಿ ಕೇಳ್ತಿದ್ದೀಯಾ ? ಕೇಳು ಕೇಳು, ಯಾವುದ್ನೂ ಬಿಡ್‌ಬ್ಯಾಡ. ಮಗ ತಿಂದು, ತಿಂದು, ನುಂಗಿ ನುಂಗಿ ಬಲೆ ಬಲ್ತು ಬಿಟ್ಟವೆ. (ಯಾರೋ ಮಾತಾಡಿದಂತಾದುದನ್ನು ಗಮನಿಸಿ ಜೆಸಿಬಿ ನೋಡಿ ಹ್ಞಿ ಹ್ಞಿ ಹ್ಞಿ ಎಂದು ಹಲ್ಲು ಕಿರಿಯುತ್ತಾ)

ಚನ್ನಂಜಯ್ಯ : ಎಷ್ಟು ದುಡ್ಡಿಂದಾದ್ರೆ ನಿಂಗೇನು ? ಹೋಗೊ ಕೆಲ್ಸ ನೋಡು. ಏನೋ ! ನನ್ನತ್ರವೇ ಹಫ್ತಾ ವಸೂಲಿ ಮಾಡಕೆ ನೋಡ್ತೀದ್ದೀಯಾ ? ಲೋ . . . . ನಾನು ಮೇಗ್ಲಿಂದ ಕೆಳ್ಗಿನವ್ರ ತನ್ಕ ಕೊಟ್ಟೆ ಬಂದಿರಾದು ಹೋಗೊ ! ಈ ನಿಮ್ ಗ್ರಾಮ ಪಂಚಾಯ್ತಿ ಅಧ್ಯಕ್ಷರನ್ ಸಾಕ್ತಾ ಇರಾದು ನಾನೇ ಕಣಯ್ಯ.

ಸಿಂಗಾರಿ : (ಪಕಪಕನೆ ನಗುತ್ತಾ) ಸೋ ಅಂದುದ್ಕೆ ಸೋಬಾನೇನೆ ಹೇಳ್ತಾ ಇದ್ದೀಯಲ್ಲಯ್ಯ ಚನ್ನಂಜಯ್ಯ. ನೀನು ಎಲ್ಲರನ್ನೂ ಒಳಗಾಕಿಕೊಂಡಿರ್ಬೌದು ಆದ್ರೆ ಜನಾನೆಲ್ಲಾ ಒಳಗಾಕಣಾಕ್ಕಾಗಲ್ಲ. ಸಾಮಾಜಿಕ ನ್ಯಾಯ ಅನ್ನೋದಿದ್ದಂಗೇ ಸಾಮಾಜಿಕ ಲೆಕ್ಕ ಅಂತಾ ಐತಪ್ಪ. ಅದಕ್ಕೆ ನೀನು ಉತ್ತರ ಕೊಡ್ಲೇ ಬೇಕು.

ಜೆಸಿಬಿ : ಕೊಡಾಗಂಟ ಬಿಟ್ಗಿಟ್ಟೀರಾ, ಇವ್ನಗೆ ಬಾಚಿಕೊಳ್ಳಾದು ಬಿಟ್ರೆ ಲೆಕ್ಕಾ ಪಕ್ಕಾ ಏನೂ ಇಲ್ಲ! (ಮತ್ತೆ ಯಾರೋ ಮಾತಾಡಿದಂತೆ ಜೆಸಿಬಿಯನ್ನು ಅನುಮಾನದಿಂದ ನೋಡಿ ಅದರ ಸುತ್ತೆಲ್ಲಾ ಒಂದು ರೌಂಡ್ ಹೋಗಿ ಬರ್‍ತಾನೆ ಆಶ್ಚರ್ಯದಿಂದ)

ಚನ್ನಂಜಯ್ಯ : ಜೆಸಿಬಿನೂ ಮಾತಾಡುತ್ತಾ ? ಅದೂ ನನ್ನ ಜೆಸಿಬಿ ! ನನ್ನ ವಿರುದ್ಧವಾಗೆ !

ಸಿಂಗಾರಿ : ಸಾಮಾಜಿಕ ಲೆಕ್ಕ ತಪಾಸಣೆ ಮಾಡಾಕೆ ನಿಂತ್ರೆ ಜೆಸಿಬಿ ಏನಪ್ಪಾ ಪೇಪರ್‍ರು ಪೆನ್ನೂ ಮಾತಾಡ್ತಾವೆ. ಅಷ್ಟೇ ಅಲ್ಲಾ ನಿಮ್ಮಂದೆ ಸರಳುಗಳಿರೋ ಚಿತ್ರಗಳ್ನ ಬರೀತಾವೆ. ಸಾಮಾಜಿಕ ಲೆಕ್ಕ ಅಂಬೋದು . . . .

ಹಾಡು : (ತತ್ವಪದದ ರೀತಿಯಲ್ಲಿ) ಸಾಮಾಜಿಕ ಲೆಕ್ಕವೆಂಬುದು
ಸಾಮಾಜಿಕ ನ್ಯಾಯದಂತೆ ॥ ಅಣ್ಣ ಕೇಳಣ್ಣ ॥ ॥ ಅಕ್ಕ ಕೇಳವ್ವ ॥

ಲೆಕ್ಕವಿಲ್ಲದ ರೊಕ್ಕ
ಕಣಜ ಹೆಗ್ಗಣ ಹೊಕ್ಕ
ಲೆಕ್ಕ ಇದ್ರೆ ಪಕ್ಕ
ಬದ್ಕು ಎಂಥಾ ಚೊಕ್ಕ ॥ 1 ॥

## ದೃಶ್ಯ 4

(ಊರ ಪಂಚಾಯಿತಿ ಸೇರಿದೆ. ಒಂದು ಕಡೆ ಸಿಂಗಾರಿ. ಮತ್ತೊಂದು ಕಡೆ ಚನ್ನಂಜಯ್ಯ. ಎತ್ತರದ ಕಟ್ಟೆಯಲ್ಲಿ ಅಧ್ಯಕ್ಷರು ಜಡ್ಜ್ ತರ ಕುಳಿತಿದ್ದಾರೆ. ಚನ್ನಂಜಯ್ಯ ಅಪರಾಧಿಯಾದರೂ ತುಂಬಾ ರೋಫಾಗಿಯೇ ಜಬರ್‌ದಸ್ತಿನಿಂದ್ಲೇ ಇದ್ದಾನೆ. ಗುಜು ಗುಜು ಗದ್ದಲ ಅಧ್ಯಕ್ಷೆ ಸೆಕ್ರೆಟರಿ ಮುಖ ನೋಡಲು ಸೆಕ್ರೆಟರಿ ನರಿ ತರಹ ಹ್ಹಿ ಹ್ಹಿ ಎನ್ನುತ್ತಾ ಸೂಚನೆ ಅರ್ಥವಾದವನಂತೆ ಸಭೆ ಆರಂಭಿಸಲು ಸಜ್ಜಾಗುತ್ತಾನೆ.)

ಸೆಕ್ರೆಟರಿ : (ಇವನೊಬ್ಬ ಮಹಾಪ್ರಾಣಾಕ್ಷರಕ್ಕೆ ಎಲ್ಲಾ ಪದಗಳನ್ನು ಅಂತ್ಯ ಮಾಡುತ್ತಿರುತ್ತಾನೆ) ಮಹಾಜನಗ್ಳೇ ಜವಗಾನಳ್ಳಿ ಮಂಡಲ ಪಂಚಾಯ್ತಿ ವ್ಯಾಪ್ತಿಗೆ ಬರತಕ್ಕಂಥ ಗ್ರಾಮಗಳ ಮಹಾ ಪ್ರಜೆಗಳೇ ಪ್ರಜಾಪ್ರಭುತ್ವ ಇವತ್ತು ಘಟ್ಟಿಯಾಗ್ಬೇಕಂದ್ರೆ ಜನಾಭಿಪ್ರಾಯ ಮುಖ್ಯ ಅಂದ್ರೆ ನೀವು ಮುಖ್ಯ ನೀವಿಲ್ಲದಿದ್ರೆ ನಾವಿಲ್ಲ. ನಾವಿಲ್ಲ ಅಂದ್ರೆ ಡೆಮಾಕ್ರಸಿ ಇಲ್ಲ.

(ಅಧ್ಯಕ್ಷರಿಗೆ ಕಸಿವಿಸಿಯಾಗುತ್ತದೆ. ದುರುಗುಟ್ಟಿ ಒಮ್ಮೆ ಸೆಕ್ರೆಟರಿಯನ್ನು ನೋಡುತ್ತಾರೆ. ಸೆಕ್ರೆಟರಿನೂ ಸರಿಯಾಗಿ ಅದೇ ಸಮಯಕ್ಕೆ ಅಧ್ಯಕ್ಷರನ್ನು ನೋಡಿ ಗಲಿಲಿಗೊಂಡು)

ಸರಿ, ಸರಿ ಮೇಡಂ (ಎಂದು ತಾನು ನಿಲ್ಲುವ ಭಂಗಿ, ಮಾತಾಡುವ ಶೈಲಿ ಎಂಬುದನ್ನೂ ಬದಲಿಸಕೊಂಡವನಂತೆ ಅಭಿನಯಿಸುತ್ತಾ) ಇವತ್ತು ಉದ್ಯೋಗ ಖಾತ್ರಿ ಯೋಜ್ನೆಯ ಸಾಮಾಜಿಕ ಲೆಕ್ಕ ಪರಿಶೀಲನಾ ಸಭೆಯನ್ನು ಇಲ್ಲಿ ಕರೆದಿದ್ದೇವೆ. ಸಾಮಾಜಿಕ ಲೆಕ್ಕ ಸಮಾಜಕ್ಕೆ ಬಾಳ ಮುಖ್ಯ. ಮೊದ್ಲು ನಮ್ಮ ಮನೆಗೇ ಲೆಕ್ಕ ಮುಖ್ಯ ಹಾಗೆಯೇ ನಮ್ಮ ಪಕ್ಕದ ಮನೆ ಲೆಕ್ಕಾನೂ ಮುಖ್ಯ. ನಮ್ಮ ಊರ ಲೆಕ್ಕಾ ಮುಖ್ಯ. ನಮ್ಮ ದೇಶದ ಲೆಕ್ಕಾನೂ ಮುಖ್ಯ. ಯಾವ ಲೆಕ್ಕ ಮುಖ್ಯ ಅಲ್ಲ ನೀವೇ ಹೇಳಿ ? (ಅಧ್ಯಕ್ಷರ ಕಡೆ ತಿರುಗುತ್ತಾ ಹ್ಹಿ ಹ್ಹಿ ಹ್ಹಿ . . . . ಅಧ್ಯಕ್ಷೆ ಹಲಲ್ಲು ಕಡಿಯುತ್ತಾ ಕೆಂಡಾಮಂಡಲವಾಗುತ್ತಾಳೆ. ಅದನ್ನು ಗಮನಿಸಿದ ಸೆಕ್ರೆಟರಿ ವಿಷಯಕ್ಕೆ ಬರುವವನಂತೆ) ಉದ್ಯೋಗ ಖಾತ್ರಿ ಯೋಜ್ನೆಯ ಸಾಮಾಜಿಕ ಲೆಕ್ಕ ಪರಿಶೋಧನಾ ಸಮಿತಿಯ ಸಭೆಯನ್ನು ಕರೆಯಬೇಕೆಂದು ಮಾನ್ಯ ಸದಸ್ಯರಲ್ಲೊಬ್ಬರಾದ ಶ್ರೀಮಾನ್ ಗೌರವಾನ್ವಿತ ಪ್ರಜೆಗಳೂ ಆದಂತಹ ಜವಗಾನಳ್ಳಿಯ ಸತ್ಪ್ರಜೆಗಳೂ ಆದಂತಹ ಮಾನ್ಯ ಶ್ರೀ ಸಿಂಗಾರಿಗೌಡ ಉರುಫ್ ಸಿಂಗಾರಿ ಅವರು ಬಿನ್ ದೊಡ್ಡ ಜವರಾಯಿ ತಿಮ್ಮಗೌಡ ಅವರು ಪಂಚಾಯ್ತಿ ಸಭೆ ಸೇರಿ ತೀರ್ಮಾನಿಸಬೇಕಾಗಿರುವ ವಿಷಯವಾಗಿರುವುದನ್ನು ಗ್ರಾಮ ಪಂಚಾಯ್ತಿ ಗೌರವಾನ್ವಿತ ಮಹಿಳೋನ್ಮಣಿಗಳಾದ ಜವಗಾನಳ್ಳಿಯ ಮಾನ್ಯ ಗ್ರಾಮ ಪಂಚಾಯ್ತಿ ಅಧ್ಯಕ್ಷೆಯರೂ ಆದಂತಹ ಚಿರಂಜೀವಿ ಸೌಭಾಗ್ಯವತಿಯರೂ ಧೀರ್ಘ ಸುಮಂಗಲಿಯರೂ ಆದಂತಹ ಚಿಕ್ ತಾಯಮ್ಮನವರ ನೇತೃತ್ವದಲ್ಲಿ ಈ ಸಭೆ ಸೇರಲಾಗಿಯೂ ಗೌರವಾನ್ವಿತರೆಲ್ಲರೂ ಈ ಪ್ರಕಾರವಾಗಿ ಸೇರಲಾಗಿ ಮುಖ್ಯವಾಗಿ ಸಾಮಾಜಿಕ ಲೆಕ್ಕ ! (ಅಧ್ಯಕ್ಷರತ್ತ ನೋಡುತ್ತಾ) ಅದರ ಬಗ್ಗೆ ಈಗಾಗಲೇ ಮಾತಾಡಿದ್ದೇನೆ. ಮುಖ್ಯ ವಿಷಯ ನಮ್ಮ ಆಸುಪಾಸಿನ ಪ್ರಖ್ಯಾತ ಕಂತ್ರಾಕ್ಟರ್ ಆದಂತಹ ಚನ್ನಂಜಯ್ಯನವರ ಕಾಮಗಾರಿ ಇತ್ಯಾದಿಗಳ ಲೆಕ್ಕಾಚಾರ ವಿಚಾರವಾಗಿ ವಿಚಾರಣೆ ಎಂಬುದು ಇವತ್ತಿನ ಮುಖ್ಯ ಅಜೆಂಡಾ ಆಗಿರುತ್ತದೆ. ಪರಂತು, ಆ ಸಂಬಂಧವಾಗಿ ತಾವುಗಳೆಲ್ಲಾ ನೆರೆದಿರುವುದು ಇವತ್ತು ನಮಗೆ ಮತ್ತು ನಮ್ಮ ಪಂಚಾಯ್ತಿಗೆ ಘನಗೆ ತರುವಂಥ ವಿಚಾರವಾಗಿದೆಯೆಂಬುದು ನನ್ನ ಅಂಬೋಣ. (ಕಸಿವಿಸಿಯಿಂದ) ಈಗ ಮಾನ್ಯ

ಸನ್ಮಾನ್ಯ ಅಧ್ಯಕ್ಷರಾದಂಥ ಚಿರಂಜೀವಿ ಸೌಭಾಗ್ಯವತಿಯರೂ ಧೀರ್ಘ ಸುಮಂಗಲಿಯರೂ ಆದಂಥ ಚಿಕ್‌ತಾಯಮ್ಮನವರು ಒಂದೆರ್ಡು ಮಾತಾಡ್ಬೇಕಾಗಿ ತಮ್ಮೆಲ್ಲರ ಪರವಾಗಿ ಅವರಲ್ಲಿ ವಿನಂತಿಸಿಕೊಳ್ಳುತ್ತೇನೆ.

ಚಿಕ್ಕತಾಯಮ್ಮ : ಸಾಮಾಜಿಕ ಲೆಕ್ಕ ಪರಿಶೀಲನಾ ಸಮಿತಿಯ ಸಭೆ ಸೇರಿರುವುದು ತುಂಬಾ ಸಂತೋಷ. ಉದ್ಯೋಗ ಖಾತ್ರಿ ಯೋಜನೆ ಬಂದು ನಮ್ಮ ಜನಕ್ಕೆಲ್ಲಾ ಒಳ್ಳೇದೇ ಆಗಿದೆ. (ಸೆಕ್ರೆಟರಿ ಫ್ಹಿ ಫ್ಹಿ ಫ್ಹಿ ಬಾಳ ಒಳ್ಳೇದಾಗಿದೆ ಎಂಬಂತೆ ಹಾವಭಾವ) ಸೆಕ್ರೆಟರಿಗಳು ತಮ್ಮ ಪರಿಚಯ ಭಾಷಣವನ್ನೇ ಉದ್ದ ಮಾಡಿ, ಮುಖ್ಯ ವಿಷಯವನ್ನೇ ಮೂಲೆ ಗುಂಪು ಮಾಡಿಬಿಟ್ರು. ಸಿಂಗಾರಿಗೌಡ್ರು ಆಪಾದಿಸಿರುವಂತೆ ಚನ್ನಂಜಯ್ಯನ ಕಂಟ್ರಾಕ್ಟರ್‌ಗಿರಿ ಉದ್ಯೋಗ ಖಾತ್ರಿ ಯೋಜ್ನೆಗೆ ಯೋಗ್ಯವಾದದ್ದಲ್ಲ ಎಂಬುದು ನನ್ಗೂ ಮನವರಿಕೆ ಆಗಿದೆ. ಈ ಬಗ್ಗೆ ಚರ್ಚೆ ನಡಿಯಲಿ.

ಚನ್ನಂಜಯ್ಯ : ಲೋ ಸಿಂಗಾರಿ. ಏನೋ ಅನಾಹುತ ಆದವ್ರ ತರಾ ಹಿಂಗೆಲ್ಲಾ ಮಾಡ್ತಿದ್ದೀರ. ಸರ್ಕಾರಿ ಸ್ಕೀಮು ಬಿಲ್ಲು ಖರ್ಚು, ವೆಚ್ಚ ತೋರದೇ ದುಡ್ಡು ಕೊಟ್ಟಾರಾ ?

ಸಿಂಗಾರಿ : ಸಾಮಾಜಿಕ ಲೆಕ್ಕ ಪರಿಶೀಲನಾ ಸಮಿತಿ ಸದಸ್ಯನಾಗಿ ಮಾಹಿತಿಗಾಗಿ ಕೇಳಿದ ಮಾತುಗಳನ್ನೆಲ್ಲಾ ನೀನು ಅಲಕ್ಷ್ಯ ಮಾಡಿದ್ದೀಯ. ಒಂದು. ಎರ್ಡು – ಜನ ಮಾಡಬೇಕಾಗಿರೋ ಕೆಲಸಾನ ನಿನ್ನ ಜೆಸಿಬಿಯಲ್ಲಿ ಮಾಡಿಸ್ತಿದೀಯಾ. ಮೂರು ಲೆಕ್ಕಪಕ್ಕಾ ಇಲ್ಲ ಅನ್ನಾದು ನಮ್ಗೆ ಮೇಲ್ನೋಟಕ್ಕೆ ಗಮನಕ್ಕೆ ಬಂದಿದೆ.

ಚನ್ನಂಜಯ್ಯ : ಸಿಂಗಾರಿ ಇಲ್ಲದ ಉಸಾಬರಿ ಮಾಡಿ ಬೊಂಡದಂಗೆ ಉಬ್ಬಿ ಹೋಗ್ಬ್ಯಾಡ. ಪಿನ್ನ ಚುಚ್ಚಿದ್ರೆ ಬಲೂನು ಏನಾಗ್ತದೆ ?

ಸಿಂಗಾರಿ : ಅದೇನಾಗ್ತದೆ ಹೇಳಿಬಿಡು. ಜನರ ಯೋಜ್ನೇನ ಜನ ನಿರ್ವಾಣೆ ಮಾಡ್ಬೇಕು ಹೊರ್ತಾಗಿ ನಿನ್ನ ಜೆಸಿಬಿ ಅಲ್ಲ.

ಚನ್ನಂಜಯ್ಯ : ಉದ್ಯೋಗ ಖಾತ್ರೀಲಿ ಕೆಲ್ಸ ಮಾಡಕ್ಕೆ ಯಾರೂ ಬರಾದೇ ಇಲ್ಲ. ಮಾನ ಹೋಯ್ತದೇಂತ, ಮರ್ಯಾದೆ ಕಮ್ಮಿಯಾಯ್ತದೇಂತ.

ಸಿಂಗಾರಿ : ಯಾಕೆ ಕಳ್ಳ ದುಡ್ಡು 125 ರೂಪಾಯ್ನ ನಿನ್ನತ್ರ ಇಸ್ಕಾಳ್ಳಾಕೆ ಮಾನ ಹೋಗಲ್ವಂತಾ ? ಮರ್ಯಾದೆ ಕಮ್ಮಿ ಅಗಲ್ವಂತಾ ? ನೀನು ಅಧ್ಯಕ್ಷರ್ನೇ ಕಂಡ್ಕೊಂಡಂಗೆ ಡೈಲಾಗ್ ಹೊಡೀತಿದ್ದೆ. ಅಲ್ಲಿ ಕೆರೆ ಅಂಗಳ್ದಾಗೆ ಈಗ ಅವ್ರೆದ್ರೀಗೇ ಹೇಳ್ಬಿಡು. ಎಷ್ಟು ಕೊಟ್ಟಿದ್ದೀಯಾ?

ಚನ್ನಂಜಯ್ಯ : ಹೇ ನಾನೆಲ್ಲಿ ಹಂಗಂದೆ ?

(ಜೆಸಿಬಿ ಜನರ ನಡುವಿನಿಂದ ಪಂಚಾಯಿತಿ ಹತ್ರ ಬಂದು ನಿಲ್ಲುತ್ತೆ.)

ಜೆಸಿಬಿ : ಸುಳ್ಳು ಹೇಳ್ತಾ ಇದ್ದೀಯಾ. ಸಿಂಗಾರಿ ಹೇಳಿದ್ದು ನಿಜ.

ಸಿಂಗಾರಿ : ನಿನ್ನ ಜೆಸಿಬಿಗೆ ಇರೋ ಒಂದೀತು ನಿಯತ್ತೂ ನಿನ್ಗೆ ನಿನ್ ಮಾತಿನ್ ಮ್ಯಾಲಿಲ್ವಲ್ಲಯ್ಯ ?

(ಅಧ್ಯಕ್ಷೆ ಕೋಪಗೊಂಡು)

ಚಿಕ್ಕತಾಯಮ್ಮ : ನಿನ್ನ ಪುಡಿಗಾಸ್ನ ಯಾರ್ಗೆ ಕೊಟ್ಟಿದ್ದೀಯಾ ಹೇಳಯ್ಯಾ ? ನನ್ನ ಹೆಸರಿಗ್ಯಾಕ್ ಮಸೀ ಬಳೀತೀಯಾ?

ಚನ್ನಂಜಯ್ಯ : ನಿಮ್ಮ ಯಜಮಾನ್ರ ಕಡೀಕೆ ತಲುಪಿಸಿದ್ದೆ. (ಸೆಕ್ರೆಟರಿ ಕಸಿವಿಸಿಗೊಳ್ಳುತ್ತಾನೆ.) ಈ ಸೆಕ್ರೆಟರಿನೇ ಎಲ್ಲಾ ದಲ್ಲಾಳಿ ಮಾಡಿ ಕೊಟ್ಟಿದ್ದು.

ಸಿಂಗಾರಿ : ಸೆಕ್ರೆಟರಿ ಲೆಕ್ಕಾ ಪಕ್ಕಾ ಇರ್ಬೇಕಲ್ವಾ ?

ಸೆಕ್ರೆಟರಿ : ಹೌದೌದು ಮಾನ್ಯ ಸಿಂಗಾರಿಗೌಡ ಉರುಫ್ ಸಿಂಗಾರಿ ಅವ್ರೇ ಬಿನ್ ದೊಡ್ . . . .

ಸಿಂಗಾರಿ : ಹೊಯ್ ಮುಚ್ಚಯ್ಯ ಕಂಡಿದ್ದೀನಿ. ಗುಳ್ಳೆನರಿ ನೀನು. ಗುಳ್ಳೆನರಿ. ಮಾತಿನಾಗೆ ಮನೆ ಕಟ್ಟಿ ಮಾತಿನಾಗೇ ಕೆಡ್ವೋ ನನ್ಮಗ. ಮರ್ಯಾದೆಯಿಂದ ಲೆಕ್ಕ ಕೊಡು. ಯಾರ್‍ಯಾರಿಗೆ ಎಷ್ಟೆಷ್ಟು ಹಂಚಿಕೆ ಆಗೇತೇಂತ !

ಸೆಕ್ರೆಟರಿ : ಇಂಥಾ ಪಬ್ಲಿಕ್ಕಿನಾಗ ವೈಯಕ್ತಿಕ ಲೆಕ್ಕಗಳ್ನೆಲ್ಲಾ ಹೇಳಿದ್ರೆ ಸಾಮಾಜಿ ಸ್ವಾಸ್ಥ್ಯ ಕೆಡಬ್ಬುದೇನೋ ?

ಒಬ್ಬ : ಯೇ ಅದೇನ್ ಸರ್‍ಯಾಗಿ ಬೊಗ್ಳು, ಕಂತೆ ಪುರಾನ ಬಿಚ್‌ಬ್ಯಾಡ.

ಸೆಕ್ರೆಟರಿ : ಅಲ್ಲಾ, ಅನೇಕ ದೊಡ್ಡ ದೊಡ್ಡ ಕುಳಗಳ ಕುತ್ತಿಗೆಗೆ ಬರ್‍ಬೌದು ಅಂತಾ. ಗೌರವ ಕಾಪಾಡಾನ ಅಂತ.

ಸಿಂಗಾರಿ : ಚನ್ನಂಜಯ್ಯ, ಇಲ್ಲದ ದೌಲತ್ತು ಮಾಡ್ತಾವ್ನೆ ಸೆಕ್ರೆಟರಿ. ನೀನೇ ಯಾರ್‍ಯಾರಿಗೇನೇನು ಬಾಬ್ತು ಕೊಟ್ಟಿದ್ದೀಯಾ ಹೇಳ್ಬಿಡು.

ಚನ್ನಂಜಯ್ಯ : ಅಧ್ಯಕ್ಷರ ಟಚ್ ಮಾಡಾಕ್ಕಾಗಲ್ಲ ಅಂತಾ ಗೊತ್ತಾಗಿ ಅವ್ರ ಯಜಮಾನ್ರನ್ನ ಟಚ್ ಮಾಡಿದ್ವಿ. ವರ್ಕ್‌ಔಟ್ ಆಯ್ತು. ಈ ಕಲ್ಲಣ್ಣ, ಸತ್ಯಪ್ಪ, ಗುರಪ್ಪ ಇವ್ರಿಗೆಲ್ಲಾ ಅವ್ರವ್ರ ಬಾಬ್ತು ಹೋಗೇತಪ್ಪ.

(ಕಲ್ಲಣ್ಣ, ಸತ್ಯಪ್ಪ, ಗುರಪ್ಪ ಕಸಿವಿಸಿಗೊಂಡು ತಲೆ ತಗ್ಗಿಸಿ ಕೂತಿರ್‍ತಾರೆ.)

ಸಿಂಗಾರಿ : ಯಂಗ್ರಯ್ಯ ಸಾಧ್ಯ ? ತಿಂದ ಮನೀಗೇ ಕನ್ನ ಹಾಕಾದು. ನೀವು ಸಾಮಾಜಿಕ ಲೆಕ್ಕ ಪರಿಶೀಲನಾ ಸಮಿತಿ ಸದಸ್ಯರು. ನೀವೂ ಶಾಮೀಲಾ ?

ಜೆಸಿಬಿ : ಸೆಕ್ರೆಟರಿನೇ ಅವರ ಮೂತಿಗೆಲ್ಲಾ ಬೆಲ್ಲ ಸವ್ರಿದೋನು. ಆದ್ರೂ ಸವರಿದ ಬೆಲ್ಲಾನ ಇವು ನೆಕ್ಕಬಾರದಾಗಿತ್ತು. ಇವ್ರ ಹಲ್ಕಟ್ ಕೆಲ್ಸದಿಂದ್ಲೇ ನಾನು ಕರೆ ಹೂಳ ಎತ್ತಂಗಾಗಿದ್ದು. ಎಲ್ಲರ ಜಾಬ್ ಕಾರ್ಡ್ ಸೆಕ್ರೆಟ್ರಿ ಹತ್ರಾನೇ ಅವೆ. ಚನ್ನಂಜಯ್ಯನ್ನೂ ಕುಲಗೆಡಿಸಿರೋನು ಈ ಸೆಕ್ರೆಟ್ರೀನೇ.

ಕಲ್ಲಣ್ಣ : ನಾವೇನ್ ನಿಮ್ಮಷ್ಟು ಅನ್ಯಾಯ ಮಾಡಿಲ್ಲ

ಚಿಕ್ಕತಾಯಮ್ಮ : ಕೈಯ್ಯಾಗೆ ತಿಂದ್ರೂ ಅದೇನೆ ಸ್ಪೂನಾಗೆ ತಿಂದ್ರೂ ಅದೇನೇ, ಒಟ್ನಲ್ಲಿ ತಿಂದಿದ್ದೀರಿ ತಾನೇ ?

ಜೆಸಿಬಿ : (ಜೆಸಿಬಿ ದುಃಖಿಸುತ್ತಾ) ನಿಮ್ಮ ದಮ್ಮಯ್ಯ ನನ್ ಮೊದ್ಲು ಇಲ್ಲಿಂದ ಓಡ್ಸಿ. ನಿಮ್ದು ನೀವೇ ತೊಳ್ಕಳಿ, ನಿಮ್ದು ನೀವೇ ಮಾಡ್ಕಳಿ. ನನ್ನನ್ನ ತೊಲಗಸ್ದೇ ಇದ್ರೆ ನಿಮ್ಗೆ ಉಳಿಗಾಲವಿಲ್ಲ.

ಸಿಂಗಾರಿ : ಈ ಜೆಸಿಬಿಗೂ ಇಂಥ ಮರುಕಾ ಮನುಷ್ಯಾಗಿದ್ದಿದ್ರೆ ಹಿಂಗೆಲ್ಲಾ ಎಲ್ಲಿ ಆಗ್ತಿತ್ತು . . . . ಮನುಷ್ಯಾನೇ ಯಂತ್ರ ಆದ್ಮೇಲೆ ಯಂತ್ರ ತಾನೇ ಏನ್ ಮಾಡ್ತದೇ ?

ಗುರಪ್ಪ : ನನ್ ಎಂಜಲ ಕಾಸ್ನ ನಾನು ವಾಪಸ್ಸು ಕೊಡ್ತಿದ್ದೀನಿ. (ಎನ್ನುತ್ತಾ ಜೇಬಿನಿಂದ 800 ರೂಪಾಯಿಗಳನ್ನು ತೆಗೆದಿಡುವನು. ಸಿಂಗಾರಿ ಅದನ್ನು ನೋಡಿ ಪಕಪಕನೇ ನಗುತ್ತಾ)

ಸಿಂಗಾರಿ : ಎಂಟು ಜನ ಉದ್ಯೋಗ ಖಾತ್ರಿ ಕೂಲಿ ಮಾಡಿದ್ರೆ ಇದೇ ದುಡ್ಡು ನಿನ್ಗೇ ಸಿಗುತ್ತೆ ಗುರಣ್ಣ. ನೀನು ದೊಡ್ಡ ಮನ್ಶ. ತಿಂದದ್ದ ದಕ್ಕಿಶಿಕೆಣಲಾರ್‍ದೆ ಕಕ್ಕಿದೆ. ಇನ್ನು ಕೆಲವ್ರು ಹೊಟ್ಟೆಗೇ ಇಟ್ಕಂಡವ್ರೆ. ಮುಕ್ಕಿದವ ಕಕ್ಲೇಬೇಕು ತಿಳ್ಕಳ್ಳಿ. ತೀರಾ ಮಿಕ್ಕೂ ಆ ದೇವ್ರೆ ನಮ್ಮೆಂದ ಕಕುಸ್ತಾನೆ. (ಸತ್ಯಪ್ಪನೂ ತನ್ನ ಜೇಬಿನ ಹಣವನ್ನು ಮುಜುಗರಪಡುತ್ತಾ ತೆಗೆದಿಡುತ್ತಾನೆ. 1300 ರೂಪಾಯಿಗಳನ್ನು ಸಿಂಗಾರಿ ಎಣಿಸುತ್ತಾನೆ) ಎಂಟ್ನೂರು + ಸಾವಿರ್‍ದ ಮುನ್ನೂರು ಕಲ್ಲಣ್ಣ ನಿಂದು ? (ಕಲ್ಲಣ್ಣ ನಿಧಾನಕ್ಕೆ ಜೇಬಿನಿಂದ ಹಣ ತೆಗೆದುಕೊಡುತ್ತಾನೆ 1600 ರೂಪಾಯಿಗಳನ್ನು ಸಿಂಗಾರಿ ಎಣಿಸುತ್ತಾ) + ಸಾವಿರ್‍ದ ಆರ್‍ನೂರು. ನಗುತ್ತಾನೆ. ಓಹೋ. ಅವ್ರವ್ರ ಲೆವೆಲ್ಲಿಗೆ ಸರ್‍ಯಾಗಿ ಲಂಚ. ಪವರ್‌ಫುಲ್ಲಾಗಿರೋನ್ಗೆ ಜಾಸ್ತಿ. ಆವ್ರೇಜಾಗಿರ್‍ನಾಗೆ ಮಿಡ್ಲು. ಡಿಪ್ರೆಸ್ಡ್ ಕ್ಯಾಸ್ಟ್‌ನೋನ್ಗೆ ಲೋ. ಆಹಾ. ಎಷ್ಟೊಂದ್ ಚೆನ್ನಾಗಿದೆ ಹಂಚಿಕೆ. ನರಿ ನಿಂದು ತಾ ಮರಿ. (ಸೆಕ್ರಟರಿ ಕಸಿವಿಸಿಗೊಳ್ಳುತ್ತಾನೆ.) ತನ್ನ ಕೋಟಿನ ಜೇಬಿನಿಂದ, ತನ್ನ ತಲೆಯ ಶೆಟ್ಟಿ ಟೋಪಿಯಿಂದ ನೋಟುಗಳ ಕಂತೆಯನ್ನು ಸಿಂಗಾರಿಗೆ ಕೊಡುತ್ತಾನೆ ಎಣಿಸಿ.

ಸಿಂಗಾರಿ : ಅಬ್ಬಾಬ್ಬಾ ಬರೋಬರಿ ಆರು ಸಾವ್ರ. ಅಲಾಲ ಚನ್ನಂಜಯ್ಯ ಏನಪ್ಪಾ ಎಲ್ರನ್ನೂ ದುಡ್ನಾಗೇ ಕೊಂಡ್ಕೊಂಡಿದ್ದೀಯಾ. (ದನಿ ಬದಲಿಸಿ) ಆ ಮಾನ್ಯ ಅಧ್ಯಕ್ಷರೇ ಈಗ ತಮ್ಮ ಸರದಿ. ನಿಮ್ಮ ಯಜಮಾನ್ರ ಬಾಬ್ತು

(ಅಧ್ಯಕ್ಷೆ ಚಿಕ್ಕತಾಯಮ್ಮ ನಿರ್ಧಾರಕ ಮನೋಭಾವದಿಂದ ತನ್ನ ಕೊರಳ ತಾಳಿ ತೆಗೆಯ ಹೋಗುತ್ತಾಳೆ. ಎಲ್ಲರೂ ಹೌಹಾರುತ್ತಾರೆ.)

ಸೆಕ್ರೆಟರಿ : ಅಮ್ಮಾರೆ, ಚಿ.ಸೌ. ದೀರ್ಘಸುಮಂಗಲಿಯರಾದ

ಚಿಕ್ಕತಾಯಮ್ಮ : ಬೆಂಕಿ ಬಿತ್ತು. (ತಾಳಿ ಕೈಲ್ಡಿದ್ಕೊಂಡು) ಊರೆಂಜಲ ತಿನ್ನೋ ನಾಯಿ ಕಟ್ಟಿರೋ ಈ ತಾಳಿ ತಾನೇ ನಂಗ್ಯಾಕೆ ಅದ್ರ ದುಡ್ಡಿಗೆ ಇದ್ನೇ ಮುರೆ ಹಾಕ್ಳಿ.

ಜೆಸಿಬಿ : ಇದು ಮರ್ಯಾದಸ್ಥರ ಮಾತು. ಮಾನಗೆಟ್ಟ ಗಂಡ್ಸು ಅವನ್ಯಾವನು ಇನ್ನೂ ಈ ಊರಿನ್ ಬದುಕ್ಯಾವ್ನಾ ?

(ಚಿಕ್ಕತಾಯಮ್ಮನ ಗಂಡ ಬರುತ್ತಾನೆ. ಬಂದು ತಲೆ ತಗ್ಗಿಸಿ ನಿಂತಿರ್ತಾನೆ)

ಚಿಕ್ಕತಾಯಮ್ಮ : ಇಲ್ಲಿಗ್ಯಾನ್ಯಾಕ್ ಬರಾಕೋದೆ. ನಿನ್ನ ಎಂಜ್ಲಿ ತೀರುವಳಿಗೆ ನೀನು ಕಟ್ಟಿದ್ ತಾಳೀನೇ ಕಿತ್ಕೊಟ್ಟಿದ್ದೀನಿ. ನಡಿ ಮನಿಗೆ.

(ತನ್ನ ಜೇಬಿನ ದುಡ್ಡನ್ನು ತೆಗೆದು ಸಿಂಗಾರಿಗೆ ಕೊಡುತ್ತಾನೆ ಎಣಿಸುತ್ತಾ)

ಸಿಂಗಾರಿ : ಅಬ್ಬಬ್ಬ ಬರೋಬ್ಬರಿ ಹತ್ತು ಸಾವಿರ. ಚಿನ್ನದಂಥ ನಮ್ಮ ಅಧ್ಯಕ್ಷರಿಗೆ ನೀನು ಕಲ್ಲಿದ್ದಲು ಕಣಯ್ಯ. ಥೂ ಅವ್ರ ಮುಖಕ್ಕೆ ಯಾಕೆ ಮಸಿ ಬಳೀತೀಯಾ. ಕೂಲಿ ಮಾಡಿ ಬದ್ಕೋ ಹೆಣ್ಣು ಮಗ್ಳಿಗೆ. (ಚನ್ನಂಜಯ್ಯನನ್ನು ಕುರಿತು) ಹೋಯ್ ಅಬ್ಬಬ್ಬಾ ಅಂದ್ರೆ ಹದಿನೈದು ಇಪ್ಪತ್ತು ಸಾವ್ರ ಚೆಲ್ಲಿ ಈ ನಮ್ಮೂರ ಉದ್ಯೋಗ ಖಾತ್ರಿ ದುಡ್ನೇ ದೋಚಾಕೆ ನೋಡಿದ್ಯಾ ? ತಗಾ ನಿನ್ ದುಡ್ಡು. ನಿನ್ನ ಜೆಸಿಬಿ ಜತೆ ರೈಟ್ ಹೇಳ್ತಾ ಇರು. ತಿರ್ಗಿ ನೋಡ್ದೆ. ನಿನ್ಗೆ ಏಟೇ. ದುಡ್ಡಿಗೆ ಮಾರ್ಕ್ಕೊಳಕ್ಕಾಗುತ್ತೇನ್ರಯ್ಯಾ? ಯೋಚ್ನೆ ನಮ್ದು. ಅದ್ನ ಸರ್ಯಾಗಿ ಇಟ್ಕಾಬೇಕಾಗಿರೋದು ನಮ್ಮ ಹೊಣೆ.

ಚಿಕ್ಕತಾಯಮ್ಮ : ಕಾಸು ಸಿಗುತ್ತೆ ಅಂದ್ರೆ ಕರಿಮಣ್ಣನ್ನೂ ಮಾರ್ತಾರೆ ಮಾರಾಯ್ರು

ಜೆಸಿಬಿ : ನೂರು ರೂಪಾಯ್ಗೆ ಎಂಥಾವ್ರೂ ಕೊಂಡ್ಕಾಬೌದು

ಸಿಂಗಾರಿ : ಅದು ಓಟಿನ ನೋಟಾಗಿ, ಲಂಚದ ದುಡ್ಡಾಗಿ, ಸಾರ್ವಜನಿಕ ದುಡ್ಡು ಕಾಸು ಅಂದ್ರೆ

(ಸ್ಟಿಲ್ – ಹಾಡಿಗೆ ಅಧ್ಯಕ್ಷಮ್ಮನ ಗಂಡ ತಲೆಗೆ ಬಟ್ಟೆ ಹಾಕಿ ವೇದಿಕೆ ಮಧ್ಯ ಬಾಗದಲ್ಲಿ ಕುಳಿತ್ತಿರುತ್ತಾನೆ. ಡ್ಯಾನ್ಸ್ )

*ಹಾಡು : ಸಾರ್ವಜನಿಕ ದುಡ್ಡು ಕಾಸು*
*ಬೇಕಾಬಿಟ್ಟಿ ಸಿಕ್ಕೋದಲ್ಲ*
*ಒಬ್ಬ ಮಾಡೋ ಅನ್ಯಾಯದಲ್ಲಿ*
*ಎಲ್ಲರ ಪಾಲು ಇರ್ತಾದಲ್ಲ ॥*

*ಎಂಜಲು ಎಂಜಲು ಎಂಜಲು*
*ಇದ್ಕೆ ಯಾಕೆ ಬಾಯ ಬಿಡ್ತೀರಿ*
*ನಮ್ಮ ದುಡಿಮೆಯ ದುಗ್ಗಾಣಿ*
*ಒಳ್ಳೆ ಬದುಕಿನ ಕಟ್ಟಾಣಿ ॥*

* * *

# ಹಕ್ಕು ಹರಕೊಂಡು ಹೋಯ್ತು ಅಧಿಕಾರ ಕಿತ್ಕೊಂಡು ಹೋಯ್ತು

– ಡಿ.ಎಸ್. ಚೌಗಲೆ.

## ದೃಶ್ಯ–1

(ಜಯಕುಮಾರ ಬಡವ ಹಾಗೂ ಹೈಸ್ಕೂಲು ಅರ್ಧಕ್ಕೆ ಬಿಟ್ಟವ. ಪಾಪ್‌ತಾರೆಯರ ತರಹ ಉಡುಗೆ–ತೊಡುಗೆಗಳು. ಮೈಕಲ್ ಜಾಕ್ಸನ್ ಹಾಡಿನ ನೃತ್ಯ ಶೈಲಿಯಲ್ಲಿ ಹಾಡುತ್ತ ರಂಗ ಪ್ರವೇಶಿಸುವನು. ಊರ ಹೊರಗೆ ಹನುಮಂತದೇವರ ಗುಡಿ. ಅದರ ಕಟ್ಟೆಯ ಮೇಲೆ ಮಾಸ್ತರ ಮಹಾಂತು, ರುದ್ರಪ್ಪ, ಭರಮಾ ಇರುವರು.)

*ಹಾಡು : ಬೆಳಗಿನ ಸೂರ್ಯ ಏಳೋ ಹೊತ್ತು*
*ನಾ ಕೆಲಸಕೆ ಹೊರಟು ನಿಂತಿರುವೆ*
*ಹೊಸ ಆಶಾಕಿರಣ ಮೂಡುವ ಎಡೆಗೆ*
*ಕೆಲಸವು ಕಠಿಣವೋ ಸುಲಭವೋ ಕಾಣೆ*
*ಯಾವುದಿದ್ದರೆ ಏನಂತೆ ಸ್ವಾಮಿ*
*ಹೊಟ್ಟೆಗೆ ಹಿಟ್ಟು ಮುಖ್ಯ ಅಲ್ಲವೇ ಮಹಾಸ್ವಾಮಿ!*
*ಕೆಲಸಕೆ ಬಂದ ಹೆಣ್ಣೋ ಗಂಡೋ*
*ಸಮಾನ ವೇತನ ಇಲ್ಲ ತರತಮ*
*ಕರಿಯ ಇರಲಿ ಬಿಳಿಯರೇ ಇರಲಿ*
*ಜಾತಿ, ಕುಲಗಳಿಲ್ಲಿ ಮುಖ್ಯ ಅಲ್ಲವೇ ಅಲ್ಲ*
*ಇದು ಯಾರ ಅನುಕಂಪದ ಭಿಕ್ಷೆಯಲ್ಲ*
*ಬೆವರು ಹನಿಗೆ ಮತ್ತೊಂದು ಬೆಲೆಯೇ ಇಲ್ಲ*
*ಬಡವರ ಬವಣೆಗೆ ತೆರೆದುಕೊಂಡಿದೆ ಈ ವಿಶ್ವ*
*ನೋವು ಮರೆತು ನಲಿದು ಗೈಯೋಣ ಕಾಯಕವ*
*ಉದ್ಯೋಗ ಅರಸಿ ಬಂದವಗೆ*
*ಉದ್ಯೋಗ ನೂರು ದಿನ*
*ನೀಡುತಾರೆ ಪ್ರತಿದಿನಕೆ ನೂರು ಧನ*
*ಇದು ಪವಾಡವಲ್ಲ ವಾಸ್ತವ*
*ಸರಕಾರವೇ ನೀಡಿದೆ ಈ ಹಕ್ಕು ಅಧಿಕಾರವ*

(ಹಾಡು, ಕುಣಿತ ನಿಲ್ಲುತ್ತದೆ. ಜಯಕುಮಾರ ಮಹಾಂತ ಮತ್ತು ಅವರ ಗೆಳೆಯರ ಕಡೆಗೆ ಬರುವನು.)

ಜಯಕುಮಾರ : ಹಾಯ್ ಮಾಂಟೋ, ರುದ್ರ ಅಂಡ್ ಭರಮಾ . . . . ಹೌ ಆರ್ ಯು ಮೈ ಗೈಸ್ ! ಐ ಮೀನ್ ಹೇಗಿದ್ದೀರಿ?

ಮಹಾಂತ ಮಾಸ್ತರ : (ವಿಡಂಬನಾತ್ಮಕವಾಗಿ) ನಾವ, ಹಿಂಗದೀವಿ ಬಿಡಪ...ಆದರ ತಮ್ಮ ಪರಿಚಯ ಆಗಲಿಲ್ಲ. ಯಾವ ಗ್ರಹದ ಜೀವಿಗಳು ? ಐ ಮೀನ್ ಯಾವ ದೇಶದೋರು ಅಂತ? ಆಫ್ರಿಕಾನೋ ಇಲ್ಲ ನೈಜೇರಿಯಾನೋ ?

ಜಯಕುಮಾರ : ಏಯ್ ಯು ಗೈಸ್, ಡೋಂಟ್ ಬಿ ಸಿಲ್ಲಿ (ರುದ್ರ–ಭರಮಾರಿಗೆ) ರುದ್ರಾ ಆ್ಯಂಡ್ ಭಮ್ಮು ! ನಿಮಗೂ ನನ್ನ ಗುರುತ ಸಿಗಲಿಲ್ಲೇನು ?

ರುದ್ರ : ಕೆಂಪ ಮಸಡ್ಯಾವರಷ್ಟ ಇಂಗ್ಲೀಷ್ ಮಾತಾಡತಾರ ಅಂದಕೊಂಡಿದ್ನಿ . . . . ಇಂವ (ಭರಮಾ ರುದ್ರನ ಮಾತನ್ನ ತಟ್ಟನೆ ತಡೆದು)

ಭರಮಾ : ಕರಿ ಮಸಡಿ ಮಂಗ್ಯಾ ! (ನಗುವರು.)

ಜಯಕುಮಾರ : ಹೆಯ್, ಡೋಂಟ್ ಬಿ ಜೋಕಿಂಗ್ ಯಾರ್ ! ಯು ನೋ, ಐ ಆ್ಯಮ್ ಯುವರ್ ಫ್ರೆಂಡ್, ಕ್ಲಾಸ್‌ಮೇಟ್– ನಾನ್ ಮೆಟ್ರಿಕ್ ಜಾಯಕೋ ! ಅಂದರ ಜಯಕುಮಾರ !

(ಅಚ್ಚರಿಯಿಂದ ಎಲ್ಲರೂ ಆತನನ್ನು ಅಪ್ಪುವರು.)

ಮಾಸ್ತರ : ಅಬಬಬ ! ಏನಲೇ ಇದು ನಿನ್ನವತಾರ ಜಯಾ ಸೂಳಿಮಗನ . . . . ಪೂರ ಬದಲಾಗಿದ್ದಿ ?

ಭರಮಾ : ಎಮ್ ಟೀವ್ಯಾಗ ಬರೋ ಆಫ್ರಿಕಾದ ಸಿಂಗರ್ ತರಹ ಆಗ್ಯಾನ ಮಗಾ.

ರುದ್ರ : ಇವನಾಪ್ಪನ ಮೊದಲs ಇದ್ದಲಿ ಜತಿ ಬೀಗತನ. ಆಮ್ಯಾಲ ಅದಕ್ಕೊಂದು ಈ ಅವತಾರದ ಸಿಂಗಾರ ! (ನಗುವರು)

ಜಯಕುಮಾರ : ಮಹಾಂತಣ್ಣ ಮಾಸ್ತರಕಿನಾದರು ಮಾಡತಾನ. ಆದರ ನೀವ ? ಕಲಿತೂ ಖಾಲಿ . . . . ಉದ್ಯೋಗ ದಂಧಾ ಇಲ್ಲ. ಮನ್ಯಾಗ ಉಣ್ಣೋದು ಪಿರಿಪಿರಿ ಅಡ್ಡ್ಯಾಡೋದು. ಆದರ ನಾನು ನೋಡು ! ಮ್ಯಾಟ್ರಿಕ್ ನಾಪಾಸ. ಆದರೂ ಛಲೋದಂಗ ಕಮಾಯಿಸತೀನಿ. (ರುದ್ರ–ಭರಮಾರಿಗೆ) ನೀವು ಬರ್ರಿ ಗೋವಾಕ್ಕ. ಅಲ್ಲಿ ನಿಮಗ ಉದ್ಯೋಗ ಖಾತರಿಯಾಗಿ ಸಿಕ್ಕೆ ಸಿಗತದ.

ಭರಮಾ : ನಮಗಿಲ್ಲಿ ಉದ್ಯೋಗ ಖಾತರಿ ಅದs ಅಪ್ಪs ! ಸರಕಾರ ಅದನ್ನ ನಮ್ಮ ಹಕ್ಕು ಮತ್ತು ಅಧಿಕಾರ ಅಂತನ ಕಾಯಿದೆಶಿರ ಮಾಡಿ ಬಿಟ್ಟೇದ, ಗೊತ್ತೈತಿಲ್ಲೋ ?

ಜಯಕುಮಾರ : (ವ್ಯಂಗ್ಯ) ಗೊತ್ತೈತಿ ಬಿಡು, ನಿಮ್ಮ ಉದ್ಯೋಗ ಖಾತ್ರಿ ಯೋಜನಾ. ಅಲ್ಲಿ ಕೆಲಸ ಕೊಡಲಿಲ್ಲಂತsನ ನಾನು ಬ್ಯಾಸತ್ತು ಕೆಲಸ ಹುಡುಕಿಕೊಂಡ ಗೋವಾಕ್ಕ ಹೋಗಿದ್ದು.

ಭರಮಾ : ಯಾಕ ? ಯಾಕ ಬ್ಯಾಸತ್ತಿ ಅಂತೀನಿ ?

ರುದ್ರ : ಯಾಕಂತ ಕೇಳತಿ ? ಈ ಜೈಕ್ಯಾ ಮೊದಲ ತಾಳ್ಮೆಗೆಟ್ಟವ. ಮುಕಳಿಸುಟ್ಟ ಬೆಕ್ಕಿನಂಗ ಓಡಿ ಹ್ವಾದ . . . . ಈ ಮಹಾಂತಣ್ಣಗ ಕೇಳ ಹೇಳತಾನ.

ಭರಮಾ : ಏನ ಹಕಿಕತ್ತು ಮಾಸ್ತರಣ್ಣ ?

ಮಾಸ್ತರ : ಇಂವ ಹೇಳೋದ ಖರೇ ಅದs. ಆವಾಗsನ ಗೋವಾಕ್ಕ ಹೊಂಟ ನಿಂತಿದ್ದ. ನಾನs ತಡಿದಿನಿ. 'ನಿನ್ನದೂ ಸ್ವಲ್ಪ ಜಮೀನ ಐತಿ. ಅಲ್ಲಿ ಕೆಲಸ ತೀರಿದ ಮ್ಯಾಲ ಸರಕಾರನ ಕಡುಬಡವರಿಗಿ ನೂರ ದಿನ ಉದ್ಯೋಗವನ್ನ ಕೊಡತದ' ಅಂತ ಹೇಳಿದ್ನಿ . . . .

ರುದ್ರ : ಆದರ ಆ ಉದ್ಯೋಗ ಖಾತ್ರಿದ್ದು ಕೊನೆಗೇನಾತು? ನಾವಿಲ್ಲಿ ಕಟ್ಟಿಮ್ಯಾಲ ನೊಣ ಹೊಡಕೊಂತ ಕೂಡ್ರು ಹಂಗಾತು.

ಭರಮಾ : ನಾನು ಕೆಲಸ ಮಾಡಿದ ದುಡ್ಡನ್ನು ಇನ್ನೂ ಬ್ಯಾಂಕಿಗಿ ಹಾಕಿಲ್ಲ. ಕೇಳಿದರ ಚೀಟಿ ಮಾಡದೋದದ ಅಂತಾರ.

ಜಯಕುಮಾರ : ಮತ್ತ ನಾನು ಗೋವಾಕ್ಕ ಓಡಿ ಹೋಗೋ ಹಂಗಾತು.

ಮಾಸ್ತರ : (ಕೋಪದಿಂದ) ನನಗ ಮಾತಾಡಲಾಕ ಬಿಡ್ರೆಲ.

ರುದ್ರ : ಅಷ್ಟ್ಯಾಕ ಸಿಟ್ಟಾಗತಿಯೋ ಮಾರಾಯಾ ? ಸಮಾಧಾನಲೇ ಹೇಳು.

ಭರಮಾ : ನಮ್ಮ ಕಷ್ಟ ತ್ರಾಸನ ತೋಡಕೊಂಡ ಹಗರಾದಿವಿ ಅಪ !

ಮಾಸ್ತರ : ಸಾರಿ ! ನಾನೇನೋ ಹೇಳೋದಕ್ಕ ಹೊರಟಿದ್ನಿ. ಆ ಓಘಕ್ಕ ತಡಿಯಾತಂತ ಸಿಟ್ಟಿಗೆದ್ನಿ, ಸಾರಿ.

ಜಯಕುಮಾರ : ಇರಲಿ, ಹೇಳ ಮಹಾಂತಣ್ಣ.

ಮಾಸ್ತರ : ಹುಂ ! ಇಂವ ಗೋವಾಕ್ಕ ಗುಳೇ ಹೋಗೋದ ತಡೀಲಾಕ ನಾನಿವನನ್ನ ಗ್ರಾಮ ಪಂಚಾಯತಿ ಸೆಕ್ರೆಟರಿ ಕಡಿಗಿ ಕರಕೊಂಡು ಹೋದಿನಿ. ಅಲ್ಲಿ 'ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ–ಕರ್ನಾಟಕ' ಇದರ ವಿವರ ನೀಡಿ ಹೆಸರನ್ನ ನೊಂದಾಯಿಸಿದಿನಿ. ಉದ್ಯೋಗ ಚೀಟಿ ಹೆಸರು ಹೊಂದಿದ ಕುಟುಂಬದ ಎಲ್ಲ ಸದಸ್ಯರು, ಅಂದರ ಮಕ್ಕಳನ್ನ ಬಿಟ್ಟು ಕೆಲಸ ಮಾಡಬೋದು. ಅದು ಸಹ ನೂರು ದಿನಗಳು.

ರುದ್ರ : ಉದ್ಯೋಗ ಅಪೇಕ್ಷ ಮಾಡಿದ 15 ದಿನಗಳ ಒಳಗಾಗಿ ಅವರೇನು ಉದ್ಯೋಗ ಕೊಡಲಿಲ್ಲ. ಈ ಮಗಾ ಜೈಕ್ಯಾನಿಗಿ ತಾಳ್ಮೇನೇ ಇಲ್ಲ. ಓಡಿ ಹ್ವಾದ, ಹೌಂದಲ್ಲೊ? (ತಡೆದು) ಆದರ ಯಾರಿಗೂ ಪರಿಹಾರನು ಸಿಗಲಿಲ್ಲ.

ಮಾಸ್ತರ : ಹೌದ, ಇಂವಗ ತಾಳ್ಮೆನೆ ಇಲ್ಲ. ಅಪೇಕ್ಷಿಸಿದ ಉದ್ಯೋಗವನ್ನ 15 ದಿನಗಳಲ್ಲಿ ನೀಡದಿದ್ದರ ಅರ್ಜಿದಾರರಿಗೆ ಆರ್ಥಿಕ ವರ್ಷದ ಮೊದಲ 30 ದಿನಗಳಿಗೆ ದಿನಗೂಲಿಯ ಶೇಕಡ 25 ರಷ್ಟು, ಉಳಿದ ಅವಧಿಗೆ ದಿನಗೂಲಿಯ ಶೇಕಡ 50 ರಷ್ಟನ್ನು 'ನಿರುದ್ಯೋಗ ಭತ್ಯೆ' ಅಂತ ಪಡಕೊಳ್ಳೊ ಹಕ್ಕ ಅದ.

ರುದ್ರ : ಅಗದೀ ಬರೋಬ್ಬರ ಅದ. ಆದರ ಮಹಾಂತಣ್ಣ. ನೋಂದಾಯಿತ ಸ್ತ್ರೀಯರಿಗೆ ಕನಿಷ್ಠ ಒಂದು ಮೂರರಷ್ಟಿರುವ ಹಂಗ ಆದ್ಯತೆ ಪ್ರಕಾರ ಕೆಲಸ ಕೊಡಬೇಕು. ಆದರ ಈ ಅಧ್ಯಕ್ಷ, ಸೆಕ್ರೆಟರಿ ಏನೋ ಮಸಲತ್ತ ಮಾಡಾಕತ್ತಾರ. ಆ ಕೆಲಸಾನs ಕೊಡತಿಲ್ಲ !

ಮಾಸ್ತರ : ಅದಷ್ಟ ಅಲ್ಲ . . . . ಉದ್ಯೋಗವನ್ನ ಸಾಧ್ಯವಾದಷ್ಟು ಗ್ರಾಮ ವ್ಯಾಪ್ತಿಯೊಳಗs 5 ಕಿ.ಮೀ. ಅಂತರದೊಳಗ ಕೊಡಬೇಕು. ಒಂದು ವೇಳೆ ದೂರ ಕೊಟ್ಟರ ಕೂಲಿ ದರದ ಶೇಕಡ 10 ರಷ್ಟು ಹೆಚ್ಚುವರಿ ಹಣಾನ ಸಾರಿಗೆ ಮತ್ತು ಜೀವನ ವೆಚ್ಚಂತ ಕೊಡಬೇಕು ಅಂತ ಕಾಯಿದೇನs ಅದ.

ಭರಮಾ : ನೀನು ಹೇಳೋ ಇವೆಲ್ಲ ಕಾಯಿದೇನ ಗಾಳಿಗಿ ತೂರ್‍ಯಾರ ಮಾಂತಣ್ಣ. ಊರಿಗೇನ ಲಕ್ವಾ ಹೊಡೆದಂಗ ಆಗೇದ.

ರುದ್ರ : ಅದಕ್ಕ ಇವತ್ತ ಗ್ರಾಮ ಪಂಚಾಯಿತಿಗಿ ನಮ್ಮ ಸಾಮಾಜಿಕ ಕಾರ್ಯಕರ್ತ ವಿಶಾಲಪ್ಪ ಮುತ್ತಿಗಿ ಹಾಕೋರು ಇದ್ದಾರ . . . .

ಮಾಸ್ತರ : ಆಂ ! ಹೌದಲ್ಲ ಮರೆತಿದ್ದೆ. ಈ ಜಾಯಿಕೋ ಐ ಮೀನ್ ಜಯಕುಮಾರನ ಗದ್ದಲದೊಳಗ ! ಗೊತ್ತಾಗಲಿಲ್ಲ. ನಡಿರಿ ಅತ್ತ ಹೋಗೋಣ. (ಹೊರಡುವರು)

(ಅಷ್ಟರಲ್ಲಿ ದಲಿತರ ಕೇರಿಯಿಂದ ಧಿಕ್ಕಾರ ಮತ್ತು ಅನ್ಯಾಯದ ವಿರುದ್ಧದ ಘೋಷಣೆಗಳು ಕೇಳಿ ಬರುವವು.)

## ದೃಶ್ಯ–2

(ಗ್ರಾಮಪಂಚಾಯತಿ ಕಚೇರಿ. ಗ್ರಾ.ಪಂ. ಅಧ್ಯಕ್ಷೆ ನಿರ್ಮಲ ಆಸೀನರಾಗಿ ಕೆಲಸ ಕಾರ್ಯ ವಿಚಾರಣೆ ನಡೆಸುತ್ತಿದ್ದಾರೆ. ಅವರು ಹೆರಿಗೆಗೆಂದು ದೀರ್ಘಕಾಲ ಗ್ರಾ.ಪಂ. ಕಚೇರಿಗೆ ಬಂದಿರಲಿಲ್ಲ. ಬಾಣಂತಿತನ ಕಾಲದಲ್ಲಿ ಗಂಡನೆ ಕಾರುಬಾರು ನಡೆಸಿದ್ದ. ಆಕೆ ಗಂಡ ನಿಂಗನಗೌಡ, ಕಾರ್ಯದರ್ಶಿ ಶಂಕರಪ್ಪ, ಏಜೆಂಟ್ ಧರೆಪ್ಪ ಆತಂಕ ತರುವ ವಿಚಾರ 'ಮೋರ್ಚಾ' ಕುರಿತು ಚರ್ಚೆ ನಡೆಸುತ್ತಾರೆ.)

(ಧರೆಪ್ಪ ಹೊರಗಿನಿಂದ ಧಾವಿಸಿ ಬರುವನು.)

ಧರೆಪ್ಪ : (ಉಸಿರು ಬಿಡುತ್ತ) ಮೇಡಮ್ . . . . ಅಧ್ಯಕ್ಷ ಬಾಯಾsರ.

ನಿರ್ಮಲ : ಹಂಗ್ಯಾಕ ಎದುಸಿರು ಬಿಡತೇರಿ ? . . . . ಸಮಾಧಾನಿಲೆ ಏನಾತು ಹೇಳ್ರಿ ?

ಧರೆಪ್ಪ : ಅದsರಿ, ಅತ್ತ ಕೆಳಗೇರಿ ಕಡಿಂದ ಬರಾಕ ಹತ್ತಿದ್ನಿ . . . . ಅಲ್ಲಿಂದ ಈ ಕಡೆ ಪಂಚಾಯಿತಿ ಕಡೀನ ಮೋರ್ಚಾ ಬರಾಕ ಹತ್ತೇತಿ?

ನಿರ್ಮಲ : ಮೋರ್ಚಾ ? ಯಾವ ಮೋರ್ಚಾ ? ಅದು ಪಂಚಾಯತಿ ಕಡೇನ ?

ಧರೆಪ್ಪ : ಅದs ಉದ್ಯೋಗ ಖಾತರಿ ಯೋಜನಾದೊಳಗ ಅಪರಾತಪರಾ ಆಗೇತಿ ಅಂತ, ಆ ಕುಲಕರ್ಣಿ ವಿಶಾಲಪ್ಪ ಮತ್ತ ಮಹಾಂತ ಮಾಸ್ತರ, ಅವನ ಗೆಳ್ಯಾರು ಸೇರಿಕೊಂಡು ಬರಾಕತ್ತಾರ...ದೊಡ್ಡ ಬ್ಯಾನರು, ಸ್ಲೇಟು ಹಿಡಿದು ಘೋಷಣಾ ಕೂಗಲಿಕ್ಕೆ ಹತ್ತ್ಯಾರ . . . .

(ನಿಂಗನಗೌಡ, ಸೆಕ್ರೆಟರಿ ಶಂಕರಪ್ಪ ಅವರ ಮುಖ ಕಿವುಚುವರು)

ನಿರ್ಮಲ : ನಾನು ಬಾಣಂತಿತನಕ್ಕ ಹ್ವಾದಾಗ ಎಲ್ಲಾನು ಹೇಳಿಯೇ ಹೋಗಿದ್ನಿ . . . . ' ಕಾಯಿದೆ ಪ್ರಕಾರ ಕೆಲಸ ಕೇಳೋರ ಹಕ್ಕು ಮತ್ತು ಅಧಿಕಾರsನ ನೀಡಿರಿ ಅಂತ. ಬಡೋರದು ಬಡಕೊಂಡು ತಿಂದಳು ಅಂತ ಆಗಬಾರದು. (ಸೆಕ್ರೆಟರಿ ಕಡೆಗೆ) ಈ ಸೆಕರೆಟರಿ– 'ಬಾಯಾರ ನೀವ್ಯಾನ ಕಾಳಜಿ ಮಾಡಬ್ಯಾಡರಿ, ನಾವ ಕೂಲಿಕಾರರದ್ದಾಗಲಿ, ಅವರ ಕಾರ್ಯಕ್ಕ ಬೇಕಾಗೋದರ ರೀತಿಸಿರ ವ್ಯವಸ್ಥೆನ ಮಾಡತೀವಿ' ಅಂತ ಅಂದಿದ್ದರು. ಈಗೇನ ಹೇಳತೀರಿ ಸೆಕರೇಟರಿ ಸಾಹೇಬರ?

ಶಂಕರಪ್ಪ : ಅದು . . . . ಅದು . . . . (ನಿಂಗನಗೌಡ ತಡೆದು)

ನಿಂಗನಗೌಡ : (ನಿರ್ಮಲಾಳಿಗೆ) ನೀನ್ಯಾಕ ಇಷ್ಟ ಉತಾವಳಿ ಆಗತಿ... ರಾಜಕಾರಣದೊಳಗ ಈ ಮೋರ್ಚಾ, ಮೆರವಣಿಗೆ ಇರೋದsನ ..... ಅವರು ಬರಲಿ ನಾನ ಉತ್ತರ ಕೊಡತೀನಿ. ಮತ್ತ ಪ್ರಪಂಚದಾಗ ನಾವs ಅಷ್ಟ ಏನು ಇಂಥಾದ್ದನ್ನ ಎದುರಿಸೋರು?

ನಿರ್ಮಲ : ಅಂದರs 'ಕಳ್ಳನ ಮನಸ್ಸು ಹುಳ್ಳಗ' ಅಂದಂಗ ಮಾತಾಡ್ತಿರಲ್ಲ. ಹಂಗಾರ ಅಪರಾ ತಪರಾ ಖಾತ್ರೀನs ಆದಂಗಿರಬೇಕು. ನಾ ಮೊದಲs ಕಮ್ಮಿ ಕಲಿತಾಕಿ . . . . ಈ ಸೆಕ್ರೆಟರಿ ಮನಿಗಿ ಬಂದ ಸಹಿ ಮಾಡಿಸಿಕೊಂಡ ಹೋಗತಿದ್ದರು...ಅವರ ಮ್ಯಾಲ ನಂಬಿಕಿ ಇಟ್ಟಿನಿ.

ನಿಂಗನಗೌಡ : ಅಗಾ . . . . ಅಗಾ ನೋಡು, ನೀನು ಏನಾರ ವಿಪರೀತ ಕಲ್ಪಿಸಿಕೊಳ್ಳತಿ . . . . ಇಂಥದ್ದನ್ನ ಎದುರಿಸೋದು, ಮೋರ್ಚಾ ಇರೋದು ಅಂದರs ಇವೆಲ್ಲ ರಾಜಕಾರಣದೊಳಗ ಪ್ರತಿಷ್ಠಾ ಅಂತ ಅಂದಿನಿ ಅಷ್ಟ !

(ಶಂಕರಪ್ಪ ಅಳುಕುತ್ತ)

ಶಂಕರಪ್ಪ : ಜೆಸಿಬಿ ಯಂತ್ರ ಬಾಯಾರ ತಮ್ಮ ಕಿರಿತಮ್ಮನದs ಐತಿ ಅಲ್ಲ ! ಅದು ತುಕ್ಕು ಹಿಡಿಕೋಂತ ಮೂಲ್ಯಾಗ ಬಿದ್ದಿರೋದು ಬ್ಯಾಡಂತ. ಜರಾ . . . . ಅದರ ಧೂಳ ಜಾಡಿಸೇವಿರಿ ಅಷ್ಟ. ಮತ್ತ (ನಗೆ ತಂದು) ಬ್ಯಾಂಕಿನ ಸಾಲ ತಿರಿಸೋದ ಬ್ಯಾಡ ಏನರಿ.

ನಿರ್ಮಲ : ಅಂವ ತಗೊಂಡಾನ ಅಂದ ಮ್ಯಾಲ ತೀರಿಸತಾನ . . . . ನೀವು ಕಾಳಜಿ ಮಾಡಬ್ಯಾಡರಿ.

ಶಂಕರ : ಇದನ್ನ ತಮ್ಮ ಯಜಮಾನರs ಹೇಳ್ಯಾರ . . . . ಜೆಸಿಬಿ ಯಂತ್ರ ಬಳಕೆ ಮಂತ್ರಾನ !

ನಿರ್ಮಲ : (ಮುನಿಸಿಂದ) ಏನರಿ? ಇವರು ಹೇಳೋದು ಖರೇ ಏನು ?

ಧರೆಪ್ಪ : ತಾವು ಇಲ್ಲದಾಗ ನಿಂಗನಗೌಡರs ಅಲ್ಲೇನು ಮತ್ತ ?

ನಿರ್ಮಲ : ಮಹಿಳೆ ಅಧ್ಯಕ್ಷರಾಗೋದಕ್ಕ ಸಂವಿಧಾನ ಅವಕಾಶ ಕಲ್ಪಿಸೇದ . . . . ಅವರದೇನಿದ್ದರೂ ಮನೆ ವ್ಯವಹಾರಗಳಲ್ಲಿ ..... ಇದನ್ನ ಆರಂಭದಲ್ಲಿ ಅವರs ಹೇಳ್ಯಾರ . . . . ಈಗ ಮಾತಿಗಿ ತಪ್ಪ್ಯಾರ !

ನಿಂಗನಗೌಡ : ಅಲ್ಲs, ನಿನ್ನ ತಮ್ಮನ ಕಾಳಜಿ ಮಾಡಿದರ ತಪ್ಪೇನು ?

ನಿರ್ಮಲ : ಕಾಳಜಿ ಮಾಡಿರಿ. ಆದರ 'ತಪ್ಪಾಗಿ' ಮಾಡಬ್ಯಾಡ್ರಿ. (ಸೆಕ್ರೆಟರಿಗೆ) ಸೆಕರೇಟರಿಗಳs . . . . ನಾನು ಅಧ್ಯಕ್ಷಳು. ಪಂಚಾಯತಿ ವಿಷಯದೊಳಗ ಘರಗೂತಿ ತರಬ್ಯಾಡರಿ.

ನಿಂಗನಗೌಡ : ಪಾಪ ಅವರೇನು ಮನಿ ವಿಷಯ ತರತಾರು . . . . ಏನಾದರೊಂದು ತಲ್ಯಾಗ ಹಾಕ್ಕೋಬೇಡ...ನೋಡು ಹೆಣ್ಣೆಂಗಸು, ಕೆಲವು ರಾಜಕಾರಣ ಪಟ್ಟುಗಳು ನಿನಗ ತಿಳಿಯೋ ಮಾತಲ್ಲ. ಇದು ವಿರೋಧಿಗಳ ಕಾರಸ್ಥಾನ ಅದs. ನೋಡ್ಕೋಳ್ಳಲಾಕ ನಾವ ಗಟ್ಟಿ ಅದೀವಿ. (ಸೆಕ್ರೆಟರಿ ಕಡೆಗೆ ಕಣ್ಣು ಮಿಟುಕಿಸುವನು.) ಹೌದಲ್ಲಪ್ಪ ಶಂಕರು.

ಶಂಕರಣ್ಣ : ಮತ್ತ ಇಷ್ಟೊತ್ತನ ನಾನದನ್ನ ಇಚಾರ ಮಾಡಾಕ ಹತ್ತಿದಿನಿ.

ನಿರ್ಮಲ : ನಾನು ಇಲ್ಲದಿರೋವಾಗಿನ ನಡೆದ ಬಗ್ಗೆ ತಪಶೀಲವಾರ ಮಾಹಿತಿ ತಯಾರ ಮಾಡಿರಿ...ಒಂದರ್ಧ ಗಂಟೇಲಿ ಬರತೀನಿ. ಕೆಲಸ ನಡೆದ ಜಾಗೆಗಳಿಗಿ ಹೋಗೋಣ.

ನಿಂಗನಗೌಡ : ನೀನದರ ವಿಚಾರ ಬಿಡು ಅಂತೀನಲ್ಲ !

(ನಿರ್ಮಲ ಆಸನದಿಂದ ಏಳುತ್ತಿದ್ದಂತೆ ಮೋರ್ಚಾದವರ ಆಗಮನ ಪಂಚಾಯತಿ ಎದುರಾಗುತ್ತದೆ ಅವಳು ಹೋಗದೇ ಅಲ್ಲೆ ಇರುವಳು. ಅವರ ಘೋಷಣೆಗಳು. ದೃಶ್ಯ ಮುಗಿಯುತ್ತದೆ.)

## ದೃಶ್ಯ–3

(ಗ್ರಾಮಪಂಚಾಯತಿ ಎದುರು ಪ್ರತಿಭಟನೆಗಾರರು ಘೋಷಣೆಗಳನ್ನು ಕೂಗುತ್ತ ಬರುವರು. ಘೋಷಣೆ ಮತ್ತು ಫಲಕಗಳು ಹೀಗಿರುವವು– 'ಉದ್ಯೋಗ ನಮ್ಮ ಹಕ್ಕು ಮತ್ತು ಅಧಿಕಾರ', '100 ದಿನ–ಮಾನವ ಕೂಲಿದಿನ', 'ಹೆಣ್ಣಿರಲಿ–ಗಂಡಿರಲಿ: ಸಮಾನ ವೇತನ', 'ಬೇಕೇ ಬೇಕು 15 ದಿನಗಳಲ್ಲಿ ಕೆಲಸಬೇಕು' 'ಕೊಡಿರಿ ಕೊಡಿರಿ–ಪರಿಹಾರ ಕೊಡಿರಿ', ಉಚಿತ ವೈದ್ಯಕೀಯ ಚಿಕಿತ್ಸಾ ಪರಿಹಾರ ಕೊಡಿರಿ' ಮುಂತಾದವು.)

(ಅಧ್ಯಕ್ಷೆ ನಿರ್ಮಲ ಸ್ಥಿತಪ್ರಜ್ಞೆ, ನಿರ್ಮಲ ಗಂಡ ನಿಂಗನಗೌಡ ಮತ್ತು ಸೆಕ್ರೆಟರಿ ಶಂಕರಣ್ಣ ಗಲಿಬಿಲಿಗೊಂಡಿದ್ದಾರೆ. ಏಜೆಂಟ್ ಧರೆಪ್ಪ ತನಗೇನು ಆಗಿಲ್ಲ ಎಂಬಂತೆ ನಿಂತಿರುವನು.)

(ಮೋರ್ಚಾದಲ್ಲಿ ಮಾಸ್ತರ ಮಹಾಂತ, ರುದ್ರ, ಭರಮಾ, ಜಯಕುಮಾರ ಹಾಗೂ ಮೋರ್ಚಾ ನೇತೃತ್ವ ವಹಿಸಿದ ವಿಶಾಲ ಕುಲಕರ್ಣಿ ಮತ್ತು ಸಂಗಡಿಗರು. ಉದ್ಯೋಗ ಪಡೆದು ಅದು ಸಿಗದೆ ಭ್ರಷ್ಟ ವ್ಯವಸ್ಥೆಗೆ ಬಲಿಯಾದವರು ಇರುವರು.)

(ಮೂರು ನಾಲ್ಕು ಜನ ಜೋಗತಿಯರು. ಕೊರಳಲ್ಲಿ ಕವಡಿಸರ, ಮುತ್ತಿನ ಸರ ಹಾಕಿಕೊಂಡು ಹಣೆತುಂಬ 'ಭಂಡಾರ' ಬಳೆದು ಚೌಡಕಿ ನುಡಿಸುತ್ತ ಪದವೊಂದನ್ನು ಹಾಡುವರು.)

*ಚೌಡಕಿಪದ : ತಂದಾನೆ ತಾನೋ ತಾನೆ ತಂದಾನೋ ತಾನ*
*ತಾನ ತಂದಾನೊ ತಾನೆ ತಾನೋ*
*ಹೊರಟೇವ ನಾವ ಹೋರಾಟ ಖಾತ್ರಿ*
*ದೊರಿಲಿಲ್ಲ ನಮಗ ನೋಡಿರಿ ಉದ್ಯೋಗ ಖಾತರಿ*
*ಸರಕಾರ ಕೊಟ್ಟರೂ ಸೆಕರೇಟರಿ ಕೊಡಲಿಲ್ಲ*
*ಏಜೆಂಟರ ಹಾವಳಿಗೆ ಮಿತಿಯಿಲ್ಲ*
*ಅದಕ್ಕ ಹೋರಾಟ ನಮ್ಮದ ಜೋರಾತಲ್ಲ*
*ಅಕ್ಕ ಬರ್ರಿ ತಂಗಿ ಬರ್ರಿ ಬರ್ರೋ ನಮ್ಮ ತಮ್ಮಗಳs*
*ಭ್ರಷ್ಟತೆ ವಿರುದ್ಧ ಸಾರೋಣ ಯುದ್ಧಗಳs*
*ದುಡಿದೇವ ನಾವು ದುಡಿತೇವು ನಾವು*
*ಕೊಡಿರಿ ನಮ್ಮ ಕೈಗೆ ಕೆಲಸಗಳ*
*ಮರೆದೇವು ನಾವು ಮರಿತೇವು ನಾವು*
*ಬಿಡುವವರಲ್ಲ ನಮ್ಮ ಹಕ್ಕು ಅಧಿಕಾರಗಳ*
*ಹೊರಟೇವ ನಾವು ಹೋರಾಟ ಖಾತ್ರಿ*
*ದೊರಿತ್ತೈತಿ ನೋಡಿರಿ ನಮಗ ಉದ್ಯೋಗ ಖಾತರಿ*
*ತಂದಾನೆ ತಾನೋ ತಾನೆ ತಂದಾನೋ ತಾನ*
*ತಾನ ತಂದಾನೊ ತಾನೆ ತಾನೋ*

(ಚೌಡಕಿ ಪದ ಮುಗಿಯುತ್ತಿದ್ದಂತೆ ಜೋಗವ್ವ ಒಬ್ಬಳಲ್ಲಿ ಎಲ್ಲವ್ವ ಮೈಯಲ್ಲಿ ಬರುವಳು. ಆರಂಭದಲ್ಲಿ ರಣಹಲಗೆ ವಾದನ, ಚೌಡಕಿ ವಾದನದ ಲಯಕ್ಕೆ 'ಅಹ . . . . ಅಹ . . . . ಅಹ . . . . ಹ್ಞಾಂ' ಎನ್ನುತ್ತ ಎರಡ್ಮೂರು ನಿಮಿಷ ಕುಣಿಯುವಳು. ಎಲ್ಲರೂ ದಂಗಾಗುವರು. ಒಬ್ಬ ಜೋಗಪ್ಪ ಅಲ್ಲಿರುವ ಎಲ್ಲರಿಗೂ ಭಂಡಾರವನ್ನು ಹಣೆಗೆ ಹಚ್ಚ ತೊಡಗುವನು...ನಿಧಾನಕ್ಕೆ ಎಲ್ಲವ್ವ ಮೈಯಲ್ಲಿ ಬಂದವಳು ಮಾತಾಡ ತೊಡಗುವಳು. ಒಂದಷ್ಟು ಜನ ಕಾಲಿಗೆ ಧಡಾನೆ ಬೀಳುವರು. ತಮ್ಮ ಅರ್ಜ ಕೇಳುವರು.)

ವ್ಯಕ್ತಿ–1 : ಅವ್ವ, ನನತಾಯೆ, ಈ ಮೋರ್ಚಾದೊಳಗsನೂ ನೀ ನನ್ನ ಭಕ್ತರನ್ನ ಮರೆತಿಲ್ಲ . . . . (ಜೋರಾಗಿ) 'ಎಲ್ಲವ್ವ ನಿನ್ನ ಮ್ಯಾಲಕ ಉಧೋ ಉಧೋ ಉಧೋs' ನನ್ನ ಅರ್ಜ ಕೇಳು ತಾಯಿ . . . .

ಎಲ್ಲವ್ವ : ಲೋ ಮಗನs ನಾ ಮೋರ್ಚಾದೊಳಗsನ ಯಾಕ ಬಂದ್ನಿ ಹೇಳು ?

ವ್ಯಕ್ತಿ–1 : ಯಾಕ ತಾಯಿ ?

ಎಲ್ಲವ್ವ : ಕಾರಣ . . . . ಮನುಷ್ಯ ಮಣ್ಣಿನ ರಿಣ, ನೀರಿನ ರಿಣ, ಗಾಳಿ ಬೆಳಕಿನ ರಿಣ ತೀರಿಸದs ಕೃತಘ್ನನಾಗಿ, ರಾಕ್ಷಸನಾಗಿ ಮನಸ್ಯಾರನ್ನ ತಿಂದ ಹಾಕಲಿಕ್ಕ ಹತ್ತ್ಯಾನ. ಅದಕ್ಕ ನಿಮ್ಮ ಕಷ್ಟ ಕೇಳಾಕ ಬಂದೇನೋ ಮಗನs !

ವ್ಯಕ್ತಿ–2 : ಹಂಗಾರ ನನ್ನ ಮಗಳಿಗಿ ಎಂದ ಲಗ್ನ ಕೂಡಿ ಬರತೇತಿ ತಾಯಿ.

ಎಲ್ಲವ್ವ : (ಒಮ್ಮೆಲೆ) ಏಯ್ . . . . ಮೂರ್ಖ, ಶತಮೂರ್ಖ ! ಮೋರ್ಚಾಕ ಬಂದ ನೀ ಸಾರ್ವಜನಿಕರ ಕಷ್ಟದ ಪ್ರಶ್ನೆ ಕೇಳು ಅಂದರ . . . . ಮಗಳ ಮದವಿ ಎಂದ ಅಂತಿಯಲ್ಲ ಧಡ್ಡ! ಅದನ್ನ ಗುಡಿಗಿ ಬಂದ ಕೇಳು.

ವ್ಯಕ್ತಿ–2 : ತಪ್ಪಾತು ತಯಿ ನಂದು ತಪ್ಪಾತು . . . . (ಗಲ್ಲಿಗೆ ಬಡಿದುಕೊಳ್ಳುವನು.)

ವ್ಯಕ್ತಿ–3 : ತಾಯೇ, ಇಲ್ಲಿ ಬಂದವರು ಉದ್ಯೋಗ ಖಾತ್ರಿಯ ಅನುಷ್ಠಾನದ ವಿಫಲತೆಯ ಪ್ರತಿಭಟಿಸೋರು ತಮ್ಮ ಹಕ್ಕು ಅಧಿಕಾರಕ್ಕಾಗಿ ಹೊಡೆದಾಡೋರು. ಅವರ ಮನದಾಳದ ತುಡಿತವನ್ನು ಆಲಿಸು ತಾಯೆ . . . .

(ಎಲ್ಲವ್ವ ಮತ್ತೊಮ್ಮೆ ಕುಣಿಯುವಳು. ಜನ 'ಉಧೋ ಉಧೋ' ಎನ್ನುವರು. ಕುಣಿಯುತ್ತ ಎಲ್ಲವ್ವ ನಿರ್ಮಲ, ನಿಂಗನಗೌಡ, ಶಂಕರಣ್ಣ, ಏಜೆಂಟ್ ಧರೆಪ್ಪ ಅವರ ಎದುರು ನಿಲ್ಲುವಳು. ಗೌಡ ಭಕ್ತಿಯಿಂದ ತಲೆಬಾಗಿಸುವನು.)

ಎಲ್ಲವ್ವ : ಲೋ ಭಕ್ತ . . . .

ನಿಂಗನಗೌಡ : ತಾಯಿ ಆಜ್ಞಾ ಮಾಡವ್ವ ......

ಎಲ್ಲವ್ವ : ನಿನ್ನ ಹೆಂಡತಿ ಮುಗ್ದೆ. ಈ ಹಳ್ಳಿಯ ಏಳ್ಗೆಗೆ ಧಡಪಡಿಸೋಳು. ಗ್ರಾಮ ಸ್ವರಾಜ್ಯದ ಕನಸು ಕಾಣೋಳು ...... ಅವಳಿಲ್ಲದ ವೇಳೆಯೊಳಗ ನೀವು ಮಾಡಿದ್ದು ಸರಿಯೇನು ?

ನಿಂಗನಗೌಡ: (ಅಂಜುತ್ತ, ಅಳಕುತ್ತ) ನಾವು . . . . ನಾವೂ ಛಲೋನs ಮಾಡಾಕತ್ತೀವಿ ತಾಯಿ . . . .

ಎಲ್ಲವ್ವ : (ಕಿರುಚುವಳು) ಇಲ್ಲ . . . . (ನಿಂಗನಗೌಡ ಕಕ್ಕಾವಿಕ್ಕಿ. ಶಂಕರು, ಧರೆಪ್ಪ ಅವರ ಮುಖ ಕಪ್ಪಿಡುವುದು.)

ವ್ಯಕ್ತಿ–2 : ತಾಯಿ ಅಗದೀ ವಾಜಮಿ ಹೇಳಿದಿ. ಇವರೆಲ್ಲ ಸುಳ್ಳು ಹೇಳತಾರ. ಬಡವರ ರೊಟ್ಟೀನs ಕಸಗೊಂಡ ತಿಂದಾರ...ನೀ ಸತ್ತುಳ್ಳವ್ವ ನೋಡು ! ನೀನs ಹೇಳು.

ವ್ಯಕ್ತಿ : ಸರಕಾರ ಕಡುಬಡವರ ಹಕ್ಕ ಮತ್ತ ಅಧಿಕಾರಂತ ಉದ್ಯೋಗ ಖಾತ್ರಿ ಮಾಡೇದ . . . .

ಎಲ್ಲವ್ವ : ಅದನ್ನ ಬೇದರಕಾರದಿಂದ ಕಿತ್ತುಕೊಂಡೇರಿ . . . . ಹೌಂದ ?

ಶಂಕರಪ್ಪ : ಇಲ್ಲ ನಮ್ಮವ್ವ...ಒಂದೀಟು ತಡ ಆಗೇದ ಅಷ್ಟ. ಇಂವ ಸುಳ್ಳ ಹೇಳಾಕತ್ತಾನ. ಕೂಲಿಗಿ ನೋಂದಣಿ ಮಾಡಿ, ಕೆಲಸಾನು ಪಡಕೊಂಡು ಹೀಂಗ ಮಾಡತಾನ . . . . (ಆತನಿಗೆ) 'ಅಣ್ಣ ಶಂಕರಣ್ಣ ಅಂತ ಹಲ್ಲುಗಿಂಜುತ ಬಂದಿರಲಿಲ್ಲ ಏನೋ'

ಎಲ್ಲವ್ವ : ಯಾರು ಯಾರೆದುರು ಹಲ್ಲುಗಿಂಜೋ ಅಗತ್ಯವಿಲ್ಲ . . . . (ತಡೆದು ವಿಚಿತ್ರ ದನಿ ಹೊರಡಿಸಿ) ಈಗ ಹಾಲಿದ್ದ ಹಾಲ ನೀರಿದ್ದದ್ದನ್ನ ನೀರ ಮಾಡಿ ತೋರಿಸ್ತೀನಿ . . . . ಲೋ ವಿಶಾಲಪ್ಪ . . . .

(ತಟ್ಟನೆ ವಿಶಾಲಪ್ಪ ಕುಲಕರ್ಣಿ ಮುಂದೆ ಬರುವನು.)

ವಿಶಾಲಪ್ಪ : ತಾಯೆ . . . . ಅಪ್ಪಣೆ ಆಗಲಿ . . .

ಎಲ್ಲವ್ವ : ನಿನ್ನ ಕಾಗದ ಪತ್ರದೊಳಗ ಏನದ ಅದನ್ನ ನೀನು ಹೇಳ್ತಿಯೋ, ಏನು ನಾನs ಹೇಳಿಬಿಡಲೋ?

ವಿಶಾಲಪ್ಪ : ಆಯಿತು . . . . ತಾಯೇ ನಾನs ಸಭಾಕ್ಕ ಹೇಳತೀನಿ . . . . ತಪ್ಪಿದ್ದಲ್ಲಿ ನೀ ಒಪ್ಪಿಸು . . . .

ಎಲ್ಲವ್ವ : ಹುಂ. (ಒಮ್ಮೆ ಸುತ್ತಿದಂಗೆ 'ಉಹುಂ ಉಹುಂ' ಎಂದು ಸುತ್ತ ತೊಡಗುವಳು. ಬಳಿಕ ಶಾಂತವಾಗಿ ಸುತ್ತುವಳು.)

ವಿಶಾಲ : ಅಧ್ಯಕ್ಷರ ಮತ್ತು ಕಾರ್ಯದರ್ಶಿಗಳ, ತಾಯಿ ಸಾಕ್ಷಾತ್ ಸವದತ್ತಿ ಎಲ್ಲವ್ವನ ಸಾಕ್ಷಿಯಾಗಿಟ್ಟು ಹೇಳತೀನಿ. ಇವು ಮಾಹಿತಿ ಹಕ್ಕಿನಡಿ ನಾನು ತಂದ ಕಾಗದ ಪತ್ರಗಳು. ಅಧ್ಯಕ್ಷರ, ನೀವಿಲ್ಲದಾಗ ನಡೆದ ಕಾರುಬಾರು. 'ಮಹಾತ್ಮಾ ಗಾಂಧಿ ಹೆಸರಿನ ಈ ಗ್ರಾಮೀಣ ಉದ್ಯೋಗ ಖಾತರಿ ಯೋಜನಾ ಕಾಮಗಾರಿಗಳನ್ನ ಬಯಸಿ ಬಂದ ಬಡಕೂಲಿಗಳಿಗೆ ಕೊಟ್ಟಿಲ್ಲ. ಪಂಚಾಯತಿ ವ್ಯಾಪ್ತಿಯ ದಿಬ್ಬನಹಟ್ಟಿ, ಪರೂರ, ಬೆಡಗಿನಹಳ್ಳದ ಬಹುತೇಕ ಕಾಮಗಾರಿಗಳಲ್ಲಿ ಅಪರಾ ತಪರಾ ಆಗೇದ ......

ಎಲ್ಲವ್ವ : (ಎಲ್ಲವ್ವ ಮಧ್ಯೆ ಪ್ರವೇಶಿಸಿ) ಜೆ.ಸಿ.ಬಿ.ಯಂತ್ರ ಬಳಸಿ ಕಾಮಗಾರಿ ಮಾಡೇರಿ. ಇದನ್ನ ಮಾಡಿಸಲಿಕ್ಕೆ ಸೆಕ್ರೆಟರಿಗಳಿಗಿ ಗೌಡರs ನಿರ್ದೇಶಿಸಿದಾರ. ಅಹ..ಅಹ ಅಹ ಅಹ (ತಿರುಗುತ್ತ ಬಂದು) ಏಯ್ ಧರೆಪ್ಪಾ ....... ಕೂಲಿಗಳ ಏಜೆಂಟs ....... ಕೂಲಿ ಅರಸಿ ಬಂದ ಕಾರ್ಮಿಕರ ಚೀಟಿಗಳನ್ನ ಈ ಸೂಟಕೇಸಿನ್ಯಾಗ ಇಟ್ಟಿದ್ದಿಯಲ್ಲ, ತಗಿ ಅವುಗಳನ್ನ !

(ರುದ್ರ, ಭರಮಾ, ಜ.ಕು. ಓಡಿ ಹೋಗಿ ಧರೆಪ್ಪನ ಕೈಯೊಳಗಿನ ಸೂಟಕೇಸು ತೆಗೆದುಕೊಂಡು ಎಲ್ಲರೆದುರು ತೆರೆಯುವರು. ಅದರಲ್ಲಿಯ ಉದ್ಯೋಗ ಚೀಟಿಗಳು ಇದ್ದವು ನೆಲಕ್ಕುದುರುವವು.) (ಜನರು ಗುಜುಗುಜು ಮಾಡುವರು.)

ಎಲ್ಲವ್ವ : (ಅಲ್ಲಿದ್ದ ಒಬ್ಬೊಬ್ಬರನ್ನು ತೋರಿಸುತ್ತ) ಇಂವ ಚರಂಡಿ ಕೆಲಸ ಮಾಡ್ಯಾನ ರೊಕ್ಕ ಚುಕ್ತಾ ಆಗಿಲ್ಲ. ಕೇಳಿದರ ಈ ತ್ರಿಮೂರ್ತಿಗಳು ಖೊಟ್ಟಿ ಸಬೂಬು ಹೇಳತಾ ಬಂದಾರ.

ಜಯಕುಮಾರ : ಓಹ್ ಮೈ ಗಾಡೆಸ್ ಎಲ್ಲವ್ವ . . . . ಈ ಶೋಷಣ ತಡಕೊಳ್ಳದsನ ನಾ ಗೋವಾಕ್ಕ ಹ್ವಾದ್ನಿ. ಸಿನ್ಸಿಯರಲಿ ಐ ಸೆಲ್ಯೂಟ್ ಯು. (ವಿಶಿಷ್ಟವಾಗಿ ವಂದಿಸುವನು.)

ಮಹಾಂತ : ಎಲ್ಲವ್ವ ನಿನ್ನಲ್ಲಿ ಒಂದು ಅರ್ಜ ಮಾಡಕೋತೀನಿ

ಎಲ್ಲವ್ವ : ಕೇಳು ಮಗನs . . . .

ಮಹಾಂತ : ಊರ ಜನರ ಕಣ್ಣೊಳಗ ಮಣ್ಣೆರಚಿದವರ ಇವರ ಇನ್ನಷ್ಟ ಕಾರಸ್ಥಾನಗಳನ್ನು ಅರಹೋ ತಾಯಿ...ನೀ ಸಾಕ್ಷಾತ್ ದೇವಿ . . . . ನೀ ಎಲ್ಲ ಬಲ್ಲವಳು...ಎಲ್ಲವ್ವ ಅನಿಸಿಕೊಂಡಿದ್ದಿ.

ವಿಶಾಲ : ಸರಕಾರಿ ಶಾಲೆಯೆದರು ಗುಂಡಿ ತೊಡಿಸ್ಯಾರ, ಶಾಲಾಭಿವೃದ್ಧಿಗೆ 2 ಲಕ್ಷ ತೋರಿಸ್ಯಾರ...ಆದರ ಅಲ್ಲಿ ಕಾಮಗಾರಿಯ ಸುಳಿವೇ ಇಲ್ಲ, ಮಾತಾಯಿ !

ಎಲ್ಲವ್ವ : ಹಾಲಿನಂಥ ಮನಸ್ಸುಳ್ಳ ಮಕ್ಕಳs ಹೇಳತೇನ ಕೇಳಿರಿ. ಕೂಲಿ ಕಾರ್ಮಿಕರ ಅಸಹಾಕತನ ಬಳಸಿ ಅವರ ಹಕ್ಕಗಳನ್ನ ಕಸಿದು, ಅಧಿಕಾರಗಳನ್ನ ಧೂಳಿಪಟ ಮಾಡ್ಯಾರ. ಖೊಟ್ಟಿ ದಾಖಲೆ ಸೃಷ್ಟಿಮಾಡಿ 100 ದಿನಗಳ ಮಾನವ ಕೆಲಸ ತೋರಿಸಿ ಯಂತ್ರಗಳಿಂದ ಕೆಲಸ ನಡೆಸ್ಯಾರ. ಕಾಂಪೋಸ್ಟ್ ಗುಂಡಿಗೆ 2 ಲಕ್ಷ ವೆಚ್ಚ ತೋರಿಸಿದ ಇವರು ಗುಂಡೀನs ತೋಡಿಸಿಲ್ಲ. ಉದ್ಯೋಗ ಚೀಟಿ ಹೊಂದಿದವರ ಬ್ಯಾಂಕುಗಳಲ್ಲಿ ಜಮಾ ಆದ ಹಣದಲ್ಲಿ ಸಾಕಷ್ಟು ಅವ್ಯವಹಾರ ಅದs . . . . ನಿರ್ಮಲ ಖರೇವಂದರು ಒಳ್ಳೆ ಹೆಣ್ಣುಮಗಳು . . . . ಅವಳ ಗೈರು ಹಾಜರೀಲಿ ನಿಂಗನಗೌಡ, ಶಂಕರೆಪ್ಪ, ಧರೆಪ್ಪ ಅಪರಾಧ ಎಸಗ್ಯಾರ . . . .

ವ್ಯಕ್ತಿ : ತಾಯೆ, ನಾವು ಕೂಲಿ ಮಾಡೊವಾಗ, ನನ್ನವ್ವಗ ಅವಘಡ ಆಗಿ ಮೆಲುಕಿಗಿ ಕಲ್ಲಿನ ಪೆಟ್ಟು ಬಿದ್ದೆದ. ಪರಿಹಾರ ಮಾತ್ರ ಸಿಗತಿಲ್ಲ.

ಎಲ್ಲವ್ವ : ಕಾಮಗಾರಿ ವೇಳ್ಯಾದಾಗ ಏನs ಅವಘಡ ಆದರ ಪರಿಹಾರ ಪಡೆಯೋ ಹಕ್ಕು ನಿಮ್ಮದಾಗೇದ...ಆದರ ಈ ಧೂರ್ತರು ಅದನ್ನು ನುಂಗ್ಯಾರ...ಅದಕ್ಕ ಮನುಷ್ಯ ರಾಕ್ಷಸನಾಗತಿದ್ದಾನ ಅಂದಿದ್ದು . . . . ಇಂಥ ತಪ್ಪಿತಸ್ಥರಿಗೆ ಶಿಕ್ಷೆ ಆಗsನ ಬೇಕು.

ಎಲ್ಲರೂ : ಹುಂ. ಹುಂ. ಆಗನsಬೇಕು.

ವ್ಯಕ್ತಿ 5 : (ಕೋಪದಿಂದ) ಎಲ್ಲರ ಅವ್ವ ಎಲ್ಲವ್ವ, ಸಾಕ್ಷಾತ್ತಾಗಿ ನಮಗ ಮೋಸ ಮಾಡಿ ಹಣ ಹೊಡೆದದ್ದನ್ನ ಹೇಳ್ಯಾಳ...ಎಲ್ಲ ನೋಡತ ನಿಂತೀರಲ . . . . ಹೂಂ ತಗೊಳ್ರಿ ಒಬ್ಬೊಬ್ಬರನ್ನ . . . . (ಕೆಲವರು ನುಗ್ಗುವರು.)

(ತಕ್ಷಣ ನಿಂಗನಗೌಡ, ಶಂಕರಪ್ಪ, ಧರೆಪ್ಪ ಎಲ್ಲವ್ವಳ ಕಾಲಿಗೆ ಬೀಳುವರು. ನಿರ್ಮಲ ಎಲ್ಲರಿಗೂ ತಡೆಯುವಳು.)

ನಿರ್ಮಲ : ತಡಿರಿ . . . . ತಡಿರಿ . . . . ಶಾಂತರಾಗಿರಿ. ಕಾಯಿದೆ ಕೈಯ್ಯಾಗ ತಗೋಬ್ಯಾಡ್ರಿ . . . . ತಾಯಿನs ಇದಕ್ಕೊಂದು ದಾರಿ ತೋರಿಸಲಿ . . . . (ಕೆಲವರು 'ಎಲ್ಲವ್ವ ನಿನ್ನ ಹೆಸರಿಗೆ ಉಧೋ ಉಧೋ ಕೂಗುವರು.)

ಎಲ್ಲವ್ವ : ಇಲ್ಲ ಮಗಳs, ನಾನು ಹೇಳೋ ಸತ್ಯಾನ ಹೇಳಿದ್ನಿ ಇನ್ನ ಕಾಯಿದೆಶಿರ ಕೆಲಸ ನಿನ್ನದು . . . .

ನಿರ್ಮಲ : ಬಂಧುಗಳs ನಡೆದದ್ದಕ್ಕೆಲ್ಲ ನೀವs ಸಾಕ್ಷಿ ಅದೀರಿ. ನಾನು ಮೇಲಿನ ಅಧಿಕಾರಿಗಳಿಗೆ ಸೂಚನಾ ಮಾಡ್ತೀನಿ...ಇದರ ತನಿಖೆ ನಿಸ್ಪಕ್ಷಪಾತವಾಗಿ ಆಗಿ ತಪ್ಪಿತಸ್ಥರು ನನ್ನ ಗಂಡನೆ ಆಗಿದ್ರು ಶಿಕ್ಷೆ ಆಗಲಿ...ಇದರ ಹಿಂದಿರೋ ಎಲ್ಲ ಶಕ್ತಿಗಳಿಗೂ ದಂಡನೆ ಆಗಲಿ . . . . ಇದು ತಾಯಿ ಸವದತ್ತಿ ಎಲ್ಲವ್ವನ ಮೇಲೆ ಪ್ರಮಾಣ ಹೇಳ್ತಿನಿ...

(ಎಲ್ಲರೂ ಖುಷಿಯಿಂದ ಚಪ್ಪಾಳೆ ತಟ್ಟುವರು. ಮೈಯಲ್ಲಿ ದೇವರು ಬಂದವಳು– 'ಉಹುಂ, ಅಹ, ಅಹ ಹ್ಹಾಂ' ಎಂದು ಕಣ್ಣು ಬೆಳ್ಳಗೆ ಮಾಡುವಳು. ಒಂದಷ್ಟು ಕ್ಷಣ ಪ್ರಜ್ಞೆ ಕಳಕೊಂಡು ಮೊದಲಿನಂತೆ ಸಾಮಾನ್ಯಳಾಗುವಳು.)

ವ್ಯಕ್ತಿ–1 : ಹಂ . . . . ತಾಯಿ ಸಾರಿ ಆದಳು.

ಜನರು : ಹೌದೌದು . . . . ನಮ್ಮ ಕಣ್ತೆರೆಸಿ ಸಾರಿಯಾಗಿ ಹೋದಳು ಮಾತಾಯಿ.

(ಜನ ಚದುರುವರು . . . . ದೃಶ್ಯ ಮುಗಿಯುವುದು.)

## ದೃಶ್ಯ–4

(ಮಾಸ್ತರ ಬರುತ್ತಿರುವನು. ಮೊಬೈಲು ರಿಂಗಣಿಸುವುದು. ಆನ್ ಮಾಡಿ ಮಾತನಾಡುವನು.)

ಮಹಾಂತ ಮಾಸ್ತರ : ಹಲೋ ಮಹಾಂತ ಮಾತಾಡ್ತಿದೀನಿ . . . . ಯಾರು ವಿಶಾಲಪ್ಪ ಹೇಳಿರಿ . . . . ಹಂ ಹಂ . . . . ಏನು ದಿಬ್ಬನಹಟ್ಟಿ, ಪರೂರು, ಬೆಡಗಿನಹಳ್ಳಿಗಳ ಉದ್ಯೋಗ ಖಾತರಿ ಯೋಜನೆ ತನಿಖೆ ಮುಗೀತs ಹಂ. ಏನಾತು? ಅಚ್ಛಾ ಅಚ್ಛಾ . . . . ನಿಂಗನಗೌಡರು, ಏಜೆಂಟ್ ಧರೆಪ್ಪರ ಮೇಲೆ ಕಾನೂನು ಕ್ರಮಾನಾ, ಹಾಂ . . . . ಹೌದೌದು . . . . ಶಂಕರಣ್ಣದು ಏನಾತು ? ಆಂ ! ವಜಾ ಮಾಡಿದ್ದಾರ . . . . ಗುಡ್ . . . . ಹಾಂ. ಮುಂದಿನ ಕ್ರಮ ಕೈಕೊಳ್ಳsನ ಬೇಕಲ್ಲ. ಮತ್ತ ನಮ್ಮ ಕಾರ್ಮಿಕರದದೇನು? ಹೌದು, ವೆರಿಗುಡ್ . . . . ಉದ್ಯೋಗ ಖಾತ್ರಿ ಯೋಜನೆಯ ವಂಚಿತ ಫಲಾನುಭವಿಗಳಿಗೆ ಯಥೋಚಿತ ಪರಿಹಾರ ಮತ್ತ ಕಾಮಗಾರಿ ಅವರ ಹಕ್ಕಂತ ಸಾರಿದ್ದಾರ.. ಭಾಳ ಛಲೋ ಬಾತಮಿ ಹೇಳಿದ್ರಿ . . . . ಅಚ್ಛಾ ಥ್ಯಾಂಕ್ಸ್ ವಿಶಾಲಪ್ಪ.

(ಮುಖದಲ್ಲಿ ನಗು, ಎದುರಿಗೆ ಜಯಕುಮಾರ ಜಾನಪದ ಹಾಡೊಂದಕ್ಕೆ ಹೆಜ್ಜೆ ಹಾಕುತ್ತ ಸರಳ ಜಾನಪದ ಶೈಲಿಯ ಉಡುಗೆಯಲ್ಲಿ ಬರುವನು.)

ಮಹಾಂತ : ಅರೆ, ಜಯಕುಮಾರ, ಐ ಮೀನ್ ಜಾಯಕೋ ಇದೇನಿದು ಹೊಸ ಅವತಾರ !

ಜಯಕುಮಾರ : ಈಗ ಜಾಯಕೋ ಅಲ್ಲ, ಕೇವಲ ಜಯಕುಮಾರ ಮಾಂತಣ್ಣ. ನಾನೀಗ ಇಲ್ಲೇ ಇರಬೇಕಂತ ತೀರ್ಮಾನಿಸಿದೀನಿ.

ಮಹಾಂತ : ವಾವ್ ! ಗ್ರೇಟ್. ಗೋವಾ ?

ಜಯಕುಮಾರ : ನಾನು ಗೋವಾಕ್ಕ ಹೋಗೋದಿಲ್ಲ. ಇಲ್ಲಿ ನನ್ನ ಬೇರುಗಳಿದಾವ . . . . ನನ್ನದs ಜನ ಇದ್ದಾರ . . . . ಅನ್ಯಾಯದ ವಿರುದ್ಧ ಹೋರಾಡೋ ನಿನ್ನಂಥೋರ ಇದಾರ. ಮತ್ತ ನನ್ನದೂ ಸ್ವಲ್ಪ ಜಮೀನ ಐತಿ. ಉದ್ಯೋಗ ಖಾತ್ರಿ ಈಗ ಖಾತರಿಯಾಗಿನs ಸಿಗತೇತಿ. ನಮ್ಮ ಹಕ್ಕು ಅಧಿಕಾರಗಳನ್ನ ಇನ್ನ ಮ್ಯಾಲ ಯಾರು ಕಸಿದುಕೊಳ್ಳೋ ಧೈರ್ಯ ಮಾಡಲಾರರು. ಗೋವಾದೊಳಗ ಪರದೇಶಿತನ ಅನುಭವಿಸೋದಕ್ಕಿಂತ ನಮ್ಮವರ ನಡುವ ಸುಖ ದುಃಖ ಹಂಚಿಕೊಂಡ ಬದುಕಬೋದಲ್ಲ. ಹೌದಲ್ಲೇನು ?

ಮಹಾಂತ : (ಆನಂದದಿಂದ) ಅಗದೀ ಬರೋಬ್ಬರಿ ಅದ ! ನಿನ್ನ ನಿರ್ಧಾರ ಭಾಳ ಖುಷಿ ತಂದಿತು. (ಅವನನ್ನು ಅಪ್ಪುವನು.)

* * *

# ಬಡವರ ರೊಕ್ಕ ತಿಂದವರ್‍ಯಾರು?

– ಪ್ರೊ. ಶಿವರಾಮಯ್ಯ

## ಹಾಡು

*ದುಡಿಯುತ್ತೇವ ನಾವು ದುಡಿಯುತ್ತೇವ*
*ಉದ್ಯೋಗ ಖಾತ್ರಿ ಯೋಜನೆ ಪಡೆಯುತ್ತೇವ*

*ಕೇಂದ್ರ ಸರ್ಕಾರ ನಮಗೆ ಉದ್ಯೋಗ ಕೊಟ್ಟೈತಿ*
*ನೆಲಮುಟ್ಟಿ ನಾವೆಲ್ಲೂ ದುಡಿಯುತ್ತೇವ*

*ಒಡೆದೋ..ದ ಕೆರೆಗಳ ಕಟ್ಟುತ್ತೇವೆ*
*ಹರಿದೋ..ಗುವ ತೊರೆಗಳ ತಡೆಯುತ್ತೇವೆ*

*ಕೃಷಿ ಹೊಂಡ ನಾವು ತೆಗೆಯುತ್ತೇವೆ*
*ಬೇಸಾಯಕ ನೀರು ಬೆಳೆಸುತ್ತೇವೆ*

*ಹಸಿವಿಲ್ಲದ ನಾಡನ್ನು ಕಟ್ಟುತ್ತೇವೆ*
*ಸಮಾನತೆಯ ಬೀಜವ ಬಿತ್ತುತ್ತೇವೆ*

*ಗಾಂಧೀಯ ಕನಸನ್ನು ನನಸು ಮಾಡುತೇವ*
*ಗ್ರಾಮ ಸ್ವರಾಜ್ಯವ ಕಟ್ಟುತ್ತೇವ*

('ಪಿ' ಶೇಪಿನಲ್ಲಿ ಕಲಾವಿದರು ಕುಳಿತಿರುತ್ತಾರೆ. ಎಡಗಡೆಯಿಂದ ಉದ್ಯೋಗ ಖಾತ್ರಿ ಬ್ಯಾನರ್ ಹಿಡಿದು ಇಬ್ಬರು ಕುಣಿಯುತ್ತಾ ಬರುತ್ತಾರೆ ಅದನ್ನು ನೋಡಿದ ಕಲಾವಿದರು ಹಾಡುತ್ತಾರೆ)

*ಬಂತು ಬಂತು ಬಂತು ನೋಡು*
*ತುಂಬಿ ತುಂಬಿ ಹೊಳೆ ಬಂತು*
*ಉದ್ಯೋಗ ಖಾತ್ರಿ ಯೋಜನೆ ಬಂತು*
*ಕೋಟಿ ಕೋಟಿ ಹಣವನು ತಂತು*

*ಆ ದಿಲ್ಲಿಯಿಂದ ಬಂತು*
*ಈ ಹಳ್ಳಿತನಕ ಬಂತು*
*ಕೆಂಪುಕೋಟೆಯಿಂದ*
*ಹೊಳೆಯು ಹರಿದು ಬಂತು*
*ಕೋಟೊ ಕೋಟಿ*
*ಕೋಟಿ ಕೋಟಿ ಹಣವು ಬಂತು*
*ಉದ್ಯೋಗ ಖಾತ್ರಿ ಯೋಜನ ತಂತು*

(ಎರಡು ತೋಳಗಳ ಹಾಗು ಕುರಿಗಳ ಗುಂಪು. ಎಡಗಡೆ ಮತ್ತು ಬಲಗಡೆಗೆ ಗುಂಪಾಗಿ ಕುಳಿತಿರುತ್ತಾವೆ)

*ಅವತಾರ ಅವತಾರ*
*ಗುಳ್ಳೆ ನರಿಗಳ ಅವತಾರ*
*ಲಂಚಕೋರರ ಅವತಾರ*

*ಎಂಜಲು ಕಾಸಿಗೆ ನಾಲಿಗೆ ಚಾಚುವ*
*ಕಳ್ಳರ ಅವತಾರ*
*ಪಂಚಾಯ್ತಿಯನ್ನೇ ನುಂಗಿಹಾಕುವ*
*ಖದೀಮರ ಅವತಾರ ಈ ಭ್ರಷ್ಟರ ಅವತಾರ*

(ಬಲಗಡೆಯಿಂದ ಒಬ್ಬ ತಮಟೆ ಬಾರಿಸುತ್ತಾ ಬರುತ್ತಾನೆ)

ತಮಟೆ : ಕೇಳ್ರಪ್ಪೋ ಕೇಳಿ, ಉದ್ಯೋಗ ಖಾತ್ರಿ ಯೋಜನೆಯಲ್ಲಿ ಕೆಲಸ ಮಾಡೋರು ಜಾಬ್‌ಕಾರ್ಡ್ ಪಡಿಬೇಕಂತೆ. ಅದಕ್ಕ ಯಾರ್‍ಯಾರು ಕೂಲಿ ಕೆಲಸಕ್ಕ ಬರೋರು ಅದೀರಿ ಜಾಬ್‌ಕಾರ್ಡ್‌ಗೆ ಅರ್ಜಿ ಕೊಟ್ಟು ಜಾಬ್‌ಕಾರ್ಡ್ ಪಡೀಬೇಕು ಮತ್ತು ಪಡೆದವರು ಕೆಲಸಕ್ಕೆ ಹೋಗಬೇಕು. ಪಂಚಾಯ್ತಿಯೊಳ್ಗ ಮೀಟಿಂಗ್ ಐತೆ ಬರ್‍ರಪ್ಪೋ ಬರ್‍ರಿ.

ಹೆಂಗಸು 1 : ಅಣ್ಣ ನಾವು ಜಾಬ್‌ಕಾರ್ಡ್ ಪಡೆದಿಲ್ಲ. ಇವತ್ತ ಅರ್ಜಿ ಕೊಡಬೇಕ

ತಮಟೆ : ಹೌದಮ್ಮ. ಇವತ್ತ ಅರ್ಜಿ ಕೊಡು. ಇನ್ನು 15ದಿನದೊಳಗ ಜಾಬ್‌ಕಾರ್ಡ್ ಸಿಗುತ್ತ

ಹೆಂಗಸು 2 : ಕೆಲಸಕ್ಕ ಹೋಗಬೇಕು ಜಾಬ್‌ಕಾರ್ಡ್ ಐತಿ. ಎಲ್ಲಿ ಹೋಗಬೇಕು. ಪ್ಯಾಟಿಗಾ?

ತಮಟೆ : ಇಲ್ಲೇ ನಮ್ಮೂರಾಗೆ ಕೆಲಸ ಮಾಡಬೇಕಮ್ಮ. ಪ್ಯಾಟಿಗೆ ಹೋಗಬೇಕಾಗಿಲ್ಲ. ಕೆಲಸ ಕಾಮಗಾರಿಗಳು ಇವತ್ತು ಚಾಲು ಮಾಡ್ತಾರ. ಎಲ್ಲರೂ ಬರ್‍ರಿ.

ಹೆಂಗಸು 2 : ಆಯ್ತಪ್ಪ ಬರ್‍ತೀವಿ. ನೀನು ಮಂದೆ ಸಾರುತ್ತಾ ನಡಿ.

ತಮಟೆ : ಆಯ್ತು. ಕೇಳ್ರಪ್ಪೋ............... (ಹೋಗುವನು)

ಸೂತ್ರಧಾರ : ಜಾಬ್‌ಕಾರ್ಡ್‌ಂತೆ ಜಾಬ್‌ಕಾರ್ಡ್? ಒಂದು ಕುಟುಂಬಕ್ಕೆ ಒಂದೇ ಕಾರ್ಡ್. ಹೆಣ್ಣಿರಲಿ ಗಂಡಿರಲಿ. ಒಂದು ಕುಟುಂಬಕ್ಕೆ ಒಂದು ವರ್ಷದಲ್ಲಿ ನೂರು ದಿನ ಕೆಲಸ. ದಿನಕ್ಕೆ ಒಂದು ಆಳಿಗೆ 125ರೂ ಅಂತೆ. ಯಾರಿಗುಂಟು ಯಾರಿಗಿಲ್ಲ.

## ಹಾಡು

*ಯಾರಿಗುಂಟೋ ಯಾರಿಗಿಲ್ಲ*
*ಪುಗಸಟ್ಟೆ ಗಂಟು ಬಾಚೋದಿಲ್ಲ*
*ಮೈ ಬಗ್ಗಿಸಿ ಕೆಲಸ ಮಾಡಲೇಬೇಕು*

(ಕೆಲಸ ಮಾಡೋ ದೃಶ್ಯ. ಗುತ್ತಿಗೆದಾರ ಕೆಲಸ ಮಾಡಿಸುತ್ತಿರುತ್ತಾನೆ. ಎರಡು ಗುಂಪುಗಳು ಇರುತ್ತವೆ.)

ಗುತ್ತಿಗೆದಾರ : (ಒಂದು ಗುಂಪಿಗೆ) ನೋಡಪ್ಪಾ ನಿನು ಇವರ್‍ನ ಕರಕೊಂಡು ಆ ರಸ್ತೆ ಕಾಮಗಾರಿ ನಡೆದಿದೆ. ಅಲ್ಲಿ ಹಿಟಾಚಿ ಕೆಲಸ ಮಾಡತದೆ. ಅಲ್ಲಿ 2 ಮೋರಿಗಳನ್ನ ಕಟ್ಟಬೇಕು. ಒಂದು ಮುಟ್ಟಿ ಸಿಮೆಂಟಿಗ 10 ಮುಟ್ಟಿ ಉಸುಗ ಹಾಕಬೇಕು ನೋಡು.

ಕೆಲಸಗಾರ : ಆಯ್ತು ಧಣಿ, ಇನ್ನೂ 2 ಮುಟ್ಟಿ ಜಾಸ್ತೀನ ಹಾಕ್ತೀನಿ ಬಿಡಿ.

ಗುತ್ತಿಗೆದಾರ : ಸಬಾಶ್, (ಮತ್ತೊಂದು ಗುಂಪಿಗೆ) ನೋಡ್ರಪ್ಪ, ಈ ಹೆಣ್ಮಕ್ಕಳನ್ನ ಕರಕೊಂಡು ಹೋಗಿಊರ ಹೊರಗಿರೋ ಆ ಗುಡಿ ಸುತ್ತಲೂ ಸಸಿಗಳನ್ನ ನೆಡಬೇಕು ಆಯ್ತು. ಗುಂಡಿ ತೋಡಿ, ಒಂದು ಮೊಳ ತೋಡ್ರಿ. ಬೇಗ ಮುಗಿಬೇಕು.

(ಒಂದು ಕಡೆ ಮೋರಿ ಕಟ್ಟಡ, ಮತ್ತೊಂದು ಕಡೆ ಸಸಿ ನೆಡೋ ಕೆಲಸ)

*ಗುತ್ತಿಗೆದಾರ ಹಿಟಾಚಿ ತಂದ*
*ನೂರಾಳಿನ ಕೆಲಸ ಮೂರೆದುನಕ್ಕೆ ಅಂದ*
*ಹೂಳು ಎತ್ತಿ ಮೋರಿ ಕಟ್ಟಿ*
*ಮೂರುದಾರಿಗೆ ಮಣ್ಣು ಹಾಕ್ತೀನಂದ*

*ಗೋಮಾಳಕ್ಕೆ ಗಿಡನಡಿಸಿ*
*ಗುಡಿಗೊಂಡಾರಕೆ ಸುಣ್ಣಾಬಳಿಸೀ*

*ಆಯ್ತು ಆಯ್ತು ಬಿಲ್ ರೆಡಿ ಆಯ್ತು*
*ಇಂಜಿನಿಯರ್ ಕ್ರಾಸ್ ಚಕಂಗೆ ಆಯ್ತು*

ಸೂತ್ರಧಾರ : ಹೌದು. ನೋಡಿದ್ರಲ್ಲಾ ಕೆಲಸ ಯಾರ್ ಮಾಡ್ಬೇಕಿತ್ತು, ಏನ್ ಮಾಡ್ತು, ಹಣ ಯಾರಿಗ್ ಸೇರಬೇಕಿತ್ತು, ಯಾರಿಗೆ ಸೇರುತ್ತೈತಿ. ಮುಂದೆ ನೋಡಿ.

(ತಾ.ಪಂ. ಈ ಓ ಆಫೀಸ್. ಗುತ್ತಿಗೆದಾರ ಬರುತ್ತಾನೆ. ಸಿಪಾಯಿ ತಡೆಯುವನು)

ಸಿಪಾಯಿ : ಏನ್ರೀ ಹಾಗೆ ಬರ್ತಿರಲ್ಲ ಇದು ಆಫೀಸು ದನದ ಕೊಟ್ಟಿಗೆಯಲ್ಲ ಸ್ವಲ್ಪ ತಡೀರಿ ಸಾಹೇಬ್ರನ್ನ ಕೇಳ್ತೀನಿ. ನಿಮ್ಮ ಹೆಸರು?

ಗುತ್ತಿಗೆದಾರ : ಗುತ್ತಿಗೆದಾರ, ಕುಬೇರಪ್ಪ ಬಂದಾರಂತ ಹೇಳು

ಸಿಪಾಯಿ : (ಒಳಬಂದು) ಸಾರ್, ಗುತ್ತಿಗೆದಾರ ಕುಬೇರಪ್ಪ ಬಂದಾನೆ ತಮ್ಮನ್ನ ಕಾಣಬೇಕಂತೆ.

FN : ಆಯ್ತು ಬರಲು ಹೇಳು. (ಕಾಗದ ಪತ್ರಗಳನ್ನು ನೋಡುತ್ತಾ ಕುಳಿತಿದ್ದಾನೆ)

ಗುತ್ತಿಗೆದಾರ : ಸಾರ್ ನಮಸ್ಕಾರ, ನಾನು ಗುತ್ತಿಗೆದಾರ ಕುಬೇರಪ್ಪ

FM : ಹಾ! ಏನಾಗ್ಬೇಕಿತ್ತು ಕುಬೇರಪ್ಪ, ಹೇಳಿ ಏನ್ ಕೆಲ್ಸ

ಗುತ್ತಿಗೆದಾರ : ಅದೇ ಸಾಹೇಬರೇ, ನಮ್ಮ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಕೆಲಸ ನಡೆದೈತಲ್ಲಾ ಆ ಕೆಲಸ ನಾನೆ ಮಾಡಿಸಿದ್ದೆ. ಎಲ್ಲಾ ಕೆಲಸ ಮುಗಿಸಿದ್ದೇನೆ. ಅದರ ಬಿಲ್ ಆಗ್ಬೇಕಾಗಿತ್ತು ಅದ್ಕೆ.......

FM : ನೋಡಿ ಕುಬೇರಪ್ಪನೋರೆ, ನಮ್ಮ ಗ್ರಾಮಪಂಚಾಯಿತಿಯೊಳ್ಗ ನಡ್ದಿರೋದು ಉದ್ಯೋಗ ಖಾತ್ರಿ ಕೆಲಸ. ಜಾಬ್‌ಕಾರ್ಡ್ ಪಡೆದಂತ ಗಾಮೀಣ ಜನರು ಕೆಲಸ ಮಾಡಿದಾರೆ. ಅವರಿಗೆ ದಿನಕ್ಕೆ 125 ಕೂಲಿ ನೀಡುತ್ತೇವೆ. ಆ ಹಣ ಅವರ ಸ್ವಂತ ಬ್ಯಾಂಕ್ ಖಾತೆಗಳಿಗೆ ಜಮ ಆಗುತ್ತೆ. ಬಿಲ್ ನಿಮ್ಮ ಹೆಸರಿಗೆ ಕೊಡಲಿಕ್ಕೆ ಬರೋದಿಲ್ಲ.

ಗುತ್ತಿಗೆದಾರ : ಏನಂದಿರಿ, ಲಕ್ಷಾಂತರ ರುಪಾಯಿಗಳನ್ನ ನಾನೇ ಖರ್ಚು ಮಾಡಿ ಕೆಲಸ ಮಾಡಿಸಿದ್ದರೂ ಬಿಲ್ ಕೊಡೋದಿಲ್ವಾ

FM : ಹಾಗ್ ಬರೋದಿಲ್ಲ ಸ್ವಾಮಿ. ಅದು ಉದ್ಯೋಗ ಖಾತ್ರಿ ಕೆಲಸ. ಅದನ್ನು ಗುತ್ತಿಗೆದಾರರಿಗೆ ಕೊಡೋದಿಕ್ಕೆ ಬರೋದಿಲ್ಲ. ಬಿಲ್ ಎಲ್ಲಿಂದ ಮಾಡೋದು. ಬೇರೆ ಯೋಜನೆಯಲ್ಲಿ ಯಾವುದಾದ್ರು ಕೆಲ್ಸ ಮಾಡ್ಸಿ ನೋಡೋಣ

ಗುತ್ತಿಗೆದಾರ : (ಸಿಟ್ಟಿನಿಂದ ಒಂದು ಕಡೆ ಬಂದು ಮೊಬೈಲ್ ತೆಗೆದು ಎಂ.ಎಲ್.ಎ ಗೆ ಫೋನ್ ಮಾಡುವಂತೆ ನಟಿಸಿತ್ತಾನೆ. ನಂತರ ಆಫೀಸಿನ ಫೋನ್ ರಿಂಗ್ ಆಗುತ್ತದೆ)

FM : ಸರ್, ನಮಸ್ಕಾರ ಸರ್. ಹೌದು ಬಂದಿದ್ದಾರೆ. ಅದೇ ಸಾರ್. ಹಾ ಸಾರ್. ಹಾಗೆ ಮಾಡೋಕೆ ಬರೋದಿಲ್ಲ ಯಾಕಂದ್ರೆ ತಮಗೂ ಗೊತ್ತಿದೆ. ಅದು ಉದ್ಯೋಗ ಖಾತ್ರಿ ಹಣ, ಸಾರಿ ಸರ್,.. ಬೇರೆ ಯಾವ್ದಾದ್ರೂ ಕೆಲ್ಸ. ಇದೊಂದು ಸಾರಿ ಬಿಡಿ, ಮಾಡ್ಕೊಡ್ತೀನಿ. ಸರ್. ಸರ್. (ಒತ್ತಾಯಕ್ಕೆ ಚೆಕ್ ಬರೆದು ಕೊಡುವನು)

ಗುತ್ತಿಗೆದಾರ : (ನಗುತ್ತಾ ಈ ಓ ಹತ್ತಿರ ಬಂದು ) ಏನು ಬಿಲ್ ಮಾಡೋದಿಕ್ಕೆ ಬರೋದಿಲ್ಲ ಅಲ್ಲಾ. ಅದು ಯಾಪರಿ ಕಿಸಿತಿದ್ದಿ ಈಗ ಕಿಸಿ. ಹೂ ಕೊಡು ಕೊಡು (ಚೆಕ್ ಕಸಿದುಕೊಳ್ಳುವನು)

(ಎರಡು ಗುಂಪುಗಳ ಜಗಳ)

*ಲೆಕ್ಕ ಬುಕ್ಕ ಸರಿ ಇಲ್ವಂತೆ*
*ಲಕ್ಷಾಂತರ ಹಣ ತಿಂದಾರಂತೆ*
*ವಿರೋಧ ಪಕ್ಷದವರು ಕೂಗಾಡ್ತಾರೆ*
*ಆಡಳಿತ ಪಕ್ಷದವರು ದಬಾಯಿಸ್ತಾರೆ.*

ಸೂತ್ರಧಾರ : ನೋಡಿದ್ರ ಹ್ಯಾಗಿದೆ ಕಾಳಗ, ಯೋಜನೆಯ ಕೆಲಸ ಮಾಡೊರು ಯಾರು, ಹಣ ತಿನ್ನೋರು ಯಾರು. ಲಕ್ಷಾಂತರ ಹಣ, ಬಡವರ ಹಣ, ಕೂಲಿಕಾರ ಹಣ ಅದು ಅವರಿಗೆ ಸಿಕ್ತಾಯಿಲ್ಲ. ಇದನ್ನ ಕೇಳೋರು ಯಾರು?

*ಬೆಕ್ಕಿಗೆ ಗಂಟೆ ಕಟ್ಟೋರ್‍ಯಾರು?*
*ಲಂಚದ ಮಂಚ ಮುರಿಯೋರ್‍ಯಾರು?*
*ಕಳ್ಳರ ಗ್ಯಾಂಗ್ ಹಿಡಿಯೋರ್‍ಯಾರು?*
*ಕಲ್ಯಾಣ ರಾಜ್ಯ ಕಟ್ಟೋರ್‍ಯಾರು? ನೀವೆ ನೋಡಿ*

(ಮೂರು ಕಪಿಗಳು ಮೂರು ದಿಕ್ಕಿನಲ್ಲಿ ಕಣ್ಣು ಕಿವಿ, ಬಾಯಿ ಮುಚ್ಚಿಕೊಂಡು ಕುಳಿತಿರುತ್ತಾರೆ. ಹಾಡು)

ಕಪಿ 1 : ಬೆಕ್ಕಿಗೆ ಗಂಟೆ ನಾವು ಕಟ್ಟುತ್ತೇವೆ.

ಕಪಿ 2 : ಕಳ್ಳರ ಗ್ಯಾಂಗ್ ನಾವು ಹಿಡಿತ್ತೇವೆ

ಕಪಿ 3 : ಲಂಚದ ಮಂಚ ನಾವು ಮುರಿಯುತ್ತೇವೆ ಕಲ್ಯಾಣ ರಾಜ್ಯ ಕಟ್ಟುತ್ತೇವೆ.

## ಹಾಡು

*ಕಪಿಗಳು ಸಾರ್, ನಾವು ಗಾಂಧಿ ಕಪಿಗಳು*
*ಬೆಕ್ಕಿಗೆ ಗಂಟೆ ಕಟ್ಟುತ್ತೇವೆ*
*ಲಂಚದಮಂಚ ಮುರಿಯುತ್ತೇವೆ*
*ಕಳ್ಳರ ಗ್ಯಾಂಗು ಹಿಡಿಯುತ್ತೇವೆ ॥ ಕಪಿಗಳು ॥*

ಕಪಿ 1 : ನಾನು ಇಲ್ಲಿವರೆಗೂ ಈ ಅನ್ಯಾಯ ಬ್ರಷ್ಟಾಚಾರ ನೋಡಬಾರ್ದು ಅಂತ ಕಣ್ಣು ಮುಚ್ಚಿಕೊಂಡಿದ್ದೆ ಆದ್ರೆ ಜಾಗೃತಿಗಾಗಿ ತೆರೆಯುತ್ತೇನೆ

ಕಪಿ 2 : ಹೌದು ನಾನು ಕೆಟ್ಟದ್ದನ್ನು ಮಾತಾಡಬಾರ್ದು ಅಂತ ಬಾಯಿ ಮುಚ್ಚಿಕೊಂಡಿದ್ದೆ. ಈ ಅನ್ಯಾಯ ಸಹಿಸದೆ ಮಾತನಾಡುತ್ತಿದ್ದೇನೆ.

ಕಪಿ 3 : ಅಯ್ಯೋ ಇದೆಲ್ಲ ಕೇಳಬಾರದು ಅಂತ ಕಿವಿ ಮುಚ್ಚಿಕೊಂಡಿದ್ದೆ. ಆದ್ರೆ ಕೇಳುತ್ತೇನೆ, ಜನರ ಜಾಗೃತಿಗಾಗಿ, ಬಡವರ ಒಳಿತಿಗಾಗಿ ಸಾರುತ್ತೇನೆ. ಹಳ್ಳಿಹಳ್ಳಿಗೂ ಸಾರುತ್ತೇನೆ.

1 : ಉದ್ಯೋಗ ಖಾತ್ರಿ – (ಗುಂಪು) – ನಮ್ಮ ಹಕ್ಕು

2 : ದುಡಿಯುವ ಕೈಗೆ – ಕೆಲಸ ಕೊಡಿ

3 : ಉದ್ಯೋಗ ಕೊಡದಿದ್ದರೆ – ನಿರುದ್ಯೋಗ ಭತ್ಯೆ ಕೊಡಿ

(ಕೂಗುತ್ತಾ ಗ್ರಾ.ಪಂ ಆವರಣಕ್ಕೆ ಬರುತ್ತಾರೆ)

ಅಧ್ಯಕ್ಷ : ಏನ್ರೀ ಸೆಕ್ರೆಟರಿ, ಏನದು ಗಲಾಟೆ. ಸ್ವಲ್ಪ ನೋಡಿ

ಸೆಕ್ರೆಟರಿ : ಅಲ್ಲಪ್ಪಾ ಹಿಂಗ ಗಲಾಟೆ ಮಾಡುದ್ರ ನಿಮಗ ಕೆಲಸ ಸಿಗುತ್ತ, ಸ್ವಲ್ಪ ಸಮಾಧಾನ ಮಾಡಿ. ಅಧ್ಯಕ್ಷರು ಬಂದಾರ ಅವರು ಸರಿ ಮಾಡ್ತಾರ.

ಒಬ್ಬ : ಸೆಕ್ರಟ್ರಿಯವರ ಅದೇನ್ ಸರಿಮಾಡ್ತಾರ, ಬಡವರ ಕೆಲಸ ಕಸಗೊಂಡಾರ

ಇನ್ನೊಬ್ಬ : ನಮ್ಮ ಜಾಬ್‌ಕಾರ್ಡ್ ತಗೊಂಡು ಹಣ ನುಂಗ್ಯಾರ.

ಮತ್ತೊಬ್ಬ : ನಾವೆಲ್ಲರೂ ಇವತ್ತು ಸುಮ್ಮನೆ ಬಿಡೋದಿಲ್ಲ, ಮ್ಯಾಲಿನ ಸಾಹೇಬ್ರು ಬರ್‍ತಾರಂತ ಅದ್ಕ ಅವರ್‍ನ ಕೇಳ್ತೀವಿ.

(ಈ ಒ ಬರುತ್ತಾರೆ)

ಗುಂಪು : ಸಾಹೇಬ್ರ ನಮಸ್ಕಾರ, ನಮ್ಮೂರಿಗೆ ಬಂದೀರಿ. ಈ ಸೆಕ್ರೆಟರಿನ, ಅಧ್ಯಕ್ಷರನ್ನ ಸರಿಯಾಗಿ ವಿಚಾರ ಮಾಡಿ. ನಮ್ಮ ಕೆಲಸ ಕಸ್ಗೊಂಡಾರ ನಮ್ಮೆಲ್ಲರಿಗೂ ಕೂಲಿ ಸಿಗಬೇಕು, ನ್ಯಾಯ ಬೇಕು.

ಗುಂಪು : ಹೌದು ಹೌದು

ಅಧ್ಯಕ್ಷ : ಏ ಸುಮ್ನಿರ್ರೋ ನಾನ್ ಸರಿ ಮಾಡ್ತೀನಿ.

ಗುಂಪು 1 : ಏನ್ ಸರಿ ಮಾಡ್ತೀರಿ. ನೀವು ಮಾಡಿದ್ದೇ ಸಾಕಷ್ಟು ಐತಿ. ಸುಮ್ನ ಕೂಡ್ರಿ.

ಮಹಿಳೆ : ಅಲ್ರೀ ಅಧ್ಯಕ್ಷರೆ, ನಿಮ್ಮ ಜವಬ್ದಾರಿ ಏನು ಅನ್ನೋದು ಗೊತ್ತೈತೇನು ನಿಮ್ಗ

ಅಧ್ಯಕ್ಷ : ಯಾಕವ್ವಾ ನಾನೇನ್ ಅಂತಾದ್ ಮಾಡಿದ್ದೀನಿ

ಮಹಿಳೆ 2 : ಎವ್ವಿ ಎವ್ವಿ ಬೆಕ್ಕು ಕಣ್ಣುಮುಚ್ಚಿಕೊಂಡು ಹಾಲು ಕುಡಿದರೆ ಯಾರ್ಗೂ ಗೊತ್ತಾಗೊಲ್ಲಾ ಅಂದ್ಕೋತಂತೆ. ಹಂಗಾಯ್ತು. ಎಂತಾ ಕಾಲ ಬಂತಲ್ಲಪ್ಪ

ಮಹಿಳೆ 3 : ಮಳ್ಳಿ ಮಂಚಕ್ಕೆ ಕಾಲೆಷ್ಟು ಅಂದ್ರೆ ಮೂರು ಮತ್ತೊಂದು ಅಂದ್ಲಂತೆ. ಅದೇನೋ ಅಂತಾರಲ್ಲಾ ಊರ್ಗೆಲ್ಲಾ ಗೊತ್ತಿರೋ ಗುಟ್ನ ಅಗಸ ಕತ್ತೆ ಕಿವಿಯಲ್ಲಿ ಹೇಳಿದ್ನಂತೆ. ಹಂಗಾಯ್ತು ಇವರ ಕಥೆ

ವ್ಯಕ್ತಿ 1 : ಸಾಹೇಬ್ರೆ ನಾನು ಲೆಕ್ಕ ಪರಿಶೋಧನಾ ಸಮಿತಿಯೊಳ್ಗ ಇದೀನಿ. ಯಾವತ್ತಾದ್ರೂ ಈ ಸೆಕ್ರೆಟ್ರಿ ಇಂತಾದಿನ ಮೀಟಿಂಗ್ ಐತೆ ಅಂತಾ ಒಂದು ನೋಟಿಸ್ ಕಳಿಸ್ಯಾನ.

ಒಬ್ಬ : ಸಾಹೇಬ್ರೆ ಎಲ್ಲಾ ಲೆಕ್ಕಪತ್ರ ಅಪ್ರಾ ತಪ್ರಾ ಮಾಡಿ ಇಡೀ ನಮ್ಮೂರ ಕೂಲಿ ಜನರಿಗೆ ಮೋಸ ಮಾಡ್ಯಾರ. ಇವನ್ನ ವರ್ಗ ಮಾಡಿ ಇಲ್ಲಾ ಸಸ್ಪೆಂಡ್ ಮಾಡಿ.

ಸಿಈಒ : ಆಯ್ತು, ಸ್ವಲ್ಪ ಸುಮ್ನೆ ಇರಿ. ಏನು ಹೇಳ್ತಿಯಪ್ಪಾ ಸೆಕ್ರೆಟರಿ. ಜನ ಹಿಂಗ್ ಕೇಳ್ತಾರ ಅವರಿಗೆ ಯಾವುದೂ ಮಾಹಿತಿ ಕೊಡದೆ ಲೆಕ್ಕಪತ್ರಾನು ಸರಿಯಾಗಿ ಇಡದೆ ನೀನು ಹಿಂಗಾ ನೌಕರಿ ಮಾಡೋದು ನೋಡು ನಿನ್ ಮೇಲೆ ಇಲ್ಲಿನ ಯುವಕರು ಕಂಪ್ಲೇಟ್ ಮಾಡ್ಯಾರ. ಅದು ಅಲ್ಲದೆ ನಾವು ಕೇಳಿದ ಎಲ್ಲಾ ಕಾಗದ ಪತ್ರಗಳನ್ನ ನೀನು ಸರ್ಯಾಗಿ ಪ್ರೊಡ್ಯೂಸ್ ಮಾಡಿಲ್ಲ ಅದಕ್ಕೆ ಜಿಲ್ಲಾ ಪಂಚಾಯ್ತಿಗೆ ನಿನ್ ಮ್ಯಾಲೆ ದೂರು ಬಂದೈತಿ. ನಿನ್ನನ್ನ ಈಗಲೇ ಸಸ್ಪೆಂಡ್ ಮಾಡ್ತೀನಿ. ಹೋಗು ಮನೆಗೆ. ವಿಚಾರಣೆ ನಂತರ ಮುಂದಿನ ಕ್ರಮ ಕೈಗೊಳ್ಳುತ್ತೇವೆ. ಬರತೀವಿ ಜನರೆ

ಸೂತ್ರಧಾರ : ಈ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ತಿಳ್ಕೋಬೇಕು. ಇಲ್ಲಿ ನೀವು ಕೆಲಸ ಮಾಡಬೇಕು. ಯಾಕಂದ್ರೆ 125 ರುಪಾಯಿ ಕೂಲಿ ಅಂತ ತಾತ್ಸಾರ ಮಾಡುದ್ರೆ ನಿಮ್ಮ ಕೈಗೆ ಬರೋ ಹಣ ಎಲ್ಲಿಗೆ ಹೋಗುತ್ತೆ ಅಂತ ನೀವೇ ನೋಡುದ್ರಲ್ಲಾ. ಇನ್ನಾದರೂ ಜಾಗೃತರಾಗಿ.

ಬಡವರ ರೊಕ್ಕ ತಿಂದವರ್ಯಾರು? ಹೇಳಿ

* * *

# ಧರೆಗಿಳಿದ ಗಾಂಧಿ

– **ಮಾಯಸಂದ್ರ ಕೃಷ್ಣಪ್ರಸಾದ್**

ನಾಟಕದ ಪ್ರಾರಂಭದಲ್ಲಿ ಆತಂಕದ ಸನ್ನಿವೇಶವನ್ನು ಸೂಚಿಸುವ ಸಂಗೀತ. ಅ ಸಂಗೀತಕ್ಕೆ ತಕ್ಕಂತೆ ಶಿವ–ಪಾರ್ವತಿಯರು ಹೆಜ್ಜೆ ಹಾಕುತ್ತಾ ಪ್ರವೇಶಿಸುತ್ತಾರೆ. ಒಂದು ಮೂಲೆಯಲ್ಲಿ ಗಾಂಧಿ ಉಪವಾಸ ವ್ರತ ಮಾಡುತ್ತಾ ಕುಳಿತಿರುತ್ತಾರೆ. ಅವರ ಮುಂದೆ ಇಬ್ಬರು ಸತ್ಯಾಗ್ರಹಿಗಳು ಇರುತ್ತಾರೆ.

ಶಿವ : ಮಹಾತ್ಮ ಎನಿದು ನಿನ್ನ ಅವಾಂತರ ? ಏಕೆ ಈ ಉಪವಾಸ ?

ಸತ್ಯಾಗ್ರಹಿ : ಬರೀ ಉಪವಾಸವಲ್ಲ ಆಮರಣಾಂತ ಉಪವಾಸ.

ಶಿವ : ಕೈಲಾಸದಲ್ಲಿ ಮರಣವೇ ? ಕೈಲಾಸವಾಸಿಗಳಾದ ಮೇಲೆ ಮನುಷ್ಯರು ಇಲ್ಲಿಗೆ ಬರುವುದು. ಇಲ್ಲಿ ಸಾವು ಇಲ್ಲ.

ಸತ್ಯಾಗ್ರಹಿ : ಸಾವಿಲ್ಲದಿರಬಹುದು, ಆದರೆ ಬದುಕಿದ್ದೇ ಸತ್ತಿರಬಹುದಲ್ಲ.

ಬಾಪೂಜಿ : ಅಮೃತವನ್ನು ಸ್ವೀಕರಿಸಲು ನಿರಾಕರಿಸಿದ್ದಾರೆ.

ಶಿವ : ಅದನ್ನರಿತೇ ನಾನಿಲ್ಲಿಗೆ ಬಂದಿರುವುದು. ಇದರಿಂದ ಕೈಲಾಸಲೋಕ, ಸ್ವರ್ಗಲೋಕ ತಲ್ಲಣಗೊಂಡಿದೆ.

ಸತ್ಯಾಗ್ರಹಿ : ಇದರ ಪರಿಣಾಮ ಭೂಲೋಕ, ಪಾತಾಳ ಲೋಕಕ್ಕೂ ತಲುಪಲಿದೆ.

ಪಾರ್ವತಿ : ಓ ಶಿವನೇ . . . .

ಶಿವ : ಏನಾಯ್ತು ದೇವಿ ?

ಪಾರ್ವತಿ : ಸಂಕಟ ಬಂದಾಗ ನಿನ್ನ ಭಕ್ತರು ನಿನ್ನನ್ನು ಕೂಗುವುದಿಲ್ಲವೇ ಹಾಗೆ ನಾನು ನಿನ್ನನ್ನು ಕೂಗಿದೆ.

ಶಿವ : ಅಯ್ಯೋ ನೀನು ಬೇರೆ, ಮೊದಲೇ ನಾನು ಟೆನ್ಷನ್ನಲ್ಲಿ ಇದ್ದೀನಿ ನನಗೇ ಸಂಕಟ ಬಂದಿರುವುದರಿಂದ ನಾನೇ ವೆಂಕಟರಮಣ ಎಂದು ಕೂಗಬೇಕಾಗಿದೆ.

(ಸಂಗೀತ ಅಲೆ ಏಳುತ್ತದೆ. ಆ ಅಲೆಯಲ್ಲಿ ಬ್ರಹ್ಮ–ವಿಷ್ಣು ತೇಲಿ ಬರುತ್ತಾರೆ.)

ಬ್ರಹ್ಮ : ಕೈಲಾಸದಲ್ಲಿ ಏನಾಗುತ್ತಿದೆ ?

ಶಿವ : (ಕೋಪದಿಂದ) ಏನಾಗುತ್ತಿದೆ ? ಎಲ್ಲವೂ ಸರಿಯಾಗಿದೆ.

ವಿಷ್ಣು : ಇಲ್ಲ ಪರಮೇಶ್ವರ, ಇಲ್ಲೇ ಏನೋ ಆಗುತ್ತಿದೆ ಇದರ ಬಿಸಿ ದೇವಲೋಕಕ್ಕು ತಟ್ಟುತ್ತಿದೆ. ಮುಂದೆ ಭೂಲೋಕಕ್ಕೂ ಹರಡುತ್ತದೆ.

ಶಿವ : ಹರಡಲಿ ಬೇಗ, ಭೂಲೋಕಕ್ಕೆ ಹರಡಲಿ. ಈ ಮಹಾತ್ಮ ಸುಮ್ಮ ಸುಮ್ಮನೆ ಆಮರಣಾಂತ ಉಪವಾಸ ಪ್ರಾರಂಭಿಸಿದ್ದಾನೆ. ಯಾರೋ, ಏನೋ ಹಚ್ಚಿಕೊಟ್ಟಿದ್ದಾರೆ.

ಪಾರ್ವತಿ : ಇನ್ಯಾರು ಇದು ನಾರದರ ಕೆಲಸವೇ.

ಶಿವ : ಓ ನಾರದರೇ . . . . (ತಾಂಡವ ನೃತ್ಯ ಆರಂಭಿಸುತ್ತಾರೆ, ವಿಷ್ಣು, ಬ್ರಹ್ಮ, ಸತ್ಯಾಗ್ರಹಿಗಳು ನಿಲ್ಲಲಾರದೆ ವಾಲಾಡುತ್ತಾ ವೇದಿಕೆ ತುಂಬಾ ಹಿಂಸೆಯಿಂದ ಓಡಾಡುತ್ತಾರೆ. ಗಾಂಧಿ ಮಾತ್ರ ನಿಶ್ಚಲವಾಗಿ ಕುಳಿತಿರುತ್ತಾರೆ. ಸಂಗೀತ ಮುಗಿಯುವ ಹೊತ್ತಿಗೆ)

ವಿಷ್ಣು : ನಿಲ್ಲಿಸು, ನಿಲ್ಲಿಸು, ಪರಮೇಶ್ವರಾ, ನಿಲ್ಲಿಸು.

ಬ್ರಹ್ಮ : ತ್ರಿಮೂರ್ತಿಗಳಾದ ನಾವು ಈ ಸಮಸ್ಯೆಯನ್ನು ಬಗೆಹರಿಸಬೇಕಾಗಿದೆ. ವೃಥಾ ನೀನೇಕೆ ಕೋಪಗೊಳ್ಳುತ್ತೀ . . ?

| | | |
|---|---|---|
| ಶಿವ | : | ನೋಡಿ, ನೋಡಿ ಈ ಮಾಹತ್ಮನು ಬ್ರಹ್ಮಾಂಡವೇ ಅಲುಗಾಡಿದರೂ ಅಳ್ಳಾಡದೇ ಕುಳಿತ್ತಿದ್ದಾರೆ. |
| ಸತ್ಯಾಗ್ರಹಿ | : | ಬಾಪೂಜಿಯವರ ಚಳುವಳಿಯೆಂದರೆ ಹೀಗೆ, ಯಾವುದಕ್ಕೂ ಅಳ್ಳಾಡುವುದಿಲ್ಲ. ನಿಮ್ಮ ತಾಂಡವ ನೃತ್ಯಕ್ಕೂ ಅಷ್ಟೇ. |
| ಶಿವ | : | ನೀನು ಸುಮ್ಮನಿರಯ್ಯ, ಈ ಮನುಷ್ಯ ಯಾವಾಗಲೂ ನನ್ನನ್ನು ಪೇಚಿಗೆ ಸಿಕ್ಕಿಸುತ್ತಾನೆ. |
| ವಿಷ್ಣು | : | ನೀನೇ ಪೇಚಿಗೆ ಸಿಕ್ಕಿಹಾಕಿಕೊಂಡಿದ್ದು, ದೇವೇಂದ್ರ ಹೇಳಿರಲಿಲ್ಲವೇ, ಮಹಾತ್ಮ ಸ್ವರ್ಗದಲ್ಲೇ ಇರಲಿ ಕೈಲಾಸದಲ್ಲಿ ಬೇಡ ಎಂದು. ನೀನೇ ಆಸೆಪಟ್ಟು ಇಲ್ಲಿ ಕರೆತಂದದ್ದು. |
| ಬ್ರಹ್ಮ | : | ದೇವೇಂದ್ರನಾಗಿದ್ದರೆ ಉಪಾಯವಾಗಿ ಈ ಸಮಸ್ಯೆಯನ್ನು ಬಗೆಹರಿಸುತ್ತಿದ್ದ. |
| ಪಾರ್ವತಿ | : | ವೃಥಾ ಆರೋಪ ಮಾಡಿಕೊಂಡು ಒದ್ದಾಡುವುದು ಬೇಡ, ಮಹಾತ್ಮನನ್ನು ಉಪವಾಸದಿಂದ ಎಬ್ಬಿಸಿ. |
| ಸತ್ಯಾಗ್ರಹಿ | : | ಬರೀ ಉಪವಾಸವಲ್ಲ ಆಮರಣಾಂತ ಉಪವಾಸ. |
| ಬ್ರಹ್ಮ | : | ಅಯ್ಯೋ ಸುಮ್ಮನಿರಯ್ಯ. ಆತನ ಜೊತೆ ನಿಮ್ಮ ಕಾಟ ಬೇರೆ ನಿಮ್ಮನ್ನೆಲ್ಲ ಸೃಷ್ಟಿಸುವಾಗ ಸತ್ಯದ ಮುದ್ದೇನ ನಿಮ್ಮೆದೇಲಿಟ್ಟಿದ್ದೆ ನನ್ನ ದೊಡ್ಡ ತಪ್ಪಾಗಿದೆ. |
| ವಿಷ್ಣು | : | ಇಲ್ಲ ಬ್ರಹ್ಮ ನೀನು, ಸರಿಯಾಗೇ ಮಾಡಿದ್ದೀಯ. ಇಲ್ಲದಿದ್ದರೆ ಈ ಮಹಾತ್ಮ ಮಾಡೋ ಕೆಲಸ ನಾವು ಮಾಡಬೇಕಾಗುತ್ತಿತ್ತು. |
| ಶಿವ | : | ಏನೇ ಇರಲಿ ಆ ಮಹಾತ್ಮರನ್ನು ಎಬ್ಬಿಸಿ. |
| ಸತ್ಯಾಗ್ರಹಿ | : | ಹಾಗೆ ಬಾಪೂಜಿ ಏಳುವುದಿಲ್ಲ. ಅವರು ಏಳ ಬೇಕಾದರೆ ಭೂಲೋಕವನ್ನು ಚೆನ್ನಾಗಿ ಬಲ್ಲ ನಾರದರು ಇಲ್ಲಿರಬೇಕು. |
| ಶಿವ | : | ಓ . . ನಾರದರೇ . . (ಶಿವನು ಕೂಗಿದ ಧ್ವನಿಗೆ ಓಗೊಟ್ಟು "ನಾರಾಯಣ, ನಾರಾಯಣ" ಎಂದು ಕೂಗುತ್ತಾ ನಾರದರು ವೇದಿಕೆಯ ಮೇಲೆ ಬರುತ್ತಾರೆ.) |
| ಪಾರ್ವತಿ | : | ಇಂಥಾ ಕೆಲ್ಸ ಮಾಡೋರು ಇನ್ನಾರು ? ನಾರದರೇ ಇರ್ಬೇಕು. |
| ಶಿವ | : | (ಕೋಪದಿಂದ) ಓ . . . . ನಾರದರೇssss . . . . |
| ನಾರದ | : | (ಪ್ರವೇಶಿಸಿ) ನಾರಾಯಣ, ನಾರಾಯಣ, ಇಲ್ಲೇ ಇದ್ದೇನೆ ಪರಮೇಶ್ವರ, ತಪ್ಪು ತಿಳಿಯಬೇಡ, ಭೂಲೋಕದಲ್ಲಿ ಭಾರತದ ಕರ್ನಾಟಕ ರಾಜ್ಯದಲ್ಲಿ ಸಂಚರಿಸುವಾಗ ಅಲ್ಲಿನ ಕಷ್ಟ ಕೋಟಲೆಗಳನ್ನು ಕಂಡು "ಮಹಾತ್ಮರು ಕರ್ನಾಟಕಕ್ಕೆ ಬರಲೇಬೇಕು" ಅನ್ನಿಸಿ ಅಲ್ಲಿಂದ ಕೈಲಾಸಕ್ಕೆ ಬಂದೊಡನೆ ನಾನೇ ಇವರಿಗೆ ಸಲಹೆ ಕೊಟ್ಟಿದ್ದು, ಮಹಾತ್ಮನ ಕನಸುಗಳು ಸಾಕಾರಗೊಳ್ಳುವ ದಿನಗಳು ಬಂದಿದೆ. ಆದರೆ ಜನ ನಿಲಿಪ್ತವಾಗಿದ್ದಾರೆ. ಅವರಿಗೆ ಕನಸುಗಳೇ ಬೀಳುತ್ತಿಲ್ಲ. |
| ಶಿವ | : | ಅದಕ್ಕೆ ನಾನೇನು ಮಾಡಬೇಕು ? |
| ನಾರದ | : | ವೆರಿ ಸಿಂಪಲ್, 'ಮಹಾತ್ಮರ ಬಯಕೆಯನ್ನು ಈಡೇರಿಸುತ್ತೇನೆ' ಎಂದು ಹೇಳಿಬಿಡು ಎಲ್ಲಾ ಅವಾಂತರಗಳು ಸಮಾಪ್ತಿಯಾಗುತ್ತದೆ. |
| ವಿಷ್ಣು | : | ಮಾತು ಕೊಟ್ಟುಬಿಡು ಪರಮಾತ್ಮ. |
| ಬ್ರಹ್ಮ | : | ಇನ್ನು ಎನು ಯೋಚಿಸುತ್ತಿದ್ದೀಯಾ ? |
| ಪಾರ್ವತಿ | : | ಸ್ವಾಮಿ "ಹ್ಞೂಂ" ಅಂದು ಬಿಡಿ. |
| ಶಿವ | : | (ಮನಸ್ಸಿಲ್ಲದ ಮನಸ್ಸಿನಿಂದ) ಸರಿ ಮಹಾತ್ಮನನ್ನು ಮೇಲೇಳಲು ಹೇಳಿ. |

ವಿಷ್ಣು : ಮಹಾತ್ಮರೇ ಉಪವಾಸ ಬಿಟ್ಟು ಮಲೇಳಿ ಶಿವ "ಹ್ಞೂಂ" ಎಂದಾಯ್ತು.

ಗಾಂಧಿ : ಧನ್ಯವಾದಗಳು, ನಿಂಬೆರಸ ಕೊಡಿ.

ಬ್ರಹ್ಮ : ಕೈಲಾಸದಲ್ಲಿ ನಿಂಬೆಹಣ್ಣೆಲ್ಲಿ ಸಿಗುತ್ತೆ ?

ನಾರದ : ನನ್ನತ್ರ ಸ್ಟಾಕಿದೆ. ಸತ್ಯಾಗ್ರಹಿಗಳೇ ಮಹಾತ್ಮರಿಗೆ ನಿಂಬೆರಸ ಕುಡಿಸಿ, ಹಳ್ಳಿಗಳು ಉದ್ಧಾರವಾದರೆ ದೇಶ ಉದ್ಧಾರವಾಗುತ್ತದೆ, ಎಂದು ಸರ್ಕಾರ ಅರಿತಿದೆ ಪರಮಾತ್ಮ, ಅದಕ್ಕಾಗಿ ಕೇಂದ್ರ ಸರ್ಕಾರ ಮಹತ್ವದ ಯೋಜನೆಯನ್ನು ತಂದಿದೆ.

ಗಾಂಧಿ : ಮಹತ್ವದ ಯೋಜನೆ ತಂದರೆ ಗ್ರಾಮಗಳು ಉದ್ಧಾರವಾಗಲೇಬೇಕು ತಾನೆ ? ಮೊದಲು ಆ ಯೋಜನೆಗಳ ಬಗ್ಗೆ ಹೇಳಿ.

ನಾರದ : "ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ" ಎಂದು ಆ ಯೋಜನೆಯ ಹೆಸರು ಆ ಯೋಜನೆಯನ್ನು ರಾಜ್ಯ ಸರ್ಕಾರಗಳು "ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಯೋಜನೆ" ಎಂದೇ ಗುರುತಿಸಿಕೊಳ್ಳಬೇಕೆಂದು 2009 ಡಿಸೆಂಬರ್ 31ರಿಂದ "ದಿ ಗೆಜೆಟ್ ಆಫ್ ಇಂಡಿಯಾ"ದಲ್ಲಿ ಸಹ ಪ್ರಕಟಿಸಿದೆ.

ಗಾಂಧಿ : ನನ್ನ ಹೆಸರಿಟ್ಟಿದ್ದಾರೆ ಅಂದ ಮೇಲೆ, ಯಾವ ಮೋಸವೂ ಇರಬಾರದು. ಅಕಸ್ಮಾತ್ ಇದ್ರೆ ಮತ್ತೆ ಸತ್ಯಾಗ್ರಹಕ್ಕೆ ಕೂರೂತ್ತೇನೆ.

ಶಿವ : ಉಪವಾಸ, ಸತ್ಯಾಗ್ರಹ ಅನ್ನಬೇಡಿ ಮೈ ನಡುಗುತ್ತದೆ.

ವಿಷ್ಣು : ಬೇಗೆ ನಿಂಬೆರಸ ಕುಡಿಸ್ರಪ್ಪ ಅವ್ರಿಗೆ. (ಸತ್ಯಾಗ್ರಹಿಗಳು ನಿಂಬೆರಸವನ್ನು ಕುಡಿಸುತ್ತಾರೆ.)

ಪಾರ್ವತಿ : ಹ್ಞೂಂ, ತುಂಬಾ ಟನ್ಷನ್ ಮಾಡ್ಕೊಂಡು ತಾವೂ ಡಿಸ್ಟರ್ಬ್ ಆಗಿ ನನ್ನನ್ನೂ ಟೆನ್ಸ್ ಮಾಡ್ಬೇಡಿ.

ಶಿವ : ಇರಲಿ ಈ ಯೋಜನೆಯಲ್ಲಿ ಹಳ್ಳಿಗರಿಗೆ ಏನೇನು ಉಪಯೋಗಗಳಿವೆ ?

ನಾರದ : ಮಳೆ ಬಾರದಿದ್ದಾಗ, ತಾವು ಬೆಳೆದ ಬೆಳೆಯ ಫಸಲು ಸರಿಯಾಗಿ ಬಾರದಿದ್ದಾಗ ಪಾಪ, ಈ ಸಣ್ಣ ರೈತರುಗಳು ಕಂಗಾಲಾಗುತ್ತಾರೆ. ಸಾಲ ತೀರಿಸಲಾಗದೇ ವಿಷ ಕುಡಿಯುತ್ತಾರೆ. ನೇಣಿಗೆ ಶರಣಾಗುತ್ತಾರೆ. ಹರಿಯುವ ನದಿಗೆ, ಸಿಹಿ ನೀರಿನ ಬಾವಿಗೆ, ಆಮೇಲೆ . . . .

ಶಿವ : ಸಾಕು, ಸಾಕು, "ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ" ಎಂದು ಒಂದೇ ವಾಕ್ಯದಲ್ಲಿ ಹೇಳಿ ವಿವರಗಳು ಬೇಡ.

ಗಾಂಧಿ : ಆತ್ಮಹತ್ಯೆ ಮಾಡಿಕೊಳ್ಳುವುದು ಮಹಾಪಾಪ.

ಪಾರ್ವತಿ : ಆಮರಣಾಂತ ಉಪವಾಸ ಮಾಡುವುದೂ ಸಹ ಒಂದು ಪಾಪವೇ.

ಗಾಂಧಿ : ನನ್ನ ಮೇಲೆ ವೃಥಾ ಆರೋಪ ಹೊರಿಸಬೇಡಿ ಆಮೇಲೆ ನಾನು . . . .

ಶಿವ : (ಗಾಂಧಿ ಮಾತನ್ನು ಅರ್ಧದಲ್ಲೇ ತೆಗೆದು) ಪಾರ್ವತಿ ಸುಮ್ಮನಿರು ಮಹಾತ್ಮರನ್ನು ಕೆಣಕಬೇಡ, ಪಾಪ ಅವರು ಕರ್ನಾಟಕದ ರೈತರ ಬಗ್ಗೆ ಕಾಳಜಿ ವಹಿಸಿದ್ದಾರೆ, ನಾರದರೆ, ಬೇಗ ವಿಷಯಕ್ಕೆ ಬನ್ನಿ.

ನಾರದ : ಅದಕ್ಕಾಗಿ ಅವರ ಹಳ್ಳಿ ಪಕ್ಕದಲ್ಲೇ ಕೆಲಸ ಕೊಟ್ಟು ` 100.00ಗಳ ಕೂಲಿ ಕೊಟ್ಟು ರೈತರನ್ನು ಕಾಪಾಡುವುದು ಈ ಯೋಜನೆಯ ಮಹತ್ವ ಅಕಸ್ಮಾತ್ ರೈತರು "ಜಾಬ್‌ಕಾರ್ಡ್" ತೆಗೆದುಕೊಂಡ 15 ದಿನಗಳಲ್ಲಿ ಸರ್ಕಾರ ಕೆಲಸ ಕೊಡದಿದ್ದರೆ ನಿರುದ್ಯೋಗ ಭತ್ಯೆ ಕೊಡುತ್ತದೆ, ರೈತರ ಹಳ್ಳಿಗಿಂತಾ 5.00 ಕಿ.ಮೀ.ಗೂ ಹೆಚ್ಚು ದೂರ ಹೋಗಬೇಕಾದ್ದಲ್ಲಿ ರೂ. 10.00 ಹೆಚ್ಚಿಗೆ ಭತ್ಯೆ ಸಿಗುತ್ತೆ. ಹೆಂಗಸು-ಗಂಡಸು ಎನ್ನುವ ಭೇದವಿಲ್ಲ, ಇಬ್ಬರಿಗೂ ರೂ. 100.00 ಕೂಲಿ, ಇನ್ನು ಏನೇನೋ ವಿಷಯಗಳಿವೆ.

ಶಿವ : ಆ ವಿಷಯಗಳನ್ನೆಲ್ಲಾ ಕರ್ನಾಟಕಕ್ಕೆ ಹೋದ ಮೇಲೆ ಮಾತಾಡಿ.

ಗಾಂಧಿ : ಇದು ಅತ್ಯುತ್ತಮ ಯೋಜನೆ ರೈತರ ತಕರಾರೇನು ?

ನಾರದ : ತಕರಾರೇ ಇಲ್ಲ, ಇದೆಲ್ಲಾ ಇದ್ದರೂ ಕೆಲಸಕ್ಕೆ ಬಾರದೆ ತಮ್ಮ ಜಾಬ್‌ಕಾರ್ಡ್‌ಗಳನ್ನು ದಲ್ಲಾಳಿಗೆ ಕೊಟ್ಟು ಸುಮ್ಮನಿದ್ದು ಬಿಡುತ್ತಾರೆ.

ಗಾಂಧಿ : ಇಂಥವರಿಂದ ಗ್ರಾಮೋದ್ಧಾರ ಹೇಗೆ ಸಾಧ್ಯ ?

ನಾರದ : ಅಸಾಧ್ಯದ ಕೆಲಸವಾದ್ದರಿಂದಲೇ ಧರೆಗಿಳಿಯಿರಿ ಅಂಥ ತಮ್ಮನ್ನು ಕೇಳಿಕೊಂಡಿದ್ದು, ಸಕಾಲದಲ್ಲಿ ನೀವು ಅಲ್ಲಿಗೆ ಹೋಗದಿದ್ದರೆ ಹಳ್ಳಿಯಲ್ಲಿರೋ ದೀನ-ದಲಿತರು ಗುಳೇ ಹೋಗುತ್ತಾರೆ.

ಗಾಂಧಿ : ಗುಳೇ ಹೋಗುತ್ತಾರೆಯೇ ? ಏಕೆ ?

ಶಿವ : ನಾರದರೇ ಈ ತಕ್ಷಣವೇ ಮಹಾತ್ಮರನ್ನು ಕರೆದುಕೊಂಡು ಭೂಲೋಕಕ್ಕೆ ಹೊರಟುಬಿಡಿ.

ನಾರದ : ನನಗೆ ಶಿಕ್ಷೆಯೋ ಪರಮಾತ್ಮ ?

ಶಿವ : ಹೇಗಾದರೂ ತಿಳಿದುಕೋ ಪಾಪ ಆ ರೈತರು ಬದುಕಬೇಕು ಹಳ್ಳಿಯಿಂದ ಗುಳೇ ಹೋಗಿ ಪಟ್ಟಣ ಸೇರಿ ಕುಡಿಯಲು ಗಾಳಿಯೂ ಇಲ್ಲದೆ ಒದ್ದಾಡುತ್ತಿದ್ದಾರೆ.

ಪಾರ್ವತಿ : ಯಾಕೆ ಭೂಲೋಕದಲ್ಲಿ ಗಾಳಿಗೂ ಕೊರತೆಯೇ ?

ನಾರದ : ಇದೆ, ಇಲ್ಲದೇ ಏನು ? ಶ್ರೀಮಂತರನ್ನು ಪಟ್ಟಣದ ಪ್ರೈವೇಟ್ ಹಾಸ್ಪಿಟಲ್‌ಗಳಲ್ಲಿ ಹಣದ ಆಸೆಗಾಗಿ, ಸತ್ತು, ಹೆಣಗಳನ್ನು ಕೊಡದೆ ಐಸಿಯುಗಳಲ್ಲಿಟ್ಟು ಕೃತಕ ಉಸಿರಾಟದ ವ್ಯವಸ್ಥೆ ಮಾಡಿಟ್ಟಿದ್ದಾರೆ. ಬದುಕಿರೋ ಜನ ಉಸಿರಾಡೋದಿಕ್ಕೆ ಆಮ್ಲಜನಕವೇ ಸಿಗದ ಹಾಗೆ ಆಗಿಬಿಟ್ಟಿದೆ, ಆಮ್ಲಜನಕವೆಲ್ಲಾ ಆಸ್ಪತ್ರೆ ಸಿಲಿಂಡರ್‌ನೊಳಗೆ ಭರ್ತಿಯಾಗಿದೆ.

ಗಾಂಧಿ : ನಾರದರೇ ನೀವು ರಾಜಕಾರಣಿಗಳ ತರಹ ಹೆಚ್ಚು ಮಾತಾಡ್ತಾ ಇದ್ದೀರ. "ಮಾತಾಡಿದ್ದು ಸಾಕು ಕೆಲಸ್ಬೇಕು" ಎಂಬ ಆಂದೋಲನವನ್ನು ಭಾರತದಲ್ಲಿ ನಾವು ಮಾಡಬೇಕಾಗಿದೆ ಹೊರಡೋಣ, ಹೊರಡೋಣ, ಬನ್ನಿ (ಎನ್ನುತ್ತಾ ಟಿಪಿಕಲ್ ಗಾಂಧಿ ನಡೆಗೆಯಲ್ಲಿ ಹೆಜ್ಜೆ ಹಾಕಲಾರಂಭಿಸುತ್ತಾರೆ.)

ನಾರದ : ನಾರಾಯಣ, ನಾರಾಯಣ (ಎನ್ನುತ್ತಾ) ಗಾಂಧಿಯಷ್ಟು ವೇಗವಾಗಿ ಹೆಜ್ಜೆ ಹಾಕಲಾರದೆ ಹೆಚ್ಚು ಕಮ್ಮಿ ಓಡತೊಡಗುತ್ತಾನೆ, ಆಗ ಹಾಡು ಪ್ರಾರಂಭ:

ಗಾಂಧಿ ನಾರದರು ಧರೆಗಿಳಿದು ಬಂದರು
ಕಂಡರಂದಿನ ಭಾರತವ, ನವಭಾರತವ
ದೇಶ, ದೇಶವಾಗಿಲ್ಲವೇಕೆ ?
ಕರ್ನಾಟಕ ಹೀಗೇಕೆ, ಇದು ಹಳ್ಳಿ ಬದುಕೇ ?
ಶಿವನೇ . . . . ಶಿವನೇ . . . . ಶಿವನೇ . . . .

(ಹಾಡು ಮುಗಿಯುವ ಹೊತ್ತಿಗೆ ಮುದುಕ ಮತ್ತು ಒಬ್ಬ ಹುಡುಗ ಗುಳೇ ಹೋಗುತ್ತಿದ್ದ ಗುಂಪನ್ನು ತಡೆಯಲು ಪ್ರಯತ್ನಿಸುತ್ತಿರುತ್ತಾರೆ. ಅದನ್ನು ಕಂಡು)

ಗಾಂಧಿ : ಆ ಮುದುಕ ಯಾಕೆ ಗುಂಪನ್ನು ಹಿಂಬಾಲಿಸುತ್ತಾ ಇದ್ದಾನೆ ?

ನಾರದ : ಹಿಂಬಾಲಿಸುತ್ತಿಲ್ಲ, ಗುಳೇ ಹೋಗೋ ಜನನ್ನ ತಡೀತಾ ಇದ್ದಾನೆ, ಸ್ವಲ್ಪ ಅವರ ಮಾತುಗಳನ್ನು ಕೇಳಿ.

| | | |
|---|---|---|
| ಮುದುಕ | : | ನಿಲ್ರೋ ನಿಲ್ಲಿ, ನಿಂತಾರೂ ನಿಲ್ರೋ, ಯೋಚಿಸೋ ಶಕ್ತಿನೋ ಇಲ್ವಲ್ರೋ ನಿಮ್ಗೆ. |
| ಹುಡುಗ | : | (ಓಡ್ಬೋಗಿ ಗುಂಪನ್ನು ಅಡ್ಡಕಟ್ಟಿ) ನಿಲ್ರಪ್ಪಾ ತಾತನ ಮಾತು ನಿಮ್ಗೆ ಕೇಳೋದಿಲ್ವೇನು ? |
| ಒಬ್ಬ | : | ಏ, ಬೆಳಕು, ದಾರಿಬಿಡು ಸುಮ್ಮನೆ, ಆ ಮುದುಕ ಕತ್ತಲಲ್ಲಿದ್ದು, ನಮ್ಮನ್ನು ಅಲ್ಲೇ ಇರು ಅಂತ ಹೇಳ್ತಾನೆ. |
| ಮುದುಕ | : | ಹೌದ್ರಪ್ಪ, ನಾ ಕತ್ಲಾಗೇ ಇದ್ದೀನಿ, ಆದರೆ ಕಾಣ್ಬೇಕು ಅಂತ ಆ ಬೆಳಕನ್ನು ಕಾಪಾಡಿದ್ದೀನಿ ನೋಡಿ. ಅವನನ್ನ ನೋಡಿದ ಮೇಲೂ ನಿಮ್ಗೆ ಬದ್ಕೋ ಆಸೆ ಬರಲ್ವೇನ್ರೋ ? |
| ಇನ್ನೊಬ್ಬ | : | ಈ ಹಳ್ಳಿ ಕತ್ತಲು, ಬೆಳಕಿನ ಸಹವಾಸವೇ ಬೇಡ ನಮ್ಗೆ ಕತ್ಲೇ ಇಲ್ದೇ ಇರೋ ಪಟ್ನ ಸೇರ್ತೀವಿ. |
| ಹುಡುಗ | : | ಮೂರ್ಖರಾ, ಅಲ್ಲಿರೋದು ಈ ಬೆಳಕಲ್ರೋ, ಥಳಕಿನ ಬೆಳಕು, ಧಳಾ ಧಳಾ ಅಂತ ಹೊಳಿತಾನೇ ನಿಮ್ಮ ಕಣ್ಣನ್ನ ಕುರುಡು ಮಾಡಿಬಿಡುತ್ತೆ. |
| ಮುದುಕ | : | ಈ ಬೆಳಕಿನ ಮಾತು ಕೇಳ್ರೋ, ಗುಳೇ ಹೋಗಬ್ಯಾಡ್ರೋ. |
| ಒಬ್ಬ | : | ಗುಳೇ ಹೋಗೋದ್ಬ್ಯಾಡ್ರಾ, ನೇಣ್ಹಾಕೋಳ್ಲಾ ಆ ಶಿವಪ್ಪನ್ಹಂಗೆ, ವಿಷ ತಗೋಳ್ಲಾ ಆ ಮುನಿಯ ಹಂಗೆ, ಗಂಗೇಲಿ ತೇಲಿ ಹೋಗ್ಲಾ ಆ ಗುರುಸ್ವಾಮಿ ಹಂಗೆ, ಇದ್ದೇನ್ ಮಾಡ್ಲಿ ? |
| ಮುದುಕ | : | ಇದ್ದು ಜಯಿಸಬೇಕು, ದುಡೀಬೇಕು. |
| ಮತ್ತೊಬ್ಬ | : | ದುಡಿಯಕ್ಕೆ ಏನಿದೆ ಇಲ್ಲ, ಈ ಕತ್ತಲೇಲಿ ಎಷ್ಟು ದಿನ ಬದ್ಕೋದು. |
| ಮುದುಕ | : | ಕತ್ಲಲ್ಲಿ ಈ ಕತ್ಲೆ ಇದ್ದು ಬೆಳಕು ಬರುತ್ತಾ ಅಂತಾ ಕಾಣ್ತಾ ಇದ್ದೆ. ಗಾಳಿ ಬೀಸ್ತಾ ಬೀಸ್ತಾ ಕಪ್ಪನೇ ಇದ್ದಿಲು ಕೆಂಡದಂತೆ ಕೆಂಪಾಯ್ತು. (ಹುಡುಗನ ಕೈತೋರಿ) ಈಗ ಬೆಳಕು ಕಾಣ್ತಾ ಇದೆ ಕಣ್ರೋ, ಕಣ್ಬಿಡಿ ಈ ಸಣ್ಣ ಬೆಳಕು ಬೆಳದಿಂಗಳಾಗ್ಬೇಕು. ದೇಶಾನ ಬೆಳಗ್ಬೇಕು. (ಗಾಂಧಿ ಬಂದದನ್ನು ಕಂಡು) ಬಾಪೂಜಿ . . . . ತಾತ ಬಂದೇ ಬಿಟ್ಯಾ ನೀನೆಂದು ಬರುತ್ತೀಯಾ ಅಂಥಾ ಕಾಯ್ತಾ ಇದೆ, ಬೆಳಕು ಕೊಟ್ಟ ತಂದೆ ಮತ್ತೆ ಬಂದೆ ಬರುತ್ತಾನೆ ಅಂಥ ಈ ಬೆಳಕಿಗೆ ಹೇಳ್ತಿದ್ದೆ. ಕತ್ತಲು ಇನ್ನು ಹೋಯ್ತು. |
| ಗಾಂಧಿ | : | (ಪ್ರವೇಶಿಸಿ) "ಉದ್ಯೋಗ ಖಾತರಿ ಯೋಜನೆಯಿದೆಯಪ್ಪ" ಅದೇನ್ ಕಮ್ಮಿ ಏನು ? ಕತ್ಲೇಲಿ ಇರೋವ್ರಿಗೆ ಬೆಳಕು ಅದು. |
| ನಾಲ್ಕನೆಯವನು | : | ಯಾರಿವ್ರು ? ಊರಿಗೂ, ಗಾಂಧಿ ವೇಷ ಹಾಕ್ಕೊಂಡೆ ಬಂದು ಬಿಟ್ಟಿದ್ದಾರೆ. |
| ಮುದುಕ | : | ಗಾಂಧಿ ವೇಷ ಅಲ್ರೋ, ಗಾಂಧೀನೇ (ಗುಂಪಿನಲ್ಲಿ ಗುಜು ಗುಜು ಆರಂಭವಾಗುತ್ತದೆ. ರಘುಪತಿ ರಾಘವ ಹಾಡ ತೊಡಗುತ್ತಾರೆ ಹಾಡು ನಿಂತಮೇಲೆ) |
| ಗಾಂಧಿ | : | ಹೇಗಿದ್ದ ಹಳ್ಳಿ ಹೇಗಾಗ್ಹೋಯ್ತು, ಯಾಕ್ಹೀಗಾಯ್ತು ? |
| ಮುದುಕ | : | ಸ್ವಾರ್ಥದಿಂದ ತಾತ, ನಿಮ್ಮ ಆದರ್ಶಗಳನ್ನು ಈ ನಮ್ಮಕ್ಳು, ನಿನ್ನ ಮೊಮ್ಮಕ್ಳು ಗಾಳಿಗೆ ತೂರಿಬಿಟ್ಟರು, ನೀನು ಯಾವ ಕನಸು ಕಂಡಿದ್ಯೋ ಆ ರಾಮ ರಾಜ್ಯದ ಕನಸು ಕನಸಾಗಿಯೇ ಉಳಿದಿದೆ. |
| ಹುಡುಗ | : | ಆ ರಾಮನ್ನ ಹರಾಜಾಕಿ ಬಿಟ್ಟಿದ್ದಾರೆ ಬೀದೀಲಿ ಈಗ ರಾಮ ಮಂದಿರದಲ್ಲಿರೋದು ಅವನ ಪ್ರತಿಮೆ ಮಾತ್ರ. |
| ಗಾಂಧಿ | : | ಹೇ ರಾಮ್, ಹೇ ರಾಮ್ |
| ಹುಡುಗ | : | ಕೂಗ್ಬೇಡಾ, ರಾಮನ ಹೆಸರ್ಹಿಡಿದು, ಕೋಗ್ಲೇಬೇಡ, ಜಯಾ, ಜಯಾ ಅನ್ಕೊಂಡು ಬಂದೇ ಬಿಡ್ತಾರೆ. ಮಲ್ಗಿರೋ ಹೊಟ್ಟೆ ತುಂಬಿದೋರು ಅವ್ರು, ರಾಷ್ಟ್ರಧ್ವಜದ ಬಣ್ಣಗಳೆಲ್ಲಾ ಕಿತ್ಕೊಂಡ್ ಬಿಟ್ಟವ್ರೆ. ಕೇಸರಿ ತಲೆಗೆ ಕಟ್ಟಿ ಕೊಂಡವ್ರೆ, ಹಸಿರನ್ನು ಹೆಗಲಮೇಲೆ ಹಾಕೊಂಡವ್ರೆ. ಬಿಳಿ ಬಣ್ಣಾನಾ ಮಲಿನ ಮಾಡಿಬಿಟ್ಟವ್ರೆ, ಆ ಬಣ್ಣಗಳಿಗೆ ಅರ್ಥಾನೇ ಇಲ್ಲ, ತಾತ. |

| | | |
|---|---|---|
| ಮದುಕ | : | ಸುಮ್ನಿರೋ ಹುಡ್ಗಾ, ತಾತನ ಮುಂದೆ ಇಷ್ಟು ಮಾತಾಡ್ಬಾರ್ದು. |
| ಹುಡುಗ | : | ಮಾತಾಡ್ದೆ ಮಾತಾಡ್ದೇನೆ ದೇಶ ಹೀಗಾಗಿರೋದು. |
| ಗಾಂಧಿ | : | ಹೆಚ್ಚು ಮಾತಾಡೇ ಈ ದೇಶ ಹಾಳಾಗಿರೋದು ಮಗು. |
| ನಾರದ | : | (ಪ್ರವೇಶಿಸಿ) ಮಹಾತ್ಮರೇ, ಮಹಾತ್ಮರೇ ನೀವೀಕಡೆ ಬಂದ್ರಲ್ಲಾ, ನಾನು ಆ ಪಂಚಾಯ್ತಿ ಕಛೇರಿ ಕಡೆಗೆ ಹೊರಟೆ, ಅದಿರ್‍ಲಿ ಅದ್ಯಾರೋ ನೀವು ಬಂದಿರೋ ಸುದ್ದಿ ಹೇಳ್ಬಿಟ್ಟಿದ್ದಾರೆ. ಆ ಅಧಿಕಾರಿಗಳು, ದಲ್ಲಾಳಿಗಳ ತರಾ ಇರೋ ಕಾಂಟ್ರಾಕ್ಟರ್‌ಗಳೂ, ನೀವೂ ಒಂದು ಆಂದೋಲನಾನೇ ಮಾಡಿಬಿಡ್ತೀರಾ ಅಂತ ಭಯ ಬಿದ್ದಿದ್ದಾರೆ. |
| ಮತ್ತೊಬ್ಬ | : | ಇವ್ರು ನಿಜವಾದ ನಾರದರಾ ? ನಾಟಕದವ್ರಾ ? ಮೇಳದೋರೆ ಬನ್ರೀ ಇಲ್ಲೇ ನಮ್ಮ ತಲೆ ಕೆಟ್ಹೋಗೈತೆ, ಬನ್ರಿ ಬೇಗ. (ಮೇಳದವರು ರಂಗದ ಮೇಲೆ ಬರುತ್ತಾರೆ.) ನಾಟಕ ಮಾಡೋಣ ಅಂತಲೇ ನಾವು ಬಂದಿದ್ದು, ಆದ್ರು ಇಲ್ಲಿ ಮಹಾತ್ಮಗಾಂಧಿ ಮತ್ತು ನಾರದರು ಮೇಲಿಂದ ಇಳ್ದು ಬಂದ್ಬಿಟ್ಟವ್ರೆ. |
| ಕಾಂಟ್ರಾಕ್ಟರ್ | : | ಓಹೋ ಏನು ನಿಜವಾದ ಗಾಂಧಿ ತರಾನೇ ಮಾತಾಡ್ತೀಯ ? |
| ಗಾಂಧಿ | : | ಗಾಂಧೀ ತರಾನೇ ಅಲ್ಲ ಗಾಂಧೀನೇ, ನನ್ನ ರೈತರ ಹತ್ತಿರ ನಾನು ಮಾತಾಡಕ್ಕೆ ಬಂದಿದ್ದೀನಿ. ಸುಮ್ಮನಿದ್ದುಬಿಡು, ನೀವೂ ಉತ್ತರ ಹೇಳಿ ಗುಳೇ ಯಾಕ್ ಹೋಗೋರಿದ್ರೀ ? |
| ಒಬ್ಬ | : | ಜಮೀನಿನಲ್ಲಿ ಬೆಳೆಯೋದು ಜೀವನಕ್ಕೆ ಸಾಕಾಗಲ್ಲ. ಅದಕ್ಕೆ ಯಂತ್ರಗಳು ಬಂದು ಕೂಲೀನೂ ಸಿಕ್ಕಲ್ಲ. |
| ಗಾಂಧಿ | : | ನಿನ್ನ ಜಮೀನಿನಲ್ಲಿ ದುಡಿದ ಮೇಲೆ ಪಂಚಾಯ್ತಿಯವರು ಹೇಳೋ ಕೆಲ್ಸ ಮಾಡು, ಉದ್ಯೋಗ ಖಾತರಿ ಯೋಜನೇಲಿ ರೂ. 100.00 ಕೂಲಿ ಕೊಡ್ತಾರಲ್ಲ. |
| ಒಬ್ಬ | : | ಹೌದು ತಾತ ಕೊಟ್ತಾರಂತೆ. ನನಗೆ ಗೊತ್ತಾಗಲಿಲ್ಲ. ಇವ್ನಾಗೆ ನನ್ಗೆ ಜಮೀನು ಇಲ್ಲ, "ಜಾಬ್‌ಕಾರ್ಡ್ ಮಾರ್‍ಕೊಂಡ್ ಬಿಟ್ಟೆ" ಈ ಕಾಂಟ್ರಾಕ್ಟರ್‌ಗೆ. |
| ಹುಡುಗ | : | ಮಾರ್‍ಕೊಂಡಿದ್ರೇನಂತೆ ? ವಾಪಸ್ ತಗೋ ಅವನ ಹತ್ರ, ಕೊಡೋಲ್ಲ ಅಂದ್ರೆ ಕಂಪ್ಲೇಟ್ ಕೊಡು. |
| ಗಾಂಧಿ | : | ಅಲ್ಲಪ್ಪ ಇಷ್ಟು ಚೆನ್ನಾಗಿರೋ ಯೋಜನೆ ಇದೆ. ನೀವು ಸ್ವಾವಲಂಭಿಗಳಾಗೋದು ನನ್ನ ಕನಸೂ ಹೌದು ಅಲ್ವ ? ಅಲ್ಲಾ ನಿಮ್ಮ ಹಳ್ಳಿ ಕೆರೇಲಿ ಹೂಳೆತ್ತೋದು ತಪ್ಪಾ ? ಚರಂಡಿ ತೋಡೋದು, ಕಾಲ್ವೆ ಕೆಲ್ಸ, ಕಾಡು ಬೆಳಸಕ್ಕೆ ಸಸಿ ನೆಡೋದು, ಮಳೆನೀರು ಕೂಯ್ಲು ಮಾಡೋದ್ರಲ್ಲಿ ತಪ್ಪಿದೆಯೇನ್ರಪ್ಪಾ ? |
| ನಾಲ್ಕನೆಯವನು | : | ನಮ್ಮ ತಾಯಾಣೆಗೂ ತಪ್ಪಿಲ್ಲಾ ತಾತ. ಮನೇಲಿ ನಾನು ನನ್ನ ಹೆಂಡ್ತಿ ಮಾತ್ರ ಇರೋದು ನಾನೊಬ್ಬನೇ ದುಡೀಬೇಕು ಮನೇಲಿ ಚಿಕ್ಕ ಮಗಾ ಆದೆ, ನನ್ನ ಹೆಂಡ್ತಿ ದುಡೀಯಾಕ್ಕಾಗಲ್ಲ. |
| ನಾರದ | : | ಮಗೂನು ಕರ್‍ಕೊಂಡ್ಹೋಗಕ್ಕೆ ಹೇಳಪ್ಪಾ ಕೆಲ್ಸಕ್ಕೆ ಮಗು ನೋಡ್ಕೋಳ್ಳೋಕೆ ಅಂತಾನೆ ಆಳಿಟ್ಟು ಅವಳಿಗೆ ರೂ. 100.00 ಕೂಲಿ ಕೊಡ್ತಾರೆ ಈ ಯೋಜನೆಯಲ್ಲಿ. |
| ಹುಡುಗ | : | ಅಷ್ಟೇ ಅಲ್ಲ ಕೆಲ್ಸತ್ತಾವ ನೆರಳೈತೆ, ಸುಧಾರಿಸ್ಕೋಳ್ಳೋಕೆ, ಕುಡಿಯಕ್ಕೆ ಒಳ್ಳೆ ನೀರಿರ್‍ತದೆ ಅಲ್ಲಿ. |
| ಗಾಂಧಿ | : | ನೋಡಿದ್ರಾ ಎಷ್ಟೆಲ್ಲಾ ಸೌಕರ್ಯ ನಿಮ್ಮ ಹಳ್ಳೀಲೇ ನಿಮ್ಮ ಹಳ್ಳಿಗೆ ಒಳ್ಳೇದಾಗೋ ಹಾಗೆ ಕೆಲ್ಸ ಮಾಡಿ ರೂ. 100.00 ತಗ್ಗೊಳ್ಳೋದು. |
| ಕಾಂಟ್ರಾಕ್ಟರ್ | : | ಕೆಲ್ಸ ಕೊಡ್ತಾರೆ, ನಿಮ್ಗೆ, ಮೈ ಬಗ್ಗಿಸಿ, ದುಡಿಯಾಕ್ಕಾಗುತ್ತಾ, ಸೋಮಾರಿ ನನ್ಮಕ್ಳು ನೀವು ಕೆರೆ ಹೂಳೆತ್ತೀರಾ ? |
| ಗಾಂಧಿ | : | ಯಾರು, ಯಾರು ಹಾಗೆ ಅಂದೋರು ? ರೈತ್ರು ಸೋಮಾರಿಗಳಲ್ಲ ನಿಮ್ಮ ಮಾತು ವಾಪಸ್ ತಗೊಳ್ಳಿ. |

| | | |
|---|---|---|
| ಹುಡುಗ | : | ಇವ್ನೆ ಹಾಗಂದದ್ದು ಯಂತ್ರಗಳನ್ನಿಟ್ಟುಕೊಂಡು ಕೆರೆ ಹೂಳೆತ್ತುತ್ತಾನೆ. ನಮ್ಮ ಕೂಲಿ ಕಾಸನ್ನೆಲ್ಲಾ ನುಂಗ್ಹಾಕ್ತಾನೆ, ಇನ್ನು ನಿನ್ನ ಆಟ ನಡೆಯೋದಿಲ್ಲ ಗಾಂಧಿ ತಾತ ಬಂದಾಯ್ತು. |
| ಗಾಂಧಿ | : | ಯಂತ್ರಗಳು ಬೇಕು ಸರಿ. ಚರಕನು ಒಂದು ಯಂತ್ರನೇ ಆದರೆ ಜನರ ಅನ್ನನ ಕಸಿಯೋ ಯಂತ್ರಗಳು ನಮ್ಗೆ ಬೇಡ. ಅದರ ವಿರುದ್ಧದ ನನ್ನ ಧ್ವನಿ ಎಂದಿನಿಂದಲೂ ಇದೆ. ಈಗ್ಲೂ ಅದರ ವಿರುದ್ಧ ಧ್ವನಿ ಎತ್ತೋಕೆ ಬಂದಿದ್ದೇನೆ. |
| ಕಾಂಟ್ರಾಕ್ಟರ್ | : | ಗಾಂಧಿಕಾಲ ಮುಗಿದ್ಹೋಯ್ತು. |
| ಮುದುಕ | : | ಆದ್ರೆ ಗಾಂಧಿ ಸಿದ್ಧಾಂತ ಇನ್ನೂ ಇದೆ. ಹೋರಾಟದ ಕಾಲ ಇನ್ನೂ ಮುಗಿದಿಲ್ಲ. |
| ಹುಡುಗ | : | ಹೌದು, ನೀನಾಗಿ ನೀನು ನಮ್ಹತ್ರ ಕಸ್ಕಿಕೊಂಡು ಇರೋ 'ಜಾಬ್‌ಕಾರ್ಡ್, ಚೆಕ್‌ಬುಕ್, ಎಟಿಎಂ ಕಾರ್ಡ್'ನ್ನು ಕೊಟ್ಬಿಡು ಆಗ ನಿನ್ನ ಘನತೇನೂ ಉಳಿಯುತ್ತೆ. ಇಲ್ದಿದ್ರೆ ದೊಡ್ಡ ಹೋರಾಟಾನೇ ಆಗುತ್ತೆ. ಪತ್ರಿಕೆಗಳಲ್ಲಿ ನಿನ್ನ ಬಗ್ಗೆ ಅವಮಾನ ಆಗೋಹಾಗೆ ಬರೀತಾರೆ. |
| ಕಾಂಟ್ರಾಕ್ಟರ್ | : | ಅಂದ್ರೆ ನೀವು ಹೇಳೋದು ಗಾಂಧಿ ಮತ್ತೊಮ್ಮೆ ಹುಟ್ಟಿದ್ದಾನೆ ಅಂತಾನಾ ? |
| ಗಾಂಧಿ | : | ಮೂರ್ಖ ನಾನ್ ಇಲ್ದೇ ಇರ್ಬಹ್ದು, ನಾನು ಸತ್ತಿರ್ಬಹ್ದು, ಹಾಗೇ ಅಂದ್ಕೊಂಡು ದೀನ ದಲಿತರ ಶೋಷಣೆ ಮಾಡ್ಬೇಡಿ. ಸರ್ಕಾರ ಅವ್ರಿಗೆ ಕೊಟ್ಟಿರುವ ಸವಲತ್ತನ್ನು ಅವ್ರಿಗೆ ಬಿಡಿ. ವಂಚನೆ ಮಾಡಿ, ಅದನ್ನ ಅವರಿಂದ ಕಸ್ಕೋ ಬೇಡಿ ಈಗ ಇವರೆಲ್ಲಾ ಗಾಂಧಿ ಆಗಿದ್ದಾರೆ ಹೌದು ತಾನೇ ? |
| ಜನ | : | ಹೌದು, ಹೌದು, ನಾವೆಲ್ಲಾ ಗಾಂಧಿಗಳು, ಇನ್ನು ಮುಂದೆ ನಮ್ಮ ಶೋಷಣೆ ಮಾಡೋಕೆ ನಾವು ಬಿಡೋದಿಲ್ಲ. |
| ಗಾಂಧಿ | : | ಈಗ್ಹೇಳು ಇವ್ರಲ್ಲಿ ನೀನೂ ಒಬ್ನಾಗಿ ಬಾಳ್ತೀಯಾ ಅಥವಾ ಮೋಸ ಮಾಡ್ಕೊಂಡೇ ಬದುಕುತ್ತೀಯಾ ? |
| ಎಲ್ಲಾ | : | ಹೇಳೋ ಬಾಳ್ತೀಯಾ ಇಲ್ಲಾ ಹಳ್ಳಿ ಬಿಟ್ಟು ಹೋಗ್ತೀಯಾ ? |
| ಕಾಂಟ್ರಾಕ್ಟರ್ | : | ಇಲ್ಲ ಇನ್ಮೇಲೆ ಮೋಸ ಮಾಡೋಲ್ಲಾ ಇವ್ರಲ್ಲಿ ಒಬ್ಬನಾಗಿ ಬದ್ಕುತ್ತೀನಿ. |
| ಗಾಂಧಿ | : | ನೀವ್ಹೇಳಿ "ಉದ್ಯೋಗ ಖಾತರಿ ಯೋಜನೆ"ಯಲ್ಲಿ ದುಡಿದು ನೀವೂ ಗಳಿಸಿ, ಹಳ್ಳೀನೂ ಉಳಿಸ್ತೀರಾ ? |
| ಎಲ್ಲಾ | : | ಹೌದು ಹೌದು. ಉದ್ಯೋಗ ಖಾತರಿ ಯೋಜನೇಲಿ ದುಡೀತೀವಿ ಹಸಿರುಳಿಸ್ತೀವಿ. ಹಳ್ಳಿ ಉಳಿಸ್ತೀವಿ. ನಾವೂ ಉಳೀತೀವಿ. (ಅರೆ ವೇದಿಕೆಯ ಮೇಲಿದ್ದವರು ಇದ್ದಹಾಗೆ ನಿಂತು ಬಿಡುತ್ತಾರೆ.) |

ಮೇಳದವರು ಪ್ರಾರಂಭದ "ಶರಣು ಶರಣು" ಹಾಡನ್ನು ಮತ್ತೆ ಹಾಡಲು ಪ್ರಾರಂಭಿಸುತ್ತಾರೆ.

ಮಿಕ್ಕವರು ತಾವೂ ಹಾಡಲಾರಂಭಿಸುತ್ತಾರೆ.

* * *

# ಕೊಳಕಮಂಡಲ

– ಮಂಜುನಾಥ ಬೆಳಕೆರೆ

(ದೃಶ್ಯದ ಮೊದಲಿಗೆ ಎಲ್ಲರೂ ಸರ್ಕಲ್ ಬಂದು ಮಧ್ಯದಲ್ಲಿ ಒಬ್ಬ ಮನುಷ್ಯ ನಾಟಕ ನಾಟಕ ಬರೀ ನಾಟಕ ಅನ್ನುವುದನ್ನು ನೋಡುತ್ತಾರೆ. ಆ ಜನಗಳನ್ನು ಮರೆಮಾಡಲು ಸ್ಕ್ರೀನ್ ಹಿಡಿದು ಇಬ್ಬರು ಹುಡುಗಿಯರು ಬರುತ್ತಾರೆ.)

1ನೇ ಹುಡುಗಿ : ನಮ್ಮ ನಿಮ್ಮ ಸಮಸ್ಯೆಗಳನ್ನು ಪ್ರತಿಬಿಂಬಿಸುವ ನಾಟಕ.

2ನೇ ಹುಡುಗಿ : ಬರೀ ನಾಟಕವಲ್ಲ, ಬೀದಿ ನಾಟಕ (ಎಂದು ಸ್ಕ್ರೀನ್ ಓಪನ್ ಮಾಡಿ ನಡೆಯುತ್ತಾರೆ. ನಂತರ ನಗಾರಿ ಡೊಳ್ಳು ಗೊರವರ ಕುಣಿತವು ಸಾಲಾಗಿ ಮೆರವಣಿಗೆ ಹೊರಡುತ್ತವೆ. ಆಗ 'ಸೌ ಸಾಲ್ ಪೆಹಲೇ' ಹಾಡನ್ನು ಹಾಡುತ್ತಾರೆ. ಆಗ ಒಬ್ಬ ನೃತ್ಯಗಾರ್ತಿ ಬಂದು ನರ್ತಿಸುತ್ತಾಳೆ.. ಒಬ್ಬ ಅದನ್ನು ತಡೆದು ನಿಲ್ಲಿಸಿ ' ನಿಲ್ಲಿಸಯ್ಯ ಅದೇನ್ ಸೌ ಸಾಲ್ ಪೆಹಲೇ ಅಂತ ಹಳೇ ಹಾಡು ಹೇಳ್ತೀಯ. ಈಗ ನಾನ್ ಹೊಸ ಹಾಡಿಗೆ ಕುಣಿತೀನಿ ನೋಡು. ಮುಖ ಏನ್ ನೋಡ್ತೀಯ ಬಾರಿಸೋ. ' ಪರದೇಸಿ ಪರ್‌ದೇಸಿ ಜಾನಾ ನಹೀ' ಹಾಡನ್ನು ಹಾಡುತ್ತಾರೆ. ಅದು ಮುಗಿಯುತ್ತಿದ್ದಂತೆಯೆ ಮೆರವಣಿಗೆ ಮುಂದುವರೆಯುತ್ತದೆ. ನಗಾರಿ ಡೊಳ್ಳಿನ ಶಬ್ಧ ಜೋರಾಗಿ ಕೇಳುತ್ತದೆ. ಆಗ ಎಲ್ಲರೂ ಎದ್ದು ಡಾನ್ಸ್ ಮಾಡಿ ಪುನಃ ಕುಳಿತುಕೊಳ್ಳುತ್ತಾರೆ.)

[ಸರ್ಕಲ್‌ನಿಂದ ಮುದುಕ ಎದ್ದು ಬರುತ್ತಾನೆ ಅವನು ಬರುವಾಗ ಹಿನ್ನೆಲೆಯಲ್ಲಿ ಬಾರೋ ಮಳೆ ರಾಯ ಹಾಡು ಹಾಡುತ್ತಿರುತ್ತಾರೆ.}

ಮುದುಕ : ನನ್ನಜ್ಜ ಮುತ್ತಜ್ಜ ಎಲ್ಲಾ ಇಲ್ಲೆ ಹುಟ್ಟಿ ಬೆಳೆದವರು.ಈ ಜಲ ಈ ನೆಲವನ್ನ ಇಲ್ಲೇ ಹಾಗೇ ಬಿಟ್ಟು ಹೋದರು ಆದರೇ ಏನ್ ಮಾಡಲಿ ಜನರೆಲ್ಲಾ ಹೊರಟು ನಿಂತವರೆ. ನನ್ನ್ ಮನಸ್ಸ್ ಹೇಳ್ತಾ ಇದೆ ಈ ನೆಲವನ್ನ ಬಿಟ್ಟು ಹೇಂಗೆ ಹೋಗಲಿ ಅಂತ ಆದರೆ ಮಳೆರಾಯ ನೀ ಬರುತ್ತಿಯಾ ಎನ್ನುವ ಖಾತ್ರಿ ನಮಗ್ ಇದ್ದಿದ್ದರೆ ನಾವ್ಯಾಕೆ ಈ ಊರು ಬಿಟ್ಟು ಹೋಗ್‌ತಿದ್ವಿ. ಈ ವಯಸಲ್ಲಿ ಇಲ್ಲ್ ಇದ್ರೆ ನನ್ನ ನೋಡ್ ಕೊಳ್ಳುವವರು ಯಾರು. (ಹಾಡು ;– ಸಾಗುತ್ತಿದೆ ಬದುಕು . . . ಆಲಾಪನೆ)

ಮುದುಕ ಊರಾಗ ಹಬ್ಬ ಆಯ್ತು ಜಾತ್ರೆಲಿ ಜನ ಕುಣಿದು ಕುಪ್ಪಳಿಸಿದ್ರು ಕೈನಲ್ಲಿ ಈರೋದ್ನೆಲ್ಲಾ ಕಳ್ಕೊಂಡ್ರು, ಇರೋದೆಲ್ಲಾ ಮಾರಿ ಈಗ ಹೋರಟ್ ನಿಂತವ್ರೆ (ಆಲಾಪ).

ಆಲಾಪ ಮುಗಿಯುತ್ತಿದಂತೆ ಜೋರಾಗಿ ಡೊಳ್ಳಿನ ಶಬ್ದ ತಾರಕಕ್ಕೆ ಏರುವುದು ಅದು ಇಳಿಯುತ್ತಿದ್ದಂತೆ.

ಹುಡುಗಿ 1 : ಊರಲ್ಲಿ ಮೇವಿಲ್ದೆ ಅಡವಿಯಾಗ ಹುಲ್ಲಿಲ್ದೆ ದನಕರುಗಳನ್ನ ಕಸಾಯಿಖಾನೆಗೆ ಹೊಡೆಯಾಕತ್ತಾರ, ಈ ಅಜ್ಜ ಚಿಂತೆ ಮಾಡಿ ಮಾಡಿ ಸೊರಾಗಾಕತ್ತಾನ.

ಹುಡುಗಿ 2 : ಮಳೆ ಇಲ್ದೆ ಬೆಳೆ ಬೆಳೆದೆ 3 ವರ್ಷ ಆಯ್ತು ಹಟ್ಟಿಲಿ ಹೈಕಳೆಲ್ಲಾ ಹಾಲಿಲ್ದೆ ಕೊರಗ್ತಾ ಇದ್ದಾರೆ, ಊರಿನ ಹೆಂಗಸರೆಲ್ಲಾ ಹೊಟ್ಟೆಗೆ ಹಿಟ್ಟಿಲ್ದೆ ಅಳಕತ್ತಾರ, ಊರಿನ ಜನರೆಲ್ಲಾ ಮನೆ ಗಂಡಸರೆಲ್ಲಾ ಕೆಲಸ ಹುಡ್ಕೊಂಡು ಗುಳೆ ಹೊಂಟಾವ್ರೆ.

ಹುಡುಗಿ 3 : ಲೇ ಇಲ್ಲೇನ್ ಮಾಡ್ತಾ ಇದ್ದೀರಾ ಊರ್ ಜನಯೆಲ್ಲಾ ಈಗಾಗ್ಲೆ ಬಹಳ ದೂರ ಹೋಗವ್ರೆ ನೀವು ಈ ಬಿದ್ದೋಗ್ ಮರದ ಹತ್ರ ಏನ್ ಮಾತಾಡ್ತೀರಿ ನಡೀರಿ (ಹಾಡು:– ಪಯಣ ಪಯಣ . . . ಇದರೊಂದಿಗೆ ಗುಳೆ ಹೋಗೋ ದೃಶ್ಯ)

(ಆ ಬಳಿಕ ಗುಂಪಿನಿಂದ ಒಂದು ಹುಡ್ಗ ಅಜ್ಜನ ಬಳಿ ಬಂದು)

ಹುಡುಗ : ಅಜ್ಜ. . . ಹೇ.. ಅಜ್ಜ ಇಲ್ಲಿ ಕುತ್ಕೊಂಡು ಏನ್ ಮಾಡ್ತೀಯಾ? ಊರಿನ ಜನರೆಲ್ಲಾ ಸುಮಾರು ದೂರ ಹೋಗವ್ರೆ. ನಿನಗೆ ಈ ಊರು ಬಿಟ್ಟು ಬರೋಕೆ ಮನಸ್ಸಿಲ್ಲ ಅಂಥ ನನಗೆ ಗೊತ್ತು. ಆದರೆ ನಿನ್ನ ನೊಡ್ಕೋಳ್ಳೋಕೆ ಇಲ್ಲಿ ಯಾರಿದ್ದಾರೆ ಬಾ ಅಜ್ಜ ಹೋಗೋಣ.

(ಆ ಬಳಿಕ ಡೊಳ್ಳಿನ ಜೋರಾಗಿ ಸದ್ದು ಕಲಾವಿದರು ಬಂದು ಸ್ಟೇಜ್ ಮೇಲೆ ಹಾವಿನ ಬುಟ್ಟಿಯನ್ನು ತಂದು ಇಡುತ್ತಾರೆ. ಡೊಳ್ಳಿನ ದನಿ ಇಳಿಯುತ್ತಿದ್ದಂತೆ 3 ಹುಡುಗಿಯರ ಪ್ರವೇಶ)

ಹುಡುಗಿ 1 : ಬೇಡ ಬೇಡವೋ ದೂರದ ಬೆಟ್ಟ, ಕಟ್ಟು ಬಾರೋ ಇಲ್ಲೇ ಕನಸಿನ ಅಟ್ಟ

ಹುಡುಗಿ 2 : ಅಂಗೈಯಲ್ಲಿದೆ ಬದುಕಿನ ಅರಮನೆ ಬೇಡೆನ್ನು ನೀ ಅರಗಿನ ಅರಮನೆ

ಹುಡುಗಿ 3 : ಅರಿತು ನಡೆದರೆ ಹಸನ ಬದುಕು ದುಡುಕಿ ನಡೆದರೆ ನರಕ ಬದುಕು

ಹುಡುಗಿ 1 : ಆಕಾಶಕ್ಕೆ ಏಣಿ ಹಾಕೋದು ಸಾಕು ಗ್ರಾಮದೊಳಗೆ ಅಡಗಿದೆ ಬಂಗಾರದ ಬದುಕು

ಹುಡುಗಿ 2 : ಗ್ರಾಮದ ಕೆಲಸ ನಿನ್ನ ಕೆಲಸ ಅದಕೆ ನೀ ಅರಸ ಗ್ರಾಮದುದ್ಧಾರ ನಿನ್ನ ಉದ್ಧಾರ ಅದಕೆ ನೀನೇ ಸೂತ್ರಧಾರ

ಹುಡುಗಿ 3 : ಕನಸು ಕಟ್ಟಿಕೋ ಕಣ್ಣೊಳಗೆ ನನಸು ಮಾಡಿಕೋ ಊರೊಳಗೆ ವಿಷಗಾಳಿ ಬರದಂಗೆ ನೊಡಿಕೋ ಊರೊಳಗೆ (ಹುಡುಗಿಯರ ನಿರ್ಗಮನದೊಂದಿಗೆ ಹಾವಾಡಿಗನ ಪ್ರವೇಶ)

ಹಾವಾಡಿಗ : ಜನರೆಲ್ಲ ಒಂದು ಸಾರಿ ಚಪ್ಪಾಳೆಯನ್ನು ತಟ್ಟಿ (ಜನರೆಲ್ಲ ಚಪ್ಪಾಳೆಯನ್ನು ತಟ್ಟುತ್ತಾರೆ) ಹೇ . . . ಬಾಬು (ಹಾವಾಡಿಗರಲ್ಲಿ ಒಬ್ಬ ಹುಡುಗ ಬರುತ್ತಾನೆ)

ಬಾಬು : ಬಂದೆ ಅಣ್ಣ . . . .

ಹಾವಾಡಿಗ : ಹೇ ಬಾಬು ಹಾವಿನಾಟ ನೋಡಲಿಕ್ಕೆ ಯಾರು ಯಾರು ಬಂದಿದ್ದಾರೆ.

ಬಾಬು : ಗ್ರಾಮಪಂಚಾಯತಿ ಅಧ್ಯಕ್ಷರು (ಅಧ್ಯಕ್ಷ ಎದ್ದು ಸುತ್ತಲೂ ಕೈ ಮುಗಿಯುತ್ತಾನೆ)

ಅಧ್ಯಕ್ಷ : ಮಹಾಜನಗಳೇ ನಾನು ಗ್ರಾಮ ಪಂಚಾಯಿತಿ ಅಧ್ಯಕ್ಷ ಚಿನ್ನೂರಪ್ಪ ಮಣಿಸಿನಕಾಯಿ. ಶಾರ್ಟ್ ಅಂಡ್ ಸ್ವೀಟಾಗಿ ಸಿ.ಎಂ.ಮು ಅಂತ ಕರೆಯುತ್ತಾರೆ (ಜನರು ಚಪ್ಪಾಳೆಯನ್ನು ತಟ್ಟುತ್ತಾರೆ)

ಬಾಬು : ಸೆಕ್ರೆಟ್ರಿ, ಪಂಚಾಯಿತಿ ಸದಸ್ಯರು ಬಂದಿದೆ. ಊರು ಜನ ಬಂದವ್ರೆ (ಎದ್ದು ನಿಂತು ಕೈ ಮುಗಿಯುತ್ತಾರೆ ಜನರು ಚಪ್ಪಾಳೆಯನ್ನು ತಟ್ಟುತ್ತಾರೆ)

ಉಪಾಧ್ಯಕ್ಷ : ಹೇ ಹಾವಾಡಿಗಪ್ಪ ನಾನು ಗ್ರಾಮ ಪಂಚಾಯಿತಿ ಉಪಾಧ್ಯಕ್ಷ ಕೆಂಡಗಣ್ಣಪ್ಪ ಮಾವಿನಕಾಯಿ ಬಂದೀವ್ನಿ. ಎಲ್ಲರೂ ನನ್ನ ಕೆ.ಎಂ.ಮು ಅಂತ ಕರೀತ್ತಾರೆ (ಜನರು ಚಪ್ಪಾಳೆಯನ್ನು ಹೊಡೆಯೋದಿಲ್ಲ) ಚಪ್ಪಾಳೆ ಹೊಡೀರಲಾ (ಜನರು ಚಪ್ಪಾಳೆಯನ್ನು ತಟ್ಟುತ್ತಾರೆ–ನಗುತ್ತಾರೆ)

ಅಧ್ಯಕ್ಷ : (ಸೆಕ್ರಟರಿಗೆ) ಇವನ್ಯಾಕೆ ಬಂದ ಇಲ್ಲಿ

ಸೆಕ್ರಟರಿ : ಬರಲಿ ಬಿಡಿ ಅಧ್ಯಕ್ಷರೇ, ನಾವೇ ಸುಮ್ನಿದ್ರಾಯಿತು.

ಹಾವಾಡಿಗ : ಹೇ ಬಾಬು ಊರಿನ ದೊಡ್ಡವರು, ಚಿಕ್ಕೋರು ಬಂದವರೆ ಅಮ್ಮಗೋಳು ಅಕ್ಕಗೋಳು

ಬಾಬು : ಅವರು ಬಂದವ್ರೆ

ಹಾವಾಡಿಗ : ಯಾರೂ

ಬಾಬು : ಚೆಂದ ಚೆಂದ ಹುಡುಗೇರು ಬಂದವ್ರೆ

ಹಾವಾಡಿಗ : ಚೆಂದ ಚೆಂದ ಚಪ್ಪಲಿನೂ ತಂದವ್ರೆ

ಹಾವಾಡಿಗ : ನಾವು ಈ ಊರಿಗೆ ಬಂದಿದ್ದು ಯಾಕೆ

ಬಾಬು : ಹಾವು ಬಿಡೋಕೆ

ಹಾವಾಡಿಗ : ಹೇ ಬಾಬು ಹಾವು ಬಿಡೋಕಲ್ಲ ಹಾವು ತೋರಿಸಾಕೆ

ಬಾಬು : ಹೌದು ಹಾವಿನ ಆಟ ಆಡಿಸೋಕೆ

ಹಾವಾಡಿಗ : ಹೇ ಬಾಬು ನಮ್ಮ ಬುಟ್ಟಿಯಾಳಗೆ ಎಂತೆಂಥಾ ಹಾವು ಇದ್ದಾವೆ

ಬಾಬು : (ಹಾಡು)

*ಕರಿಹಾವು, ಬಿಳಿ ಹಾವು, ಹಸಿರು ಹಾವು,*
*ಗಿಡ್ಡಹಾವು, ಕೆರೆ ಹಾವು, ಹೆಬ್ಬಾವು ಕಾಳಿಂಗ ಸರ್ಪ*
*ನಾಗರಹಾವು, ಗೋಧಿಹಾವು, ಚೋಟಾ ಹಾವು,*
*ಕಟ್ಟಿ ಹಾವು, ಉದ್ದಹಾವು , ಎರಡು ತಲೆಹಾವು*
*ಕೊಳಕಮಂಡಲ, ಅಣ್ಣ ಕೊಳಮಂಡಲ*

ಹಾವಾಡಿಗ : (ಹಾಡು ಬಾರಿಸುತ್ತಾನೆ ಹಾವಾಡಿಗ ಹಾವಿನ ಬುಟ್ಟಿಗಳ ಬಳಿ ಹೋಗುತ್ತಾನೆ. ಒಂದು ದೊಡ್ಡ ಹಾವಿನ ಬುಟ್ಟಿ ಬಳಿ ಹೋಗುತ್ತಾನೆ) ನೋಡಿ ಸ್ವಾಮಿ, ನೀವು ಸಿನಿಮಾದಾಗೆ, ಮೈಸೂರು ಜೂನಾಗೆ, ಕಾಡಿನಾಗೆ, ಅಡಿವಿಯಾಗೆ ಹಾವುಗಳನ್ನು ನೋಡಿರ್ತೀರಾ. ಆದರೆ ಇಂತಾ ಹಾವುಗೆ ನೀವು ನೋಡಿರೋಲ್ಲ.

ಬಾಬು : ನೋಡಿದ್ದಾರೆ ಪ್ಲಾಸ್ಟಿಕ್ ಹಾವು (ಜನರು ನಗುತ್ತಾರೆ)

ಹಾವಾಡಿಗ : ನೋಡಿ ಸ್ವಾಮಿ ಈ ಬುಟ್ಟಿಯೊಳಗೆ 3 ಕೊಳಕು ಮಂಡಲಗಳು ಇವು ಸಾಮಾನ್ಯವಾದವಲ್ಲ. ಇದರ ನಾಲಗೆ ಮನುಷ್ಯನ ಮೈಗೆ ತಗಲಿದ್ರೆ ಮೈಯೆಲ್ಲ ರಣವಾಗುತ್ತೆ. ಆದರೆ ಅದನ್ನ ತೋರ್ಸೋ ಮೊದ್ಲು ನಮ್ಮ ಮಾಯಾ ಬುಟ್ಟಿನ ನಮ್ಮ ಜನಕ್ಕೆ ತೋರಿಸಿಬಿಡೋಣ. ಅಲ್ಲಿವರೆಗೆ ನೀವೆಲ್ಲಾ ತಗೋಳ್ಳಿ ಒಂದು ಸ್ಮಾಲ್ ಬ್ರೇಕ್.

(2 ಹುಡುಗಿಯರು ಬಂದು ಪರದೆ ಹಿಡಿಯುತ್ತಾರೆ. ಅದರ ಮುಂದೆ ಅಧ್ಯಕ್ಷ ಹಾಗೂ ಸೆಕ್ರೆಟರಿ ಬರುತ್ತಾರೆ)

ಅಧ್ಯಕ್ಷ : ಏ ! ಸೆಕ್ರೆಟರಿ ಈ ಹಾವಾಡಿಗಪ್ಪಾ ನಮ್ಮ್ ಬುಡಕೆ ಹಾವೂ ಬಿಡೋ ಹಾಗ್ ಇದೆಯಲ್ಲಾ. ಮೊದ್ಲು ಇವ್ನ ಇಲ್ಲಿಂದ ಓಡ್ಸು

ಸೆಕ್ರೆಟರಿ : ಬುಡಿ ಅಧ್ಯಕ್ಷರೆ ನೀವು ಊರಲ್ಲಿ ಎಂಥೆಂಥ ಹಾವು ಬಿಟ್ಟೋರು ಇಂಥಹ ಹಾವಾಡಿಗ್ನ ಆಟಕ್ಕೆ ಭಯ ಪಟ್ರೆ ಹೆಂಗೆ.

ಅಧ್ಯಕ್ಷ : ಅದೆಲ್ಲಾ ಇಲ್ಲ್ ಮಾತಾಡ್ ಬಾರ್ದು ಮೊದ್ಲು ಹಾವಾಡಿಗನ. . . .

ಸೆಕ್ರೆಟರಿ : ನಡೀರಿ ನಾನಿದ್ದೀನಲ್ಲಾ ನಾನೆಲ್ಲಾ ಸರಿ ಮಾಡ್ತೀನಿ ನೀವ್ ನಡೀರಿ

(2 ಹುಡುಗಿಯರು ಪರದೆಯನ್ನು ಸರಿಸುತ್ತಾರೆ. ಹಾವಾಡಿಗನ ಪ್ರವೇಶ)

ಹಾವಾಡಿಗ : ಬ್ರೇಕ್ನ ನಂತರ ಮತ್ತೆ ನಮ್ಮ ಆಟಕ್ಕೆ ಸ್ವಾಗತ ಸುಸ್ವಾಗತ, ಬಾಬು ಆ ಬುಟ್ಟಿ ತಾ

ಬಾಬು : ತಂದೆ ತಗೊಳ್ಳಿ ಖಾಲಿ ಬುಟ್ಟಿ

ಹಾವಾಡಿಗ : ಇದರೊಳಗೆ ನೋಡಿ ಏನಿಲ್ಲ ಖಾಲಿಗೆ ಇದೆ. ಹೇ ಬಾಬು ನಿನಗೆ ಅಂಜನ ಹಚ್ಚಿಬುಟ್ಟು , ಬುಟ್ಟಿಯೊಳಗೆ ಹಾಕಿದ್ರೆ ನೀನು ಏನಾಗುತ್ತೀಯ ?

ಬಾಬು : ಗೊತ್ತಿಲ್ಲ.

ಹಾವಾಡಿಗ : ಹಾಗಾದ್ರೆ ನೋಡೇ ಬಿಡೋಣ. (ಅಂಜನದ ಡಬ್ಬವನ್ನು ತೆಗೆದುಕೊಳ್ಳುತ್ತಾನೆ ಅದನ್ನ ತೆಗೆದು ಕೈಗೆ ಹಚ್ಚಿಕೊಂಡು) ನೋಡಿ ಅಣ್ಣ ಇದು ಅಂಜನ. ನಮ್ಮ ಗುರುಗಳು ಹಿಮಾಲಯದಲ್ಲಿ ಹದಿನೆಂಟು ವರ್ಷ ತಪಸ್ಸು ಮಾಡಿ ಸಿದ್ಧಿ ಮಾಡಿ ತಯಾರಿಸಿದ ಅಂಜನ. ಈ ಅಂಜನಗೆ ಹಚ್ಚಿಬಿಟ್ಟು ನಾನು ಈ ಹುಡುಗನ್ನ ಬುಟ್ಟಿಯೊಳಗೆ ಹಾಕಿ ಬಿಡ್ತೀನಿ . . . . (ಅಂಜನವನ್ನು ಬಾಬುಗೆ ಹಚ್ಚಿಬಿಟ್ಟು ಬುಟ್ಟಿಯೊಳಗೆ ಮಲಗಿಸುತ್ತಾನೆ. ಅದರ ಮೇಲೆ ಒಂದು ದೊಡ್ಡ ಬಟ್ಟೆಯನ್ನು ಹೊದಿಸುತ್ತಾನೆ. ಹಿನ್ನಲೆಯಲ್ಲಿಸಂಗೀತ ಪ್ರಾರಂಭವಾಗುತ್ತದೆ.) ಹೆತ್ತ ತಾಯಿ ಮ್ಯಾಲೆ ಆಣೆ ಮಾಡಿ ಹೇಳ್ತೇನೆ ಸ್ವಾಮಿ. ಇದು ಮಾಯ ಅಲ್ಲ ಮಾಟ ಅಲ್ಲ ಮೋಡಿ ಅಲ್ಲ. ಆ ಭಗವಂತ ನಮಗೆ ಕೊಟ್ಟ ವಿದ್ಯೆ ಸ್ವಾಮಿ..ದಯಮಾಡಿ ಯಾರು ಕೈ ಕಟ್ಟಬೇಡಿ, ಹೆಬ್ಬೆರಳು ಮಡಚ್ಬೇಡಿ ಸ್ವಾಮಿ. ಕೈ ಕಟ್ಟಿದ್ರೆ, ಹೆಬ್ಬೆರಳು ಮಡಿಚಿದ್ರೆ ಹುಡುಗನ ಪ್ರಾಣಕ್ಕೆ ಅಪಾಯ ಅದೆ ಸ್ವಾಮಿ. ಹೇ ಬಾಬು ಒಳಗಡೆ ಏನು ಮಾಡ್ತದೆ.

ಬಾಬು : ದೇವರಿಗೆ ಧ್ಯಾನ ಮಾಡ್ತದೆ.

| | | |
|---|---|---|
| ಹಾವಾಡಿಗ | : | ಹೇ ಖುದಾ ಪರವದಿಗಾರ್, ಹೇ ಅಲ್ಲಾ, ತಿರುಪತಿ ತಿಮ್ಮಪ್ಪ, ಧರ್ಮಸ್ಥಳದ ಮಂಜುನಾಥ ಸ್ವಾಮಿ, ಕೋಟೆ ಅಂಜನಯ್ಯ ಹಟ್ಟಿ ಲಕ್ಕವ್ವ, ಸೌದತ್ತಿ ಎಲ್ಲವ್ವ . . . ಕಾಪಾಡು ತಾಯಿ . . . ಓಂ . . . ಪಟ್. |

(ಕಣ್ಣ ಮುಚ್ಚುತ್ತಾನೆ ಹಿನ್ನಲೆಯಲ್ಲಿ ಸಂಗೀತ ಪ್ರಾರಂಭವಾಗುತ್ತದೆ ಜನರು ಕುತೂಹಲದಿಂದ ನೋಡುತ್ತಿದ್ದಾರೆ) ನೋಡಿ ನಮ್ಮುದು ಹುಡುಗನ ದೇಹ ಮಾಯಯಾಗಿಬಿಡ್ತು ಸ್ವಾಮಿ. (ಒಂದು ಕೋಲನ್ನು ತೆಗೆದುಕೊಂಡು ಬುಟ್ಟಿಯೊಳಗೆ ಹಾಕಿ ಮೂಲೆ ಮೂಲೆಗೂ ತೀವಿಯುತ್ತಾನೆ) ಹೌದು ಸ್ವಾಮಿ ನಮ್ಮ ಬಾಬು ದೇಹ ಮಾಯವಾಗಿ ಬಿಟ್ಟಿದೆ ಆದ್ರೆ ಅವನ ಆತ್ಮ ಇಲ್ಲೇ ಇದೆ. ನೀವೆಲ್ಲ ಹೂಂ ಅಂದ್ರೆ .... ನಮ್ಮ ಬಾಬುಗೆ ಮಾತಾಡಿಸುತ್ತೇನೆ

| | | |
|---|---|---|
| ಜನರು | : | ಮಾತಾಡಿಸಿ |
| ಹಾವಾಡಿಗ | : | ಹೇ ಬಾಬು ಬಾ ಇಲ್ಲಿ (ಇನ್ನೊಬ್ಬ ಬರುತ್ತಾನೆ) |
| ಇನ್ನೊಬ್ಬ | : | ಬಂದೆ ಅಣ್ಣ |
| ಹಾವಾಡಿಗ | : | ಜನ ಹೇಳ್ತಾರೆ ಬಾಬುಗೆ ಮಾತಾಡಿಸಿ ಬಿಡೋಣ. |
| ಇನ್ನೊಬ್ಬ | : | ಮಾತಾಡಿಸಿ. |
| ಹಾವಾಡಿಗ | : | ಸರಿ ಹಾಗಾದ್ರೆ . . . . ನೋಡಿ ಸ್ವಾಮಿ ನಾವು ನಮ್ಮ ಹುಡುಗಗೆ ಮಾತಾಡಿಸಿದ್ರೆ. ಅಲ್ಲಾನ ಮೇಲೇ ಅಣೆ ಮಡ್ಗಿ ಹೇಳ್ತೀನಿ. ನಮ್ಮ ಹುಡುಗಂದು ಆತ್ಮ ಮಾತಾಡುತ್ತೆ. ಈ ಆಟ ನೋಡಿ ಯಾರು ಹಾಗೆ ಹೋಗಬೇಡಿ ಸ್ವಾಮಿ ನಿಮ್ಮಕೈಲಾದಷ್ಟು ಕಾಸು ದಾನ ಮಾಡಿ |
| ಇನ್ನೊಬ್ಬ | : | ಅಣ್ಣ ಮಾತಾಡಿಸೋ ಮೊದ್ಲು ಅದನ್ನ ಹೇಳಿ ಬಿಡು. |
| ಹಾವಾಡಿಗ | : | ನೋಡಿ ಸ್ವಾಮಿ ನಮ್ಮ ಹುಡುಗ ಹೇಳ್ತದೆ. ಸತ್ಯ ಮುಚ್ಚಿಟ್ಟು ಆಟ ಮಾಡೋದು ಬ್ಯಾಡ ಅಂತ. ಏನಪ್ಪ ಅದು ಅಂದ್ರೆ ನಮ್ಮ ಬಾಬುಗೆ ಈಗ ನಾವು ಮಾತಾಡಿಸಿದ್ರೆ ನಮ್ಮ ಬಾಬು ನಿಮ್ಮ ಮನಸ್ಸಿನಲ್ಲಿರೋದನ್ನು ಹೇಳುತ್ತೆ ಸ್ವಾಮಿ. ನೀವ್ಯಾರು ಬೇಸರ ಮಾಡಿಕೊಳ್ಳಬಾರದು. ಇದು ಮಾಯ ಅಲ್ಲ ಸ್ವಾಮಿ ದೇವರಾಟ.. ಎಲ್ಲರೂ ಜೋರಾಗಿ ಚಪ್ಪಾಳೆ ತಟ್ಟಿ (ಜನರು ಚಪ್ಪಾಳೆ ತಟ್ಟುತ್ತಾರೆ. ಹಿನ್ನಲೆಯಲ್ಲಿ ಸಂಗೀತ ಪ್ರಾರಂಭವಾಗುತ್ತದೆ) ಹೇ .... ರಾಮ್ ರಹೀಮ .... ಜೈ ಜೈಯಾಂಜನೇಯಸ್ವಾಮಿ ಹಟ್ಟಿ ಲಕ್ಕವ್ವ . . . . ಓಂ ಪಟ್ (ಸಂಗೀತ ತೀವ್ರವಾಗುತ್ತದೆ) ಹೇ ಬಾಬು ಬಾ ಇಲ್ಲಿ (ಬುಟ್ಟಿಯಲ್ಲಿರುವ ಬಾಬು ಮಾತಾಡುತ್ತಾನೆ) |
| ಆತ್ಮಬಾಬು | : | ಬಂದೆ |
| ಹಾವಾಡಿಗ | : | ಎಲ್ಲಿದ್ದೀಯ |
| ಆತ್ಮಬಾಬು | : | ನಿಮ್ಮ ಪಕ್ಕ |
| ಹಾವಾಡಿಗ | : | ನನಗೆ ನೀನು ಕಾಣ್ತಿಲ್ಲ |
| ಆತ್ಮಬಾಬು | : | ನನಗೆ ನೀವು ಕಾಣ್ತೀರಿ |
| ಹಾವಾಡಿಗ | : | ನೋಡಿ ಸ್ವಾಮಿ ಆತ್ಮಗೆ ನಾವು ಕಾಣ್ತೀವಿ ನಮ್ಗೆ ಆತ್ಮ ಕಾಣ್ತಿಲ್ಲ...ಹೇ ಖುದಾ.. ಪರವದಿಗಾರ್ ಜೈ ಶ್ರೀರಾಮ್... ಹೇ ಬಾಬು ಬಾ ಇಲ್ಲಿ |
| ಆತ್ಮಬಾಬು | : | ಬಂದೆ |
| ಹಾವಾಡಿಗ | : | ಇವರು ತಲೆಮ್ಯಾಲೆ ಏನು ಹಾಕೊಂಡಾರೆ ಹೇಳು |
| ಆತ್ಮಬಾಬು | : | ಕೆಂಪು ಬಣ್ಣದು ಪೇಟಾ ಕಟ್ಟಿಕೊಂಡಿದ್ದಾರೆ (ಜನರು ಚಪ್ಪಾಳೆಯನ್ನು ತಟ್ಟುತ್ತಾರೆ. ಹಾವಾಡಿಗೆ ರಾಜುನ ಬಳಿಗೆ ಬರುತ್ತಾನೆ) |
| ಹಾವಾಡಿಗ | : | ಹೇ ಬಾಬು ಇವರ ಮನಸ್ಸಿನಲ್ಲಿ ಏನಿದೆ ಅದನ್ನ ಹೇಳು |
| ಆತ್ಮಬಾಬು | : | ಹೇಳಿದ್ರೆ ಅವರು ನಿಮಗೆ ಬಡಿತ್ತಾರೆ, ಬೇಸರ ಮಾಡಿಕೊಳ್ತಾರೆ |

| | | |
|---|---|---|
| ರಾಜು | : | ಇಲ್ಲ ಹೇಳಪ್ಪ ನಾನ್ಯಾಕೆ ಸತ್ಯ ಹೇಳಿದ್ರೆ ಹೊಡೀಲಿ ಹೇಳು |
| ಹಾವಾಡಿಗ | : | ಹೇ ಬಾಬು ಅವರು ಹೊಡಿಯೋಲ್ಲ ಬೇಸರ ಮಾಡಿಕೊಳ್ಳಲ್ಲ ಹೇಳು |
| ಆತ್ಮಬಾಬು | : | ಇವರು ಪಕ್ಕದಳ್ಳಿಯಲ್ಲಿರೋ ಹುಡುಗಿನ ಹೆಂಗೆ ಹಾರಿಸಿಕೊಂಡು ಹೋಗೋದು ಅಂತ ಪ್ಲಾನ್ ಮಾಡ್ತಾರೆ (ಜನರು ಹೋ ಎಂದು ಕೂಗುತ್ತಾರೆ)<br>(ಆವಾಗ ಸರ್ಕಲಲ್ಲಿ ಕೂತಿದ್ದ ಮಹಿಳೆಯೊಬ್ಬಳು ಹೊರಡುತ್ತಾಳೆ. ಹಾವಾಡಿಗ ಅವಳನ್ನು ತಡೆದು) |
| ಹಾವಾಡಿಗ | : | ತಾಯಿ ನಾನು ಮೊದಲೆ ಹೇಳಿದೆ ಆಟ ನಡಿಬೇಕಾದ್ರೆ ಯಾರೂ ಮಧ್ಯದಲ್ಲಿ ಹೋಗುಬಾರದು ಅಂತ ಎನಾಯ್ತು ತಾಯಿ ನಿನ್ನ ಮುಖ ನೋಡಿದ್ರೆ ಬಹಳ ಸಣ್ಣಗಾಗಿದೆ. ಬಾಬು ಏ ಬಾಬು ಈ ತಾಯಿ ಮನಸಿನಾಗೆ ಬಹಳ ಬೇಜಾರ್‌ಗೆ ಇದೆ ಯೇನಾಗಿದೆ ಅಂತ ಹೇಳ್ ಬಾಬು |
| ಬಾಬು | : | ಅಣ್ಣಾ ಈ ತಾಯಿ ತನ್ನ್ ಊರಲ್ಲಿ ಕೆಲ್ಸ ಇಲ್ಲಂತ ಬೇರೆ ಊರಿಗೆ ತನ್ನ ಮಗಳನ್ನ ಕರ್‍ಕೊಂಡು ಗುಳೆ ಹೋಗಿದ್ಲು ಅಲ್ಲಿ ಇವಳ ಜೀವನದಲ್ಲಿ ನಡಿಬಾರದ ಘಟನೆ ನಡೀತು ಅದು ಏನು ಅಂದ್ರೆ (ಅಷ್ಟರಲ್ಲಿ ಆ ತಾಯಿ ಬಾಬು ಮಾತನ್ನ ಅರ್ಧದಲ್ಲೆ ತಡೆದು ಬೇಡ ಹೇಳ್‌ಬೇಡ ಅಂತ ಕಿರುಚಾಡುತ್ತಾ ಸ್ಟೇಜ್ ಮಧ್ಯದಲ್ಲಿ ಬೀಳುತ್ತಾಳೆ.) |
| ಹಾವಾಡಿಗ | : | ಏನಾಯ್ತು ತಾಯಿ |
| ತಾಯಿ | : | ನಾನು ಕೆಲ್ಸಕ್ಕಂತ ಸೋಮವಾರಪೇಟೆಗೆ ನನ್ ಮಗಳನ್ನ ಕರ್‍ಕೊಂಡ್ ಹೋಗಿದ್ದೆ ಅಲ್ಲಿ ಒಂದು ಕಾಫಿ ಎಸ್ಟೇಟ್‌ನಲ್ಲಿ ಕೆಲ್ಸ ಮಾಡ್ತೀದ್ವಿ. ಆ ಕಾಫಿ ಎಸ್ಟೇಟ್ ಮಾಲೀಕ ನನ್ ಮಗಳನ್ ಕೆಡಿಸಿ ಕೊಂದು ಬಿಟ್ಟ. ಈಗ ನನಗ್ಯಾರು ದಿಕ್ಕು |
| ಹಾವಾಡಿಗ | : | ಬಾಬು ನನ್ನ ತಾಯಿ ಜೀವನ ಒಳ್ಳೇದ್ ಆಗ್ ಬೇಕಾದ್ರೆ ಅವಳಿಗೆ ಒಂದು ಕೆಲ್ಸ ಬೇಕು ಆ ಕೆಲ್ಸ ಯಾವುದು ಹೇಳು. |
| ಬಾಬು | : | ಈ ತಾಯಿ ಜೀವನ ಒಳ್ಳೇದು ಆಗಬೇಕಾದ್ರೆ ಆಕೆ ಇವತ್ತೆ ತನ್ನ ಗ್ರಾಮ ಪಂಚಾಯಿತಿಗೆ ಹೋಗಿ ತನ್ನ ಹೆಸರನ್ನ ಉದ್ಯೋಗ ಖಾತ್ರಿ ಯೋಜನೆಯಡಿ ನೊಂದಾಯಿಸಬೇಕು. ಅವರು ಇವಳಿಗೆ ಉದ್ಯೋಗ ಚೀಟಿ ಕೊಡ್ತಾರೆ. ಆ ಉದ್ಯೋಗಚೀಟಿಯಿಂದ ಈಕೆ ವರ್ಷಕ್ಕೆ ನೂರುದಿನ ಕೆಲ್ಸ ಪಡೀಬಹುದು. ಆ ನೂರು ದಿನ ದಿನಕ್ಕೆ ನೂರ ಇಪ್ಪತ್ತೈದು ರೂಪಾಯಿ ಕೂಲಿ ಕೊಡ್ತಾರೆ,ಒಂದು ವೇಳೆ 15 ದಿನದಲ್ಲಿ ಕೆಲ್ಸ ಕೊಡದಿದ್ದಲ್ಲಿ ನಿರುದ್ಯೋಗಭತ್ಯೆ ಕೊಡ್ತಾರೆ ಅಣ್ಣಾ. |
| ಹಾವಾಡಿಗ | : | ಕೇಳಿದಿಯಾ ತಾಯಿ ಇವತ್ತೆ ಗ್ರಾಮ ಪಂಚಾಯಿತಿಗೆ ಹೋಗಿ ನಿನ್ನ ಹೆಸರನ್ನು ನೊಂದಾವಣೆ ಮಾಡಿ ಕೆಲಸಪಡಿ ಹೋಗು ನಿನಗೆ ದೇವರು ಒಳ್ಳೆಯದು ಮಾಡಲಿ. |

(ತಾಯಿ ಹೋಗುತ್ತಾಳೆ. ಆವಾಗ ಒಬ್ಬ ಕಂಟ್ರಾಕ್ಟದಾರ ಕೈಯಲ್ಲಿ ಸೂಟ್ಕೇಸ್ ಹಿಡಿದು ಬಂದು ಕೂರುತ್ತಾನೆ. ಹಾವಾಡಿಗ ಅವನನ್ನು ನೋಡಿ)

| | | |
|---|---|---|
| ಹಾವಾಡಿಗ | : | ಹೇ. . ಬಾಬು ಬಾ ಇಲ್ಲಿ, ಇಲ್ಲೊಬ್ಬ ದೊಡ್ಡ ಮನುಷ್ಯ ಬಂದು ಕುಳಿತಿದಾನೆ ಅವನ ಕೈಲಿ ಸೂಟ್ ಕೇಸ್ ಇದೆ ಅದರ ಒಳಗಡೆ ಏನಿದೆ ಹೇಳು |
| ಬಾಬು | : | ಅದರ ಒಳಗಡೆ ಏನಿದೆ ಅಂತ ಹೇಳಿದರೆ ಜನ ಎಲ್ಲಾ ಅವನಿಗೆ ಸಿಕ್ಕಾಪಟ್ಟೆ ಹೊಡಿತ್ತಾರೆ ಅಣ್ಣಾ |
| ಜನ | : | ಏ ಕೊಡಯ್ಯ ಸೂಟ್ಕೇಸ್ನ( ಒಬ್ಬ ವ್ಯಕ್ತಿ ಬಂದು ಸೂಟ್ಕೇಸ್ ನ ಕಂಟ್ರಾಕ್ಟ್ದಾರನ ಕೈಯಿಂದ ಕಸಿದು ಹಾವಾಡಿಗನ ಕೈಗೆ ನೀಡುವನು.) |
| ಹಾವಾಡಿಗ | : | ನೋಡಿ ಜನಗಳೆ ಈ ದೊಡ್ಡ ಮನುಷ್ಯನ ದೊಡ್ಡ ಕೆಲಸಾನ (ಎಂದು ಸೂಟ್ಕೇಸ್ನ ಓಪನ್ ಮಾಡಿ ಜನರ ಮುಂದೆ ಎಸೆಯುತ್ತಾನೆ. ಅದರ ಒಳಗೆ ಪಾಸುಬುಕ್,ಉದ್ಯೋಗಚೀಟಿ, ಇತ್ಯಾದಿ ಪತ್ರಗಳು ಇರುವುದು. ಎಲ್ಲಾ ಜನರು ಬಂದು ಬಿದ್ದಿರುವ ಅದನ್ನು ತೆಗೆದುಕೊಳ್ಳುತ್ತಾರೆ.) |
| ಮಹಿಳೆ 1 | : | ನೋಡ್ರಪ್ಪಾ ಈ ಕಂಟ್ರಾಕ್ಟದಾರ ನಮ್ಮ,ಅಧ್ಯಕ್ಷರು,ಈ ಸೆಕ್ರೆಟರಿ ಜೊತೆ ಸೇರಿ ನಮ್ಮ ಉದ್ಯೋಗ ಚೀಟಿನೆಲ್ಲಾ ನಮಗೆ ಕೊಡದೆ ಹೇಗೆ ಸೂಟ್ಕೇಸ್ನಲ್ಲಿ ಮಡಕೊಂಡವ್ರೆ. ಇವರ ಬಾಯಿಗಿಷ್ಟ್ ಮಣ್ಣಾಕ |
| ಉಪಾಧ್ಯಕ್ಷ | : | (ವ್ಯಂಗ್ಯದಿಂದ) ಏ ಅಧ್ಯಕ್ಷಪ್ಪಾ ನೀನ್ ಹೀಗೆಲ್ಲಾ ಮಾಡ್ತೀಯಾ ಅಂತ ಗೊತ್ತಿದ್ರೆ ನಾನು ನನ್ನ ಹೆಂಡ್ತಿ ಮಕ್ಕಳನ್ನ ಕರ್‍ಕೊಂಡ್ ಬರ್‍ತೀದ್ದೆ ಅಲ್ಲಾಪ್ಪ. |
| ಅಧ್ಯಕ್ಷ | : | ಈಗೇನಾಗಿದೆ ಕರ್‍ಕೊಂಡ್ ಬಾ ನಮ್ ಹೆಣ ಎತ್ತೋಕೆ. |

ವ್ಯಕ್ತಿ : ಏ ಹಾವಾಡಿಗಪ್ಪಾ ಹಾವು ತೋರಿಸ್ತೀನಿ ಅಂತ ಹಾವೇ ತೋರ್ಸಿಲ್ಲ ಎಲ್ಲಯ್ಯ ಹಾವು

ಮಹಿಳೆ 2 : ಏ ಮಂಕ್ಮುಂಡೆದೆ, ತೋರ್‍ತಾ ಇಲ್ವಾ ನಿಮ್ ಎದುರಿಗ್ ಇರುವ ಈ 3 ಹಾವುನ್ನ ಅದಕ್ಕಿಂತ ದೊಡ್ಡ ಹಾವು ಯಾವುದು ತೋರಿಸ್ಬೇಕು ನಿನಗೆ. ಬಾಯಿ ಮುಚ್ಕಂಡ್ ಹೋಗ್ಲಾ ಆ ಕಡೆ. ಯವ್ವೀ ಯವ್ವೀ ಈ ಮೂವರು ಮೊದಲು ಎಮ್ಮೆ ಮೇಯಿಸ್ತಿದ್ರು ಈಗ ಆ ಎಮ್ಮೆಲ್ಯೆ ಜೊತೆ ಕಾರಲ್ಲ್ ತಿರ್‍ಗಾಡ್ತಾರೆ ಅದೆಲ್ಲಾ ಹೆಂಗಂತ ನನ್ಗೀಗ ಗೋತ್ತಾತು. ಉಗೀರ್‍ಲಾ ಅವರ ಮಖಾಕ್ಕೆ.

ಮುದುಕಿ : ಅದ್ಯಾವ ಪುಣ್ಯಾತ್ಮನೋ ಎನೋ ನೀನು ನಮ್ಗೆಲ್ಲಾ ಇವರ ಬಣ್ಣನ ಬಯಲ್ ಮಾಡ್ದೆ ಯಾರಪ್ಪಾ ನೀನು?

ಹಾವಾಡಿಗ : ನಾನ್ಯರಂತ ಗೊತ್ತಾಗ್ಬೇಕಾ ( ಎನ್ನುತ್ತಾ ತನ್ನ ಹಾವಾಡಿಗನ ವೇಷವನ್ನೆಲ್ಲಾ ಕಳಚುತ್ತಾನೆ. ಅಧ್ಯಕ್ಷ, ಸೆಕ್ರೆಟರಿ, ಕಂಟ್ರಾಕ್ಟ್‌ದಾರ, ಜನರು ಬೆಚ್ಚಿಬೀಳುತ್ತಾರೆ.)

ಹಾವಾಡಿಗ : ತಾಲೂಕು ಪಂಚಾಯತ್ ಆಫೀಸರ್( ಸೆಕ್ರೆಟರಿ ಕಿರುಚುತ್ತಾ ಅಧ್ಯಕ್ಷರೆ ಇಒ ಸಾಹೇಬರು)

ಅಧ್ಯಕ್ಷ : ಇವರು ಇಒ ಆದರೆ ಆ ಬಾಬು ಯಾರಾಗಿರಬಹುದು

ಹಾವಾಡಿಗ : ನಮ್ಮ ಆಫೀಸರು . . . . ಬನ್ನಿ ಬನ್ನಿ (ಬಾಬು ಹೊರಬಂದ ಡ್ರೆಸ್ ತೆಗೆಯುತ್ತಾನೆ)

ಸೆಕ್ರಟರಿ : ಅಧ್ಯಕ್ಷರೆ ಸಿಇಒ ಸಾಹೇಬ್ರು . . . . ಮುಗೀತು ನಂ ಕಥಿ

ಸಿಇಒ : ಇನ್ನು ಮುಗಿದಿಲ್ಲ ಇನ್ನ ಮೇಲೆ ಪ್ರಾರಂಭ. ( ಬುಟ್ಟಿಯಿಂದ ಎದ್ದು ಬರುತ್ತಾನೆ. ಜನರು ಬೆರಗಾಗುತ್ತಾರೆ ಚಪ್ಪಾಳೆ ತಟ್ಟುತ್ತಾರೆ) ಇವರ ಮೇಲೆ ತಕ್ಷಣ ಎನ್‌ಕ್ವರಿ ಕಂಡಕ್ಟ್ ಮಾಡಿ. ಈ ಜಾಬ್ ಕಾರ್ಡ್‌ಗಳನ್ನೆಲ್ಲ ಹಂಚಿಬಿಡಿ. ಅರ್ಜಿಕೊಟ್ಟವರಿಗೆಲ್ಲ ನಿರುದ್ಯೋಗ ಭತ್ಯೆ ಕೊಡಿ. ನೋಡಿ ಮಹಾಜನಗಳೆ ಊರು ನಿಮ್ಮದು ಯೋಜನೆಗಳು ನಿಮ್ಮವು. ಸರಕಾರ ಪ್ರಾರಂಭ ಮಾಡುವ ಯೋಜನೆಗಳು ಸರಿಯಾಗಿ ಅನುಷ್ಟಾನ ಆಗೋ ಹಾಗೆ ಮಾಡೋ ಜವಾಬ್ದಾರಿ ನಮ್ಮದು. ಮಧ್ಯೆದಲ್ಲಿ ಇಂತಹ ಕೀಚಕರು ಹುಟ್ಟಿ ಸರಕಾರದ ಯೋಜನೆಗಳು ನಿಮ್ಮ ಹತ್ತಿರ ಬಾರದಾಗೆ ನೋಡಿಕೊಂಡು ಬಿಡ್ತಾರೆ. ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಬಾಳ ಒಳ್ಳೆಯ ಯೋಜನೆ ಈ ಯೋಜನೆಯನ್ನು ಸರಿಯಾಗಿ ಗ್ರಾಮದೋರು ಉಪಯೋಗ ಮಾಡಿಕೊಂಡ್ರೆ. ಯಾರು ಕೆಲಸವಿಲ್ಲಂತ ಗುಳೆ ಹೋಗಬೇಕಾಗಿಲ್ಲ. ಹಳ್ಳಿ ಜನರಿಗೆ ಉದ್ಯೋಗದ ಅವಶ್ಯಕತೆ ಇದೆ ಅಂದಾಗ ಗ್ರಾಮಪಂಚಾಯಿತಿ ಊರಿನ ಅಭಿವೃದ್ಧಿಯಾಗುವಂತ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಈ ಮಹಾತ್ಮಗಾಂಧಿ ಉದ್ಯೋಗ ಖಾತರಿ ಯೋಜನೆಯಲ್ಲಿ ಕೆಲಸ ಕೊಡಬಹುದು. ನಿಮ್ಮೂರಿನ ಇಬ್ಬರು ಯುವಕರು ನಮ್ಮತ್ರ ಬಂದು 'ನಮ್ಮೂರಿನಲ್ಲಿ ಅನ್ಯಾಯ ನಡೀತ್ತಿದೆ ಅಂತ ನಮ್ಮ ಗಮನಕ್ಕೆ ತಂದರು' ನಾವು ಈ ಪ್ಲಾನ್ ಮಾಡಿ ನಿಮಗೆ ನಿಮ್ಮೂರಿನ ಹೆಬ್ಬಾವುಗಳನ್ನು ತೋರಿಸಿದೆವು

ಜನರು : ಹೇ ಹಾಕ್ರೋ . . . . ಅವರಿಗೆ (ಹೊಡೆಯಲು ಮುಂದೆ ಬರುತ್ತಾರೆ)

ಸಿಇಒ : ಬೇಡ ಬೇಡ ಅದೆಲ್ಲ ಮಾಡಬ್ಯಾಡಿ ತಪ್ಪು ಮಾಡಿದವರಿಗೆ ಕಾನೂನನಲ್ಲಿ ಶಿಕ್ಷೆ ಇದ್ದೇ ಇದೆ. ನೀವು ಮತ್ತೊಂದು ತಪ್ಪು ಮಾಡಬೇಡಿ. ಎಲ್ಲಿವರೆಗೆ ನೀವುಗಳು ಎಚ್ಚರವಾಗಿರೋಲ್ಲವೋ ಅಲ್ಲಿತನಕ ಇಂತಹ, ಕೊಳಕಮಂಡಲಗಳು, ಹೆಬ್ಬಾವು ಕಾಳಿಂಗ ಸರ್ಪಗಳು ಬೆಳೆಯುತ್ತಲೇ ಇರುತ್ತವೆ. ನೋಡಿ.

ವ್ಯಕ್ತಿ 1 : ಉರಿಮಂಡಲ

ವ್ಯಕ್ತಿ 2 : ಗೆಜ್ಜ ಮಂಡಲ

ಗುಂಪು : ಕೊಳಕು ಮಂಡಲ

(2 ಹುಡುಗಿಯರು ಬಂದು ಪರದೆ ಹಿಡಿಯುವರು ಆಗ ಹಿನ್ನಲೆಯಲ್ಲಿ ಸೌ ಸಾಲ್ ಪೆಹೆಲೆ ಹಾಡು ಬರುವುದು ಎಲ್ಲಾ ಕಲಾವಿದರು ಸಾಲಾಗಿ ನಿಂತು ನಮಸ್ಕರಿಸುವರು.)

* * *

# ಹುಯ್ಯೋ ಹುಯ್ಯೋ ಮಳೆರಾಯ

– ಪ್ರೊ: ಹೆಚ್.ಎಲ್.ಕೇಶವಮೂರ್ತಿ

## ದೃಶ್ಯ–1

(ಬಯಲು ಪ್ರದೇಶ. ನಿರ್ಜನ ಆಗಿದೆ. ಮುದುಕನೊಬ್ಬ ಬರುತ್ತಾನೆ.)

ಮುದುಕ : ಅಬ್ಬಾ ಅಬ್ಬಾ, ರಣಬಿಸಿಲು ನೆಳ್ಳಲ್ಲಿ ಕುಂತ್ಕಳಾನಾಂದ್ರೆ ಒಂದೂ ಮರಿಲ್ಲ. ಲೋ ಮನಸ್ಸು ಮರಗಳ ಸಂಬಂಧ ಅಂದ್ರೆ, ತಾಯಿ–ಮಗ ಸಂಬಂಧ ಇದ್ದಂಗಾ ಕಣ್ರಲಾ. ಅವು ಕಡಿಬ್ಯಾಡಿ ಅಂದ್ರೂ ಕೇಳ್ಲಿಲ್ಲ. ಕಡಿದು ಬಿಸಾಕಿದ್ರು. ಮಗೀಗೆ ಎದಿ ಕೊಟ್ರೆ ತಾಯಿಗೂ ತುರುಪ್ತಿ. ಹಾಲು ಕುಡಿದ ಕಂದನಿಗೂ ಸಂತೋಸ. ಮಗ ತಾಯಿ ರಕುತಾನೇ ಹೀರಿದ್ರೆ .... ಮಗುವೂ ಸಾಯ್ತದೆ .... ತಾಯೀನೂ ಸಾಯ್ತಾಳೆ .... ಹಂಗಾಗದೆ ನಮ್ಮ ಕತೆ. ಗಣಿಗಾರಿಕೆ ಮಾಡ್ತೀವಿ ಅಂತಾ ಭೂಮ್ತಾಯಿ ಒಗೆದೂ ಬಗೆದೂ ಬರಿದು ಮಾಡ್ತಾನೆ ಅವ್ರೆ. ಬೆಟ್ಟವಾ ಸಿಡಿಮದ್ದು ಹಾಕಿ ಸಿಡಿಸ್ತಾ ಕುಂತವ್ರೆ. ಕಾಡೂ ಇಲ್ಲ. ಪರಾಣಿ ಪಕ್ಸಿಗಳೂ ಕಾಣದಂಗಾವೆ. ಮಳೆ ಬಾ ಅಂದ್ರೆ ಎಲ್ಲಿಂದ ಬಂದಾತು. ಕತ್ತೆ ಮದುವೆ ಮಾಡಿದ್ರೆ ಮಳೆ ಬೀಳ್ತದೆ ಅಂತಾವ ಹುಯ್ಲೋ ಅಂದೋ, ಕತ್ತೆ ಮದ್ವೇನೂ ಮಾಡ್ದೋ. ಮಳೆ ಬರ್ನಿಲ್ಲ. ಊರು ದೇವ್ರ ಹಬ್ಬ ಮಾಡುದ್ರೆ ಮಳೆ ಕುರುತೇಟು ಅಂತಾವ ಹಬ್ಬಾನೂ ಮಾಡ್ದೋ. ಇದ್ದ ಬದ್ದ ಪುಡಿಗಾಸ ಖರ್ಚು ಮಾಡ್ಕೊಂಡೊ. ಮಳೆರಾಯ ಕಣ್ಬಿಡ್ನಿಲ್ಲ. ನಾವು ಹುಡುಗರಾಗಿದ್ದಾಗ .... (ಹಂಗೇ ಒಳಗಣ್ಣಾಗುವನು)

*ಹುಯ್ಯೋ ಹುಯ್ಯೋ ಮಳೆರಾಯ*
*ಹೂವಿನ ತೋಟಕೆ ನೀರಿಲ್ಲ*
*ಕೆಚ್ಚೋ ಕೆಚ್ಚೋ ಮಳೆರಾಯ*
*ಕೆರೇ ಕಟ್ಟೆಗೆ ನೀರಿಲ್ಲ*
*ಬಾರೋ ಬಾರೋ ಮಳೆರಾಯ*
*ಬಾಳೇ ತೋಟಕೆ ನೀರಿಲ್ಲ*
*ಬಾರಪ್ಪ ಮಳೆರಾಯ*
*ಬಂದುಯ್ಯೋ ಮಳೆರಾಯ*
*ಚನ್ನಪಟ್ಟಣಕೆ ನಾ ಹೋದೆ*
*ಸಣ್ಣ ಪಂಚೆ ನಾ ತಂದೆ*
*ಒಗೆಯಾಕೆ ನೀರಿಲ್ಲ*
*ಬಾರಪ್ಪ ಮಳೆರಾಯ*
*ಬಂದುಯ್ಯೋ ಮಳೆರಾಯ*

ಹಿಂಗೆ ಕುಣೀತಿದ್ರೆ ಧೋsಂತ ಸುರ್ಯೋದು ಮಳೆ. ಈಗ ಏನು ಬಡ್ಕೊಂಡ್ರೂ ಆಟೇಯಾ. ಮಳೋಗಿ ಅಡ್ಡ ಸೇರ್ಕೊಂಡದೆ. ಭೂಮ್ತಾಯಿ ಮೈ ಬಿರ್ಕು ಬಿಟ್ಕೊಂಡದೆ .... ಇನ್ನೂ ಈ ಹಾಳಾದ ಕಣ್ಣಲಿ ಏನೇನ್ ಕಾಣ್ಬೇಕೋ. (ಮೋಟಾರ್ ಸೈಕಲ್ ಬರುತ್ತಿರುವ ಶಬ್ದ. ಹಣೆಗೆ ಕೈ ಹಿಡಿದು ನೋಡುತ್ತಾನೆ.) ಕುಟು ಕುಟು ಮೋಟಾರು ಬರ್ತಾ ಇರಂಗದೆ. ಯಾರೂ ....

ಸಿಂಗ್ರಿಗೌಡ: ನಾನ್ ಕಣಯ್ಯಾ ....

ಮುದುಕ : ಓ.. ... ಸಿಂಗ್ರೀನಾ .... ಲೋ ಸಿಂಗ್ರಿ ನೆಪ್ಪಿದ್ದಂಗೆ ಹೇಳ್ಬಿಡ್ತೀನಿ, ಸೀಮೇಲೆಲ್ಲಾ ಕಂತ್ರಾಟು ಮಾಡಿಸ್ತೀಯಲ್ಲಾ, ನಮ್ಮೂರ ಕೆರೆ ಹೂಳೆತ್ಸಲಾ.

ಸಿಂಗ್ರಿಗೌಡ : ಎತ್ಸಾನ ಬುಡಯ್ಯಾ .... ಜಾಬ್‌ಕಾರ್ಡ್ ತಗಂಡು

ಮುದುಕ : ಅದೇನೋ ಪೋಟಾ ಹೊಡಸ್ತೀರಿ .... ಜಾಬ್‌ಕಾರ್ಡ್ ಕೊಡ್ತೀರಿ .... ಇಂಥ ದಿನಾ ಬನ್ನಿ ಅಂತಾ ಸೆಕೆಟ್ರಿ ನೋಟೀಸ್ ಕೊಟ್ಟಿದ್ನಂತಾ, ನಮ್ಮೈದ ಹೊತ್ತಾರೆನೇ ಹೋಯ್ತು.

ಸಿಂಗ್ರಿಗೌಡ : ಅವ್ನನ್ನ ನನ್ ಬಂದು ನೋಡಾಕೇಳು

ಮುದುಕ : ಹೇಳಾನಂತೆ . . . . ಕೆರೆ ಹೂಳ್ದೇನ್ಮಾಡಿಯೇ ?

ಸಿಂಗ್ರೀಗೌಡ : ತಗ್ಯಾನ್ ಬುಡಯ್ಯಾ. ಅದೆಲ್ಲಾ ನಿನ್ನ ಕಾಲದ ಮಾತು. ಈಗ ಯಾರು ನೆನಕೊಂಡಾರು ? ದುಡ್ಡ ದುಡಿಯಾಕೆ ಕೆರಿ ಕಟ್ಟಿನಾ ಅಂತಾರೆ . . . . ಎಲ್ಲದೀಯೇ ನೀನು . . . . ಕಾಲಕೆಟ್ಟೋಗದೆ ಕಾನಯ್ಯೋ, ಕಾಲಕೆಟ್ಟೋಗದೆ.

ಮುದುಕ : ಕಾಲ ಅಲ್ಲ ಕನೋ ಕೆಟ್ಟೋಗಿರೋದು, ಅದು ಇದ್ದಂಗ ಅದೆ. ನಾವು ಕೆಟ್ಟೋಗದೀವಿ.

ಸಿಂಗ್ರಿಗೌಡ : ನಿನ್ದು ಅದೇ ಪುರಾಣಾ ಆಯ್ತು . . . . ಹತ್ತು ಹೋಗಾನ.

ಮುದುಕ : ಬ್ಯಾಡಕನಪ್ಪ . . . . ಇದ್ರ ಸಾವಾಸ ಮಾತ್ರ ಬ್ಯಾಡ. ಎಲ್ಲಾದ್ರೂ ಒಗೆದುಗಿಗೆದು ಬಿಟ್ಟಾತು.

ಸಿಂಗ್ರಿಗೌಡ : ಇನ್ನು ಜೀವದ ಮ್ಯಾಲೆ ಆಸೆ ಅದಲ್ಲಯ್ಯಾ . . . . ಸಾಯಾಕೆ ಹೆದ್ರಿಕೆಯಾ ?

ಮುದುಕ : ಹೆದರಿಕೆ ಅಲ್ಲ ಕನೋ. ಸಾವು ಬಂದು ಸಾಯ್ಬೇಕು. ಸಾವಿಗೆ ತಲೆ ಒಡ್ಡಬಾರ್ದು. ಹುಂ ನಡೀ ನೀನು. (ನಿರ್ಗಮಿಸುವರು)

## ದೃಶ್ಯ-2

**(ಸಿಂಗ್ರಿಗೌಡನ ಮನೆ. ಸಿಂಗ್ರಿಗೌಡ, ಸೆಕ್ರೆಟರಿ ಮತ್ತು ಗೌಡನ ಕೆಲವು ಚೇಲಾಗಳು)**

ಹಾಡು : *ಬಣ್ಣದ ಮಾತ್ನೋರು ಮಳೆರಾಜ // ಇವರು*
*ಜಾಬು ಕಾರುಡ ಇರೋರ್ಗೆ ಮಳೆರಾಜ //*
*ಬಲೆ ಬೀಸಾರು ನೋಡು ಮಳೆರಾಜ //*
*ನೋಡು ನೋಡಯ್ಯ ಮಳೆರಾಜ //*

ಸೆಕ್ರೆಟರಿ : ಎಲ್ಲಾ ಆಗದೆ ಗೌಡ್ರೆ . . . . ವರ್ಕ್ ಆರ್ಡರ್ ಬರೋದು ಒಂದು ಬಾಕಿ.

ಸಿಂಗ್ರಿಗೌಡ : ಅದೂ ಬತ್ತದೆ ಸೆಕೆಟ್ರಿ . . . . ನೋಡ್ರುಲ್ಲಾ ನೀವು ಕಂಡೇ ಇದೀರಿ. ನ್ಯಾಯ ಧರ್ಮಕ್ಕೆ ಅಂಜಿ ನಡೆಯೋನು ನಾನು.

ಕುರ್ನಿಂಗ : ಊರ್ಗೇ ಗೊತ್ತದೆ ಬುಡಣ್ಣಾ.

ಸಿಂಗ್ರಿಗೌಡ : ಅಲ್ವಾ . . . . ಯಾರ್ಗೂ ಅನ್ಯಾಯ ಆಗಬಾರ್ದು. ಒಂದು ಜಾಬ್‌ಕಾರ್ಡ್‌ಗೆ ಇಷ್ಟು ಅಂತಾ ಕೊಟ್ಬುಡ್ತೀನಿ . . . . ಆಗ್ಬಹುದೇನ್ರುಲ್ಲಾ . . . . ?

ಕರಿಯ : (ತಲೆಕರೆಯುತ್ತಾ) ಗೌಡ್ರೆ . . . . ಗೌಡ್ರೆ . . . . (ಕರಿಯನ ಕಡೆ ಗೌಡನು ನೋಡುವನು) ಅದೆಸ್ಟೂಂತವಾ . . . ಒಸಿ ಏಳಿದ್ರೆ . . . .

ಕರ್ನಿಂಗ : ಅಣ್ಣ ಏನು ನಮ್ಗೆ ಮೋಸ ಮಾಡೋನಲ್ಲ . . . . ಧರ್ಮ, ಕರ್ಮ ನೋಡಿ ಕೊಡ್ತಾನೆ . . . .

ಸಿಂಗ್ರಿಗೌಡ : ಆಗ್ಬಹುದೇನ್ರುಲ್ಲಾ . . . . ಇಲ್ಲಾ ಅನ್ನಂಗಿದ್ರೆ ಹೇಳ್ಬುಡಿ . . . . ನನ್ಗೆ ಈ ಸವಾಸವೇ ಬ್ಯಾಡ.

ಕುರ್ನಿಂಗ : ಬ್ಯಾಡಾ ಅಂದೇವಾ . . . . ಆಗ್ಬೌದು . . . . ಅದೇನು ಮುಂದ್ಕೇಳು.

ಸಿಂಗ್ರಿಗೌಡ : ಹಂಗಾರೆ ಸರಿ. ನಮ್ಮ ಬೀದಿ ಜಾಬ್‌ಕಾರ್ಡ್ ಎಲ್ಲಾ ನನ್ನವು.

ಕುರ್ನಿಂಗ : ಹುಂ

ಸಿಂಗ್ರಿಗೌಡ : ಮುಂದ್ಲುಬೀದೀದು ನಿಂದು ಕನ್ಲ ಕುರ್ನಿಂಗ.

ಕುರ್ನಿಂಗ : ಸರಿ ಕಣಣ್ಣಾ.

ಸಿಂಗ್ರಿಗೌಡ : ಕೆಲಟ್ಟೀದೆಲ್ಲಾ ನಿಂದು ಕನ್ಲ ಕರ್‍ಯಾ.

ಕರಿಯ : ಅಲ್ಲಿರೋವೇ ಒಸಿ ಮನೆ ಅಲ್ವಾ ಗೌಡ್ರೆ . . . . ?

ಕುರ್ನಿಂಗ : ಕಿರುಜಾತಿ ಬಡೆತ್ತುದೆ . . . . ನಿನ್ಗೂ ಸಮಪಾಲು ಬೇಕ್ಲಾ . . . . ಕೊಟ್ಟಸ್ಟು ತಗೋ . . . . ಇಸ್ಟಾದ್ರೂ ಕೊಟ್ಟೀವಲ್ಲ . . . . ಕುಸಿಪಡು.

ದನಿ : ಅಲೆಲೆ ಏನಯ್ಯಾ ಇದು . . . . ಮರಿ ಕಡ್ದು ಪಾಲಾಕ್ದಾಂಗೆ ಇದ್ನೂ ಪಾಲಾಕ್ತಾ ಕುಂತವ್ರೆ . . . .
(ಒಬ್ಬನ ಪ್ರವೇಶ)

ಒಬ್ಬ : ಅಣ್ಣೋ . . . . ನನ್ ಜಾಬ್‌ಕಾರ್ಡ್ ನಿನ್ತಾವೇ ಅದೆ.

ಕುರ್ನಿಂಗ : ಇಲ್ಲಿ ಬುಡೋ ಮಾರಾಯ್ನೆ. ನಾಳೀಕೆ ಕೊಡೋದು, ಇವತ್ತೇ ಕೊಟ್ಟಿದ್ದೀಯೇ . . . . ಎಲ್ಲೋದಾತು.

ಒಬ್ಬ : ಅದ್ಕಲ್ಲಾ ಕನೋ

ಕುರ್ನಿಂಗ : ಇನ್ನೇನು ಕೆಲ್ಸ ಮಾಡಾಕಾ . . . . ಯಾಕೆ ಕೆಲ್ಸ ಕೆಲ್ಸ ಅಂತಾ ಸಾಯ್ತಿದ್ದೀಯೊ ಕಾಣೆ . . . . ದೊರೆ ಮಗ್ನಂಗೆ ಮಲ್ಲಿರೋದ ಕಲ್ತ್‌ಕೋ. ಕೆಲ್ಸಕ್ಕೆ ಹೋದೆ ಅನ್ನು. ಎಷ್ಟು ಕೊಡ್ತಾರಪ್ಪಾ ?

ಒಬ್ಬ : ದಿನಕ್ಕೆ ನೂರು ರೂಪಾಯಿ

ಕುರ್ನಿಂಗ : ಅಲೋ . . . . ನೀನು ಕುಂತಿರೋತಾಕ್ಕೇ ದಿನಾ ಹತ್ತೊ, ಇಪ್ಪತ್ತೋ ಬಂದ್ಬೀಳ್ತದೆ. ಇನ್ನೇನ್ಬೇಕು. ಅಣ್ಣಾ ಏಳಿದ ದಿನ ಬ್ಯಾಂಕ್‌ಗೆ ಬಂದ್ ಸೈನ್ ಮಾಡಿದ್ರಾಯ್ತು.

ಒಬ್ಬ : ಅದ್ಸರಿ ಕಲಾ ಕುರ್ನಿಂಗ . . . . ಅಣ್ಣಾ ನೀನು ಸುಮ್ನೆ ಕುಂತಿದ್ದೀಯಲ್ಲಾ . . . . ನೀನು ಹೇಳಣ್ಣ.

ಸಿಂಗ್ರಿಗೌಡ : ಏನ್ಲ ಅದು ?

ಒಬ್ಬ : ನಮ್ಮಲ್ಲಿ ಆರು ಜನ ಇದ್ದೀವಿ. ನೀನು ಒಂದೇ ಕಾರ್ಡ್ ಕೊಡ್ಸಿದ್ದಿ . . . .

ಸಿಂಗ್ರಿಗೌಡ : ಒಂದು ಕುಟುಂಬಕ್ಕೆ ಒಂದೇ ಕಲ ಕೊಡಾದು

ಒಬ್ಬ : ಅದೇನು ನಿನ್ ಕೈಲೇ ಅಲ್ವಾ ಅಣ್ಣಾ ಇರಾದು . . . . ಎಲ್ರೂ ಪಾಲಾಗಿ ಬ್ಯಾರೆ ಬ್ಯಾರೆ ಅವ್ರೆ ಅಂತಾ ಮಾಡಿಸ್ಬುಡು, ಎಲ್ರಿಗೂ ಕೊಡಿಸ್ಬುಡು . . . . ಹೆಂಗೋ ನಿನ್ ಹೆಸ್ರೇಳಿ ಮನೆ ದೀಪ ಹಚ್ತೀವಿ . . . .

ದನಿ : ಇದು ಐನಾತಿ ಪಾಯಿಂಟು ! ಆರು ಜನ ಅಂದ್ರೆ ಆರಿಪ್ಪತ್ಲ ನೂರಿಪ್ಪತ್ತ್ ರೂಪಾಯಿ ಬಂದ್ಬೀಳ್ತದೆ ! ಯಾರಿಗುಂಟು ಯಾರಿಗಿಲ್ಲ !?

## ದೃಶ್ಯ–3

### (ಸಿಂಗ್ರಿಗೌಡನ ಮನೆ. ಗೌಡ ಮನೆಯಲ್ಲೇ ಇದ್ದಾನೆ. ಸೆಕ್ರೆಟರಿ ಪ್ರವೇಶ.)

ಹಾಡು :
*ಹೂಳನ್ನು ಎತ್ತಿದ್ರು ಮಳೆರಾಜ // ಇವರು*
*ಹಾಳೇ ಮೇಲೆ ಎತ್ತಿದ್ರು ಮಳೆರಾಜ //*
*ಹಣವನ್ನು ನುಂಗವ್ರೆ ಮಳೆರಾಜ //*
*ನೋಡು ನೋಡಯ್ಯ ಮಳೆರಾಜ //*

ಸೆಕ್ರೆಟರಿ : ನಮಸ್ಕಾರ ಗೌಡ್ರೆ . . . .

ಸಿಂಗ್ರಿಗೌಡ : (ನಾಟಕ ಶೈಲಿಯುಲ್ಲಿ) ವಂದನೆಗಳು ಮಹಾ ಸೆಕೆಟ್ರಿ ಅವ್ರೇ. ಇತ್ತ ಬರುವಂತಹವರಾಗಿ. ಈ ಪೀಠವನ್ನಲಂಕರಿಸುವಂತವರಾಗಿ

ಸೆಕ್ರೆಟರಿ : ನಿಮ್ಗೆ ಸುಮ್ಮಾನ ಗೌಡ್ರೆ

ಸಿಂಗ್ರಿಗೌಡ : (ಅದೇ ಶೈಲಿ) ಏಕೆ ಸೆಕೆಟ್ರಿಗಳೇ ? ಸದಾ ಹುಣ್ಣಿಮೆಯ ಚಂದ್ರನಂತೆ ಪ್ರಕಾಶಮಾನವಾಗಿರುತ್ತಿದ್ದ ನಿಮ್ಮ ಮುಖಾರವಿಂದವು ಅಮಾಸೆಯ ಚಂದ್ರನಂತೆ ಕಾಂತಿ ಹೀನವಾಗಿರುವ ಕಾರಣವಾದರೂ ಯಾವುದು ? ನಿಮ್ಮನ್ನ ಕಾಡುತ್ತಿರುವ ಸಂಗತಿ ಅದಾವುದೆಂಬುದು ತಿಳಿಯಬಹುದೇ ?

ಸೆಕ್ರೆಟರಿ : ಕೆರೆ ಹೂಳಿಂದು ಗೌಡ್ರೆ

ಸಿಂಗ್ರಿಗೌಡ : (ಅದೇ ಶೈಲಿ) ಅದು ಹೋದ ಜನ್ಮದ ಕತೆಯು. ಹೂಳೆತ್ತಿದ್ದು ಆಯ್ತಲ್ಲಾ . . . . ಹಣ ಸಂದಾಯವೂ ಆಯ್ತಲ್ಲಾ . . . . ಮಳೆ ಬಿದ್ದು ಕೆರೆಯೂ ತುಂಬ್ತಲ್ಲಾ.

ಸೆಕ್ರೆಟರಿ : ಏನು ತುಂಬ್ಕಂಡಿದ್ದತ್ತು . . . . ಹುಚ್ಚೆ ಹೂಯ್ದ್ರೆ ತುಂಬ್‌ಕತ್ತದೆ, ತಿಕ ತೊಳ್ಕೊಂಡ್ರೆ ಬತ್ತೋಯ್ತದೆ

ಸಿಂಗ್ರಿಗೌಡ : ಸೆಕೆಟ್ರಿ ಅದು ಮೊದ್ಲಿಂದ್ಲೂ ಇದ್ದದ್ದೇ ಕನ . . . . ಅದಕ್ಕೇನೀಗ . . . .

ಸೆಕ್ರೆಟರಿ : ಸರ್ಕಾರ ನಮ್ಮಂತೋರ ಜೀವ ತಿನ್ನಾಕೆ ನಿಂತದೆ. ಕೇಮಿಲ್ದೆ ನಿಂದಲ್ಲ. ಅದು ಮಾಹಿತಿ ಹಕ್ಕು ಕಾಯ್ದೆ ಹಿಡ್ಕಂಡವೆ. ನೋಡಿ ಇದ.

ಸಿಂಗ್ರಿಗೌಡ : (ತೆಗೆದುಕೊಂಡು) ಕಲ್ಲಹಳ್ಳಿ ಕೆರೆಯ ಹೂಳನ್ನ ಎತ್ತಿದ್ದೀರಾ ? ಹೂಂ ಎತ್ತೀವಿ ಅನ್ನು. ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಡಿ ಅದನ್ನು ನಿರ್ವಹಿಸಿದ್ದೀರಾ . . . . ? ಹೂಂ ಅಂತಾ ಬರ್ಕೊಡು ಸೆಕೆಟ್ರಿ.

ಸೆಕ್ರೆಟರಿ : ಮುಂದಕ್ಕೆ ನೋಡಿ ಗೌಡ್ರೆ.

ಸಿಂಗ್ರಿಗೌಡ : ಹಾಗಿದ್ರೆ ತಗುಲಿರುವ ಖರ್ಚು ಎಷ್ಟು ? ಇವಕ್ಕೆ ಯಾಕ್ಬೇಕಂತೆ . . . . ಇವ್ರೇನು ಅವರಪ್ಪನ ಮನೆಯಿಂದ ತಂದು ಕೊಟ್ಟಿದ್ರಾ . . . .

ಸೆಕ್ರೆಟರಿ : ಮೂರ್‍ನೂ ಬಿಟ್ಟು ನಿಂತವೆ. ಲಂಗಿಲ್ಲ, ಲಗಾಮಿಲ್ಲ. ಈ ಮಾತ ಅವ್ರಿಗೆ ಯಾರು ಹೇಳೋರು ? ಹೇಳಿ . . . .

ಸಿಂಗ್ರಿಗೌಡ : ಎತ್ತಿದ ಹೂಳಿನ ಅಂದಾಜು ತೂಕ ಎಷ್ಟು ..... __________ ಸೆಕೆಟ್ರಿ ಇನ್ನೇನು ನಿಂಗೆ ಹೊಸ ಕೆಲ್ಸ ಸಿಗ್ತು. ತಕ್ಕಡಿ ತಗಳೋದು . . . . ಹೂಳ ಅಳೆಯೋದು . . . . ತಕ್ಕಡಿ ತಗಳೋದು . . . . ಹೂಳ ಅಳೆಯೋದು ..... __________ ಬಡ್ಡೆತ್ತವು ..... ಕೇಮಿಲ್ಲದವು ಮಾಡಾಕೆ ..... ಬರ್‍ದಾಕು ಒಂದು ಐನೂರೋ ಆರ್‍ನೂರೋ ಲೋಡಾಗದೆ ಅಂತಾವ

ಸೆಕ್ರೆಟರಿ : ಸುಮ್ ಸುಮ್ನೆ ಹಂಗೇಳಾಕಾಯ್ತದಾ ಗೌಡ್ರೆ . . . . ಅಷ್ಟೊಂದು ಹೆಂಗಾಯ್ತದೆ ಅಂದ್ರೆ . . . .

ಸಿಂಗ್ರಿಗೌಡ : ಲಾರಿ ಲೋಡ್ ಅಲ್ಲ, ಎತ್ತಿನ ಗಾಡಿ ಲೋಡ್ ಅನ್ನು

ಸೆಕ್ರೆಟರಿ : ಅದೆಂಗಾಯ್ತದೆ ಗೌಡ್ರೆ . . . . ಇಷ್ಟು ಕಡಿಮೇನಾ ಅಂತಾ ಕೇಳಿದ್ರೆ . . . .

ಸಿಂಗ್ರಿಗೌಡ : ಟ್ರಾಕ್ಟು ಲೋಡ್ ಅನ್ನೋ . . . . ಅದ್ನೂ ನಾನೇಳ್ಕೊಡ್ಬೇಕಾ ನಿಂಗೆ.

ಸೆಕ್ರೆಟರಿ : ನಿಮ್ದು ಇದೇ ಆಯ್ತು. ಮುಂದಕ್ಕ ನೋಡಿ

ಸಿಂಗ್ರಿಗೌಡ : ಗೋಡಾನ್ನು ವಿಲೇವಾರಿ ಮಾಡಿದ್ದೀರಾ ? ಮಾಡಿದ್ದರೆ ಹೇಗೆ ? ಓಹೋ ಡಿಸಿ ಸಾಹೇಬ ಕನೋ ಇವ್ನು ಸೆಕೆಟ್ರಿ ... ಈ ಸಾಹೇಬನ್ನ ಕೇಳಿ ವಿಲೇವಾರಿ ಮಾಡ್ಬೇಕಿತ್ತು . . . . ತರ್‍ಲೆಬಡ್ಡೆತ್ತವು . . . . ಹಿಂಗೆ ಬರಿ ಸೆಕೆಟ್ರಿ . . . . ಗೋಡು ಅಂದ್ರೆ ಗೊಬ್ರ ಇದ್ದಂಗೆ ರೈತರು ಜಮೀನಿಗೆ ಹೊಡ್ಕೊಂಡಿದ್ದಾರೆ ಅಂತಾ ಬರ್‍ದಾಕು.

ಸೆಕ್ರೆಟರಿ : ಇದ ಹೆಂಗೋ ________ ಇಲ್ಲಿ ಕೆಲ್ಸಾನೇ ನಡೆದಿಲ್ಲ. ಇದು ವಂಚನೆ ಕಾಮಗಾರಿ ಅಂತಾವ, ಕುಂದು ಕೊರತೆ ನಿವಾರಣಾ ಸಮಿತಿಗೂ ದೂರು ಕೊಟ್ಟವಂತೆ.

ಸಿಂಗ್ರಿಗೌಡ : ನಾನಿದ್ದೀನಲ್ಲ ಬುಡೋ ಸೆಕೆಟ್ರಿ ..... ಹೆಂಗೋ ನಿಬಾಯ್ಸಾನ .....

## ದೃಶ್ಯ–4

**(ಗ್ರಾಮ ಪಂಚಾಯಿತಿ ಕಛೇರಿ. ಇಒ ಪ್ರವೇಶ. ಗೌಡ, ಸೆಕ್ರೆಟರಿ ಇರತ್ತಾರೆ.)**

ಹಾಡು : *ಸೂಟು ಬೂಟಿನವರು ಮಳೆರಾಜ // ಅವರು*
*ಬಂದಾರು ನೋಡೋ ಮಳೆರಾಜ //*
*ಪರಿಶೀಲನೆ ಮಾಡಾರು ಮಳೆರಾಜ //*
*ಅದರ ವೈಖರಿಯ ಕಾಣಯ್ಯ ಮಳೆರಾಜ //*

ಸಿಂಗ್ರಿಗೌಡ : ನಂಸ್ಕಾರನಾ . . . . ಬನ್ನಿನಾ . . . . ಬನ್ನಿನಾ

ಇಒ : ಏನ್ ಸಿಂಗ್ರಿಗೌಡ್ರೇ ಚೆನ್ನಾಗಿದ್ದೀರಾ ?

ಸಿಂಗ್ರಿಗೌಡ : ನಿಮ್ ದಯದಿಂದ ಇಂಗಿವ್ನಿನಾ . . . ಕುಂತ್ಕೊಳಿನಾ . . . ಲೋ ಅದ್ಯಾರೋ . . . ಪ್ಯಾನ್ ಆಕುರ್ಲ . . . ಕರೆಂಟ್ ಇಲ್ವಾ
(ಅಲ್ಲಿರುವ ಪೇಪರ್‌ನಿಂದಲೇ ಗಾಳಿ ಬೀಸುವನು)

ಇಒ : ಅಧ್ಯಕ್ಷರೆಲ್ರೀ ಸೆಕ್ರೆಟರಿ ?

ಸೆಕ್ರೆಟರಿ : ಅವರಿಗುಸಾರಿಲ್ಲಾ ಸಾ.

ಇಒ : ಮಕ ನೋಡಾನಾಂದ್ರೂ ಸಿಗೋದಿಲ್ವಪ್ಪ. ಯಾವಾಗ ಕೇಳಿದ್ರೂ 'ಉಸಾರಿಲ್ಲಾ' ಅಂತೀರಿ.

ಸೆಕ್ರೆಟರಿ : ಅವರಂತೇಯಾನಾ . . . . ತಗಳಿನಾ . . . . ಕೆಂದೆಳ್ನೀರು ಗೌಡ್ರು ತೋಟದ್ದು . . . . ಹದವಾಗದೆ . . . . ನೀವು ಬತ್ತೀರಿ ಅಂತ ಅವ್ರೇ ನಿಂತು ಕೆಡ್ಸವ್ರಾ.

ಇಒ : (ಎಳನೀರು ಕುಡಿಯುತ್ತಾ) ಎಳ್ನೀರು ಇರ್ಲೀರಿ . . . . ಎಲ್ಲದೆ ಕೆರೆ ?

ಸಿಂಗ್ರಿಗೌಡ : ಅಲ್ಲೇ ಅದೇನಾ. ನಿಧಾನವಾಗಿ ಕುಡೀರಿ.

ಇಒ : (ಕುಡಿಯುತ್ತಾ) ಕುಡಿಯೋದು, ಗಿಡಿಯೋದು ಎಲ್ಲಾ ಆಮೇಲೆ . . . . ಮೊದ್ಲು ಸ್ಪಾಟ್ ಇನ್ಸ್‌ಪೆಕ್ಷನ್ ಆಗ್ಬೇಕು.

ಸಿಂಗ್ರೀಗೌಡ : ಮಾಡಿವ್ರಂತೆ . . . . ಅದ್ಕೇ ಅಂತಾನೇ ಬಂದಿದ್ದೀರಿ . . . .

ಇಒ : ನನ್ಗೆ ಡ್ಯೂಟಿ ಮುಖ್ಯ . . . . ಏನೇಳಿ. ಡ್ಯುಟಿ, ಕಾಯಕವೇ ಕೈಲಾಸ ಅಂತ ನಂಬಿರೋನು . . . . ಏನೇಳಿ ?

ಸಿಂಗ್ರಿಗೌಡ : ಅದೇನಾ . . . . ಕಾಯಕವೇ ಕೈಲಾಸ . . . .

ಇಒ : ಹಾಂ . . . . ಸ್ಪಾಟು

ಸಿಂಗ್ರಿಗೌಡ : ತೋರುಸ್ತೀನಾ . . . . ಊಟದ ಸಮಯ . . . .

ಇಒ : ಸ್ಪಾಟು

ಸಿಂಗ್ರಿಗೌಡ : ಹೋಗಾನೇನ . . . . ಕಾಯಕವೇ ಕೈಲಾಸ ಅಲ್ವೇನಾ . . . . ದಾರೀಲೇ ತೋಟದ ಮನೆ ಅದೇನಾ . . . . ಊಟ ಮುಗಸ್ಕೊಂಡು ಸ್ಪಾಟಿಗೋಗನಾ . . . . ಸೆಕೆಟ್ರಿ ಗೊಂಬೆಯಂಗೆ ನಿಂತ್ಬುಟ್ಟಲ್ಲಾ ಸ್ವಾಮಿಯೋರ್ಗೆ ಎಲ್ಲಾನು ತೋರ್‍ಸು.

ಸೆಕ್ರೆಟರಿ : ಫೋಟೋ ತೆಗೆಸಿ ಜಾಬ್‌ಕಾರ್ಡ್ ವಿತರಿಸಿದ ದಾಖಲಾತಿ ಇದು. ಅರವತ್ತಾರು ಜನ ಉದ್ಯೋಗಕ್ಕೆ ಬಂದಿದ್ದಕ್ಕೆ ಎನ್‌ಎಂಆರ್, ಗ್ರಾಮಸಭೆಯ ತೀರ್ಮಾನದ ದಾಖಲಾತಿ ಇದು, ಅಂದಾಜು ವೆಚ್ಚದ ಎಸ್ಟಿಮೇಟ್ ಕಾಪಿ ಇದು, ಆಡಳಿತ ಮಂಜೂರಾತಿ ಪಡೆದಿದ್ದಕ್ಕೆ ದಾಖಲೆ ಪತ್ರವಿದು. ಸದರಿ ಕಾಮಗಾರಿಯ ಗುಣಮಟ್ಟವನ್ನು ಸಾಮಾಜಿಕ ಲೆಕ್ಕಪರಿಶೋಧನಾ ಸಮಿತಿ ಪರೀಕ್ಷಿಸಿ ನೀಡಿದ ಪತ್ರ ಇದು. ಜಾಗೃತ ಸಮಿತಿಯು ತನ್ನ ಕರ್ತವ್ಯವನ್ನು ಶ್ರದ್ಧೆಯಿಂದ ನಿರ್ವಹಿಸಿದ್ದು ಸದರಿ ಕಾಮಗಾರಿಯು ಪೂರ್ಣಗೊಂಡಿದ್ದು, ಅದರ ಸಂಪೂರ್ಣ ಹಣವು ಬಿಡುಗಡೆ ಹಾಗೂ ಪಾವತಿಯಾಗಿದೆ.

ಇಒ : ರೀ ಸೆಕ್ರೆಟರಿ ಈ ಕೆಲ್ಸಕ್ಕೆ ಬರೋಕೆ ಮುಂಚೆ ಏನಾಗಿದ್ರಿ . . . .

ಸೆಕ್ರೆಟರಿ : ಯಾಕ್ಸಾ . . . . ?

ಇಒ : ಪುರೋಹಿತರಾಗಿದ್ರಾ ಅಂತಾ ? ಪುರೋಹಿತರು ಮಂತ್ರ ಹೇಳ್ದಂಗೆ ಹೇಳ್ತಿದ್ದೀರಲ್ಲಾ ಅದಕ್ಕೆ.

ಸಿಂಗ್ರಿಗೌಡ : ಇನ್ನೇನಾ . . . . ಎಲ್ಲಾ ಆಯ್ತಲ್ಲನಾ . . . .

ಇಒ : ಸ್ಪಾಟು

ಸಿಂಗ್ರಿಗೌಡ : ನೋಡಿವ್ರಂತೆ . . ಎಲ್ಲಾ ಆಗ್ಲಿನಾ . . ತಮ್ಮಂಥ ದೊಡ್ಡೋರು ಊಟ ಆದ್ಮೇಲೆ ಆಫೀಸ್‌ಗೆ ಬರೋದು. ಅಂದ್ರೆ ಅದೇನ್ ಮರ್ಯಾದೆ ಮಾಡ್ಬೇಕರೋ ಮಾಡಾನಂತೆ.

| | | |
|---|---|---|
| ಇಒ | : | ಅಲ್ಲಾ ಗೌಡ್ರೆ ಸ್ಪಾಟು |
| ಸಿಂಗ್ರಿಗೌಡ | : | ಅದಲ್ಲೇ ಅದೆನಾ . . . . ಅದೇನ್ ಬರ್ದು ಸೈನ್ ಆಕ್ಬುಡಿನಾ . . . . |
| ಇಒ | : | ಅದ್ಹೇಗಾಗುತ್ತೆ ಗೌಡ್ರೆ . . . . ಸ್ಪಾಟು ? |
| ಸಿಂಗ್ರಿಗೌಡ | : | ಪಾಪ ಸೆಕೆಟ್ರಿ ಮಕ್ಕಳೊಂದಿಗೆ ಬೀದಿಗೆ ಬತ್ತನೆ. |
| ಇಒ | : | ಸ್ಪಾಟ್ ಇನ್‌ಸ್ಪೆಕ್ಷನ್ ಮಾಡ್ದೇ (ಎನ್ನುತ್ತಿರುವಾಗ್ಲೇ ಸಿಂಗ್ರಿಗೌಡ ಫೈಲ್‌ನ್ನು ಮುಂದೆ ಇಡ್ತಾನೆ. ಬರೆದು ಸಹಿ ಹಾಕುತ್ತಿರುವಾಗ) |
| ಸಿಂಗ್ರಿಗೌಡ | : | ಮಾಡಿವ್ರಂತೆನಾ . . . . ಅದೆಲ್ಗೆ ಹೋದಾತ್ತು ? |

## ನಾಟಕದ ಕೊನೆಯ ಹಾಡು

*ಕೋಲು ಮಲ್ಲಿಗೆ ಕೋಲೇ ಕೋಲು ಸಂಪಿಗೆ ಕೋಲೆ*
*ಮಳೆ ಹೋಯ್ತು ಅಂತ ಮಳೆರಾಯ್ನ ಬಯ್ಯದಿರೆ*
*ಸೂರ್ಯ ಸರುಪಾನ ಮೇಲೆ ಹತ್ತಿಕೊಂಡು*
*ಸಾಲಕ್ಹೋಗವನೆ ಮಳೆರಾಯ*

*ಬೆಟ್ಟಿಲ್ಲ ಗುಡ್ಡಿಲ್ಲ ಕಾಡಿಲ್ಲ ಗೀಡಿಲ್ಲ*
*ಸಾಲ ಹೆಂಗೆ ಕೊಡಲೋ ಮಳೆರಾಯ । ನೀನು*
*ಮರ ತೋರಿಸಿ ಬಾರೋ ಮಳೆರಾಯ*
*ಮರವನ್ನ ಬೇಳ್ತೀವಿ ಗುಡ್ಡನ್ನ ಉಳ್ತೀವಿ*
*ದಮ್ಮಯ್ಯ ಹುಯ್ಯೋ ಮಳೆರಾಯ । ನೀರಿಲ್ಲದೆ*
*ಮೂಕ ಬಸವ ಬಸವಳಿದದೆ ಮಳೆರಾಯ*

*ಅಂಬಾರದಲ್ಲಿ ತುಂಬ್ಯಾಡೋ ಮಳೆರಾಯ*
*ತೊಂಬೆ ಹಟ್ಟಡದ ದೊರೆಮಗನೆ । ನೀನಿಲ್ಲದೆ*
*ರಂಜಿ ಹಾಕಿದ ಪೈರು ಒಣಗ್ಹೋದೊ*
*ಗುಡು ಗುಡು ಗುಡುಗೀದ ಗುಬ್ಬೀಲಿ ಮಿಂಚಿದ*
*ಹೆಬ್ಬೂರಿನ ಮ್ಯಾಲೆ ಮಳೆ ಬಿದ್ದೊ । ನಂಜನಗೂಡ*
*ಹೆದ್ದೇರಿನ ಮೇಲೆ ಹನಿಬಿದ್ಹೋ*

*ಮೂಡಲಾಗಿ ಹುಯ್ಯೋದು ಮುತ್ತಿನ ಸ್ವಾತಿ ಮಳೆ*
*ಕಗ್ಗಲ್ಲ ನನ್ನ ತವರಿಗೆ । ಹೋಗಯ್ಯ*
*ಜಗ್ಗಿಸಿ ಹುಯ್ಯೋ ಮಳೆರಾಯ*

*ಮಳೆರಾಯ ಹುಯ್ಯಲಿ ಕೆರೆರಾಯ ತುಂಬಲಿ*
*ಹನ್ನೆರಡು ಕೋಡಿ ಹರಿಯಾಲಿ । ನಮ್ಮೂರ*
*ಸಣ್ಣಕ್ಕಿ ಬೈಲು ಬೆಳೆಯಾಲಿ.*

* * *

# ಹಿಂಗಾಗ್ಬೇಕು ನಮ್ಮಲ್ಲಿ

– ಆಲೂರು ದೊಡ್ಡನಿಂಗಪ್ಪ
ರಂಗಾಯಣ, ಮೈಸೂರು

## ಪಾತ್ರಗಳು

| | | | |
|---|---|---|---|
| ತಮಟೆಯವನು | ಲಕ್ಷ್ಮಕ್ಕ | ಚಿಕ್ಕಮ್ಮ | ತಿಪ್ಪ |
| ಹುಚ್ಚ | ನೀಲಿ | ರಾಮಕ್ಕ | ಶಿವ |
| ರಂಗಮ್ಮ | ರಂಗ | ಕರಿಯಮ್ಮ | ಭೈರ |
| ಅಗಸನ ಹೆಂಡತಿ | ಕೃಷ್ಣ | ಮಡಿವಾಳಪ್ಪ | ಮಾಯಣ್ಣ |
| ಕುಂಬಾರ | ತಾಯಕ್ಕ | ಕಾರ್ಯದರ್ಶಿ | ಪ್ರಕಾಶ |
| ಊರ ಹಿರಿಯ | ಲೋಕೇಶ | ಭದ್ರಮ್ಮ | ಜನಗಳು |

## ದೃಶ್ಯ – 1

*(ಹಾಡು ಹಾಡುವರು)*

ಕಾದೋನ ಕುರಿ ನೋಡು
ಗೇದೋನ ಹೊಲ ನೋಡು
ಕಾದೋನ್ಗೆ ಸಂಬ್ಳ
ಗೇದೋನ್ಗೆ ಕೂಲಿ

*(ತಮಟೆಯವನ ಡಂಗೂರ)*

ತಮಟೆಯವನು : ಕೇಳ್ರಪ್ಪೋ ..... ಕೇಳ್ರಿ ..... ಕೇಳ್ರಪ್ಪೋ ..... ಕೇಳ್ರಿ ..... ಸಂಜೆಗೆ ಎಲ್ಲಾ ಮನೆಗೊಂದು ಆಳ್ನಂಗೆ ಪಂಚಾಯ್ತಿಗೆ ಸೇರ್ಬೇಕಂತೆ ..... ಕೂಲಿ ಇಲ್ದವ್ರಿಗೆ ವರ್ಷದಲ್ಲಿ ನೂರು ದಿನದ ಕೂಲಿ ಕೊಡ್ತಾರಂತೆ ..... ಸರ್ಕಾರದವ್ರು ಕೇಳ್ರಪ್ಪೋ ..... ಕೇಳ್ರಿ ..... ಕೇಳ್ರಪ್ಪೋ ..... ಕೇಳ್ರಿ ..... ಊರ ಪಂಚಾಯ್ತಿಗೆ ಸೇರ್ಲಿಲ್ಲ ಅಂದ್ರೆ ಊರಿಗೆ ದಂಡಕಟ್ಟಿಕೊಡ್ಬೇಕಾಗುತ್ತಂತೆ/ ಅವ್ನಿಗೆ ನಷ್ಟ ಆಗತ್ತಂತೆ ಕೇಳ್ರಪ್ಪೋ ..... ಕೇಳ್ರಿ .....

ಕೃಷ್ಣ : ದಂಡ . . . . ಹುಂ . . . . ನನ್ಗೆ. ನಾನ್ ದಂಡಾ ಕಟ್ಬಾದು ? ಎನ್ ತಪ್ಪ ಮಾಡೀನಪ್ಪ ? ಇರೋದು ಈ ಊರು, ಉಣ್ಣದ ಮುಂದ್ಲೂರಲ್ಲಿ. ದಂಡ ಹಾಕ್ಲಿ ನನ್ಗೆ, ಪಂಚೆ ಉದಿರಸ್ತೀನಿ ..... ದೇಶ ಕಟ್ಟೋ ಕನಸು, ಕೆಡವ್ಹೋರ ನಡುವೆ ಅವರವರ ದಾರಿ, ಅವರವರ ದಿಕ್ಕು, ಈ ನನ್ಮಕ್ಳುದೇನು ?

ರಂಗ : ಏನಮ್ಮಿ ಹಂಗೆ ಗೊಣಗಿಕೊಂಡು ಹೋಗ್ತಾನೆ . . . . ಆ ಕೃಷ್ಣ.

ಅಗಸನ ಹೆಂಡ್ತಿ : ಯಾರು ? ಅವ್ನಾ ಅವ್ನಿಗಿರೋ ಬುದ್ಧಿ ನಮ್ಮೂರ್ರೋರಿಗೆ ನಾಲ್ಕು ಜನಕ್ಕಿದ್ದಿದ್ರೆ ಸಾಕಾಗಿತ್ತು . . . . ಇಷ್ಟೊತ್ತಿಗೆ ಊರು ಉದ್ದಾರ ಆಗೋದು.

ಕುಂಬಾರನ ಹೆಂಡ್ತಿ : ಹೇ . . . . ಬಾರಮ್ಮಿ. ಊರೇಳಾಕು ಮೊದ್ಲೇ ಭಿಕ್ಷೆ ಕೇಳ್ತಾ ಪಂಚಾಯ್ತಿ ಬಾಗಲಲ್ಲಿ ಕೂತಿರ್ತಾನೆ. ಏನಂಗೊಗುಳ್ತಾ ಇದ್ದೀಯಾ ಭಿಕ್ಷೆ ಬೇಡಿಕೊಂಡು ತಿನ್ನೋ ಅವ್ನಿಗೆ ಇಂತದ್ದೆಲ್ಲಾ ಅರ್ಥವಾಗದಲೇ ಮತ್ತೆ ನನ್ಗೂ ನಿನ್ಗೂ ಅರ್ಥವಾಗುತ್ತಾ. *(ಕೃಷ್ಣನ ಕಡೆ ಕೈ ತೋರುಸ್ತಾ)* ಒಳಗೊಳಗೆ ಖುಷಿ ನನ್ಮಗಂಗೆ.

ಕುಂಬಾರ : ಅಲ್ಲಾ ಕಣೇ . . . . ನಾವು ಅಲ್ಲಿಗ್ಯಾಕೆ ಹೋಗ್ಬೇಕೂಂತಾ ? ಕೆಲಸ ಇಲ್ವು ಊರ್ ಚಾವ್ಡಿಗೆ ಸೇರಿದ್ರೆ ಮಿಕ್ಕವ್ರಿಗೆ ಅಲ್ಲೇನ್ ಕೆಲ್ಸ ? ಇವುರ್ದ್ದೊಳ್ಗೇ ಕತೆಯಾಯ್ತು. ಯಾವುದಾದರೂ ನ್ಯಾಯ ಪಾಯ ಇದ್ಯಾ ? ಇತ್ತೀಚೆಗೆ ಅಷ್ಟೇನು ಜನ ಸೇರ್ತಾ ಇಲ್ಲಾ ಅಲ್ವಾ ?

| | | |
|---|---|---|
| ಅಗಸನ ಹೆಂಡ್ತಿ | : | ಹು . . . . ಐತಂತೆ ನ್ಯಾಯ; ನೀವು ಕೊಟ್ಟ ಮಡ್ಕೆ ತೂತಾಗ್ಯೆತಂತೆ. ಹೇ . . . . ನಿನ್ಗೆ ಹೊರ್ಗಡೆ ಸದ್ದೇ ಕೇಳಲ್ಲ ಮಡ್ಕೆ ತಟ್ಟೋ ಸದ್ದು ಬಿಟ್ರೆ . . . . ಆಚೆ ಹೋಗ್ನೋಡು ಎಂತೆಂಥ ನಾಜೂಕಾದ ಸಾಮಾನುಗಳು ಬಂದವೆ, ನಿನ್ನೋಡಿದ್ರೆ ಇನ್ನೂ ಮಣ್ ತಕ್ಕಂಡು ತಟ್ತಾ ಇಲ್ಲೇ ಕೂತಿದ್ದೀಯ. |
| ಕುಂಬಾರನ ಹೆಂಡ್ತಿ | : | ಅದೇನೋ ಅಂತಾರಲ್ಲ ಅಂಗೆ. ಯಾರ್ ಬತ್ತಾರೋ ಬರಲ್ವೋ ಅದನ್ ತಕ್ಕಂಡು ನನ್ಗೂ ನಿನ್ಗೂ ಏನು ? ಒಬ್ರ ಬಾಯಿಗ್‌ಬರ್ದಂಗೆ ಹೋದ್ರಾಯ್ತು. ಹೇ . . . . ತಗಾ ನೀನು . . . . ಅದೇನೋ ವರ್ಷಕ್ಕೆ ನೂರು ದಿನ ಕೂಲಿ ಕೊಡ್ತೀವಂತಾ ಸಾರ್‍ಕಾಂಡು ಹೋಗ್ಲಿಲ್ವಾ . . . . ಅಲ್ಲಾ ಕಣ್ ಕಾಣಲ್ಲಾ ಅಂತಿದ್ದೇ ಇದೇನು ಕಿವಿನೂ ಕೇಳಲ್ವ ? ಅಯ್ಯೋ ಕರ್ಮವೇ ಎರಡೂ ಇಲ್ದವ್ನ್‌ನ ಕಟ್ಕೊಂಡಗಾಯ್ತು. |
| ಕುಂಬಾರ | : | ಎಲ್ಲಾ ಕೇಳತ್ತೆ, ಸರ್ಕಾರದ ಕೂಲಿ ಮಡ್ಕೆ ಮಾಡಾಕೂ ಕೊಡ್ತಾರಂತಾ ? |
| ಅಗಸನ ಹೆಂಡ್ತಿ | : | ನಮ್ಮ ಜೊತೇಲಿ ಬಟ್ಟೆ ಒಗ್ಯೋರ್‍ಗೂ ಕೊಡ್ತಾರಂತೆ . . . . ನೀನೊಳ್ಳೆ ಸುಮ್ಮಾನ್ನಾರ. ಅದೇನ್ ನಿಂದು ? ಅದು ಸರ್ಕಾರ್ದ್ ಯೋಜ್ನೆ, ಯಾವ್ಯಾವದಕ್ ಬರುತ್ತೆ ಅದ್ಕೆ ಕೊಟ್ಟೇ ಕೊಡ್ತಾರೆ. ಅದ್ಬೇರೆ ಕಣಿ ಕೇಳು. |
| ಕುಂಬಾರ | : | ಹೌದಾ ! |
| ಕುಂಬಾರನ ಹೆಂಡ್ತಿ | : | ಹುಂ . . . . ಕೊಡ್ತಾರೆ . . . . ಕೊಡ್ತಾರೆ . . . . ಸಂಜೆಗೆ ಪಂಚಾಯ್ತಿಗೆ ಹೋಗು . . . . ಸುಮ್ನೆ ವಟವಟ ಅನ್ಬೇಡ. |

## ದೃಶ್ಯ – 2

*(ರಂಗದ ಮೇಲೆ ಚಿಂದಿ ಬಟ್ಟೆಯನ್ನುಟ್ಟು ಕೈಯ್ಯಲೊಂದು ಕೋಲನ್ಹಿಡಿದು, ಒಂದು ಕಾಲಿಗೆ ಸಾಕ್ಸು ಮತ್ತೊಂದು ಕಾಲಿಗೆ ಚಿಂದಿ ಬಟ್ಟೆಯನ್ನು ಸುತ್ತಿಕೊಂಡ ಹುಚ್ಚನೊಬ್ಬನ ಪ್ರವೇಶ.)*

| | | |
|---|---|---|
| ಹುಚ್ಚ | : | ಸಮುದ್ರಾನೇ ಉರೀತಾ ಇದೆ. ಮೀನು, ಮೊಸ್ಳೆ ಮರ ಹತ್ತಾತ್ತಾ ಇದಾವೆ. ಬೆಂಕಿನ ಕೆಡಿಸಾಕೆ ಜನ ರಾಗಿ ಹುಲ್ಲು, ಬತ್ತದ ಹುಲ್ಲು ತಂದು ಹುಲ್ಲೆಲ್ಲಾ ಖಾಲಿ ಖಾಲಿ ಆಯ್ತು, ಯತ್ಲಾಗೆ ಒಡ್ಲಪ್ಪ ಮೈಯ್ಯ ? ಯತ್ಲಾಗ್ ಚಾಚ್ಲಪ್ಪ ಕೈಯ್ಯ . . . . ? |
| | | *(ಪಂಚಾಯ್ತಿ ಸಭೆ–ಹಳ್ಳಿಯಲ್ಲಿ)* |
| ಊರ ಹಿರಿಯ | : | ನಮ್ಮೂರಿಗೆ ಕೇಂದ್ರ ಸರ್ಕಾರದಿಂದ ಒಂದು ಯೋಜ್ನೆ ಬಂದಿದೆ. ಅದರೆಸರು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅಂತ. ಅದ್ರಾಗೆ ಮನೆಗೆ ಒಬ್ಬರಿಗೆ ವರ್ಷದಲ್ಲಿ ನೂರು ದಿನ ಕೂಲಿ ಖಾತರಿ ಐತೆ. ಅದನ್ನ ನೀವು ಪಡೀಬೇಕಂದ್ರೆ, ನೀವು ಗಾಮಸಭೆ ಹೋಗಿ ನಿಮ್ಮ ಫೋಟೋ ಕೊಟ್ಟು ಹೆಸ್ರು ಬರಸ್ಬೇಕು. ಅದಾದ 15 ದಿನದೊಳ್ಗೆ ನಿಮ್ಗೆ ಒಂದು ಜಾಬ್ ಕಾರ್ಡ್ ಕೊಡ್ತಾರೆ. ಅದನ್ನು ತೋರ್‍ಸಿದ್ರೆ ಈ ಯೋಜನೆಯೊಳ್ಗೆ ನಿಮ್ಗೆ ಕೆಲಸ ಕೊಡ್ತಾರೆ. ನಿಮ್ಮೆಸರಲ್ಲಿ ಬ್ಯಾಂಕ್ ಖಾತೆ ತೆಗಿಬೇಕು. ನೀವ್ ಮಾಡಿದ್ ಕೂಲಿ ಹಣ ಅದಕ್ಕೆ ತುಂಬ್ತಾರೆ ತಿಳೀತಾ. |
| ಲಕ್ಷ್ಮಕ್ಕ | : | ಎನ್ ಕೆಲ್ಸ ಕೊಡ್ತಾರೇಂತಾ . . . . ? |
| ನೀಲಿ | : | ಊಟ ಉಂಟೋ . . . . ಇಲ್ಲಾ ನಮ್ಮ ಈರಣ್ಣನ ಮನೆ ಕೆಲಸ್ದಂಗೋ ? |
| ರಂಗ | : | ಎಷ್ಟು ಕೂಲಿ ಕೊಡ್ತಾರೇಂತಾ . . . . ? |
| ಕೃಷ್ಣ | : | ವರ್ಷ ಪೂರಾ ಕೊಡ್ತಾರಂತಾ . . . . ? |
| ಊರ ಹಿರಿಯ | : | ವಾತಾವರಣ ನೋಡಿಕೊಂಡು ಕೊಡ್ತಾರೆ ಕಣ್ಲಾ . . . . ದಿನಕ್ಕೆ ನೂರು ರೂಪಾಯಿ ಕೊಡ್ತಾರೆ. ಇದೊಂದು ಒಳ್ಳೇ ಯೋಜ್ನೆ. ಸರಿಯಾಗ್ ಬಳಸ್ಕೊಳ್ಳಿ. ನೂರು ರೂಪಾಯಿ ಕೂಲಿ ಕೊಡ್ತಾ ಇರೋದು ಒಂದ್ಹೊತ್ತು / ಎರಡ್ಹೊತ್ತು ಊಟ ಮಾಡೋರು ಎರಡ್ಹೊತ್ತು / ಮೂರ್‍ಹೊತ್ತು ಊಟ ಮಾಡ್ಲಿ ಅಂತ. |
| ತಾಯಮ್ಮ | : | ಯಾವ ಪುಣ್ಯಾತ್ಮನಪ್ಪ, ಇಂಥ ಬರಗಾಲ ಸಿಡಿಲೊಡೆದಂತೆ ಹೊಡಿತಿರೋ ಹೊತ್ನಲ್ಲಿ ಜನಕ್ಕೊಂದು ತುತ್ತು ಅನ್ನ ಕೊಡಾಕ್ಕಂತ ಇಂತದೊಂದು ಯೋಜ್ನೆ ಮಾಡಾವ್ರಲ್ಲಾ, ಅವ್ರನ ದೇವ್ರು ತಣ್ಣಗೆ ಇಟ್ಟಿರ್‍ಲಿ. |

ಊರ ಹಿರಿಯ : ಏನೆಲ್ಲಾ ಕೆಲ್ಸ ಕೊಡ್ತಾರಪ್ಪಾಂದ್ರೆ . . . . ಗಿಡ ನೆಡಸ್ತಾರೆ, ಮಳೆ ನೀರು ಇಂಗ್ಸಕ್ಕೆ ಇಂಗು ಗುಂಡಿಗಳ ತೋಡಿಸ್ತಾರೆ. ಮಣ್ಣಿನ ರಸ್ತೆಗಳನ್ನು ಮಾಡಸ್ತಾರೆ. ಹಿಂಗೆ ಸಣ್ಣ ನೀರಾವರಿ ಕೆಲ್ಸಗಳ ಮಾಡಿಸ್ತಾರೆ. ಒಂದು ನೆನಪಿರ್ಲಿ ನಿಮ್ಗೆ . . . . 18 ವರ್ಷಕ್ಕೆ ಮೇಲ್ಪಟ್ಟ ಎಲ್ಲಾ ಗಂಡಸ್ರಾದ್ರೂ ಸರಿ ಹೆಂಗಸ್ರಾದ್ರೂ ಸರಿಯೇ ಎಲ್ರಿಗೂ ಸಮಾನ ಕೂಲಿ. ಒಟ್ಟು ನಮ್ಮ ಗ್ರಾಮಕ್ಕೆ ಬೇಕಾದಂತಹ ಸ್ಕೂಲು, ಮೈದಾನ, ಕೆರೆ, ಚರಂಡಿ, ಗೋಮಾಳ ಇಂಥವನ್ನು ಸ್ವಚ್ಛಮಾಡಾದು, ಕಟ್ಟಡ ಕಟ್ಟಾದು ಇನ್ನೂ ಏನೆಲ್ಲಾ ಕೆಲ್ಸಗಳು ಇದ್ರಲ್ಲಿ ಬತ್ತವೆ.

*(ಜನ ಗುಸು ಗುಸು ಮಾತನಾಡಿಕೊಳ್ಳುವರು)*

ಕೃಷ್ಣ : ಊರ ಜನ ಒಳ್ಳೆಯವರಾಗ್ಬೇಕು. ಸರ್ಕಾರಿ ಸಂಬಳ ತಕಳಾವ್ರು ನಾಳೆ ಊರಿಗೆ ಬಂದ್ರೆ ಊರಲ್ಲಿರೋ ದಲ್ಲಾಳಿಗಳು ಅವ್ರತ್ರ ಸುಳೀದಂಗ್ ನೋಡ್ಕಾಬೇಕು. ಬರೋ ಅಧಿಕಾರಿಗಳು ಸರ್ಯಾಗಿರ್ಬೇಕು ಅಂದ್ರೆ ಊರ್ಜನ ಒಟ್ಟಾಗ್ ಸೇರಿ ಆ ಕೆಲ್ಸ ಮಾಡ್ಬೇಕು.

ಊರ ಹಿರಿಯ : ಹೇ . . . . ಹೇ . . . . ಏನ್ಲಾ ನಿನ್ ಮಾತು. ಊರಿಗೆ ಮನುಷ್ಯಲ್ಲ ಮಸಾಣಕ್ಕೆ ಹೆಣಲ್ಲ . . . . ಮಾತು ಮಾತ್ರ ಊರ ಮನುಷ್ಯನ ತರಹ ಆಡ್ತಾನೆ.

*(ಜನ ಗುಸು ಗುಸು ಮಾತನಾಡಿಕೊಳ್ಳುವರು)*

ಭೈರ : ಇವ್ನೂ ಹೇಳಾದು ಸರೀನ್ಸುತ್ತೆ ಅಲ್ವಾ . . . .

ರಂಗ : ಅದು ಇಂಥಾದನ್ನೇ ಯೋಚ್ನೆ ಮಾಡೀ ಮಾಡೀ ಅದ್ರ ತಲೆ ಹಿಂಗಾಗಿ ಕೂತದೆ.

ಲೋಕೇಶ : ಏನೇ ಹೇಳು ಅವ್ನ ಮಾತು ಕಲ್ಲಿನಂಗಾದ್ರೂ ಮನಸು ಹೂವಿನಂಗೆ.

ಚಿಕ್ಕಮ್ಮ : ನಮ್ಮೂರ ಕೆಲ್ಸ ನಾವೇ ಮಾಡ್ಕಾಳಾಕು ಕೂಲಿ ಕೊಡದಾದ್ರೆ ಮಾಡಬೌದಪ್ಪ.

ರಂಗಮ್ಮ : ಸರಿ ಕಣಕ್ಕ . . . . ಆದ್ರೆ ನೂರು ರೂಪಾಯಿ ಕಮ್ಮಿ ಅನ್ಸಲ್ವಾ ?

ರಾಮಕ್ಕ : ಕೂಲಿಗಂತ ನಗರಕ್ಕೋದ್ರೆ ನೂರೈವತ್ತೋ ಇನ್ನೂರೋ ಕೊಟ್ರು ಕುಡ್ದು ತಿಂದು ಸೇದಿ ಮನಿಗೆ ಬರೋ ಹೊತ್ಗೆ ಚೆಡ್ಡಿ ಜೇಬಲ್ಲಿ 20 ರೂಪಾಯಿ ಇರ್ಲ್ನೇಳು ಮನೆ ಗಂಡಸ್ರತ್ರ. ಅದಕ್ಕಿಂತ ಕಡೆನಾ ಮನೆ ಮುಂದು ಕೊಡಾ ನೂರು ರೂಪಾಯಿ ಕೂಲಿ ?

ರಂಗಮ್ಮ : ನೀವೇಳಾದೂ ಸರಿ.

ಕರಿಯಮ್ಮ : ಹೂ ಕಣಕ್ಕ . . . . ದೂರದ ಬೆಟ್ಟ ನುಣ್ಗೆ ಅನ್ನಂಗೆ . . . .

ಚಿಕ್ಕಮ್ಮ : ಅದಲ್ದೇ ಹೆಂಗಸ್ರಿಗೂ ಒಂದೇ ಕೂಲಿಯಂತಲ್ಲಾ . . . . ಮಾಡ್ಬೌದೇಳು . . . .

ಕೃಷ್ಣ : ದಲ್ಲಾಳಿಗಳು ಗೆದ್ಲು ಇದ್ದಂಗೆ ಕಣ್ರಪ್ಪೋ . . . . ಎಂತೆಂಥಾ ಯೋಜ್ನೆನೆಲ್ಲಾ ನೆಕ್ಕಿ ನೀರ್ ಕುಡ್ದವೆ. ಈ ಯೋಜ್ನೇನೂ ಅದೇ ಕತೆನಾ ಅಂತೀನಿ.

ಊರ ಹಿರಿಯ : ಲೋ ಕೃಷ್ಣ ಬಾಯಲ್ಲಿ ಮಾತವೆ ಅಂತ ಯಂಗ್ಬೇಕಂಗೆ ಹರಿಬಿಡ್ಬೇಡ ಸ್ವಲ್ಪ ಸುಮ್ನಿರು. ಇದೇ ವಿಸ್ಯ ಹೇಳಾನಾಂತ ಪಂಚಾಯ್ತಿ ಕರ್ಸಿದ್ದು. ನನ್ಗೆ ತಿಳಿದಿರಾಷ್ಟು ನಿಮ್ಗೆ ತಿಳ್ಸಿದ್ದೀನಿ. ಇನ್ನು ಹೆಚ್ಚಿನ ವಿಷ್ಯ ಬೇಕಾದ್ರೆ ಗ್ರಾಮಸಭೆಗೋಗಿ ತಿಳ್ಕಳಿ.

## ದೃಶ್ಯ – 3

ಹುಚ್ಚ : ರಾಜ, ಗಾಣದ ಕುದುರೆ, ಸೈನಿಕರು, ಆನೆ, ನಗಾರಿ, ಈಟಿ, ಭರ್ಜಿ, ಕಾಡುಬೇಟೆ, ಓ ಹೋ ರಾಣಿ ರಾಣಿ ಹೊಡಬ್ಯಾಡ್ರೋ, ಹೊಡಿಬ್ಯಾಡ್ರೋ ರಾಕ್ಸಸ್ರು ಹುಟ್ತಾರೆ, ನೆಲಕ್ಕೆ ರಕ್ತ ಬೀಳಾದು ಬ್ಯಾಡ. ನೆಲದಗಲ ಬಟ್ಟೆ ಬರುತ್ತೆ. ಬೆಟ್ಟಕ್ಕೆ ಸುತ್ತಕ್ಕೆ ಸೀರೆ ಬರುತ್ತೆ . . . . ಹ್ಹಾ . . . . ಹ್ಹಾ . . . .

*(ಗ್ರಾಮ ಸಭೆ)*

ಮಡಿವಾಳಪ್ಪ : ನಮಸ್ಕಾರ ಸ್ವಾಮಿ *(ಕಾರ್ಯದರ್ಶಿಗಳಿಗೆ ನಮಸ್ಕರಿಸುವನು)*

| | | |
|---|---|---|
| ಕಾರ್ಯದರ್ಶಿ | : | ಏನು ಮಡಿವಾಳಪ್ಪ ಸಮಾಚಾರ . . . . ಚೆನ್ನಾಗಿದ್ದೀಯಾ ? |
| ಮಡಿವಾಳಪ್ಪ | : | ಏನೋ ನಿಮ್ಮ ಆಶೀರ್ವಾದ ಸ್ವಾಮಿ ಹಿಂಗಿದ್ದೀನಿ. ಅದೇ ಸ್ವಾಮಿ ನಮ್ಮ ಊರ ಯಜಮಾನ್ರು ಹೇಳಿದ್ರು ಅದೇನ್ ನೂರು ದಿನದ್ದು ಕೆಲ್ಸದ ಕಾರ್ಡು ಕೊಡ್ತಾರಂತೆ. |
| ಕಾರ್ಯದರ್ಶಿ | : | ಕೊಡ್ತಾರಪ್ಪೋ ಅದ್ಕೆಲ್ಲಾ ಒಂದು ಫಾರ್ಮ್ಯಾಟ್ ಇದೆ. ಅದನ್ನು ರೆಡಿ ಮಾಡ್ಬೇಕು. ಸ್ವಲ್ಪ ತಡ ಆಗುತ್ತೆ. ಎಲ್ಲಿ, ನಿನ್ನ ಫೋಟೋ ಕೊಡು ಮಡಿವಾಳಪ್ಪ. |
| ಮಡಿವಾಳಪ್ಪ | : | ತಂದಿದ್ದೀನಿ ಸ್ವಾಮಿ *(ಕಿಸೆಯಿಂದ ತೆಗೆದು ತೋರಿಸುವನು)* |
| ಕಾರ್ಯದರ್ಶಿ | : | ಓ . . . . ರೆಡಿಯಾಗೆ ಬಂದಿದ್ದೀಯೇನಪ್ಪ ? ಇಂಗಿರ್ಬೇಕು ಜನ. ಇಷ್ಟು ತಿಳ್ದಿದ್ರೆ ಸಾಕು. ನನಗೂ ಕೆಲ್ಸ ಕಮ್ಮಿ ಆಗುತ್ತೆ ಅಲ್ವಾ ? *(ಕಛೇರಿಯಲ್ಲಿದ್ದವರ ಕಡೆ ನೋಡುತ್ತಾ)* |
| ಮಡಿವಾಳಪ್ಪ | : | ಏನೋ ನೀವು ಬೇಗ ಕೊಟ್ರೆ ನಮ್ಮ ಹೊಟ್ಟೆಗಿಷ್ಟು ಅನ್ನವಾಗುತ್ತೆ. ನಾವುವೇ ಈ ಮನೆ ಮನೆ ಸುತ್ತಿ ಬಟ್ಟೆ ಒಗೆಯೋ ಕೆಲ್ಸ ಸಾಕ್‌ಸಾಕಾಗೋಗ್ಯೆತೆ. ಇದೊಂದ್ ಕೆಲ್ಸ್ ಆದ್ರೆ ವಸಿ ನೆಮ್ದಿ. |
| ಕಾರ್ಯದರ್ಶಿ | : | ನಾಡಿದ್ದು ಬಂದು ತಗೊಂಡೋಗಪ್ಪ ಮತ್ತೆ ಇದ್ರ ಜೊತೆಗೆ ನೀನೊಂದು ಬ್ಯಾಂಕ್ ಖಾತೆ ತೆಗೀಬೇಕು. ತಕ್ಷಣ ಅದನ್ ಮಾಡ್ಸು. |
| ಮಡಿವಾಳಪ್ಪ | : | ಇದು ಸರ್ಕಾರದ ದುಡ್ಡು ಕಣಪ್ಪ . . . . ನಿಮ್ಮ ಕೂಲಿ ಹಣ ನಿಮ್ಗೆ ಸೇರ್ಬೇಕು ಅನ್ನೋದು ಸರ್ಕಾರದ ಆದೇಶ ಇದ್ಕೇನು ದುಡ್ಡುಗಿಡ್ಡು ಏನೂ ಕಟ್ಟಂಗಿಲ್ಲ. ಈ ಯೋಜ್ನೆಗೆ ಅಂತಂದ್ರೆ ಅವ್ರೆ ಖುದ್ದಾಗಿ ನಿನ್ಗೆ ಖಾಗೆ ಮಾಡಿ ಕೊಡ್ತಾರೆ. ಹೋಗು ಇವತ್ತೇ ಮಾಡ್ಸು. |
| ಮಡಿವಾಳಪ್ಪ | : | ನಾಡಿದ್ದು ಬಂದು ಕಾಣ್ತೀನಿ ಸ್ವಾಮಿ . . . . *(ನಮಿಸಿ ಹೊರಡುವನು).* |

## ದೃಶ್ಯ – 4

*(ದಾರಿಯಲ್ಲಿ ಮಡಿವಾಳಪ್ಪನನ್ನು ಭದ್ರಮ್ಮ ಎದುರುಗೊಳ್ಳುವಳು)*

| | | |
|---|---|---|
| ಭದ್ರಮ್ಮ | : | *(ಸ್ವಗತ)* ಇರೋ ಒಂದೊಂದು ಮಕ್ಳು ದೇಶಾಂತರ ಹೋದ್ರೆ ಹೆತ್ತ ಕಳ್ಳು ಹೆಂಗೆ ತಡೆದಾವೇಳು . . . . ನಾವು ಹೆತ್ತೋರು ಹೆತ್ತೋರು ಯಾರ್‍ಯಾರ ಕೈಕಾಲ ಸಂದಿಗೆ ಬಿದ್ದು ಹೊಟ್ಟೆ ಹೊರೆಯದೇಳು ಈ ವಯಸ್ನಲ್ಲಿ . . . . ಈಗಿನ್ ಮಕ್ಳಗೆ ಅದೇನೂ ಬ್ಯಾಡ. |
| ಮಡಿವಾಳಪ್ಪ | : | ಏನು ಭದ್ರಮ್ಮ ಒಬ್ಬೊಬ್ಳೆ ಮಾತಾಡ್ಕೊಂಡು ಹೋಗ್ತಿದ್ದೀಯಾ ? ಎಲ್ಲೋಗಿದ್ದೆ ? |
| ಭದ್ರಮ್ಮ | : | ನಂಜೊತೆಗೆ ನಾನು ನನ್ನೊಟ್ಟೆ ಉರಿ ಮಾತಾಡ್ಕೊಂಡು ಹೋಗ್ತಿದ್ದೆ . . . . ಇಲ್ಲೇ ಮೇಗ್ಲೋರ್ಗೆ ಹೋಗಿದ್ದೆ ಕೆಲ್ಸಕ್ಕಂತ ನಾಳೆ ಬಾ ಅಂದ್ರು, ಮನೆಗೋಗ್ತಿದ್ದೀನ ಕಣಪ್ಪ. |
| ಮಡಿವಾಳಪ್ಪ | : | ಕೆಲ್ಸಕ್ಕೆ ಅಂತ ಊರೂರು ಯಾಕ್ ಸುತ್ತೀಯಾ ? ಯಾರೆಲ್ಲಾದ್ರೂ ಹೋಗ್ಲಿ ನೀನು ಗ್ರಾಮ ಪಂಚಾಯ್ತಿಗೆ ಎರಡು ಫೋಟೋ ತಗಂಡೋಗಿ ಕೊಟ್ಟು ಕೂಲಿ ಕಾರ್ಡ್ ಮಾಡ್ಸು, ಇದು ಸರ್ಕಾರದ್ ಯೋಜನೆ. ಅವರವರ ಕೂಲಿ ಅವರವರ ಅನ್ನ ಅವರವರ ಕೈಲೈತೆ. ಇಷ್ಟೊಂದ್ಯಾಕೆ ತಲೆ ಕೆಡಿಸಿಕೊಂಡಿದ್ದೀಯಾ ? ತಿನ್ನೋದೆರಡ್ ತುತ್ತನಕ್ಕೆ .... |
| ಭದ್ರಮ್ಮ | : | ಸರ್ಕಾರ ...... ! ನಮ್ಮಂತವ್ರಿಗೆ ಎಲ್ಲಿ ಕೊಟ್ಟರೇಳು ಸುತ್ಸಿ ಸುತ್ಸಿ ಸಾಯಸ್ತಾರೆ. ಇರೋರೆಲ್ಲಾ ತಿಂದ್ಹಾಕ್ತಾರೆ. ಸರ್ಕಾರ್ದ್ ಯೋಜ್ನೆ ಅನ್ನಾದು ಮರದ್ ಮೇಗಲ ಹಲಸನಣ್ಣಂಗೆ ಊರ್ ತುಂಬಾ ಗಂ ಅನ್ನತ್ತೆ ಆದ್ರೆ . ... (ಆಗ ತಿಪ್ಪನು ಸಿಗರೇಟು ಹಚ್ಚಿಕೊಂಡು ಆ ದಾರಿಯಲ್ಲಿ ಬಂದವರು ಭದ್ರಮ್ಮನ ಮಾತು ಕೇಳಿ) |
| ತಿಪ್ಪ | : | ಭದ್ರಕ್ಕ ...... ನೀನು ಒಂಚೂರು ಸರ್ಕಾರದ ಯೋಜನೆಗಳ ಜಾಡು ಹಿಡಿದೆ ನೋಡು. ಅದ್ಕೆ ನಾನೇಳೋದು ಕೋಶ ಓದದಿದ್ದರೂ ನಾಲ್ಕಾರು ಬೀದಿ ಸುತ್ತಬೇಕು. |
| ಮಡಿವಾಳಪ್ಪ | : | ಅಲ್ಲಾ ನೀನೇಳೋದಾದ್ರೂ ಏನೂಂತ . . . . ನೇರವಾಗಿ ಹೇಳೊ ಮಾರಾಯ, ಫೋಟೋ ಹೊಡೆಸಿ ಕೊಟ್ಟು ಬ್ಯಾಂಕ್ ಖಾತೆ ಮಾಡಿಸಾಕೆ ಬ್ಯಾಂಕು ಕಡೆ ಹೊರಟಿದ್ದೀನಿ. ನಾಳೆ ನಾಡಿದ್ದು ಬಂದು ನಿನ್ ಕೂಲಿ ಕಾರ್ಡ್ ತಕ ಅಂತಾ ಕಾರ್ಯದರ್ಶಿಗಳೇ ಹೇಳಿ ಕಳ್ಸವ್ರೆ. ನೀನದೇನೋ ಒಂಥರ ಮಾತಾಡ್ತಿದ್ದೀಯ. ನಾನಿದನ್ ಒಪ್ಪಲ್ಲ ಬುಡು. |

ತಿಪ್ಪ : ಕೊಡೋದೇನೋ ಕೊಟ್ಟಿದ್ದೀಯಾ . . . . ನಿನ್ನ ಕೈಗೆ ಮತ್ತೆ ಬಂದು ತಲ್ಪಬೇಕಲ್ಲಾ.

ಭದ್ರಮ್ಮ : ಅಂಗಂದ್ರೆ . . . . ಕುರ್ಡಿಕೈಲಲಿ ದೀಪ ಕೊಟ್ಟಂಗೆ ಆಗೈತೆ ಅಂತೀಯಾ ?

ತಿಪ್ಪ : ಅದೇ ಮತ್ತೆ ನಾನೇಳ್ಕೊರ್ಟದ್ದು. ಸರ್ಕಾರ ಕೊಡೋ ದುಡ್ಡು ಅಂದ್ರೆ ಕನ್ನಡಿಯೊಳಗಿನ ಗಂಟಿದ್ದಂಗೆ.

ಮಡಿವಾಳಪ್ಪ : ಅಯ್ಯಯ್ಯೋ ಆಲ್ ನೋಡ್ರಪ್ಪೋ, ನಮ್ಮೂರಿನ್ ಜನನ ಲಾರಿಲಿ ಕುರಿ ತುಂಬ್ಕೊಂಡೋಗೋಥರ ಹೋಗ್ತಾರಲ್ಲಾಪ್ಪೋ ಕೆಲ್ಸಕ್ಕೆ. ಈ ನನ್ಮಗ್ನವು ಹರ್ಷದ ಕೂಳಿಗೆ ಹೋಗಿ ವರ್ಷದ ಕೂಳು ಕಳ್ಕಂತವೆ. ಈ ಊರಲ್ಲಿ ಹುಡ್ಕಿದೆ ಜನ ಇರ್ಲಿ, ಒಂದು ನೊಣವೂ ಇಲ್ಲ. ನಾನೊಬ್ಬ ಇಲ್ಲ ಅಂದ್ರೆ, ಹಗಲೊತ್ತಲೇ ದರೋಡೆ ಆಗೋದು ಈ ಊರು.

ಭೈರ : ದುಡ್ಡು ಮಾತಾಡ್ವಾಗ ದಿಟ ಮೂಕ್ವಾಗುತ್ತೆ. ಊರ್ಯಾರಿಗ್ಬೇಕು ? ಕೇರ್ಯಾರಿಗ್ಬೇಕು ?

*(ಹಾಡು ಹಾಡುವರು)*

ಕಾದೋನ ಕುರಿ ನೋಡು
ಗೇದೋನ ಹೊಲ ನೋಡು
ಕಾದೋನ್ಗೆ ಸಂಬ್ಳ
ಗೇದೋನ್ಗೆ ಕೂಲಿ

## ದೃಶ್ಯ – 5

ಹುಚ್ಚ : ನೋಟಿನ ಮಳೆ, ಪಂಜರದ ಗಿಳಿ, ರಾಕ್ಷಸರು, ಏಳು ಸಮುದ್ರದಾಚೆ ಕೆಳ ಸಮುದ್ರ, ಪಂಜರದ ಗಿಳಿ, ತೂಗು ಮಂಚ, ದೀಪ, ಮೈತುಂಬಾ ನಕ್ಷತ್ರ, ಚಂದ್ರ ಹದ್ದಾಗಿ ಕೂಕ್ತಾವೆ. ಹ್ಹಾ ... ಹ್ಹಾ ... ಹ್ಹಾ ... ರಕ್ತದ ಮಿಂಚು, ಮಳೆ ...

*(ಹಳ್ಳಿಯಲ್ಲಿ)*

ಮಡಿವಾಳಪ್ಪ : ಅಣ್ಣಾ ತಿಪ್ಪುನ ನೋಡುದ್ಯಾ ?

ಕುಂಬಾರ : ತಿಪ್ಪಾ . . . . ಅವ್ನೀಗ ನಮ್ಮೂರ್ಗೆ ತಹಶೀಲ್ದಾರ್ ಆಗ್ಯಾವನಪ್ಪೋ . . . . ಅವು ಬೇಕಾದ್ರೆ ಸಿಗ್ತಾರೆ, ಇವ್ನು ಸಿಗಲ್ಲ.

ಮಡಿವಾಳಪ್ಪ : ಅವ್ನಿಗ್ಯಾವನಾದ್ರೂ ತಲೆಕೆಟ್ಟವ್ನು ಹಿಡ್ಕಂಡು ತಲೆ ತಲೆ ಮೇಲೆ ಬಿಡ್ತಾನೆ.

ಭದ್ರಮ್ಮ : *(ಹಟ್ಟಿಗುಡಿಸುತ್ತಿದ್ದ ಪೊರಕೆ 'ರಪ್ಪನೆ' ನೆಲಕ್ಕೊಡೆದು)* ಯಾಕೆ ಮಡಿವಾಳಯ್ಯ ಅವನಿಗ್ಯಾಕೆ ಹೊಡಿತಾರೆ .... ? ಅವ್ನು ಯಾವಳ್ನಾರ ವತ್ಕಂಡೋಗವ್ನ ?

ಮಡಿವಾಳಪ್ಪ : ಯಾಕೊಡಿತಾರೆ ? ಎಂಥಾ ಸೋಜಿಗದ ಮಾತಾಡ್ತೀಯಾ ..... ಊರೊಳ್ಗೆ ಇದುವರ್ಗೂ ಕೂಲಿ ಕಾರ್ಡ್ ಕೊಡಸ್ತೀನಿ ಕೊಡಸ್ತೀನಿ ಅಂತಾ ಫೋಟೋ ಗೀಟೋ ಇಸ್ಕೊಂಡು ಹೋದವ್ನು ..... ಒಬ್ರಿಗಾದ್ರೂ ಕಾರ್ಡು ತಂದು ಕೊಟ್ಟವ್ನಾ ?

ಭದ್ರಮ್ಮ : ಕೂಲಿ ಕಾರ್ಡ್ ಅವನ್ಯಾಕ್ ತಂದ್ಕೊಡ್ತಾನೇಳು ..... ಅವಾಗಾವಾಗ ಇನ್ನೂರು ಮುನ್ನೂರು ದುಡ್ಡು ಕೊಡ್ತಾವ್ನೆ. ಅದೆಂತದೋ ಚೀಟಿಗೆ ಹೆಬ್ಬೆಟ್ಟು ಒತ್ತಿಸ್ಕೊಂಡು ..... ಅವನಿಗ್ಯಾಕೆ ಹೊಡಿತಾರೇಳು ?

*(ಆಗ ಕೃಷ್ಣ ಬರುವನು)*

ಕೃಷ್ಣ : ನಿನ್ಗೇನು ಗೊತ್ತು ಸುಮ್ನಿರಕ್ಕೋ. ಅವ್ನು ಕೊಡೋ ಚಿಲ್ರೆ ಕಾಸ್ಗೆ ಆಸೆ ಬಿದ್ದಿದ್ದೀಯಾ . . . . ನಿನ್ಗೆ ಸಿಗಬೇಕಾದ್ದು ವರ್ಷದಲ್ಲಿ ನೂರು ದಿನಕ್ಕೆ ಹತ್ತು ಸಾವಿರ ಕೂಲಿ. ನಿನ್ನಗೆ ಸಿಕ್ತಾ ಇರೋದು ಮುನ್ನೂರು. ಚೆನ್ನಾಗಿ ಹಾಕವ್ನೆ ಬಿಡು ಟೋಪಿ. ಅದ್ಕೆ, ಯಾರಾರ ಹೊಡಿತಾರೇ ಅಣ್ಣ ಹೇಳಿದ್ದು. ಮೊದ್ಲೋಗಿ ನಿನ್ನ್ ಕೂಲಿ ಕಾರ್ಡು ಇಸ್ಕೋ. *(ಎಂದು ಕೃಷ್ಣ ಮಾತನಾಡುತ್ತಾ ಹೊರಗೆ ಹೋಗುವನು)*

ಮಡಿವಾಳಪ್ಪ : ಇಂಥವ್ರಿಂದ ಆ ಮಾಯಣ್ಣನಂಥವ್ರಿಗೆ ಕೋಟಿ ಕೋಟಿ ದುಡ್ಡು ಕೈಯ್ಲಿ ಓಡಾಡೋ ಅಂಗಾಯ್ತು. ಕೆಲ್ಸಾನಾ ಜೆಸಿಬಿ, ಟ್ರಾಕ್ಟು ತಂದು ಮಾಡಿಸ್ತಾವ್ನೆ. ನೂರಾರು ಕೂಲಿ ಕಾರ್ಡು ಹೊತ್ಕೊಂಡು ಪೇಟ್ಪೇಟೆ ಸುತ್ತವ್ನೆ. ಅವ್ನಿಗೆ ಮಾನ ಮರ್ಯಾದೆ ಇದ್ಯಂತಾ ?

ಕುಂಬಾರ : ಆ ಮಾಯಣ್ಣ ಈ ತಿಪ್ಪನ ಅಕ್ಕನ ಮಗಾ ಅಲ್ವಾ . . . . ಬೇಲೀನೇ ಎದ್ದು ಹೊಲ ಮೇದ್ರೆ ಯಾರೇನು ಮಾಡ್ತಾರೇಳು ?

ಭದ್ರಮ್ಮ : ತಿಪ್ಪನ ಕೈಗೆ ಕಾರ್ಡು ಕೊಟ್ಟವ್ನು ನಾನೊಬ್ಳೇ ಏನಲ್ಲ. ಇಡೀ ಊರ್‍ಗೆ ಊರೇ ಕೊಟ್ಟದ್ದೇ ನಾನೊಬ್ಳೇ ಏನ್ ಪಾಪ ಮಾಡಿದ್ದೀನಿ ಅನ್ನೋಂಗೆ ಬೀದೀಲ್ನಿಂತು ಹೇಳ್ತಿದ್ದೀರಲ್ಲಾ. *(ಪಕ್ಕದ ಬೀದಿಯಲ್ಲಿ ಜನರ ಗಲಾಟೆಯ ಸದ್ದು ಕೇಳುವುದು. ಆ ಸದ್ದು ಗದ್ದಲ ಜೋರಾಗತೊಡಗುತ್ತಿದ್ದಂತೆ ಜನರು ಬಿಟ್ಟ ಕೆಲ್ಸ ಬಿಟ್ಟಂತೆ ಅತ್ತ ಓಡುವರು.)*

## ದೃಶ್ಯ – 6

ಹುಚ್ಚ : ಲೋಹದ ಹಕ್ಕಿಗಳು, ಆಕಾಶದೆತ್ತರದ ಕಟ್ಟಡಗಳು, ಕಾರು, ಕಾರು, ಕಾರು ಹ್ಹಾ . . . . ಹ್ಹಾ . . . . ಹ್ಹಾ . . . ಸತ್ಯ ಬೀದಿಗೆ ಬರುತ್ತದೆ. ಬಂದೇ ಬರುತ್ತೆ. ರಕ್ತಾ ರಕ್ತಾ. ಊರೆಲ್ಲಾ ರಕ್ತ.
*(ಬೀದಿಯಲ್ಲಿ ಕೃಷ್ಣ ಮತ್ತು ತಿಪ್ಪ ಹೊಡೆದಾಡುತ್ತಾ ಬಿದ್ದು ಹೊರಳಾಡುತ್ತಿರುವುದು ಕಾಣುವುದು. ಕೃಷ್ಣನು ತಿಪ್ಪನ ಕೊರಳಪಟ್ಟಿ ಹಿಡಿದು ಜಗ್ಗುತ್ತಾ ಹೊಡೆಯುತ್ತಿರುವನು.)*

ತಿಪ್ಪ : ಅಯ್ಯೋ ಸತ್ನಲ್ಲಪ್ಪೋ, ಅಯ್ಯೋ ಬಿಡಿಸ್ರಪ್ಪೋ, ಅಯ್ಯಯ್ಯೋ . . . . ಅಯ್ಯಪ್ಪಾ . . . .

ಕೃಷ್ಣ : ಬಡ್ಡಿಮಗ್ನೇ . . . . ಯಾರು ಬರ್‍ತಾರೋ ನಿನ್ ಬಿಡ್ಸಾಕೆ ನನ್ ಜಾಬ್ ಕಾರ್ಡ್ ಕೊಡೋ ಅಂದ್ರೆ ಚಿಲ್ರೆ ಕಾಸ್ ಕೊಡಾಗೆ ಬತ್ತೀಯಾ ?

ತಿಪ್ಪ : ಅಯ್ಯೋ ಅಮ್ಮಾ ಸತ್ನಲ್ಲಪ್ಪೋ . . . . ಯಾರಾದ್ರು ಬಿಡಿಸ್ರಪ್ಪೋ ನಿಮ್ ದಮ್ಮಯ್ಯ.
*(ಓಡಿ ಬಂದ ಜನರು ಅವರಿಬ್ಬರನ್ನು ಸುತ್ತುವರಿಯುವರು)*

ರಂಗ : ಏ ಯಾಕೋ ಅವ್ನಿಗೆ ಹೊಡಿತಿದ್ದೀಯಾ ? ಏನ್ ಆಯ್ತೊ ನಿಂಗೆ ಬಿಡೋ ಅವ್ನಾ.

ಕೃಷ್ಣ : ನನ್ ಜಾಬ್ ಕಾರ್ಡ್ ನನ್ಗೆ ಕೊಡು ಅಂದ್ರೆ ಚಿಲ್ರೆ ಕಾಸು ಕೊಡಾಕೆ ಬತ್ತಾವ್ನೆ. ಏನವ್ರಪ್ಪಂದಾ ಅದು. ನನ್ ಜಾಬ್‌ಕಾರ್ಡ್ ನನಗ್ಬೇಕು ಅಷ್ಟೆ. ಯಾರಿಂದ್ಲೂ ಮಾತ್ಬೇಕಿಲ್ಲ. ನನ್ ಜಾಬ್ ಕಾರ್ಡ್ ನನ್ಗೆ ಬೇಕಷ್ಟೆ.

ಶಿವ : ಅದನ್ ಕೇಳುದ್ರೆ ಕೊಡ್ತಿರ್ಲಿಲ್ವ ಅವನ್ಮೇಲೆ ಕೈ ಮಾಡಾದ ? ಇದೇನಾ ನಿನ್ನ ತಿಳ್ವಳ್ಕೆ ? ಏಳೋ ಮೇಲೆ.

ಕೃಷ್ಣ : ಹೊಟ್ಟೆ ತುಂಬಿರವ್ರು ನೀವು ಹೊಟ್ಟೆಗಿಲ್ಲದವ್ರ ಕಷ್ಟ ನಿಮ್ಗೆಂಗೆ ತಿಳಿತದೆ. ಬಂದ್ಬುಟ್ಟ ಮಧ್ಯಸ್ತಿಕೆ ವೈಸ್ಕೊಂಡು ಅವನ್ ಪರ ! ಇಷ್ಟಕ್ಕೂ ಇವ್ನ ಎಲ್ಲಿ ಬಿಡ್ತೇನಿ. ಇವ್ನಿಗೆ ಇನ್ನೂ ಕಾದೈತೆ ಗ್ರಾಚಾರ. *(ಎಲ್ಲರೂ ಸೇರಿ ಜಗಳ ಬಿಡುಸುವರು.)*

ಮಡಿವಾಳಪ್ಪ : ಇವತ್ತು ಸಿಕ್ಕಿದ್ರು ನೋಡು. ವಂಚಿಸಿ ಉಣ್ಣಾಕು ಒಂದು ಮಿತಿ ಬೇಡ್ವೇ ? ಕತ್ಲು ನೆಲ ಸೀಳ್ತಾ ಇದೆ. ಯಾವಾಗ್ ಬೆಳ್ಕಾಗುತ್ತೋ ?

ಗುಂಪು : *(ನಿರ್ಗಮಿಸುವಾಗ ಗುಜುಗುಜು ಮಾತು.)* ಕಾರ್ಡ್ನೆಲ್ಲಾ ಅವ ಇಟ್ಕಂಡವ್ನೆ. ಹೆಸ್ರಿಗೆ ನೂರು ದಿನ ಕೂಲಿ ಅನ್ನಾದು, ಕೇಳ್ದವ್ರಿಗೆ ಇಪ್ಪತ್ ಕೊಡಾದು ಸಾಗಾಕದು. ಕೃಷ್ಣ ಕೇಳ್ತದ್ರಲ್ಲಿ ತಪ್ಪೇನೈತೆ. ಎಲ್ಲಾ ಪಂಚಾಯ್ತೀಲಿ ತೀರ್ಮಾನ ಆಗ್ಬಿಡ್ಬೇಕು. ನಡೀರಿ, ನಡೀರಿ . . . . *(ಎಲ್ಲಾ ಹೋಗುವರು. ಬೀದಿಯಲ್ಲಿ ತಮಟೆಯ ಸದ್ದು.)*

ತಮಟೆಯವನು : ಕೇಳ್ರಪ್ಪೋ ಕೇಳ್ರಿ ಕಾರ್ಡ್ ಗಲಾಟೆಯ ಪಂಚಾಯ್ತಿ ಐತೆ. ಸಂಜೆ ಊರ್ ಮುಂದ್ಕೆ ಮನೆಗೊಂದಾಳ್ನಂಗೆ ಬಂದು ಸೇರ್‍ಬಿಡ್ಬೇಕು. ಕೇಳ್ರಪ್ಪೋ ಕೇಳ್ರಿ. ಢಂ ಢಂ ಢಂ.

## ದೃಶ್ಯ – 7

*(ಪಂಚಾಯಿತಿ ದೃಶ್ಯ)*

ಹಿರಿಯ : ರಾಷ್ಟೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜ್ನೆ ಹಳ್ಳಿಗಳಿಂದ ಗುಳೇ ಹೋಗೋದನ್ನ ತಪ್ಪಿಸ್ಲಿಕ್ಕಾಗಿ ಉದ್ಯೋಗ ಸೃಷ್ಟಿ ಮಾಡಿದ್ದು, ಕಾಡು ಕಡಿದು ಹಾಳಾದಲ್ಲಿ ಮತ್ತೆ ಕಾಡನ್ನು ಬೆಳ್ಸಿ ಮಣ್ಣಿನ ಸವಕಳಿ ತಪ್ಸೋದು ಮತ್ತೆ ಭೂಮಿಗೆ ಮಳೆ ಬೀಳಂಗೆ ಮಾಡೋದು. ಕೆರೆಗಳ ಹೂಳೆತ್ತಾದು. ಹೀಗೆ ಅನೇಕ ಕಾರ್ಯಕ್ರಮಗಳಿವೆ. ಈ ಯೋಜ್ನೆ ದುಡಿಯುವ ಜನರಿಗಾಗಿ ಮಾಡಿದ್ದು. ಇದ್ರಲ್ಲಿ ಒಂದು ರೀತಿ ಉದ್ಧಾರಾನು ಆಗುತ್ತೆ. ಇಂಥಾ ಯೋಜ್ನೆ ಬಾಯಿಂದ ಬಾಯ್ಗೆ ಹರಡುತ್ತಾ ಜನ್ರಿಗೆ ಗೊತ್ತಾಗ್ಬೇಕು.

ದುರಂತ ಅಂದ್ರೆ ಈ ಮಾಯಣ್ಣ, ತಿಪ್ಪೇಸಿಯಂತವು ನೋಡಿ ಜನರ ಕೂಲಿ ಕಾರ್ಡ್‌ನ್ನೆಲ್ಲಾ ಅಡ ಇಟ್ಕೊಂಡು ಕೂಲಿಗೂ ಕರೀದೇ ಹತ್ತೊ, ಇಪ್ಪತ್ತೋ ರೂಪಾಯಿ ಕೊಟ್ಟು ಮೋಸ ಮಾಡ್ತಾವ್ರೆ. ಇಂಗಾಗದ್ರಿಂದ ಯಾರ್ ಜೋಬ್ಗೆ ದುಡ್ಡೋಯ್ತು ? ನಿಜ ಹೇಳ್ಬೇಕಂದ್ರೆ ಯೋಜ್ನೆ ಫಲಾನುಭವಿಗಳು ತಿಪ್ಪ ಮತ್ತೆ ಮಾಯ ಇಬ್ರೆಯಾ.

ಭೈರ : ಬಡವರ್‍ಗಾಗಿ ಮಾಡಿದ ಯೋಜ್ನೆ ಇಂತ ಜನಗಳಿಂದ ಅವ್ರಿಗೆ ತಲುಪುತ್ತಿಲ್ಲ. ಸರ್ಕಾರಕ್ಕೆ ಅರ್ಜಿ ಬರ್‍ದು ಕೃಷ್ಣ ಒಳ್ಳೇ ಕೆಲ್ಸ ಮಾಡವ್ನೆ.

ಮಾಯಣ್ಣ : *(ಮೈತುಂಬಾ ಚಿನ್ನದ ಒಡವೆಗಳ ಹಾಕ್ಕೊಂಡು ಜನರ ಗುಂಪಿನ ಮುಂದೆ ಬಂದು ಎದೆ ಎತ್ತಿ ನಿಂತು . . . .)* ನಾವೇನ್ ತಪ್ಪು ಕೆಲ್ಸ ಮಾಡಿಲ್ಲ. ಕೆಲ್ಸ ಫಾಸ್ಟಾಗಾಗ್ಲಿ ಅಂತ ಅಂಗ್ ಮಾಡೀವಿ. ಅವ ಸರ್ಕಾರಕ್ಕೆ ಬರ್‍ದಿರ ಅರ್ಜೀನಾ ಮೊದ್ಲು ವಾಪಸ್ ತಕ್ಕಳ್ಳಿ. ನ್ಯಾಯಾನ ಇಲ್ಗೆ ಕ್ಲೋಜ್ ಮಾಡಿ.

ಪ್ರಕಾಶ : ನಿನ್ ಮೈಮ್ಯಾಗಲ ಚಿನ್ನ ನೋಡಿದ್ರೆ ಗೊತ್ತಾಗುತ್ತೆ, ನೀನು ಮಾಡೋ ಕೆಲ್ಸ ಬಾರಿ ಫಾಸ್ಟ್ ಅಂತ. ಮುಚ್ಕಂಡು ನೂರು ದಿನದ ಕೂಲಿ ಏನೈತೆ ಎಲ್ಲಾನು ಕಕ್ಕು. ಇಲ್ಲಾ ಅಂದ್ರೆ ಇಡೀ ಪಂಚಾಯ್ತೀನೇ ನಿನ್ನ ವಿರುದ್ಧ ನಿಂತು ಮೇಲಾಧಿಕಾರಿಗಳ ಹತ್ತಿರ ಹೋಗ್ಬೇಕಾಗುತ್ತೆ *(ಎಲ್ಲಾರು ಚಪ್ಪಾಳೆ ತಟ್ಟುವರು.)*

ಯಜಮಾನ : ಮಾಯಣ್ಣ ಜನ ತಿರ್‍ಗಿ ಬೀಳೋಕೆ ಮೊದ್ಲೇ ಅವರ್‍ವರ ಜಾಬ್‌ಕಾರ್ಡ್ ಅವರ್‍ವ್ರಿಗೆ ಕೊಟ್ಟು ಬಿಡಿ. ಅವ್ರವ್ರ ಕೂಲಿ ಅವ್ರು ಮಾಡ್ಕಳ್ಳಿ. ಇನ್ನು ಸರ್ಕಾರಕ್ಕೆ ಅರ್ಜಿ ಬರದವ್ರೆ ಅದೇನ್ ಆಗುತ್ತೋ ಆಗ್ಲಿ. ಆ ಕೆಲ್ಸಾನ ಸರ್ಕಾರ ನೋಡ್ಕೊಳುತ್ತೆ. ಅದಕ್ಕೂ ಪಂಚಾಯ್ತಿಗೂ ಸಂಬಂಧ ಇಲ್ಲ.

*(ಮಾಯಣ್ಣ ತಿಪ್ಪೇಶಿ ತಮ್ಮ ಚೀಲಗಳಲ್ಲಿ ತುಂಬಿಕೊಂಡು ಬಂದಿರುವ ಜಾಬ್‌ಕಾರ್ಡ್ ತೆಗೆಯಲೋಗಿ ಅವು ಹೆಚ್ಚಾಗಿದ್ದುದರಿಂದ ಕೈ ತಪ್ಪಿ ಕೆಳಗೆ ಬೀಳುವುವು. ಜನ ಅಷ್ಟೊಂದು ಕಾರ್ಡುಗಳನ್ನು ಕಂಡು ಹೌಹಾರುವರು)*

ಜನಗಳು : ಓಹೋ . . . . ಲೂಟಿನೇ ಮಾಡವ್ರಪ್ಪೋ . . . . ಡಕಾಯಿತ್ರು

ಕೃಷ್ಣ : ಜನಗಳತ್ರ ಕಾರ್ಡ್ ಕಿತ್ಕಾಳಕ್ಕೆ ಇವರಾಡಿದ್ದಾಟ್ವಿಲ್ಲ, ಕೊಡ್ದಿದ್ ಮಾತಿಲ್ಲ.

ಭೈರ : *(ತಿಪ್ಪನ ಕಡೆ ಕೈ ತೋರಿಸಿ)* ಚಿಟ್ಟಳ್ಳು ಸಿಡ್ದಂಗೆ ಸಿಡಿತಿದ್ದ. ಇವ್ನು ಯಾವತ್ತಾದ್ರೂ ಭೂಮಿ ಮ್ಯಾಲೆ ಕಾಲಲ್ಲಿ ನಡೀತಿದ್ನ. ತಲೇಲೆ ನಡೀತಿದ್ದ.

ಶಿವ : ಲೇ . . . . . ಲೇ . . . . . ಅವ್ನು ಯಂಗಾರ ನಡಿಲಿ ಅದನ್ ತಕ್ಕಂಡು ನನ್ಗೂ ನಿನ್ಗೂ ಏನಾಗ್ಬೇಕಾಗ್ಯತೆ. ಮೊದ್ಲು ನಮ್ ಕಾರ್ಡಿಸ್ಕೋ.

*(ತಲೆ ತಗ್ಗಿಸ್ಕೊಂಡು ಮಾಯಣ್ಣ ತಿಪ್ಪೇಶಿ ಜಾಬ್‌ಕಾರ್ಡ್‌ಗಳನ್ನು ಜನ್ರಿಗೆ ಕೊಡುವರು.)*

ಜನಗಳು : ಜನ ಪ್ರಶ್ನೆ ಮಾಡಕ್ ನಿಂತ್ಕಂಡ್ರೆ ಲೂಟಿಕೋರರಿಗೆ ಜಾಗೆಲ್ಯೆತ್ರಪ್ಪ. ಇಲ್ನೋಡಿ ತಲೆ ಎತ್ತಂಗಿಲ್ಲ. ಈ ಅಧಿಕಾರಿಗ್ಳು ಮತ್ತು ದಲ್ಲಾಳಿಗ್ಳು ಪೋಲಿ ದನಗ್ಳು ಹೊಲಕ್ಕೆ ಹೊಕ್ಕಂಗೆ. ಸಿಕ್ಕಿದ್ನೆಲ್ಲಾ ಮೇದ್ಬಿಡ್ತವೆ. ಆದ್ರೆ ನಮ್ ಬುದ್ಧಿ ನಮ್ ಕೈಲಿರ್ಬೇಕು. ಇಂಥ ಯೋಜ್ನೆಗಳು ಬಂದಾಗ ಊರ್‍ನವ್ರು ಒಗ್ಗಟ್ಟಿಂದ ಕೆಲ್ಸ ಮಾಡುಸ್ಕಾಬೇಕು. ಇದ್ರಲ್ಲಿ ನಮ್ದೂ ತಪ್ಪೈತೆ.

*(ಹಾಡು ಹಾಡುವರು)*

ಕಾದೋನ ಕುರಿ ನೋಡು
ಗೇದೋನ ಹೊಲ ನೋಡು
ಕಾದೋನ್ಗೆ ಸಂಬ್ಳ
ಗೇದೋನ್ಗೆ ಕೂಲಿ

* * *

# ಕಲ್ಯಾಣದ ಕನಸು

**– ಡಾ॥ ಟಿ.ಎಸ್. ವಿವೇಕಾನಂದ**

ಒಂದು ಹಳ್ಳಿ ಮುಂಭಾಗ. ದೂರದಲ್ಲಿ ಕೆಲವು ಗಂಡಸರು, ಹೆಂಗಸರು ದುಃಖಿತರಂತೆ ಕುಳಿತಿದ್ದಾರೆ. ಇವರಿಂದ ಸ್ವಲ್ಪ ದೂರದಲ್ಲಿ ವೀರಗಾಸೆ ತಂಡವೊಂದು ವೇಷ ಭೂಷಣಗಳ ಸಹಿತ ಕುಳಿತು ಪರಸ್ಪರ ಮಾತುಕತೆಯಲ್ಲಿ ತೊಡಗಿರುತ್ತದೆ.

ಇದರ ಎದುರು ಭಾಗದಲ್ಲಿ ಕೆಲವು ಮಂದಿ ಹೆಣ್ಣು ಮಕ್ಕಳು ನೆರೆದಿದ್ದಾರೆ. ಅವರಲ್ಲಿ ನಾಲ್ಕು ಮಂದಿ 'ಗಂಗಿಗೌರಿ ಗುಯ್' ಹಾಡು ಹೇಳುತ್ತಾ ಪರಸ್ಪರ ಕಾಲುಗಳನ್ನು ಲಾಕ್ ಮಾಡಿಕೊಂಡು, ಚಪ್ಪಾಳೆ ಹೊಡೆಯುತ್ತಾ ವೃತ್ತಾಕಾರವಾಗಿ ಸುತ್ತುತ್ತಿರುತ್ತಾರೆ. ಆ ಹೆಣ್ಣು ಮಕ್ಕಳು ಹಾಡುತ್ತಿರುವ ಹಾಡು ಸಮಸ್ಥಾಯಿಯಲ್ಲಿ ಕೇಳುತ್ತಿರುತ್ತದೆ ......

*ಗಂಗಿ ಗೌರಿ ಗುಯ್*
*ಗುಂಗಿಹುಳ ಗುಯ್*
*ಹಾರಿ ಬಂತು ಪಟಕ್*
*ತೂರಿಹೋಯ್ತು ಚುಟಕ್*
*ಅವ್ವ ನನ್ನ ಗಾಗರಿ*
*ನೋಡಿದ್ಯೇನ ಸೋದರಿ*
*ಬಸಂತರಾನಯ ಸೊಸೆಯೋ*
*ಗುಳಗಿ ಗವಳ ಬಸಿಯೋ*

ಹಾಡಿನ ಲಯಬದ್ಧವಾದ ಧ್ವನಿಗೆ ಅಲ್ಲಿದ್ದ ಕೆಲವರು ಅತ್ತ ಕಡೆಗೆ ಗಮನ ಹರಿಸುತ್ತಾರೆ. ಮಕ್ಕಳು ಈ ಯಾವುದರ ಪರಿವೆಯೂ ಇಲ್ಲದೆ ಹಾಡುತ್ತಾ . . . . ಸುತ್ತುತ್ತಿರುತ್ತಾರೆ. ವೀರಗಾಸೆ ತಂಡದಲ್ಲಿದ್ದ ಪ್ರಧಾನ ವೇಶಧಾರಿ ಗುಂಪಿನ ಹೊರ ಅಂಚಿನಲ್ಲಿ ಕುಳಿತು ಆರಂಭದಿಂದಲೂ ಆಸಕ್ತಿಯಿಂದ ಮಕ್ಕಳತ್ತ ನೋಡುತ್ತಿರುತ್ತಾನೆ.

ತಂಡದಲ್ಲಿ ಮಾತುಕತೆ ನಡೆದಿದೆ . . . .

ತಂಡದ ಒಬ್ಬ : ಏ . . . . ಈ ಊರೇನ್ ಸರಿಯಿಲ್ಲ ಬಿಡೋ !

ಇನ್ನೊಬ್ಬ : ಊರೇನ್ ಮಾಡ್ತೋ ನಿಂಗೆ ?

ಒಬ್ಬ : ಏ . . . . ಮಾಡೇತೇಳು ? ಜನಾ . . . . !

ಇನ್ನೊಬ್ಬ : ಜನ ಏನ್ ಮಾಡಿದ್ರೋ . . . . ?

ಒಬ್ಬ : ಏ . . . . ಜನ ಏನ್ ಮಾಡ್ಯಾರೇಳು ? ಕೊಡೋರಲ್ಲ . . . . !

ಇನ್ನೊಬ್ಬ : ಏನ್ ಕೊಡ್ಬೇಕಾಗಿತ್ತೋ ?

ಒಬ್ಬ : ಏ . . . . ಏನ್ ಕೊಡ್ತಾರೇಳು ? ದುಡ್ಡು . . . . !

ಇನ್ನೊಬ್ಬ : ದುಡ್ಡೇನ್ ಮಾಡ್ತೋ ನಿಂಗೆ ?

ಒಬ್ಬ : ಏ . . . . ದುಡ್ ಏನ್ ಮಾಡ್ಯಾತೇಳು ? ಬಡ್ತನ . . . . !

ಇನ್ನೊಬ್ಬ : ಬಡತನ ಏನ್ ಮಾಡ್ತೋ ನಿಂಗೆ ?

ಒಬ್ಬ : ಏ . . . . ಬಡತನ ಎನ್ ಮಾಡ್ಯಾತೇಳು ? ಇರಬೇಕಲ್ಲ . . . . !

ಇನ್ನೊಬ್ಬ : ಏನ್ ಇರಬೇಕಾಗಿತ್ತೋ ?

ಒಬ್ಬ : ಏ . . . . ಏನಿರ್ತದೇಳು ? ಕೆಲ್ಸ . . . . !

ಇನ್ನೊಬ್ಬ : ಯಾವ್ ಕೆಲ್ಸಾನೋ ?

ಒಬ್ಬ : ಏ . . . . ಯಾವ್ ಕೆಲ್ಸ ಇರ್ತದೇಳು ? ಕೂಲಿ, ನಾಲಿ . . . . !

ಮುಖ್ಯ ಪಾತ್ರಧಾರಿ : (ಕುಳಿತ ಭಂಗಿಯಲ್ಲೇ ತಪ್ಪು ತಿದ್ದುವವನಂತೆ) ಹಾಗೆಲ್ಲಾ ಆಡ್ಬಾರ್ದು, ನಾವು ಭಿಕ್ಷೆ–ದಕ್ಷಿಣೆಗೆ ಈ ಆಟ ಆಡೋಲ್ಲ. ಇದು ವೀರಭದ್ರನ ಆರಾಧಾನೆ ಅಂತಾ ತಿಳೀರಿ. ಅವ್ರಾಗೇ ಕರೆಸಿ 'ಆಡಿ' ಅಂದ್ರೆ ಆಡುವವರು ನಾವು, ತಿಳೀರಿ.

ಇನ್ನೊಬ್ಬ : (ಎದ್ದು ಇವನ ಮುಂದಕ್ಕೆ ಬರುತ್ತಾ) ನಾನೂ ಅಧೇ ಅರ್ಥದಾಗೇ ಹೇಳಿದ್ದು ಅಣ್ಣಾ . . . . ಆದ್ರೂ ಈ ಊರಿನಾಗೆ ಇರೋರೆಲ್ಲಾ ಜಿಪುಣ ಬಡ್ಡೀಮಕ್ಳು ಅಣ್ಣ ! ಮೊದಲೆಲ್ಲಾ ಅವ್ರೇ ಕರ್ಸಿ ಆಡುಸ್ತಿದ್ರುಲ್ಲಾ . . . . ! ಪುಣ್ಯ ವಶಾತ್ ನಾವೇ ಇಲ್ಗೆ ಬಂದಿದ್ದೀವಿ, ಆಡ್ಸಿದ್ರಾ ಎಲ್ರಿಗೂ ಸಂತೋಸ ಆಗಲ್ಲೇನು ?

ಒಬ್ಬ : (ಎದ್ದು ಮೊದಲು ಬಂದವನ ಜೊತೆ ಕೂಡುತ್ತಾ) ಏ . . . . ಎಲ್ಲೈತೇಳು ಕೋಡಾಕೆ. ಅದಕ್ಕೇ ಅವ್ರು ನಮ್ಮ ತಂಟೆಗೆ ಬರ್‍ತಿಲ್ಲ . . . . !

ಇನ್ನೊಬ್ಬ : ಯಾಕಿಲ್ಲಾ ಬಿಡು . . . . ? ಅಂಗ್ಯಾಕೆ ಮಾತಾಡೀರಿ ? ನೋಡಿದ್ರಲ್ಲಾ ಬ್ಯಾರೆ ಹಳ್ಳಿಗಳಲ್ಲಿ, ಹಿಂದಿನ ಸಲ ಹೋದಾಗ ಬರಿಗೈಲಿ ಇದ್ದೋರು, ಈಗ ಎಂಗೆ ದುಡ್ಡಾಡುಸ್ತಿದ್ದಾರೆ ! ಹಳ್ಳಿಗಳೆಲ್ಲಾ ಹೆಂಗೆ ಜಗಮಗಾ ಅಂತಾವೆ !!

ಒಬ್ಬ : ಏ . . . . ಅದೇ ಎಂಗೇ ಅಂತ ?

ಇನ್ನೊಬ್ಬ : ಅಂಗೇ . . . . ಅಂತಾ !! ಅಲ್ವಲಾ ದೇಶದ್ ತುಂಬಾ ಉದ್ಯೋಗ ಖಾತ್ರಿ ಯೋಜನೆ ಬಂದು ಬಡಬಗ್ಗರಿಗೆಲ್ಲಾ ಕೈತುಂಬಾ ಕೂಲಿ ನಾಲಿ ಸಿಕ್ಕೋವಾಗ್ ಈ ಬಡವರಿಗೇನ್ಲಾ ಧಾಡಿ ? ವರ್ಷಕ್ಕೆ ನೂರು ದಿನಾ ಅಂತೂ ಕೂಲಿ ಗ್ಯಾರಂಟಿ ಅಲ್ವೇನಪ್ಪಾ . . . . ? ಯಾವಾಗ ಬೇರೆ ಕೆಲ್ಸ ಇರಲ್ವೋ ಆವಾಗ ಈ ಕೂಲಿ ಮಾಡಿದ್ರಾಯ್ತು.

ಮುಖ್ಯ ಪಾತ್ರಧಾರಿ : ಹೌದಲ್ವೇನ್ಲಾ ? ಆದ್ರೂ ಯಾಕ್ ಈ ಹಳ್ಳಿ ಹಿಂಗೈತೆ ?

ಒಬ್ಬ : ಎಂಗೈತೆ . . . . ?

ಇನ್ನೊಬ್ಬ : ಸೋಂಭೇರಿ ಸಂತೆ ಇದ್ದಂಗೈತೆ !

ಒಬ್ಬ : ಏ . . . . ತಗಾ . . . . ಸುಮ್ ಸುಮ್ಮನೆ ಯಾಕೆ ಅಂದೀಯಾ ? ಅವ್ರಿಗೆ ಗೊತ್ತೋ ಇಲ್ವೋ ? ಯಾರಿಗ್ ಗೊತ್ತು?

ಇನ್ನೊಬ್ಬ : ಸರಿಯಾಗಂದೆ . . . . ನಿನ್ನ ಮುಸುಡಿ ಇದ್ದಂಗೆ. ಅಲ್ವಲಾ ಈ ಕಾಲ್ದಾಗೆ ಇಂಥಾ ಪ್ಲಾನ್ ತಿಳಿದೇ ಇರೋಂತ ಮಂದಿ ಇದ್ದಾರೇನ್ಲಾ ? ಅದೇನೋ ಹೇಳ್ತಾರಲ್ಲಾ . . . . 'ಜಗ ತೂಗೋರ್‍ಗೆ ಮಗಾ ತೂಗಾಕೆ ಬರಾಲ್ಲ' ಅಂತಾ, ಅಂಗಾತು.

ಒಬ್ಬ : ಏ . . . . ತಗಾ ಯಾರೇನಾನ ಮಾಡ್ಕಳ್ಳಿ. ನಮ್ಮ ಸ್ಥಿತಿ ಹೇಳು ?

ಇನ್ನೊಬ್ಬ : ನಿನ್ದೇನ್ಲಾ ಸ್ಥಿತಿ . . . . ? ನಿಂಗೇನಾಯ್ತು ?

ಒಬ್ಬ : ಏ . . . . ತಗಾ . . . . ಈ ಯೋಜನೆ ಗೊತ್ತಿರೋ ಹಳ್ಳಿಗೋದ್ರೆ ಜನ ಎಲ್ಲಾ ಕೂಲಿಗೋಗಿರ್‍ತಾರೆ, ನಮ್ಮ ಕರೆಸಿ ಆಟ ಆಡಿಸೋರಿಲ್ಲ. ಇಂಥ ಹಳ್ಳಿಗೆ ಬಂದ್ರೆ ಇವ್ರಿಗೆ ಯೋಜನೇನೇ ಗೊತ್ತಿಲ್ಲಾ ಅಂತಿದ್ದೀಯಾ ! ಇಲ್ಲಿ ಆಟಕ್ಕೆ ಕರೆಯೋರು ಇಲ್ಲ. ಇದನ್ನ ಏನಂತೀಯಾ ? ಜನಾನೇ ನಂಬಿಕೊಂಡು ಬದುಕೋ ನಮ್ಮ ಕಲೆಯ ಕತೆ ಏನು ಅಂತಾ ? ಕಲಿತ ವಿದ್ಯೇನಾ ಹತ್ತು ಜನ್ರ ಮುಂದೆ ತೋರಿಸಿದ್ರಾ ಎಲ್ರಿಗೂ ಸಂತೋಷ ಅಗೋಲ್ವಾ ?

ಇನ್ನೊಬ್ಬ : ಅರೆರೆರೆ . . . . ಏನ್ಲಾ ಮುಂದಾಲೋಚನೆ ನಿಂದು ? ವೀರಗಾಸೆ ಬದುಕುತ್ತಾ ಬಿಡ್ಲಾ . . . ., ನಿನ್ನಂಗೇ ಯೋಚ್ನೆ ಮಾಡಿದ್ರೆ ಅದು ಸಾಯೋಕಿಲ್ಲ ಬಿಡ್ಲಾ . . . . ?

ಮುಖ್ಯ ಪಾತ್ರಧಾರಿ : ನೀನು ಹೇಳೋದೇನೋ ಸರಿ, ಆದ್ರೆ ನಾವು ಭಗವಂತನ ಗೌರಿಸೋರು, ಜನರ ಕಷ್ಟ ಸುಖನು ಗೌರವಿಸ್ಬೇಕು ತಾನೇ ?!

ಎನ್ನುವಷ್ಟರಲ್ಲಿ ಮಕ್ಕಳು ವೇಗವಾಗಿ ಸುತ್ತುತ್ತಾ . . . . ಸುತ್ತುತ್ತಾ . . . . ಸುತ್ತುತ್ತಲೇ ಹಾಡು ತಾರಕ್ಕೇರಿ ಇಡೀ ವಾತಾವರಣದ ತುಂಬಾ ಅವರ ಧ್ವನಿಯೇ ಆವರಿಸಿಕೊಂಡು ಅಲ್ಲಿದ್ದವರೆಲ್ಲಾ ಅವರ ನೃತ್ಯದಲ್ಲಿ ಲೀನವಾಗಿ ನೋಡುತ್ತಿರುತ್ತಾರೆ.

ಆಗ ಹಾಗೆ ಸುತ್ತುತ್ತಿದ್ದ ಮಕ್ಕಳಲ್ಲಿ ಒಂದು ಹೆಣ್ಣು ಹುಡುಗಿ ದೊಪ್ಪನೆ ಬಿದ್ದು ಬಿಡುತ್ತದೆ. ಕಾಲುಗಳು ಪರಸ್ಪರ ಲಾಕ್ ಆಗಿದ್ದ ಕಾರಣ ಉಳಿದ ಹೆಣ್ಣು ಮಕ್ಕಳೂ ಒಬ್ಬರ ಹಿಂದೊಬ್ಬರು ಬೀಳುತ್ತಾರೆ.

ನೆರೆದಿದ್ದವರ ಕನಸಿನಿಂದ ಹೊರಕ್ಕೆಸೆದವರಂತೆ ಬೆಲ್ಲಿ ಎಚ್ಚೆತ್ತು ನೋಡುತ್ತಾರೆ. ನೋಡು ನೋಡುತ್ತಿದ್ದಂತೆ ಬಿದ್ದಿದ್ದ ಹೆಣ್ಣು ಮಕ್ಕಳು ಒಬ್ಬೊಬ್ಬರಾಗಿ ಮೇಲೇಳುತ್ತಾರೆ. ಆದರೆ ಮೊದಲು ಬಿದ್ದ ಹೆಣ್ಣು ಮಗು ಏಳದೇ ಹಾಗೆ ಬಿದ್ದುಕೊಂಡಿರುತ್ತದೆ.

ಮಕ್ಕಳು ಗಾಬರಿಯಿಂದ ಹಿಂಜರಿಯುವರು, ಎಲ್ಲರೂ ಮಗುವಿನ ಸುತ್ತ ಸುತ್ತಿಕೊಳ್ಳುವರು, ಅನ್ಯ ಮನಸ್ಕನಂತೆ ಕುಳಿತಿದ್ದ ವೀರಗಾಸೆ ಮುಖ್ಯ ಕಲಾವಿದ ಮುಂದಾಗಿ ಆರೈಕೆ ಮಾಡುವನು . . . . ಅಲ್ಲಿದ್ದ ಕೆಲವರು ಉಳಿದ ಮಕ್ಕಳಲ್ಲಿ ಏನಾಯಿತು ಎಂದು ಕೇಳುವರು. ಮಕ್ಕಳು ಒಬ್ಬೊಬ್ಬರಾಗಿ . . . .

ಗೊತ್ತಿಲ್ಲ !

ಇಲ್ಲೀವರ್ಗೂ ಚೆನ್ನಾಗೆ ಇದ್ಲು !

ಏನಾಯ್ತೋಪ್ಪಾ ?!

ಒಬ್ಬ ಹೆಂಗಸು : ಏ . . . . ನಾಟ್ಕ ಆಡ್ತಾಳೇಲು, ಅವಳ್ ಅಂಗೇಯಾ ? ಇತ್ಯಾದಿ ಉತ್ತರಿಸುವರು.

ಇನ್ನೊಬ್ಬ ಹೆಂಗಸು : ನಾಟ್ಕ ಯಾಕಾಡ್ತೇಳು ಆ ಮಗಾ . . . . !

ಮತ್ತೊಬ್ಬ ಹೆಂಗಸು : ಈ ಕಾಲ್ದವು ಮಾಯ್ಕಾರನಂಥಾ ಮಕ್ಳು. ನಾಟ್ಕಾನೂ ಆಡಾವೇ . . . . ! ಸಿನಿಮಾನೂ ಮಾಡಾವೇ !! ಅಷ್ಟರಲ್ಲಿ, ಕೊನೆಯಲ್ಲಿ ನಿಂತಿದ್ದ ಹುಡುಗಿ ಮೌನವಾಗಿ, ಬಿದ್ದಿದ್ದ ಹುಡುಗಿಯತ್ತ ಬರುವಳು. ಬಂದು ಬಿದ್ದವಳನ್ನೇ ನೋಡುತ್ತಾ ನಿಲ್ಲುವಳು. ಆರೈಕೆ ಮಾಡುತ್ತಿದ್ದ ವೀರಗಾಸೆಯವ ಆ ಹುಡುಗಿಯತ್ತ ಪ್ರಶ್ನಾರ್ಥಕವಾಗಿ ನೋಡುತ್ತಾ . . . . ಅವಳ ಕೈಹಿಡಿದುಕೊಂಡು ಏನಾಯ್ತಮ್ಮಾ . . . . ? ಎನ್ನುವನು.

ಹುಡುಗಿ ಒಂದು : ಅವ್ಳು ಮೂರು ದಿನದಿಂದ ಹೊಟ್ಗೇನೂ ತಿಂದಿಲ್ರೀ . . . . !!

ಮುಖ್ಯ ಪಾತ್ರಧಾರಿ : (ಚಕಿತನಾಗಿ ಆ ಹುಡುಗಿಯ ಮುಖ ನೋಡುತ್ತಾ) ಯಾಕವ್ವಾ . . . . ಅಪ್ಪ-ಅವ್ವನ ಮೇಲೆ ಏನಾರಾ ಮುನಿಸಕೊಂಡಿದ್ಲಾ ?

ಹುಡುಗಿ ಒಂದು : ಅಂಗೇನಿಲ್ಲಾ ತಗೊಳ್ರೀ . . . . ?

ವೀರಗಾಸೆ

ಗುಂಪಿನಲ್ಲಿನ ಒಬ್ಬ : ಏ . . . . ಇನ್ಯಾಕಂತಾ . . . . ? ಅವ್ರೇ ಏನಾದ್ರೂ ಇವ್ಳ ಮ್ಯಾಲೆ ಸಿಟ್ಟಾಗೌರಾ ?

ಹುಡುಗಿ ಎರಡು : (ಮುಂದೆ ಬರುತ್ತಾ) ಏ . . . . ಅಂಗೇನಿಲ್ಲಾ ತಗೊಳ್ರೀ . . . . ?

ಮುಖ್ಯ ಪಾತ್ರಧಾರಿ : (ಅಸಮಾನಧಾನದಿಂದೆಂಬಂತೆ) ಮತ್ತೆ ಇನ್ನೆಂಗೇ ಅಂತಾ . . . . ?

ಹುಡುಗಿ ಒಂದು : ಎಂಗೆ ಅಂತಾ ಹೇಳೋದ್ರೀ . . . . ?

ಇನ್ನೊಬ್ಬ : ಎಲಾ ಇವ್ಳಾ . . . . ? ಭಲೇ ಇದ್ದೀಯಾ ಕಣೇ ನೀನು ? ಒಳ್ಳೆ ಆರಿ ತೀರದ ಯಜಮಾನಿ ಥರಾ ಮಾತಾಡ್ತೀಯಲ್ಲಾ !!

ಹುಡುಗಿ ಎರಡು : (ಮುಖಾ ತಿರುವುತ್ತಾ) ಅಂಗಲ್ದೇ ಇನ್ನೆಂಗ್ ಮಾತಾಡೋದು ?

ಒಬ್ಬ : ಏ ..... ತಗಾ ..... ಇನ್ನೆಂಗೆ ಅಂದ್ರೆ ..... ?! ಇದ್ದದ್ದು ಇದ್ದಂಗೆ ..... ಇಂಗಾದ್ರೆ ..... ಇಂಗಾತಪ್ಪಾ ..... ಈ ಥರಕ್ಕೆ ಈ ಥರಾ ಅಂಥಾ ಹೇಳಾದ್ ಬಿಟ್ಟು . . . . !!

ಹುಡುಗಿ ಮೂರು : ಯಾಕೆ . . . . ಹೇಳ್ಬೇಕು . . . . ? ಇದ್ದದ್ದು ಇದ್ದಂಗೆ . . . . ಇಂಗಾದ್ರೆ . . . . ಇಂಗಾತಪ್ಪಾ . . . ಈ ಥರಕ್ಕೆ ಈ ಥರಾ ಅಂಥಾ ಹೇಳಿದ್ರೆ ನೀವೇನ್ ಆರುಸ್ತೀರಾ ತೀರುಸ್ತೀರಾ ?

ಮುಖ್ಯ ಪಾತ್ರಧಾರಿ : ಆಶ್ಚರ್ಯದಿಂದ ತನ್ನ ತಂಡದ ಎಲ್ಲರ ಮುಖವನ್ನೂ ಪ್ರಶ್ನಾರ್ಥಕವಾಗಿ ನೋಡುವನು. ಎಲ್ಲರ ಕಣ್ಣುಗಳೂ ತೀರ್ಮಾನಕ್ಕೆ ಬಂದಂತೆ ಬೆರೆಯುವುವು.

ಇನ್ನೊಬ್ಬ : (ಒಂದು ನಿರ್ಧಾರಕ್ಕೆ ಬಂದವನಂತೆ) ಆ ಹುಡುಗಿಯನ್ನು ಕುರಿತು, ನೀವು ಹೇಳಿ, ನಾವು ತೀರುಸ್ತೀವೋ ಇಲ್ವೋ ನೋಡಿ.

ಹುಡುಗಿ ಒಂದು : ಏನು ತೀರುಸ್ತೀರಾ . . . . ? ಅನ್ನ ಕೊಟ್ಟೀರೋ . . . . ಇಲ್ಲಾ ಕೂಲಿ ಕೊಟ್ಟೀರೋ ?

ಒಬ್ಬ : ಏ ... ತಗಾ ... ಅನ್ನ ಕೂಲಿ ಕೊಡಾಕೆ ನಾವೇನ್ ಸರ್ಕಾರ ಕೇಟ್ಗೋದ್ವಾ ... ?! ಪ್ರಯತ್ನ ಮಾಡಿದ್ರೆ ... ?

ಹುಡುಗಿ ಎರಡು : ಪ್ರಯತ್ನಾ ಮಾಡೀರೇ ? ಏನ್ ಮಾಡೀರಿ ?

ಮುಖ್ಯ ಪಾತ್ರಧಾರಿ : ಪ್ರಯತ್ನ ಮಾಡದ್ರೆ ... ಅನ್ನ ... ಕೂಲಿ ... ಸಿಗೋ ದಾರಿ ಹೇಳ್ಬೌದು ಮಗು !!

ಗುಂಪಿನಲ್ಲಿದ್ದ ಜನ ಒಟ್ಟಾಗಿ : ಈ ಊರಾಗೆ ಅನ್ನಾನಾ . . . . ! ಕೂಲೀನಾ . . . . ?! ದಾರಿ ತೋರ್ಸಿದ್ರೆ ನೀವು ಕಲೆಗಾರರೇ ಸೈ !!

ಹುಡುಗಿ ಎರಡು : (ವಿಷಾದ ಮತ್ತು ದುಃಖದಿಂದ) ಈ ಊರಾಗೆ ನಮ್ಮ ಅಮ್ಮ-ಅಮ್ಮಂದಿರ್‍ಗೆ ಕೂಲಿ ಸಿಕ್ಕಾ ತಿಂಗ್ಳ ಮೇಲಾಗೈತೆ. ಒಂದೊತ್ತಿಗಿದ್ರೆ ಒಂದೊತ್ತಿಗಿಲ್ಲ. ಅಂಗಾಗೈತೆ ನಮ್ಮ ಕತಿ.

ದೃಶ್ಯ ಬದಲಾಗುವುದು.

ಮುಖ್ಯ ಪಾತ್ರಧಾರಿ : ಕರುಣೆಯಿಂದ ಆ ಮಕ್ಕಳ ಮುಖವನ್ನೇ ನೋಡುತ್ತಾ ..... ನೋಡುತ್ತಾ ..... ರೋಷ ತುಂಬಿದವನಂತಾಗಿ ..... ಮೇಲೇಳುತ್ತಾ ನಿಧಾನವಾಗಿ ಆ ಹುಡುಗಿಯ ಸುತ್ತ ತಾಂಡವ ನೃತ್ಯ ಮಾಡಲು ಆರಂಭಿಸುತ್ತಾನೆ ..... ಇವನ ಕುಣಿತದ ಇಂಗಿತವನ್ನು ಅರಿತಂತಹ ಅವನ ತಂಡ ನಿಧಾನವಾಗಿ ವೀರಗಾಸೆಯ ಲಯಕ್ಕೆ ತಕ್ಕಹಾಗೆ ನಿಲ್ಲುವುದು. ಆಟ ಆರಂಭವಾಗುವುದು.

ಒಬ್ಬ : ಏ . . . . ಅಹಹಾ ರುದ್ರ . . . . ಅಹಹಾ ದೇವಾ . . . .

ಇನ್ನೊಬ್ಬ : ಊರಾದಿ ಊರು, ಕೇರ್‍ಯಾದಿ ಕೇರಿ, ಮನೆಯಾದಿ ಮನೆಯಾಗಿರೋ ಜನವೆಲ್ಲಾ ಜೇನು ನೊಣ ನೆರ್‍ದಂಗೆ ನೆರೆದ್ರೆ ..... ನಾವೊಂದು ಕಥೀ ಹೇಳ್ತೀವಿ. ಕಲ್ಯಾಣದ ಕಥೆ ..... ಕುಣಿತ .....

ಒಬ್ಬ : ಏ ..... ಕತಿ ಅಂದ್ರ ಆಗಿ ಹೋದ, ಬೀಗಿ ಹೋದ ಅರಸರ ಕತಿ ಅಲ್ಲ. ಚಿನ್ನದಂಥಾ ರಾಜಕುಮಾರನ ಬೆಳ್ಳಿ ಅಂತಾ ಕುದ್ರೆ ಹಿಂದೆ ಕುಂತು ಓಡಿ ಹೋದ ರಾಜಕುಮಾರಿ ಕತಿ ಅಲ್ಲ. ಕತಿ ಅಂದ್ರ ಕತಿ ..... ಚಲೋ ಕತಿ ..... ಅನ್ನದ ಕತಿ ..... ಕೂಲಿಯ ಕತಿ. ಹಳ್ಳಿ ಮಂದಿ ಬಾಳಿ ಬದುಕೋ ಅಂತಾ ಕತಿ. ಹೀಂಗಾ ..... ಹೊಟ್ಟೆಗಿಲ್ದ, ಬಟ್ಟೆಗಿಲ್ದ, ನಾಡಿನ ಮಕ್ಳು ಹೊಟ್ಟೆ ತುಂಬಾ ಉಂಡು, ಮೈ ತುಂಬಾ ತೊಟ್ಟು ನಲಿಯೋ ಅಂತಾ ಕತಿ.

ಮುಖ್ಯ ಪಾತ್ರಧಾರಿ : (ಕುಣಿತ ನಂತರ) ಭಾರತವೆಂಬೋ ಭಾರತದೇಶದೊಳಗೆ ವಾಸವಾಗಿರತಕ್ಕ ಜನ ಅಂಬೋ ಜನ ಸದಾ ಹಸಿರಾಗಿ ಬದುಕ್ಲೀ ಅಂತಾ ಬಾಬಾ ಸಾಹೇಬ ಅಂಬೇಡ್ಕರ್ ಅನ್ನೋ ಮನುಷ್ಯ ಸಂವಿಧಾನ ಅಂತಾ ಒಂದು ಬರೆದಿದ್ದಾನಪ್ಪಾ.

ಕುಣಿತ ..... (ಮುಂದಿನ ಕತೆಯುದ್ದಕ್ಕೂ ಅಗತ್ಯವಿರುವ ಕಡೆ ಅಹಹಾ ..... ರುದ್ರ ..... ಅಹಹಾ ದೇವ ..... ಎಂಬ ಪಲ್ಲವಿಯನ್ನು ಹೇಳುತ್ತಾ ..... ಸಂಭಾಷಣೆಗಳನ್ನು ವೀರಗಾಸೆ ಶೈಲಿಯಲ್ಲಿ ಪ್ರಸ್ತುತ ಪಡಿಸಬಹುದು, ಕುಣಿತ ಆಟದ ಲಯಕ್ಕೆ ಬಿಟ್ಟಿದ್ದು)

ಒಬ್ಬ : ಅಹಹಾ ..... ರುದ್ರ ..... ಏನಂತಾ ಬರೆದಾನು ..... ಯಾಕಂತಾ ಬರೆದಾನು ?

ಇನ್ನೊಬ್ಬ : ಅಹಹಾ . . . . ದೇವ . . . . ಅದಕ್ಕೆ ನಾನಾ ಉತ್ತರ ಹೇಳ್ತೀನಿ . . . . !

ಒಬ್ಬ : ಆಹಹಾ . . . . ರುದ್ರ . . . . ಯಾರು ಹೇಳಿದ್ರೇನ. ಉತ್ತರ ಚಲೋ ಇದ್ರ ಆತ.

ಕುಣಿತ . . . .

ಇನ್ನೊಬ್ಬ : ಅಹಹಾ . . . . ದೇವ . . . . ಬಾಬಾ ಸಾಹೇಬರು ಬರೆದಂಥ ಸಂವಿಧಾನದಾಗ ಈ ಭಾರತ ಭೂಮೀಲಿ ಹುಟ್ಟೋ ಎಲ್ರೂ ಸಮಾನ್ರೂ, ಈ ಸಮಾನ ಜನರಿಂದ, ಜನರಿಗಾಗಿ, ಜನರಿಗೋಸ್ಕರ ಇರೋ ಅಂತಾ ದೇಶದಲ್ಲಿ ಆಡಳಿತ ಮಾಡೋಂತಾ ಸರ್ಕಾರ ಸಕಲ ಜನರ ಯೋಗಕ್ಷೇಮ ನೋಡ್ಕೋಬೇಕು ಅಂತಾ ಬರೆದು ಬಿಟ್ರು.

ಒಬ್ಬ : ಅಹಹಾ . . . . ರುದ್ರ . . . . ಯೋಗಕ್ಷೇ ಅಂದ್ರೆ . . . . ಸರ್ಕಾರ ಅನ್ನೋದು ಜನರ ಮನೆ ಬಾಗ್ಲಿಗೆ ಹೋಗಿ . . . . ನೀ ಚಲೋ ಇದ್ದೀ ? ನಿಂಗ ಬ್ಯಾನಿ ಬಂದದಾ ? ನಿನ್ನ ಮಗಳ ಮದ್ವಿ ಮಾಡ್ದಿ ? ನೀ ಉಂಡ್ಯಾ . . . . ನೀ ತಿಂದ್ಯಾ . . . . ಅಂತಾ ಕೇಳೋ ಅಂತಾದ್ದೇನಪ್ಪಾ ?

| | | |
|---|---|---|
| ಇನ್ನೊಬ್ಬ | : | ಅಯ್ಯೋ ತಿಳಿಗೇಡಿ ಭದ್ರಾ . . . . ಸಮುದ್ರದ ನೀರ್ನಾ ಸಿಹಿ ನೀರು ಮಾಡೊ ಮಾತಾಡ್ತಿದ್ದೀ ನೀನು. ವಿಷಯ ಅಂಗಲ್ಲಾ ತಿಳ್ಕೋ . . . . ! ಸಂವಿಧಾನ ಹೇಳ್ತದ ನಮ್ಮದು 'ಕಲ್ಯಾಣ ರಾಜ್ಯ' ಅಂತಾ. |
| ಒಬ್ಬ | : | ಅಹಹಾ . . . . ರುದ್ರ . . . . ಬಸವಕಲ್ಯಾ ನಾವು ಕಂಡಿಲ್ವಾ ! ಅಲ್ಲಿ ರಾಜ್ಯ ಎಲ್ಲಿದ್ದಾತು ? ಕಲ್ಯಾಣಿ ಎಲ್ಲಿದ್ದಾತು? |
| ಇನ್ನೊಬ್ಬ | : | ಅಯ್ಯೋ ತಿಳಿಗೇಡು ಭದ್ರಾ . . . . ಕಲ್ಯಾಣ ರಾಜ್ಯ ಅಂದ್ರೆ ದೇಶದಲ್ಲಿರೋ ಪ್ರಜೆಗಳ ಹಸಿವು, ಆರೋಗ್ಯ, ಆತ್ಮ ಗೌರವಗಳನ್ನು ಕಾಪಾಡ್ತಾ ಅವರ್ನ ಉಳಿಸಿ, ಬೆಳೆಸೋದು ಅಂತಾ ಅರ್ಥ.<br>ಕುಣಿತ . . . . |
| ಒಬ್ಬ | : | ಏ . . . . ತಗಾ, ಹಸಿದುಕೊಂಡಿರೋರು ನಮ್ಮ ಕಣ್ಣೆದ್ರಿಗೇ ಬಿದ್ದು ಒದ್ದಾಡ್ತಾ ಇರೋವಾಗ . . . . ಕಲ್ಯಾಣವಂತೆ ! ರಾಜ್ಯವಂತೆ . . . . ! ಎಲ್ಲೈತಪ್ಪಾ ಅದು ? |
| ಇನ್ನೊಬ್ಬ | : | ಅಯ್ಯೋ ತಿಳಿಗೇಡು ಭದ್ರಾ . . . . ಕಲ್ಯಾಣ ರಾಜ್ಯ ಇಲ್ಲೇ ಐತಿ ! ಇಲ್ಲೀ ಜನಕ್ಕೆ ಸರ್ಕಾರದ ಯೋಜನೆ ಬಗ್ಗೇನೇ ತಿಳಿದಿಲ್ಲ ಅಂದ್ರೆ ಯಾರೇನು ಮಾಡಾಕಾಗುತ್ತೆ ?! |
| ಒಬ್ಬ | : | ಅಹಹಾ . . . . ರುದ್ರ . . . . ನಮಗೇನು ತಿಳಿದಿಲ್ಲ ಹೇಳು ? ನಿನ್ನ ಕಲ್ಯಾಣ ರಾಜ್ಯದ ಕಲ್ಯಾಣ ಗುಣ. ನೂರು ಜನ ಹಸಿದೋರ್‍ಮೇಲೆ ಮೂರು ಜನ ಸಿರಿವಂತರಿರೋ ದೇಶ. ಕರ್‍ಪ್ಷನ್ನು ಅನ್ನೋ ಕತ್ತಿ ಮೇಲೆ ಬಡವರ್ನ ನಿಲ್ಸಿ, ಇಂಚಿಂಚಾಗಿ ಪಾದ ಕತ್ತರಿಸೋ ದೇಶ. ಮಾಡೋರಿಗೆ ಕೆಲ್ಸ ಇಲ್ದೆ, ಬದುಕೋರಿಗೆ ಸೂರಿಲ್ದೆ, ಬೀದಿ ಬೀದೀಲಿ ಜನ ಮಲ್ಗೋ ಅಂತಾ ದೇಶ . . . . ವಗೈರೆ ವಗೈರೆ ಅಂತಾ . . . . !! |
| ಇನ್ನೊಬ್ಬ | : | ಅಯ್ಯೋ ತಿಳಿಗೇಡು ಭದ್ರಾ . . . . ನೀನು ಈ ದೇಶಾನಾ ತುಂಬಾ ಹಳತಾಗಿ ತಿಳಕೊಂಡಿದ್ದೀ. ದೇಶದ ಇತ್ತೀಚಿನ ನಡವಳಿಕೆ ನಿನಗೆ ತಿಳಿದೇ ಇಲ್ಲಾ ಬಿಡು. |
| ಒಬ್ಬ | : | ಏ . . . . ತಗಾ, ನೂರು ವರ್ಷ ಮಾಡದಿದ್ದೋನು, ಮೂರು ವರ್ಷದಾಗೆ ಏನ್ ಮಾಡ್ಯಾನು ? |
| ಇನ್ನೊಬ್ಬ | : | ಅಯ್ಯೋ ತಿಳಿಗೇಡು ಭದ್ರಾ ತಿಳ್ಕೋ . . . . 2005ರಲ್ಲಿ ಕೇಂದ್ರ ಸರ್ಕಾರ 'ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ' ಅಂತಾ ಜಾರಿಗೆ ತಂತು. |
| ಒಬ್ಬ | : | ಅಹಹಾ . . . . ರುದ್ರ . . . . ಅದೇನೇನು ಹೇಳ್ತೀಯೋ ? ನಮಗಾ ನೀ ಹೇಳಿದ್ರಲ್ಲಿ ಗಾಂಧಿ ಮಹಾತ್ಮ ಗೊತ್ತು, ರಾಷ್ಟ್ರ ಗೊತ್ತು, ಯೋಜನಾ ಗೊತ್ತು . . . . ಆದ್ರೆ ಅದೇನೋ ಅಂದ್ಯಲ್ಲ . . . . ಖಾತ್ರಿ . . . .! ಈ ಖಾತ್ರಿ ಪಾತ್ರಿ ಗೊತ್ತಿಲ್ಲ ನೋಡು. ಸರ್ಕಾರಿ ಭಾಷೆಯಾಗ ನಾವೆಂದೂ ಇದನ್ನ ಕೇಳಿದ್ದಿಲ್ಲ. |
| ಇನ್ನೊಬ್ಬ | : | ಅಯ್ಯೋ ತಿಳಿಗೇಡು ಭದ್ರಾ ತಿಳ್ಕೋ . . . . ಅದಾ ಈ ಯೋಜನೆಯ ಆತ್ಮ. ಮೊದ್ಲು ಬಡಬಗ್ಗರಿಗೆ ಉದ್ಯೋಗ ಒದಗಿಸ್ಬೇಕು ಅಂತಾ ಇತ್ತು. ಸರ್ಕಾರಾನೂ ಅದನ್ನೂ ಇದನ್ನೂ ಮಾಡಿ ನೋಡ್ತು . . . . ಐವತ್ತು ವರ್ಷ ಕಳದ್ರೂ ಗಿಟ್ಲಿಲ್ಲ ನೋಡು. ಅದಕ್ಕೆ ಬೇರೆ ಥರಾ ಯೋಚ್ನಾ ಮಾಡಿ ಉದ್ಯೋಗದ ಹಕ್ಕನ್ನು ಖಾತ್ರಿ ಮಾಡಿ ಕಾನೂನು ತಂತು ನೋಡು. |
| ಒಬ್ಬ | : | ಅಹಹಾ . . . . ರುದ್ರ . . . . ಯಾವ ಕಾನೂನು ತಂದ್ರೇನು ? ಎಲ್ಲಾ ಅಂಗೇಯಾ ! ಈ ಕಾಯ್ದೆ ಏನು ಮಾಡ್ಯಾತೇಳು ? ಇಂಥವು ಎಷ್ಟಿಲ್ಲ ? |
| ಇನ್ನೊಬ್ಬ | : | ಅಯ್ಯೋ ತಿಳಿಗೇಡಿ ಭದ್ರಾ . . . . ಅದಾ ನೋಡು ನೀ ತಿಳಿದಿರೋ ತಪ್ಪು. ಇದು ಅಂತಿಂಥಾ ಕಾಯಿದೀ ಅಲ್ಲ. ಯಾರಾದ್ರೂ ಒಬ್ಬ ಕೂಲಿ ಕೆಲಸದ ಅಗತ್ಯ ಇರೋನು ಹೋಗಿ 'ನನಗ ಕೆಲ್ಸ ಬೇಕು' ಅಂದ್ರಾ . . . ಕೆಲ್ಸ ಕೊಡ್ಲೇಬೇಕು ನೋಡಾ ! ಕೆಲ್ಸ ಕೊಡಿಲ್ಲಾ ಅಂದ್ರ ನಿರುದ್ಯೋಗ ಭತ್ಯ ಕೊಡ್ಬೇಕು ನೋಡಾ ! ಅಂಥಾ ಕಾಯಿದೆ. ಈ ದೇಶದಲ್ಲಿರೋ ಯಾವ ಪ್ರಜೆ ಆದ್ರೂ ಸರಿ, ಅವ್ರು ಕೂಲಿ ಪಡೀಬೌದು. |
| ಒಬ್ಬ | : | ಅಯ್ಯೋ ಶಿವಾದಿ ಶಿವ ರುದ್ರಾ . . . . (ಮೂರ್ಛೆ ಬೀಳುವವನಂತೆ ನಟಿಸುತ್ತಾ) ಅಲ್ಲಲೇ ತಿಳಿಗೇಡಿ ನೀನು ಯಾವ ದೇಶದ ಕತಿ ಹೇಳಕತ್ತ್ಯಲೇ ? |
| ಇನ್ನೊಬ್ಬ | : | ಅಯ್ಯೋ ಬುದ್ಧಿಗೇಡಿ . . . . ನಾನು ನಮ್ಮದಾ ದೇಶದ ಕತಿನೇ ಹೇಳಾಕತ್ತೀನಿ.<br>ಕುಣಿತ . . . . |

| | | |
|---|---|---|
| ಒಬ್ಬ | : | ನಮ್ಮದಾ ದೇಶದ ಕತಿ ಹೇಳಿಕತ್ತೀಯಲ್ಲಾ ? ಬಾ . . . . ನನಗೆ ಈಗ ಕೂಲಿ ಅಗತ್ಯಾ ಅದ. ಕೊಡಿಸು ಬಾ !! |
| ಇನ್ನೊಬ್ಬ | : | ಕೊಡಸ್ತೀನಿ . . . . ! ಆದ್ರಾ . . . . ಮೊದಲೇಳು, ನೀನು ಈ ಪಂಚಾಯ್ತಿ ವ್ಯಾಪ್ತಿಯಲ್ಲಿರೋ ಮತದಾರ್ನಾ ? |
| ಒಬ್ಬ | : | ಅಲ್ಲಾ . . . . ನಾನು ಪಕ್ಕದ ಪಂಚಾಯ್ತಿಯೋನು. |
| ಇನ್ನೊಬ್ಬ | : | ಹಾಗಾದ್ರೆ ನೀನು ನಿಮ್ಮ ಪಂಚಾಯ್ತಿ ಒಳಗ ಅರ್ಜಿ ಸಲ್ಲಿಸು. ಈಗ ಈ ಪಂಚಾಯ್ತಿ ವ್ಯಾಪ್ತಿಲಿರೋ ಯಾರ್ನಾದ್ರೂ ಮುಂದಕ್ಕೆ ಕರೆ. |
| ಮುಖ್ಯ ಪಾತ್ರಧಾರಿ | : | (ಕುಣಿಯುತ್ತಲೇ ಎಲ್ಲರನ್ನೂ ಅವಲೋಕಿಸುತ್ತಾ) ಈ ಪಂಚಾಯ್ತಿ ಜನರೇ . . . . ನಿಮ್ಮಲ್ಲಿ ಯಾರಿಗೆ ಕೂಲಿ ಕೆಲ್ಸದ ಅಗತ್ಯವಿದೆ. ಅವ್ರು ಕೈ ಎತ್ತಿ.<br>(ಅಲ್ಲಿದ್ದ ಬಹುಪಾಲು ಜನ ಕೈ ಎತ್ತುವರು.) |
| ಒಬ್ಬ | : | ಕೈಗಳನ್ನು ನೋಡುತ್ತಾ . . . . ಇಷ್ಟೂ ಜನಕ್ಕೆ ಕೆಲ್ಸ ಕೊಡ್ತೀಯಾ . . . . ? |
| ಇನ್ನೊಬ್ಬ | : | ಇಷ್ಟು ಜನಕ್ಕೇ ಏನು, ಇನ್ನೂ ಇಷ್ಟು ಜನ ಇದ್ರೂ . . . . ಇನ್ನೂ ಸಾವಿರಾರು ಜನ ಇದ್ರೂ ಕೆಲ್ಸ ಕೊಡಬೌದು. |
| ಒಬ್ಬ | : | (ಗುಂಪಿನಲ್ಲಿ ಒಬ್ಬ ವ್ಯಕ್ತಿಯನ್ನು ಉದ್ದೇಶಿಸಿ) ಹಾಗಾದ್ರೆ ಬನ್ನಿ ಯಜಮಾನ್ರೆ ನೀವು (ಮುಂದೆ ಬರುವನು) ಕೊಡ್ಸಪ್ಪಾ ಇವ್ರಿಗೆ ಕೆಲ್ಸಾನಾ. |
| ಇನ್ನೊಬ್ಬ | : | ಅಹಹಾ . . . . ದೇವಾ . . . . ಇವ್ರನ್ನ ಪಂಚಾಯ್ತಿ ಆಫೀಸಿಗೆ ಕರ್ಕೊಂಡು ನಡಿ.<br>(ರಂಗವೇ ಪಂಚಾಯ್ತಿ ಕಛೇರಿಯಾಗಿ ಮಾರ್ಪಾಡಾಗುವುದು) |
| ಒಬ್ಬ | : | ಕೆಲಸಕ್ಕಾಗಿ ಬಂದವನನ್ನು ಕರೆದುಕೊಂಡು ಮುಂದೆ ಹೋಗುವನು. ಎಲ್ಲೂ ಅವನನ್ನು ಹಿಂಬಾಲಿಸುವರು. ಕಛೇರಿಯಂತ ಒಂದು ಜಾಗದ ಮುಂದೆ ನಿಲ್ಲುವರು. ಹೂಂ . . . ಬಂದಾಯ್ತು. ಕೊಡ್ಸಪ್ಪಾ ಕೆಲ್ಸಾನಾ . . |
| ಇನ್ನೊಬ್ಬ | : | ನಿಮಗೆ ಕೆಲ್ಸ ಕೊಡ್ಡಾಕೆ ಮುಂಚೆ ಒಂದು ಪುಟ್ಟ ಕೆಲ್ಸ ಐತೆ. ನೀವು ಅದನ್ನ ಮಾಡ್ಬೇಕು ! |
| ಒಬ್ಬ | : | ಅಹಹಾ . . . . ರುದ್ರ . . . . ತಗ್ದಾ ನಿನ್ನ ಸರ್ಕಾರಿ ಕ್ಯಾತೇನಾ . . . . ! ನೀವು ಎಲ್ಲಾ ಹೇಳೋದಿಂಗೇ. ಮಾಡಿಕೋಡ್ತೀ ಅಂತಾ ಬಂದ್ರೆ . . . . ತಗೀತೀರಾ . . . . ಒಂದೊಂದಾಗಿ ಪುರಾಣಾನಾ ! ಅದ್ ತಗೊಂಬಾ . . . . ಇದ್ ತಗೊಂಬಾ . . . ., ಅದೆಲ್ಲಿ . . . . ಇನ್ನೊಂದೆಲ್ಲಿ ? ಏ ತಗೀ ನಿಮ್ಮ ಜಾಯಮಾನವೇ ಅದು. |
| ಇನ್ನೊಬ್ಬ | : | ಲೇ . . . . ಲೇ . . . . ಲೇ . . . . ತಿಳಿಗೇಡಿ, ಸ್ವಲ್ಪ ತಾಳ್ಕೋ, ನಿನಗೆ ಮಗಳಿದ್ದಾಳಾ ? |
| ಒಬ್ಬ | : | ಅಹಹಾ . . . . ರುದ್ರ . . . . ಇಲ್ಲಾ . . . . ಎಂದ್ರೆ ಇಲ್ಲಾ ಅಂತಾ ನೋಡು. |
| ಇನ್ನೊಬ್ಬ | : | ಅಹಹಾ . . . . ದೇವ . . . . ಹೋಗ್ಲಿ, ಮಗಳಿರೋ ಮನೇವ್ರು ಯಾರಾದ್ರೂ ಮದುವೆ ಮಾಡಿರೋದು ನೋಡಿದ್ದೀಯಾ ? |
| ಒಬ್ಬ | : | ಅಹಹಾ . . . . ರುದ್ರ . . . . ಹೆಣ್ಣು ಮಕ್ಕಳ ಮದ್ವೆ ನೋಡಿಲ್ವಾ ನಾನು !! |
| ಇನ್ನೊಬ್ಬ | : | ಮಾಡೋಕೆ ಮುಂಚೆ ಗಂಡಿನ ಕಡೇರು – ಹೆಣ್ಣಿನ ಕಡೇರು ಸೇರಿ ಏನ್ ಮಾಡ್ತಾರೇಳು ? |
| ಒಬ್ಬ | : | ಅಹಹಾ . . . . ರುದ್ರಾ . . . . ಇನ್ನೇನ್ ಮಾಡ್ತಾರೆ, ಲಗ್ನ ಕಟ್ಟಿಸ್ತಾರೆ. |
| ಇನ್ನೊಬ್ಬ | : | ಅಪ್ಪಾ ಬದ್ಕೊಂಡೆ ನಾನು ! ಇನ್ನೇನು ಹೇಳ್ಬಿಡ್ತೀಯೋ ಅಂತಾ ಗಾಬ್ರಿ ಬಿದ್ದಿದ್ದೆ. ಲಗ್ನಾ ಕಟುಸ್ತಾರಲ್ಲಾ ಇದೂ ಅಂಗೇ. ಮುಹೂರ್ತಕ್ಕೆ ದಿನ ನಿಶ್ಚಯ ಮಾಡ್ದಂಗೆ. |
| ಒಬ್ಬ | : | ಅಹಹಾ . . . . ರುದ್ರ . . . . ಅದಕ್ಕೂ–ಇದಕ್ಕೂ ಏನ್ ಸಂಬಂಧ. ಇಲ್ಲಿ ಲಗ್ನಾ ಕಟ್ಟಾದು ಅಂದ್ರೆ ಎಂಗೆ ? |
| ಇನ್ನೊಬ್ಬ | : | ಅಹಹಾ . . . . ಭದ್ರಾ . . . . ಅಂಗೇ . . . . ! ಜಾಬ್‌ಕಾರ್ಡ್ ಮಾಡ್ಸೋ ಅಂಗೆ !!! |
| ಒಬ್ಬ | : | (ನಾಟಕೀಯವಾಗಿ ನಗುತ್ತಾ) ಜಾಬ್ ಕಾರ್ಡ್ ?! ಪೋಸ್ಟ್ ಕಾರ್ಡ್, ಸಿಮ್ ಕಾರ್ಡ್, ಮೆಮೊರಿ ಕಾರ್ಡ್, ಮದುವೆ ಕಾರ್ಡ್, ಡೆತ್ ಕಾರ್ಡ್ . . . . ಆ ಕಾರ್ಡೂ, ಈ ಕಾರ್ಡೂ ಕೇಳಿದ್ದೀನಪ್ಪಾ . . . . ಇದ್ಯಾವುದು ಜಾಬ್‌ಕಾರ್ಡ್ ?! |
| ಇನ್ನೊಬ್ಬ | : | (ಅಷ್ಟೇ ನಾಟಕೀಯವಾಗಿ ಹಾಡಿನ ರೂಪದಲ್ಲಿ) |

*ಜಾಬ್ ಕಾರ್ಡ್*
*ಜಾಬ್ ಕಾರ್ಡ್*
*ಜಾಬ್ ಕಾರ್ಡ್ ॥*
*ಜಾಬಿಕೆ ಮೂಲ ಜಾಬ್ ಕಾರ್ಡ್*
*ಕೆಲಸಕೆ ಬೇಕು ಕೂಲಿಗೆ ಬೇಕು . . . .*
*ಮೊದಲಿಗೆ ಬೇಕು ಜಾಬ್ ಕಾರ್ಡ್*

ಒಬ್ಬ : ಅಂಗಂದ್ರೇನು ?

ಇನ್ನೊಬ್ಬ : ಅಂಗಂದ್ರೇ . . . . ಉದ್ಯೋಗ ಚೀಟಿ ಅಂತಾ . . . .

ಒಬ್ಬ : ಅಂಗಂದ್ರೇನು ?

ಇನ್ನೊಬ್ಬ : ಅಂಗಂದ್ರೇ . . . . ಒಬ್ಬರು ಹೋಗಿ,

*ಪಂಚಾಯ್ತೀಲಿ ಕುಂತು*
*ನಮೂನೆ ಒಂದರ ಮೇಲೆ*
*ಹೆಸರು ಅಡ್ರಸ್ ಬರ್ದು*
*ಕೆಲಸ ಬೇಕು ಅಂತಾ*
*ಅರ್ಜಿ ಕೊಟ್ರೆ*
*ಸೆಕ್ರೆಟರಿ ಕೊಡೋ ಕಾರ್ಡ್*
*ಇದೇ ಜಾಬ್ ಕಾರ್ಡ್*
*ಜಾಬ್ ಕಾರ್ಡ್*
*ಜಾಬ್ ಕಾರ್ಡ್ ॥*

ಒಬ್ಬ : ಅಹಹಾ . . . . ರುದ್ರ . . . . ಈಗ ಗೊತ್ತಾಯ್ತು ! ಬರೋಬ್ಬರಿ ಅರ್ಥ ಆಯ್ತು . . . . !! ನಾನು ಎಸ್ಸೆಲ್ಸಿ ಪಾಸಾಗಿದ್ನಲ್ಲ ಆವಾಗ ಡಿಸ್ಟ್ರಿಕ್ಟ್ ಸೆಂಟರ್‌ನಾಗೆ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜಿಗೆ ಹೋಗಿದ್ದಾಗ ಒಂದು ಕಾಡು ಅಂತಾ ಮಾಡಿ ಕೊಟ್ಟಿದ್ರು. ಅದಾ !?

ಇನ್ನೊಬ್ಬ : ಹಾ . . . . ಒಂದ ಥರಾ ಅಂಗೇ . . . .

ಒಬ್ಬ : ಅಹಹಾ . . . . ರುದ್ರ . . . . ಅಂಗಾದ್ರೆ ಇದು ಉದ್ಧಾರ ಆಗೋ ಮಾತಲ್ಲ ಬಿಡಿ. ನನಗಂತೂ ಜೀವಮಾನದಾಗೇ ಕೆಲ್ಸ ಕೊಡ್ಲಿಲ್ಲ ಅವ್ರು. ಇದೂ ಅಂಗೇ ತಾನೇ ?

ಇನ್ನೊಬ್ಬ : ಲೇ . . . . ಲೇ . . . . ಲೇ . . . . ಲೇ . . . . ಭದ್ರಾ . . . . ಏನ್ ಡ್ಯಾಮೇಜ್ ಪಾರ್ಟಿನೋ ನೀನು ? ಇರೋದ್ ಬರೋದೆಲ್ಲಾ ಡ್ಯಾಮೇಜ್ ಮಾಡಿ ಬಿಸಾಕ್ತಿಯಲ್ಲೋ . . . . ಪಾಪಿ. ಊರು ಕೆಡಿಸೋಕೆ ನಿನ್ನಂಥೋನು ಒಬ್ಬ ಸಾಕು ಕಣೋ. ಹಂಡೆ ಹಾಲಿಗೆ ತೊಟ್ಟು ಮಜ್ಜಿಗೆ ಇದ್ದಂಗೆ.

ಒಬ್ಬ : ಅಹಹಾ . . . . ರುದ್ರ . . . . ಅಂಗಂದಾ ನನ್ನ . . . . ! ಸರಿಹೋತು ಬಿಡು. ಏನೋ ತಿಳಿದ ಮಾತ್ನ ಹೇಳಿದ್ರೆ . . . . 'ತೊಟ್ಟು ಮಜ್ಜಿಗೆ' ಮಾಡ್ದೆ ನೋಡು ನನ್ನ. ಆಯ್ತು ನೀನೂ–ನಿನ್ನ ಜಾಬ್ ಕಾರ್ಡ್ ಹಂಡೆ ಹಾಲಿದ್ದಂಗಲ್ವಾ . . . . ಹೇಳಪ್ಪಾ . . . ., ಆ ನಿನ್ನ ಜಾಬ್ ಕಾರ್ಡ್ ಮಾಡೋ ಪವಾಡಾನ.

ಇನ್ನೊಬ್ಬ : ಬಾ ಇಲ್ಲಿ ಲಗ್ನ ಕಟ್ಟಾಕೆ ಬಂದಿದ್ದೀವಲ್ವಾ . . . . ಅದಕ್ಕೆ ಒಬ್ರು ಪುರೋಹಿತರು ಇರ್ತಾರಲ್ವಾ ? ಅವ್ರೇ ನಮ್ಮ ಪಂಚಾಯ್ತಿ ಕಾರ್ಯದರ್ಶಿಗಳು, ಎಲ್ಲಿದ್ದಾರೆ ಅವ್ರು ?

ಒಬ್ಬ : ಅಹಹಾ . . . . ರುದ್ರ . . . . ಇಗೋ . . . . ಇಲ್ಲಿ. ಇಲ್ಲಿ ಕುಳಿತವರೆ ದೇವರಂಗೆ.

(ಕಾರ್ಯದರ್ಶಿ ಪಾತ್ರಧಾರಿ ಅಲ್ಲಿರುವನು)

ಇನ್ನೊಬ್ಬ : ಅಹಹಾ . . . . ಕಾರ್ಯದರ್ಶಿಗಳೇ ಇಲ್ಲಿ ಇರೋ ಉದ್ಯೋಗ ಗ್ಯಾರಂಟಿ ಯೋಜನೆಯೊಳಗ ಜಾಬ್ ಕಾರ್ಡ್ ಮಾಡಿಸ್ಬೇಕು ಅಂದ್ರಾ ಏನೇನ್ ಅರ್ಹತೆ ಇರ್ಬೇಕು ಹೇಳ್ತೀರಾ ?

| | | |
|---|---|---|
| ಕಾರ್ಯದರ್ಶಿ | : | ಅಂತಾ ವಿಶೇಷವಾದ ಅರ್ಹತೆ ಏನೂ ಬೇಕಾಗಿಲ್ಲ. ಅವು ನಮ್ಮ ಪಂಚಾಯ್ತಿ ವ್ಯಾಪ್ತಿಯ ಮತದಾರರಾಗಿರ್ಬೇಕು. ಹೆಣ್ಣಾಗಲೀ–ಗಂಡಾಗಲೀ 18 ವರ್ಷ ತುಂಬಿರ್ಬೇಕು. |
| ಒಬ್ಬ | : | ಒಬ್ರು ಇಲ್ಲೇ ವಾಸ ಇದಾರೆ, ಆದರೆ ಅವ್ರ ಹೆಸರು ಮತದಾರರ ಪಟ್ಟೀಲಿ ಇಲ್ಲ ಅಂದ್ರೆ ಅಥವಾ ಇನ್ನೊಬ್ಬರ ಹತ್ರ ಮತದಾರರ ಗುರುತಿನ ಚೀಟಿ ಇಲ್ಲಾ ಅಂದ್ರೆ ಏನ್ಮಾಡ್ತೀರಿ. |
| ಕಾರ್ಯದರ್ಶಿ | : | ಏನೂ ಮಾಡೋಲ್ಲ, ಅವ್ರಿಗೆ ಜಾಬ್ ಕಾರ್ಡ್ ಕೊಡ್ತೀನಿ. ಅವು ನಮ್ಮ ಪಂಚಾಯ್ತಿ ವ್ಯಾಪ್ತೀಲಿ ವಾಸ ಮಾಡೋರು ಅಂತಾ ಪಂಚಾಯ್ತಿಗೆ ಮನವರಿಕೆ ಆದ್ರೆ ಸಾಕು. |
| ಒಬ್ಬ | : | ನೀವು ಒಳ್ಳೇ ಜನ ಬಿಡಿ ಸ್ವಾಮಿ, ಇಂಥಾ ಯೋಜನೇನ ನಾವೆಂದೂ ಕಂಡಿದ್ದಿಲ್ಲ. |
| ಕಾರ್ಯದರ್ಶಿ | : | ಇದು ನಮ್ಮ ಒಳ್ಳೇತನ ಅಲ್ಲ ಸ್ವಾಮಿ. ಉದ್ಯೋಗ ಖಾತ್ರಿಯ ನಿಯಮಾನೇ ಅಂಗಂತ ಹೇಳುತ್ತೆ ! (ತಿಕ್ಕಲನಂತೆ ಕಾಣುವ ಒಬ್ಬ ವ್ಯಕ್ತಿ ಎಲ್ಲರನ್ನೂ ಬಗೆ ಮಾಡುತ್ತಾ ಗುಂಪಿನಲ್ಲಿ ತೂರಿ ಮುಂದಕ್ಕೆ ಬರುವನು, ಅವನ ಕೈಯಲ್ಲೊಂದು ತಗಡಿನ ಡಬ್ಬ ಮತ್ತು ಕೋಲು ಇರುತ್ತದೆ) |
| ಇನ್ನೊಬ್ಬ | : | ಹಾಗಾದ್ರೆ ಸರಿ, ಇವು ಸ್ವ–ಇಚ್ಛೆಯಿಂದ ಉದ್ಯೋಗ ಕೋರಿ ಬಂದಿರುವ ವ್ಯಕ್ತಿ. ಇವ್ರಿಗೆ ಜಾಬ್ ಕಾರ್ಡ್ ಸಿಗ್ಬೇಕು ಅಂದ್ರೆ ಏನ್ ಮಾಡ್ಬೇಕು ಹೇಳಿ ? |
| ಕಾರ್ಯದರ್ಶಿ | : | ಕೂತ್ಕೊಳ್ಳಿ, ಹೆಚ್ಚಿಗೆ ಏನೂ ಮಾಡ್ಬೇಕಾದ್ದಿಲ್ಲ, ಈ ಅರ್ಜಿನಾ ತುಂಬಿ ಕೊಟ್ರೆ ಸಾಕು. ಇದನ್ನ ನಮೂನೆ–1 ಅನ್ತಾರೆ. (ಅರ್ಜಿ ಕೊಡುವನು) |
| ಇನ್ನೊಬ್ಬ | : | ತಗೊಳ್ಳಿ . . . . ಇದನ್ನು ಭರ್ತಿ ಮಾಡಿ, ಇದರಲ್ಲಿ ಏನೇನಿದೆ ಅಂದ್ರೆ . . . . (ಓದುವನು) ಹೆಸರು, ವಿಳಾಸ, ವಯಸ್ಸು, ಮನೆಯಲ್ಲಿರುವ ವಯಸ್ಕರ ಸದಸ್ಯರ ಹೆಸರು |
| ಒಬ್ಬ | : | ಇಷ್ಟು ತುಂಬಿದ್ರೆ ಸಾಕೋ (ಕಾರ್ಯದರ್ಶಿಯನ್ನು ಉದ್ದೇಶಿಸಿ) (ಈ ಹಿಂದೆ ಬಿದ್ದು ಹೋಗಿದ್ದ ಹೆಣ್ಣು ಮಗಳು ಅದನ್ನು ತುಂಬುತ್ತಿರುವಳು. ಅಪ್ಪ ಹೇಳುತ್ತಿರುವನು. ಉಳಿದ ಹೆಣ್ಣು ಮಕ್ಕಳು ಅವಳೊಂದಿಗೇ ಇರುವರು.) |
| ಕಾರ್ಯದರ್ಶಿ | : | ಸಾಕು. ಆ ಎರಡೂ ಪ್ರತಿಗಳನ್ನು ತುಂಬಿಕೊಟ್ರೆ ಮುಂದಿನ ಜವಾಬ್ದಾರಿ ನಮ್ದು. |
| ಇನ್ನೊಬ್ಬ | : | ತಗೊಳ್ಳಿ . . . . ಮುಂದೇನಾಗುತ್ತೆ ಅಂತಾ ಹೇಳಿ. |
| ಕಾರ್ಯದರ್ಶಿ | : | ತೆಗೆದುಕೊಳ್ಳುತ್ತಾ . . . . ಇನ್ನು 30 ದಿನಗಳೊಳ್ಗೆ ಇವ್ರಿಗೆ ನಮೂನೆ–4ರಲ್ಲಿರುವಂತೆ ಉದ್ಯೋಗ ಚೀಟಿ ಕೊಡುತ್ತೇವೆ. ಅದರಲ್ಲಿ ಇವ್ರ ಫೋಟೋ ಕೂಡಾ ಇರುತ್ತೆ. |
| ಇನ್ನೊಬ್ಬ | : | ಅಹಹಾ . . . . ಭದ್ರಾ . . . . ಈಗ ಮಹೂರ್ತ ನಿಶ್ಚಯ ಆಯ್ತಾ . . . . ? |
| ಒಬ್ಬ | : | ಅಹಹಾ . . . . ರುದ್ರ . . . . 30 ದಿನಾನಾ, ಈಗ್ಲೇ ತಿಂಗಳಿನಿಂದ ಕೆಲ್ಸ ಇಲ್ಲಾ ಅಂತಾ ಒದ್ದಾಡ್ತಾ ಅವ್ರೆ ಜನ. |
| ಕಾರ್ಯದರ್ಶಿ | : | ಅಂಗೇನಿಲ್ಲ, 30 ದಿನ ಅನ್ನೋದು ಒಂದು ನಿಯಮ. ಆದ್ರೆ ಅವಕಾಶ ಇದ್ರೆ ನಾಳೆಯಿಂದಲೇ ನಿಮ್ಗೆ ಕೂಲಿ ಕೊಡಬ್ಹುದು. (ಅಷ್ಟರಲ್ಲಿ ತಿಕ್ಕಲನಂತೆ ಕಾಣುವ ವ್ಯಕ್ತಿ ತಮಟೆಯಿಂದ ಡಬ್ಬವನ್ನು ಬಡಿಯುತ್ತಾ, ಸಾರುವವನಂತೆ . . . .) |
| ತಿಕ್ಕಲ ವ್ಯಕ್ತಿ | : | ಕೇಳ್ರಪ್ಪೋ ಕೇಳ್ರಿ . . . . ಜಾಬ್ ಕಾರ್ಡ್ ಬರೀ ಜಾಬ್ ಕಾರ್ಡ್ ಅಲ್ಲ ಕಣ್ರಪ್ಪೋ . . . . ಇದೊಂದು ದಂಧೆ ಕಣ್ರಪ್ಪೋ, ಯಾಮಾರೀದ್ರಾ ಕೆಲಸ ಯಾರ್ಗೋ . . . . ಕೂಲಿ ಯಾರ್ಗೋ . . . . ಹೋಗುತ್ತಪ್ಪೋ, ನಿಮ್ಮ ಕೈಗೆ ಚಿಪ್ಪು ಸಿಗುತಪ್ಪೋ . . . . ಹುಶಾರಪ್ಪೋ ಹುಶಾರೂ . . . . ಹುಶಾರಪ್ಪೋ ಹುಶಾರೂ . . . . |
| ಜನ | : | ಲೇ . . . . ಲೇ . . . . ಲೇ . . . . ನಿಲ್ಲೋ ನಿನ್ ಪುರಾಣಾನಾ. ಯಾತುದ್ದಲಾ ಅದು ನೀನು ಒದುರ್ತಾ ಇರಾದು ? ಯಾರ್ಲಾ ಅಂಗ ಮಾಡೌರೆ ? ಎಂಗಲಾ ಮಾಡ್ತಾರೆ ? |
| ತಿಕ್ಕಲ ವ್ಯಕ್ತಿ | : | ವಿಕಟವಾಗಿ ನಗುತ್ತಾ . . . . ಯಾರು ಮಾಡ್ತಾರಾ ? ಎಂಗೆ ಮಾಡ್ತಾರಾ ? ಇಂಗೆ . . . . ಎನ್ನುತ್ತಾ (ಡಬ್ಬದ ಮುಚ್ಚಳವನ್ನು ತೆಗೆದು ಸುರಿಯುವನು. ಅದರಿಂದ ಅನೇಕ ಜಾಬ್ ಕಾರ್ಡ್‌ಗಳು ಉದುರುವುವು) |

ಕಾರ್ಯದರ್ಶಿ : (ಎತ್ತಿಕೊಂಡು ನೋಡುತ್ತಾ) ಊನ್ರಪ್ಪಾ ಜಾಬ್ ಕಾರ್ಡೇ !!

ಒಬ್ಬ : ಎಲ್ಲಿಂದ್ಲಾ ಬಂದ್ವು ಇವು ನಿನ್ನತ್ರ ?! ಯಾರ್ಲಾ ಕೊಟ್ರು ನಿಂಗೆ ?

ತಿಕ್ಕಲ ವ್ಯಕ್ತಿ : ವಿಕಟವಾಗಿ ನಗುತ್ತಾ . . . . ಯಾರು ಕೊಡ್ತಾರೆ ? ಯಾರೂ ಕೊಡೋಲ್ಲ ! ಕಿತ್ಕೋಬೇಕಾಗುತ್ತೆ . . . . ಕಸ್ಕೋಬೇಕಾಗುತ್ತೆ . . . . !

ಇನ್ನೊಬ್ಬ : ಯಾರತ್ರ ಕಿತ್ಕೊಂಡೋ ?

ತಿಕ್ಕಲ ವ್ಯಕ್ತಿ : ಇನ್ಯಾರತ್ರ . . . . ನಮ್ಮೂರಾಗೆ ಔನಲ್ಲಾ . . . . ಕಂತ್ರಾಟ್ ಕುರುಗೇಶ ಅವ್ನತ್ರ.

ಒಬ್ಬ : ಅವ್ನತ್ರ ಯಾಕಿದ್ವೋ ಇಷ್ಟೊಂದ್ ಕಾರ್ಡು ?

ತಿಕ್ಕಲ ವ್ಯಕ್ತಿ : ಕಳ್ಳನ್ಮಗಾ . . . . ಸೆಕೆಟ್ರಿನಾ ಒಳಿಕಾಕ್ಕಂಡು ಊರಾಗಿರೋರ ಹೆಸ್ರಲೆಲ್ಲಾ ಕಾರ್ಡ್ ಮಾಡ್ಸಿಕೊಂಡು, ಯಾರ್‍ಯಾರಕೈಲೋ ಕೆಲ್ಸ ಮಾಡ್ಸೋದು, ಅವ್ರೂ ಇಲ್ಲಾ ಅಂದ್ರೆ ಜೆಸಿಬೀಲಿ ಕೆಲ್ಸ ಮಾಡ್ಸಿ, ಎಲ್ಲಾರ ಕೂಲಿನೂ ಗುಳುಂ ಮಾಡ್ತಿದ್ದ. ಇನ್ನೊಂದಷ್ಟು ಜನಕ್ಕೆ ಎಂಜಲು ಕಾಸಿನ ಆಸೆ ತೋರ್ಸಿ, ಕಾರ್ಡ್ ಇಸ್ಕೋತಿದ್ದಾ .

ಇನ್ನೊಬ್ಬ : ಎಂಗ್ಲಾ ಅದು . . . . ?

ತಿಕ್ಕಲ ವ್ಯಕ್ತಿ : ಕಳ್ಳನ್ಮಗಾ . . . . ಎಂಗೆ ಅಂತಾ ಏನು ಹೇಳಾದು ? ಕಾರು ಇಕ್ಕೊಂಡಿರೋ ಅವ್ನ ಹೆಂಡ್ತಿ, ಮಕ್ಕಳ ಹೆಸರ್ನೆಲ್ಲಾ ಸೇರ್ಸಿದ್ದ. ಊರಾಗೆ ಯಾರ್‍ಯಾರಿಗೆ ಇಂಥ ಕೂಲಿ ನಾಲಿ ಬೇಕಾಗಿಲ್ವೋ ಅವ್ರ ಹೆಸ್ರಲ್ಲೂ ಕಾರ್ಡ್ ಮಾಡ್ಸಿ ಮಡಿಕಂಡಿದ್ದ. ಅಷ್ಟೇ ಏನು ? ಈ ಯೋಜನೆ ಬಗ್ಗೆ ಗೊತ್ತಿಲ್ದೋರ ಹೆಸರಿನ ಕಾರ್ಡೆಲ್ಲಾ ಅವನತ್ರಾನೇ ಇದ್ವು . . . .

ಒಬ್ಬ : (ಚಕಿತನಾಗಿ) ಆಮೇಲೆ . . . .

ತಿಕ್ಕಲ ವ್ಯಕ್ತಿ : ಕಳ್ಳನ್ಮಗಾ . . . ., ಒಂದ್ಸಾರಿ ಸಾಮಾಜಿ ಲೆಕ್ಕ ಪರಿಸೋಧನಾ ಸಮಿತಿ ಅಂತಾ ಐತಲ್ಲಾ ಅದ್ರ ಕೈಗೆ ಸಿಕ್ಕಾಕೊಂಡ ನೋಡು . . . . ! ಆವಾಗ ಊರ್ಮುಂದೆ ಜನ ಹಿಡ್ಕೊಂಡು ರುಬ್ಬಾರುಬ್ಬನ ರುಬ್ಬಿದ್ರು ನೋಡು . . . . ಆವಾಗ್ಲೇ ಅವ್ನ ಬ್ಯಾಗ್ ಬ್ಯಾಗ್‌ನೇ ನಾನು ಕಿತ್ಕೊಂಡು ಬಿಟ್ಟೆ. ಬೇಕಾದೋರದೆಲ್ಲಾ ಅವ್ರವ್ರಿಗೆ ಕೊಟ್ಟು, ಬ್ಯಾಡವಾದೋರದೆಲ್ಲಾ ಈ ಡಬ್ಬದಾಗಿ ತುಂಬಿಕೊಂಡು ಹೊರ್‍ಟೆ . . . . ಸುತ್ತಾ ಮುತ್ತಲ ಜನಕ್ಕೆ ಇದನ್ನ ಹೇಳಿ, ಅವರೂರಲ್ಲೂ ಜನ ಮೋಸ ಹೋಗಾದು ತಪ್ಸಾನಾ ಅಂತಾ . . . .

ಜನ ಚಕಿತರಾಗಿ ಅವನತ್ತ ನೋಡುವರು, ಮುಖ್ಯ ಪಾತ್ರದಾರಿ, ಅವನನ್ನು ಹೆಮ್ಮೆಯಿಂದ ನೋಡುತ್ತಾ, ಅಪ್ಪಿಕೊಳ್ಳುವನು.

ತಿಕ್ಕಲ ವ್ಯಕ್ತಿ : ಜನರೇ . . . . ನೀವು ಮಾತ್ರ ಜಾಬ್ ಕಾರ್ಡ್ ತಗೊಂಡ್ರೆ ಆಗೋಲ್ಲ. ಉಳ್ದೋರ ಮೇಲೂ ಒಂದು ಕಣ್ಣಿಟ್ಟಿರ್ಬೇಕು. ಇಲ್ಲಾಂದ್ರೆ ಕೆಲವರು ಅದನ್ನ ದುರುಪಯೋಗ ಮಾಡಾಕೆ ಕಾಯ್ತಿರ್‍ತಾರೆ. ಹಾಗೆ ಮಾಡಿದ್ರೆ ಯೋಜನೆಯ ಉದ್ದೇಶ ಸಫಲ ಆಗೋದಿಲ್ಲ, ಸಿಗ್ಬೇಕಾದೋರಿಗೆ ಫಲ ಸಿಗೋದಿಲ್ಲ . . . . ನೆನಪಲ್ಲಿ ಇಟ್ಕೊಳ್ಳಿ. ನಾನು ಬಂದ ಕೆಲ್ಸ ಮುಗೀತು. ನಾನು ಬರ್‍ತೀನಿ . . . . ನಮಸ್ಕಾರ. (ಗುಂಪಿನಿಂದ ನಿರ್ಗಮಿಸುವನು. ಜನ ಕ್ಷಣಕಾಲ ಅವನತ್ತ ನೋಡುವರು, ಕೆಲವರು ಹಿಂದಿನಿಂದಲೇ ನಮಸ್ಕರಿಸುವರು)

ಉಳಿದ ಜನ : (ಕಾರ್ಯದರ್ಶಿಯತ್ತ ತಿರುಗಿ) ಅದ್ಸರೀ . . . . ಊರಾಗೆ ಒಬ್ರು ಅರ್ಜಿ ಕೊಟ್ರೆ, ಎಲ್ರೂಗೂ ಕೂಲಿ ಕೊಡ್ತೀರೇನ್ರೀ ?!

ಕಾರ್ಯದರ್ಶಿ : ನಿಮ್ಮಲ್ಲಿ ಒಬ್ರಿಗೆ ಲಗ್ನ ಕಟ್ಸಿ ಊರ ಮಂದೀಗೆಲ್ಲಾ ಮದ್ವೆ ಮಾಡ್ತೀರೇನ್ರೀ ?

ಜನ : ಅದೆಂಗಾದಾತು ಹೇಳಿ !! ಮತ್ತೆ ಅವರೂರಲ್ಲಿ ಅದೆಲ್ಲಾ ಎಂಗಾತು ?

ಕಾರ್ಯದರ್ಶಿ : ಅಲ್ಲಿ ಎಂಗಾತೋ ನನ್ಗೆ ಗೊತ್ತಿಲ್ಲ. ಆದ್ರೆ ಇಲ್ಲಿ ಯಾರ್ಗೆ ಕೂಲಿ ಅಗತ್ಯ ಇದ್ಯೋ ಅವ್ರು ಬಂದು ಅರ್ಜಿ ಕೊಟ್ಟು ತಮ್ಮ ಹೆಸ್ರ ನಮೂದು ಮಾಡ್ಸಿದ್ರಾನಾ . . . ಅವ್ರಿಗೆ ಕೆಲ್ಸ ಗ್ಯಾರಂಟಿ ನೋಡ್ರಿ !!

ಜನ : ಕೆಲ್ಸ ಬೇಕೂಂದ್ರ, ನಮೂದು ಮಾಡ್ಸಾದು ಅಷ್ಟೊಂದು ಮುಖ್ಯಾನೇನ್ರೀ ?

ಕಾರ್ಯದರ್ಶಿ : ಅದೇನೋ ಅಂತಾರಲ್ಲಾ . . . . ರಾತ್ರಿ ಎಲ್ಲಾ ರಾಮಾಯಣ ಕೇಳಿ ಬೆಳ್ಗಾಗತ್ಲೂ ರಾಮಂಗು ಸೀತೆಗೂ ಏನಾಗ್ಬೇಕು ಅಂತ ಕೇಳ್ದಂಗಾತು. ಅದ್ರ ಮಹಾತ್ಮೆನಾ ಈವರ್ರೂ ಕೇಳಿಲ್ಲಲ್ವೇನ್ರೀ ! ಅದು ಬರೀ ನಮೂದಲ್ಲ ನೋಡ್ರೀ, ಜಾಬ್ ಕಾರ್ಡ್ . . . . ಪಡಕೊಳ್ಳೋದು ಮತ್ತು ಅದನ್ನ ಸದುಪಯೋಗ ಪಡಿಸಾದು ಮುಖ್ಯ ನೋಡ್ರೀ ! ಅದಕ್ಕೆ ನಾನು ಹೇಳಾದು ನೀವು ಒಮ್ಮೆ ಉದ್ಯೋಗ ಚೀಟಿ ಪಡ್ಕೊಂಡ್ರಾಂದ್ರಾ ನಮ್ಗೆ ಬಂತು ತಲೀಬೇನಿ ಅಂತಾನೇ ಅರ್ಥ.

ಜನ : ಯಾಕಾ, ನಾವು ಉದ್ಯೋಗ ಚೀಟಿ ಪಡೆದ್ರ ನಿಮಗ್ಯಾಕ ಬರುತ್ತಾ ತಲೀಬೇನಿ ?

ಕಾರ್ಯದರ್ಶಿ : ಒಂದೂ ಈಗ ಕೇಳಿದ್ರಲ್ಲಾ ಅಂಗಾಗುತ್ತಾ, ಆವಾಗ್ಲೂ ಅದು ನಮ್ಮ ತಲೆಗೆ ಬರುತ್ತಾ. ಅಲ್ದೇ ಸರ್ಕಾರದ ಇನ್ನೊಂದು ಕಾನೂನಿದ್ಯಪ್ಪಾ . . . . ನಾವೇನೂ ಮಾಡೋಹಂಗಿಲ್ಲ. ನೀವು ಅರ್ಜಿ ಹಾಕಿ, ಉದ್ಯೋಗ ಚೀಟಿ ಪಡೆದ 30 ದಿನಗಳೊಳ್ಗಾ ನಾವು ನಿಮ್ಗ ಕೆಲ್ಸ ಕೂಲಿ ಕೊಡ್ಲಿಲ್ಲಾಂದ್ರಾ . . . .

ಒಬ್ಬ : (ಆತುರವಾಗಿ) ಏನಾಗತ್ಕೈತಿ ?

ಕಾರ್ಯದರ್ಶಿ : ನಾವು ನಿಮ್ಗೆ ನಿರುದ್ಯೋಗ ಭತ್ಯ ಕೊಡ್ಬೇಕಾತ್ಕೈತಿ !!

ಕೆಲವರು : ಅಂಗಾ . . . . ?! ಅಂಗಾದ್ರಾ ಇದ್ಯಾವುದೋ ಚಲೋ ಕಾಯಿದಿ ಅದಾ !! ಬಿಡ್ರೀ ಈಗ ನೀವು ನಮಗಾ ಜಾಬ್ ಕಾರ್ಡ್ ಕೊಡ್ರಿ, ನೀವೇನೂ ಕೆಲ್ಸ ಕೊಡ್‌ಬ್ಯಾಡ್ರೀ . . . . 30 ದಿನ ಆದ್ ಮ್ಯಾಲ ನಿರುದ್ಯೋಗ ಭತ್ಯ ಕೊಟ್ಟು ಬಿಡ್ರಿ. ಅಲ್ವೇನ್ರಲ್ಲಾ ?

ಮತ್ತೆ ಕೆಲವರು : ಥೂ . . . . ನಿಮ್ಮ ಜನ್ಮಕ್ಕಿಷ್ಟು ಬೆಂಕಿ ಹಾಕ್ತು ?! ನಾವು ಕೂಲಿ ಸಿಕ್ಕಿದ್ರೆ ಸಾಕಪ್ಪಾ ಅಂತಾ ಕಾಯ್ತಾ ಇದ್ರೆ, ಕಳ್ಳಾಟ ಹೇಳಿಕೊಡ್ತೀರಾ ? ಮುಠಾಳ್ರಾ . . . . (ಉಳಿದವರು ಅದೂ ಇದೂ ಬೈಯುವರು)

ಅಷ್ಟರಲ್ಲಿ ಅಲ್ಲಿದ್ದ ಹಳ್ಳಿ ಜನರೆಲ್ಲಾ ಒಬ್ಬೊಬ್ಬರಾಗಿ ಅರ್ಜಿ ಪಡೆದು, ತುಂಬಲು ಆರಂಭಿಸುವರು, ತುಂಬಿ ಮುಗಿದ ನಂತರ ಕೈಯಲ್ಲಿದ್ದ ಅರ್ಜಿಯನ್ನೇ ಎತ್ತಿ ಹಿಡಿದು ನಿಲ್ಲವರು.

ಮೊದಲು ಬಿದ್ದ ಹುಡುಗಿ ವೀರಭದ್ರನ ಭುಜವೇರುವಳು.

*ವೀರಗಾಸೆಯ ತಂಡ ಜನಗಳನ್ನುದ್ದೇಶಿಸಿ . . . .*
*ಜನಗಳೆ ಜನಗಳೆ ಜಾಬ್ ಕಾರ್ಡ್*
*ಪಡೆಯಿರಿ ಪಡೆಯಿರಿ ಜಾಬ್ ಕಾರ್ಡ್*
*ಜಾಬ್ ಕಾರ್ಡ್, ಜಾಬ್ ಕಾರ್ಡ್, ಜಾಬ್ ಕಾರ್ಡ್ ॥*
*ಜಾಬಿಕೆ ಮೂಲ ಜಾಬ್ ಕಾರ್ಡ್*
*ಕೆಲಸಕೆ ಬೇಕು . . . . ಕೂಲಿಗೆ ಬೇಕು . . . .*
*ಮೊದಲಿಗೆ ಬೇಕು . . . . ಜಾಬ್ ಕಾರ್ಡ್*
*ಜಾಬ್ ಕಾರ್ಡ್, ಜಾಬ್ ಕಾರ್ಡ್, ಜಾಬ್ ಕಾರ್ಡ್ ॥*

*ದೊರೆಗಳೆ ದೊರೆಗಳೆ ಜಾಬ್ ಕಾರ್ಡ್*
*ಪಡೆಯಿರಿ ಪಡೆಯಿರಿ ಜಾಬ್ ಕಾರ್ಡ್*
*ದೊರೆಗಳೆ ದೊರೆಗಳೆ ಜಾಬ್ ಕಾರ್ಡ್ ॥*
*ಹಾಡುತ್ತಾ ಕುಣಿಯುವರು, ಜನರೂ ಅವರ ಜೊತೆಗೂಡುವರು.*

* * *

# ಕೊಳಕಮಂಡಲ

– ಮಂಜುನಾಥ ಬೆಳಕೆರೆ
ನಟ ಹಾಗೂ ನಾಟಕಕಾರ

(ವೃತ್ತಾಕಾರದಲ್ಲಿ ಜನ ಸೇರಿದ್ದಾರೆ. ಗುಂಪಿನಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷರು ಸೆಕ್ರಟರಿ, ಏಜೆಂಟ್, ಸದಸ್ಯರು ಮುಂತಾದವರು ಇದ್ದಾರೆ. ಹಾವಾಡಿಗ ತಂಡವೊಂದು ಹಾವಾಡಿಸಲು ಸಕಲ ಸಿದ್ದತೆಯನ್ನು ಮಾಡಿಕೊಂಡು ಬಂದಿದೆ. ವೃತ್ತಾಕಾರದಲ್ಲಿ ಅಲ್ಲಿ ಅಲ್ಲಿ ಹಾವಿನ ಬುಟ್ಟಿಗಳನ್ನು ಇಟ್ಟಿದ್ದಾರೆ. ಒಂದು ದೊಡ್ಡ ದೋಣಿಬುಟ್ಟಿ ಇದೆ. ಅದರಲ್ಲಿ ಒಬ್ಬ ಮನುಷ್ಯ ಅರಾಮಾಗಿ ಅಡಗಿಕೊಳ್ಳಬಹುದು. ಆಟ ಪ್ರಾರಂಭವಾಗುತ್ತದೆ. ಹಿಂದಿ ಹಾಡನ್ನು ಹಾರ್ಮೋನಿಯಂಯಲ್ಲಿ ನುಡಿಸುತ್ತಿದ್ದಾನೆ. ಹುಡುಗಿಯೊಬ್ಬಳು ದೇಹಕ್ಕೆ ಉಸಿರೇ ಸದಾ ಇಲ್ಲ ಆಧಾರ ಅಂತ ಹಾಡು ಹಾಡುತ್ತಾ ಡ್ಯಾನ್ಸ್‌ನ್ನು ಮಾಡುತ್ತಿದ್ದಾಳೆ. ಕೆಲವು ನೆಗೆಯುತ್ತಿದ್ದಾರೆ ಕೆಲವರು ಲಾಗ ಹಾಕುತ್ತಿದ್ದಾರೆ. ಪ್ರತಿಯೊಂದಕ್ಕೂ ಪ್ರೇಕ್ಷಕರಿಂದ ಚಪ್ಪಾಳೆ ಬರುತ್ತದೆ. ಹಾವಾಡಿಗರ ನಾಯಕ ಮುಂದೆ ಬರುತ್ತಾನೆ)

ಹಾವಾಡಿಗ : ಜನರೆಲ್ಲ ಒಂದು ಸಾರಿ ಚಪ್ಪಾಳೆಯನ್ನು ತಟ್ಟಿ (ಜನರೆಲ್ಲ ಚಪ್ಪಾಳೆಯನ್ನು ತಟ್ಟುತ್ತಾರೆ) ಹೇ . . . . ಬಾಬು (ಹಾವಾಡಿಗರಲ್ಲಿ ಒಬ್ಬ ಹುಡುಗ ಬರುತ್ತಾನೆ)

ಬಾಬು : ಬಂದ್ಯೆ ಅಣ್ಣ . . . .

ಹಾವಾಡಿಗ : ಹೇ ಬಾಬು ಹಾವಿನಾಟ ನೋಡಲಿಕ್ಕೆ ಯಾರು ಯಾರು ಬಂದಿದ್ದಾರೆ.

ಬಾಬು : ಗ್ರಾಮಪಂಚಾತಿ ಅಧ್ಯಕ್ಷರು (ಅಧ್ಯಕ್ಷ ಎದ್ದು ಸುತ್ತಲೂ ಕೈ ಮುಗಿಯುತ್ತಾನೆ)

ಅಧ್ಯಕ್ಷ : ಮಹಾಜನಗಳೇ ನಾನು ಗ್ರಾಮ ಪಂಚಾಯಿತಿ ಅಧ್ಯಕ್ಷ ಚಿನ್ನೂರಪ್ಪ ಮಣಿಸಿಕಾಯಿ. ಶಾರ್ಟ್ ಅಂಡ್ ಸ್ವಿಂಟಾಗಿ ಸಿ.ಎಂ.ಮು ಅಂತ ಕರೆಯುತ್ತಾರೆ (ಜನರು ಚಪ್ಪಾಳೆಯನ್ನು ತಟ್ಟುತ್ತಾರೆ)

ಬೈರ : (ತನ್ನ ಪಕ್ಕದ ರಾಜನಿಗೆ) ಎಲೆಕ್ಷನ್ನಾಗೆ ಭಾಷಣ ಮಾಡಿ ಮಾಡಿ ಅಭ್ಯಾಸಾಗಿ ಬಿಟ್ಟಿದೆ.

ಬಾಬು : ಸೆಕ್ರೆಟ್ರಿ, ಪಂಚಾಯಿತಿ ಸದಸ್ಯರು ಬಂದಿದೆ. ಊರು ಜನ ಬಂದವ್ರೆ (ಎದ್ದು ನಿಂತು ಕೈ ಮುಗಿಯುತ್ತಾರೆ ಜನರು ಚಪ್ಪಾಳೆಯನ್ನು ತಟ್ಟುತ್ತಾರೆ)

ಉಪಾಧ್ಯಕ್ಷ : ಹೇ ಹಾವಾಡಿಗಪ್ಪ ನಾನು ಗ್ರಾಮ ಪಂಚಾಯಿತಿ ಉಪಾಧ್ಯಕ್ಷ ಕೆಂಡಗಣ್ಣಪ್ಪ ಮಾವಿನಕಾಯಿ ಬಂದೀವ್ನಿ. ಎಲ್ಲರೂ ನನ್ನ ಕೆ.ಎಂ.ಮು ಅಂತ ಕರೀತ್ತಾರೆ (ಜನರು ಚಪ್ಪಾಳೆಯನ್ನು ಹೊಡೆಯೋದಿಲ್ಲ) ಚಪ್ಪಾಳೆ ಹೊಡ್ರೀಲಾ (ಜನರು ಚಪ್ಪಾಳೆಯನ್ನು ತಟ್ಟುತ್ತಾರೆ–ನಗುತ್ತಾರೆ)

ಅಧ್ಯಕ್ಷ : (ಸೆಕ್ರಟರಿಗೆ) ಇವನ್ಯಾಕೆ ಬಂದ ಇಲ್ಲಿ

ಸೆಕ್ರಟರಿ : ಬರಲಿ ಬಿಡಿ ಅಧ್ಯಕ್ಷರೇ ನಾವೇ ಸುಮ್ಮಿದ್ರಾಯಿತು.

ಹಾವಾಡಿಗ : ಹೇ ಬಾಬು ಊರಿನ ದೊಡ್ಡವರು, ಚಿಕ್ಕೋರು ಬಂದವರೆ ಅಮ್ಮಗೋಳು ಅಕ್ಕಗೋಳು

ಬಾಬು : ಅವರು ಬಂದವ್ರೆ

ಹಾವಾಡಿಗ : ಯಾರೂ

ಬಾಬು : ಚೆಂದ ಚೆಂದ ಹುಡುಗೇರು

ಹಾವಾಡಿಗ : ಸದಾಶಿವನಿಗೆ ಅದೆ ಧ್ಯಾನ ಅನ್ನೋವಂಗೆ ನಿನಗೆ ಹುಡುಗೇರದೇ ಧ್ಯಾನ ನೋಡು. ಆಯಿತು ಬಿಡು. ಹೇ ಬಾಬು. ದೊಡ್ಡವರಿಗೆ ಊರಿನ ಜನರಿಗೆ ಒಂದು ಲಾಗ ಹಾಕು. ನಿನ್ನ ಲಾಗ ನೋಡಿ ನಂ ಊರಿನ ಜನ ಖುಷಿಯಾಗಲಿ (ಬಾಬು ಲಾಗವನ್ನು ಹಾಕುತ್ತಾನೆ. ಜನರಲ್ಲಿ ಖುಷಿ)

| | | |
|---|---|---|
| ಹಾವಾಡಿಗ | : | ನೋಡಿ ಸ್ವಾಮಿ ನಮ್ಮ ಹುಡುಗ ಲಾಗ ಹಾಕ್ತ ಇರೋದು ನಿಮ್ಮಿಂದ ಕಾಸು ಕೇಳಾಕಲ್ಲ, ಇನಾಮ್ ಕೇಳಾಕ್ಲ. ನಾವು ಕೇಳೋದು ಒಂದೇ |
| ಬಾಬು | : | (ತಟ್ಟನೆ) ಹುಡುಗಿ (ಜನರು ನಗುತ್ತಾರೆ) |
| ಹಾವಾಡಿಗ | : | ನಮ್ಮ ಹುಡಗನಿಗೆ ಇನ್ನೂ ಮದುವೆ ಆಗಿಲ್ಲ ನೋಡಿ ಅದಕ್ಕೆ ಹಾಗೆ ಹೇಳ್ತದೆ. ಹೇ ಬಾಬು ಜನರಿಗೆ ನಮ್ಮ ಆಟ ನೋಡಿ ಖುಷಿಗೆ ಆದ್ರೆ ನಿಂಗೆ ಹುಡುಗಿ ಕೊಟ್ಟು ಮದುವೆ ಮಾಡ್ತಾರೆ ಬಿಡು. ನೋಡಿ ಸ್ವಾಮಿ ನಮ್ಮ ಆಟ ನೋಡಿ ನಿಮಗೆ ಖುಷಿಗೆ ಆದ್ರೆ ಒಂದು ಸಲ ಜೋರಾಗಿ ಚಪ್ಪಾಳೆ ತಟ್ಟಿ.<br>(ಚಪ್ಪಾಳೆ ತಟ್ಟುತ್ತಾರೆ) |
| ಹಾವಾಡಿಗ | : | ನಾವು ಈ ಊರಿಗೆ ಬಂದಿದ್ದು ಯಾಕೆ |
| ಬಾಬು | : | ಹಾವು ಬಿಡೋಕೆ |
| ಹಾವಾಡಿಗ | : | ಹೇ ಬಾಬು ಹಾವು ಬಿಡೋಕಲ್ಲ ಹಾವು ತೋರಿಸಾಕೆ |
| ಬಾಬು | : | ಹೌದು ಹಾವಿನ ಆಟ ಆಡಿಸೋಕೆ |
| ಹಾವಾಡಿಗ | : | ಹೌದು ಅಣ್ಣ ಇಲ್ಲಿ ಸೇರಿದ ತಂದೆ ತಾಯಿಗಳೇ ಹಾವಾಟ ತೋರಿಸ್ತೇನಿ. ಈ ಬುಟ್ಟಿಯೊಳಗೆ ಭಾರಿ ಭಾರಿ ಹಾವುಗಳಿವೆ. ನಿಮಗೆಲ್ಲ ಅದರ ಆಟ ತೋರಿಸತ್ತೇವೆ |
| ಬಾಬು | : | ಹಾವು ಪುಂಗಿ ಊದಿದ್ರೆ ಕುಣಿತ್ತದೆ. ಹಾಡು ಹೇಳಿದ್ರೆ ಡ್ಯಾನ್ಸ್ ಮಾಡ್ತದೆ ಸ್ವಾಮಿ. |
| ಹಾವಾಡಿಗ | : | ಹೇ ಬಾಬು ನಮ್ಮ ಬುಟ್ಟಿಯಾಳಗೆ ಎಂತೆಂತಾ ಹಾವು ಇದ್ದಾವೆ |
| ಬಾಬು | : | (ಹಾಡು) |

ಕರಿಹಾವು, ಬಿಳಿ ಹಾವು, ಹಸಿರು ಹಾವು,
ಗಿಡ್ಡಹಾವು, ಕೆರೆಹಾವು, ಹೆಬ್ಬಾವು ಕಾಳಿಂಗ ಸರ್ಪ
ನಾಗರಹಾವು, ಗೋಧಿಹಾವು, ಚೋಟಾ ಹಾವು,
ಕಟ್ಟೆ ಹಾವು, ಉದ್ದಹಾವು , ಎರಡು ತಲೆಹಾವು
ಕೊಳಕಮಂಡಲ, ಅಣ್ಣ ಕೊಳಮಂಡಲ

| | | |
|---|---|---|
| ಹಾವಾಡಿಗ | : | (ಹಾಡು ಬಾರಿಸುತ್ತಾನೆ ಹಾವಾಡಿಗ ಹಾವಿನ ಬುಟ್ಟಿಗ ಬಳಿ ಹೋಗುತ್ತಾನೆ. ಒಂದು ದೊಡ್ಡ ಹಾವಿನ ಬುಟ್ಟಿ ಬಳಿ ಹೋಗುತ್ತಾನೆ) ನೋಡಿ ಸ್ವಾಮಿ, ನೀವು ಸಿನಿಮಾದಾಗೆ, ಮೈಸೂರು ಜೂನಾಗೆ, ಕಾಡಿನಾಗೆ, ಅಡಿವಿಯಾಗೆ ಹಾವುಗಳನ್ನು ನೋಡ್ತೀರಾ. ಆದರೆ ಇಂತಾ ಹಾವುಗೆ ನೀವು ನೋಡಿರೋಲ್ಲ. |
| ಬಾಬು | : | ನೋಡಿದ್ದಾರೆ ಪ್ಲಾಸ್ಟಿಕ್ ಹಾವು (ಜನರು ನಗುತ್ತಾರೆ) |
| ಹಾವಾಡಿಗ | : | ನೋಡಿ ಸ್ವಾಮಿ ಹತ್ತಾರು ಕೊಳಕು ಮಂಡಲ ಹಾವುಗಳಿವೆ. ಈ ಕೊಳಕು ಮಂಡಲಗಳು ಸಾಮಾನ್ಯವಾದವಲ್ಲ. ಇದರ ನಾಲಗೆ ಮನುಷ್ಯನ ಮೈಗೆ ತಗಲಿದ್ರೆ ಮೈಯೆಲ್ಲ ರಣಯಾಗುತ್ತೆ. ಖಾಲಿ ಬಿಳಿ ಪೇಪರ್ನ್ನ ನಕ್ಕಿದ್ರೆ ಬಿಳಿ ಪೇಪರ್ ನೀಲಿಯಾಗುತ್ತೆ. ಆದರೆ ಸ್ವಾಮಿ ನೋಟಿಗೆ ನಿಕ್ಕಿದ್ರೆ ಮಾತ್ರ ಏನೂ ಆಗಲ್ಲ ಸ್ವಾಮಿ. ಈ ಕೊಳಕು ಮಂಡಲ ನೋಟುಗಳನ್ನು ನುಂಗಿ ಬಿಡುತ್ತೇ ಈ ಆಟ ನಾನು ನಿಮಗೆ ತೋರಿಸುತ್ತೇನೆ ಯಾವ ಅಣ್ಣ ಯಾವ ಅಕ್ಕ ಕೊಡ್ತಾರೆ 100 ರೂಪಾಯಿ 200 ರೂಪಾಯಿ 500 ರೂಪಾಯಿ |
| ಅಧ್ಯಕ್ಷ | : | ಹೇ ಹಾವಾಡಿಗಪ್ಪ ಎಲ್ಲಿಯಾದ್ರು ಉಂಟಾ ? ಹಾವು ನೋಟು ತಿನ್ನೋದು ಎಲ್ಲಿಯಾದ್ರೂ ಉಂಟಾ ? |
| ಹಾವಾಡಿಗ | : | ಸ್ವಾಮಿ ನಮ್ಮದು ನಾಲಗೆ ಸುಳ್ಳಾಡೋಲ್ಲ. ನಿಮ್ಮ ಕಣ್ಣೆದುರಿಗೆ ನೋಟಿಗೆ ತಿನ್ನಿಸಿ ತೋರಿಸುತ್ತೇನೆ ಸ್ವಾಮಿ ನೀವೆಲ್ಲ ದೊಡ್ಡ ಮನಸ್ಸು ಮಾಡಿ ನೋಟು ಕೊಡಿ ಸ್ವಾಮಿ (ಹಾಡು ಬರುತ್ತದೆ ಬಾಬು ಟೋಪಿಯನ್ನು ತೆಗೆದುಕೊಂಡು ಒಂದು |

ಸುತ್ತ ಬರುತ್ತಾನೆ ಯಾರು ನೋಟು ಹಾಕುವುದಿಲ್ಲ ಬೈರ 500 ರೂಪಾಯಿ ನೋಟು ಹಾಕುತ್ತಾನೆ ಅದನ್ನು ಅಧ್ಯಕ್ಷ ಗಮನಿಸುತ್ತಾನೆ)

ಅಧ್ಯಕ್ಷ : ಅರರೇ ಈ ಭೈರನತ್ರ 500 ರೂಪಾಯಿ ನೋಟು ಎಲ್ಲಿಂದ ಬಂತು ಸೆಕ್ರಟರಿ.

ಸೆಕ್ರಟರಿ : ಅದೇ ನಾನು ಯೋಚ್ನೆ ಮಾಡ್ತಿವ್ನಿ. ಈ ಒಂದು ತಿಂಗಳ ಹಿಂದೆ ಉದ್ಯೋಗ ಖಾತರಿ ಯೋಜನೆಯಲ್ಲಿ ಕೆಲಸ ಕೊಡಿ ಅಂತ ಅರ್ಜಿ ಕೊಟ್ಟಿದ್ದಾನೆ. ಕೈಯಲ್ಲಿ ಕೆಲಸ ಬೇರೆ ಇಲ್ಲ 500 ರೂಪಾಯಿ ಹಾವಾಡಿಗೆ ಹಾಕ್ತಾನೆ ಅಂದ್ರೆ ಹೆಂಗೆ ಅಧ್ಯಕ್ಷರೆ

ಅಧ್ಯಕ್ಷ : ಹೇ ಗೊತ್ತಾತು ಬಿಡು. ಈ ಹಾವಾಡಿಗನೇ ಮೊದ್ಲೇ ಅವನ್ಗೆ 500 ಕೊಟ್ಟಿವ್ನೆ. ಈಗ ಇವನು ದಾನಶೂರ ಕರ್ಣನಂಗೆ ಧಿಮಾಕಿನಿಂದ 500ರೂಪಾಯ್ನ ಹಾಕವ್ನೆ..

ಸೆಕ್ರಟರಿ : ಇರಬೌದು ಬಿಡಿ

ಅಧ್ಯಕ್ಷ : ಅಲ್ಲ ಈ ಹಾವಾಡಿಗ ನನಗೆ ಕೊಟ್ಟು ಇಂಗಿಂಗೆ ಅಂತ ಹೇಳಿದ್ರೆ ನಾನೇ 500, ಜೊತೆಗೆ ನನ್ನದು 1 ರೂಪಾಯಿ ಸೇರಿ 501 ಹಾಕ್ತಿದ್ದೆ.

ಹಾವಾಡಿಗ : ನೋಡಿ ಸ್ವಾಮಿ ಅಣ್ಣನೋರು 500 ರೂಪಾಯಿ ಕೊಟ್ಟವ್ರೆ. ಅವರದು ಹೆಸರಿನ ಮ್ಯಾಲೆ ಒಂದು ಚಪ್ಪಾಳೆ ಹಾಕಿ (ಜನರು ಚಪ್ಪಾಳೆಯನ್ನು ಹಾಕುತ್ತಾರೆ) ಹೇ . . . . ಈ ನೋಟು ಹಾವು ಹೆಂಗೆ ತಿನ್ತದೆ ಅಂತ ನಾವು ಜನರಿಗೆ ತೋರಿಸೋಣ

ಬಾಬು : ಆಗಲಿ ಅಣ್ಣ ನೋಡಿ ಸ್ವಾಮಿ ಹಾವು ನೋಟು ತಿನ್ನೋದನ್ನು ಯಾರು ಮೋಬೈಲ್ನಲ್ಲಿ ಶೂಟಿಂಗು ಮಾಡಬೇಡ ಸ್ವಾಮಿ.

(ಹಾವಾಡಿಗ ದೋಣೀ ಆಕಾರ ದೊಡ್ಡ ಬುಟ್ಟಿ ಬಳಿ ಹೋಗುತ್ತಾನೆ)

ಹಾವಾಡಿಗ : ಹೇ ಬಾಬು ನಾವು ಹಾವುಗೆ ನೋಟು ತಿನ್ನಿಸೋದಕ್ಕೆ ಮೊದ್ಲು ನಮ್ಮ ಮಾಯ ಬುಟ್ಟಿ ನಮ್ಮ ಜನಕ್ಕೆ ತೋರಿಸಿಬಿಡೋಣ. ಹೇ ಬಾಬು ಏನಿದು

ಬಾಬು : ಖಾಲಿ ಬುಟ್ಟಿ

ಹಾವಾಡಿಗ : ಇದರೊಳಗೆ ನೋಡಿ ಏನಿಲ್ಲ ಖಾಲಿಗೆ ಇದೆ. ಹೇ ಬಾಬು ನಿನಗೆ ಅಂಜನ ಹಚ್ಚಿಬುಟ್ಟು , ಬುಟ್ಟಿಯೊಳಗೆ ಹಾಕಿದ್ರೆ ನೀನು ಏನಾಗುತ್ತೀಯ ?

ಬಾಬು : ಗೊತ್ತಿಲ್ಲ.

ಹಾವಾಡಿಗ : ಹಾಗಾದ್ರೆ ನೋಡೇ ಬಿಡೋಣ. (ಅಂಜನದ ಡಬ್ಬವನ್ನು ತೆಗೆದುಕೊಳ್ಳುತ್ತಾನೆ ಅದನ್ನ ತೆಗೆದು ಕೈಗೆ ಹಚ್ಚಿಕೊಂಡು) ನೋಡಿ ಅಣ್ಣ ಇದು ಅಂಜನ. ನಮ್ಮ ಗುರುಗಳು ಹಿಮಾಲಯದಲ್ಲಿ ಹದಿನೆಂಟು ವರ್ಷ ತಪಸ್ಸು ಮಾಡಿ ಸಿದ್ದಿ ಮಾಡಿ ತಯಾರಿಸಿದ ಅಂಜನ. ಈ ಅಂಜನಗೆ ಹಚ್ಚಿಬಿಟ್ಟು ನಾನು ಈ ಹುಡುಗ ಬುಟ್ಟಿಯೊಳಗೆ ಹಾಕಿ ಬಿಡ್ತೇನಿ . . . . (ಅಂಜನವನ್ನು ಬಾಬುಗೆ ಹಚ್ಚಿಬಿಟ್ಟು ಬುಟ್ಟಿಯೊಳಗೆ ಮಲಗಿಸುತ್ತಾನೆ. ಅದರ ಮೇಲೆ ಒಂದು ದೊಡ್ಡ ಬಟ್ಟೆಯನ್ನು ಹೊದಿಸುತ್ತಾನೆ. ಹಿನ್ನಲೆಯಲ್ಲಿಸಂಗೀತ ಪ್ರಾರಂಭವಾಗುತ್ತದೆ.) ಹೆತ್ತ ತಾಯಿ ಮ್ಯಾಲೆ ಆಣೆ ಮಾಡಿ ಹೇಳ್ತಾನೆ ಸ್ವಾಮಿ. ಇದು ಮಾಯ ಅಲ್ಲ ಮಾಟ ಅಲ್ಲ ಮೋಡಿ ಅಲ್ಲ. ಆ ಭಗವಂತ ನಮಗೆ ಕೊಟ್ಟ ವಿದ್ಯೆ ಸ್ವಾಮಿ..ದಯಮಾಡಿ ಯಾರು ಕೈ ಕಟ್ಟಬೇಡಿ, ಹೆಬ್ಬೆರಳು ಮಡಚ್ಬೇಡಿ ಸ್ವಾಮಿ. ಕೈ ಕಟ್ಟಿದ್ರೆ, ಹೆಬ್ಬೆರಳು ಮಡಿಚಿದ್ರೆ ಹುಡುಗನ ಪ್ರಾಣಕ್ಕೆ ಅಪಾಯ ಅದೆ ಸ್ವಾಮಿ. ಹೇ ಬಾಬು ಒಳಗಡೆ ಏನು ಮಾಡ್ತದೆ.

ಬಾಬು : ದೇವರಿಗೆ ಧ್ಯಾನ ಮಾಡ್ತದೆ.

ಹಾವಾಡಿಗ : ಹೇ ಖುದಾ ಪರವದಿಗಾರ್, ಹೇ ಅಲ್ಲಾ, ತಿರುಪತಿ ತಿಮ್ಮಪ್ಪ, ಧರ್ಮಸ್ಥಳದ ಮಂಜುನಾಥ ಸ್ವಾಮಿ, ಕೋಟೆ ಅಂಜನಯ್ಯ ಹಟ್ಟಿ ಲಕ್ಕವ್ವ, ಸೌದತ್ತಿ ಎಲ್ಲವ್ವ . . . ಕಾಪಾಡು ತಾಯಿ . . . ಓಂ . . . ಪಟ್.

(ಕಣ್ಣ ಮುಚ್ಚುತ್ತಾನೆ ಹಿನ್ನಲೆಯಲ್ಲಿ ಸಂಗೀತ ಪ್ರಾರಂಭವಾಗುತ್ತದೆ ಜನರು ಕುತೂಹಲದಿಂದ ನೋಡುತ್ತಿದ್ದಾರೆ) ನೋಡಿ ನಮ್ಮದು ಹುಡುಗನ ದೇಹ ಮಾಯಯಾಗಿಬಿಡ್ತು ಸ್ವಾಮಿ. (ಒಂದು ಕೋಲನ್ನು ತೆಗೆದುಕೊಂಡು ಬುಟ್ಟಿಯೊಳಗೆ ಹಾಕಿ ಮೂಲೆ ಮೂಲೆಗೂ ತೀವಿಯುತ್ತಾನೆ) ಹೌದು ಸ್ವಾಮಿ ನಮ್ಮ ಬಾಬು ದೇಹ ಮಾಯವಾಗಿ ಬಿಟ್ಟಿದೆ ಆದ್ರೆ ಅವನ ಆತ್ಮ ಇಲ್ಲೇ ಇದೆ. ನೀವೆಲ್ಲ ಹೂಂ ಅಂದ್ರೆ . . . . ನಮ್ಮ ಬಾಬುಗೆ ಮಾತಾಡಿಸುತ್ತೇನೆ

ಜನರು : ಮಾತಾಡಿಸಿ

ಹಾವಾಡಿಗ : ಹೇ ಬಾಬು ಬಾ ಇಲ್ಲಿ (ಇನ್ನೊಬ್ಬ ಬರುತ್ತಾನೆ)

ಇನ್ನೊಬ್ಬ : ಬಂದ್ಯೆ ಅಣ್ಣ

ಹಾವಾಡಿಗ : ಜನ ಹೇಳ್ತಾರೆ ಬಾಬುಗೆ ಮಾತಾಡಿಸಿ ಬಿಡೋಣ.

ಇನ್ನೊಬ್ಬ : ಮಾತಾಡಿಸಿ.

ಹಾವಾಡಿಗ : ಸರಿ ಹಾಗಾದ್ರೆ . . . . ನೋಡಿ ಸ್ವಾಮಿ ನಾವು ನಮ್ಮ ಹುಡುಗಗೆ ಮಾತಾಡಿಸದೆ. ಅಲ್ಲಾನ ಮೇಲೇ ಆಣೆ ಮಡ್ಗಿ ಹೇಳ್ತೀನಿ. ನಮ್ಮ ಹುಡುಗಂದು ಆತ್ಮ ಮಾತಾಡುತ್ತೆ. ಈ ಆಟ ನೋಡಿ ಯಾರು ಹಾಗೆ ಹೋಗಬೇಡಿ ಸ್ವಾಮಿ ನಿಮ್ಮಕೈಲಾದಷ್ಟು ಕಾಸು ದಾನ ಮಾಡಿ

ಇನ್ನೊಬ್ಬ : ಅಣ್ಣ ಮಾತಾಡಿಸೋ ಮೊದ್ಲು ಅದನ್ನ ಹೇಳಿ ಬಿಡು.

ಹಾವಾಡಿಗ : ನೋಡಿ ಸ್ವಾಮಿ ನಮ್ಮ ಹುಡುಗ ಹೇಳ್ತದೆ. ಸತ್ಯ ಮುಚ್ಚಿಟ್ಟು ಆಟ ಮಾಡೋದು ಬ್ಯಾಡ ಅಂತ. ಏನಪ್ಪ ಅದು ಅಂದ್ರೆ ನಮ್ಮ ಬಾಬುಗೆ ಈಗ ನಾವು ಮಾತಾಡಿಸಿದ್ರೆ ನಮ್ಮ ಬಾಬು ನಿಮ್ಮ ಮನಸ್ಸಿನಲ್ಲಿರೋದನ್ನು ಹೇಳುತ್ತೆ ಸ್ವಾಮಿ. ನೀವ್ಯಾರು ಬೇಸರ ಮಾಡಿಕೊಳ್ಳಬಾರದು. ಇದು ಮಾಯ ಅಲ್ಲ ಸ್ವಾಮಿ ದೇವರಾಟ.. ಎಲ್ಲರೂ ಜೋರಾಗಿ ಚಪ್ಪಾಳೆ ತಟ್ಟಿ (ಜನರು ತಟ್ಟುತ್ತಾರೆ. ಹಿನ್ನಲೆಯಲ್ಲಿ ಸಂಗೀತ ಪ್ರಾರಂಭವಾಗುತ್ತದೆ) ಹೇ . . . . ರಾಮ್ ರಹೀಮ . . . . ಜೈ ಜನ್ಮಾಂಜನೇಯಸ್ವಾಮಿ ಹಟ್ಟಿ ಲಕ್ಕವ್ವ . . . . ಓಂ ಪಟ್ (ಸಂಗೀತ ತೀವ್ರವಾಗುತ್ತದೆ) ಹೇ ಬಾಬು ಬಾ ಇಲ್ಲಿ (ಬುಟ್ಟಿಯಲ್ಲಿರುವ ಬಾಬು ಮಾತಾಡುತ್ತಾನೆ)

ಆತ್ಮಬಾಬು : ಬಂದ್ಯೆ ....

ಹಾವಾಡಿಗ : ಎಲ್ಲಿದ್ದೀಯ

ಆತ್ಮಬಾಬು : ನಿಮ್ಮ ಪಕ್ಕ ....

ಹಾವಾಡಿಗ : ನನಗೆ ನೀನು ಕಾಣ್ತಿಲ್ಲ

ಆತ್ಮಬಾಬು : ನೀವು ಕಾಣ್ತೀರಿ

ಹಾವಾಡಿಗ : ನೋಡಿ ಸ್ವಾಮಿ ಆತ್ಮಗೆ ನಾವು ಕಾಣ್ತೇವಿ ನಮ್ಗೆ ಆತ್ಮ ಕಾಣ್ತಿಲ್ಲ ..... ಹೇ ಖುದಾ ..... ಪರವದಿಗಾರ್ ಜೈ ಶ್ರೀರಾಮ್ ..... ಹೇ ಬಾಬು ಬಾ ಇಲ್ಲಿ

ಆತ್ಮಬಾಬು : ಬಂದ್ಯೆ ....

ಹಾವಾಡಿಗ : ಇವರು ತಲೆಮ್ಯಾಲೆ ಏನು ಹಾಕೊಂಡಾರೆ ಹೇಳು

ಆತ್ಮಬಾಬು : ಕೆಂಪು ಬಣ್ಣದು ಪೇಟಾ ಕಟ್ಟಿಕೊಂಡಿದ್ದಾರೆ (ಜನರು ಚಪ್ಪಾಳೆಯನ್ನು ತಟ್ಟುತ್ತಾರೆ. ಹಾವಾಡಿಗೆ ರಾಜುನ ಬಳಿಗೆ ಬರುತ್ತಾನೆ)

ಹಾವಾಡಿಗ : ಹೇ ಬಾಬು ಇವರ ಮನಸ್ಸಿನಲ್ಲಿ ಏನಿದೆ ಅದನ್ನ ಹೇಳು

ಆತ್ಮಬಾಬು : ಹೇಳಿದ್ರೆ ಅವರು ನಿಮಗೆ ಬಡಿತ್ತಾರೆ, ಬೇಸರ ಮಾಡಿಕೊಳ್ತಾರೆ

ರಾಜು : ಇಲ್ಲ ಹೇಳಪ್ಪ ನಾನ್ಯಾಕೆ ಸತ್ಯ ಹೇಳಿದ್ರೆ ಹೊಡ್ಲೀ ಹೇಳು

ಹಾವಾಡಿಗ : ಹೇ ಬಾಬು ಅವರು ಹೊಡಿಯೋಲ್ಲ ಬೇಸರ ಮಾಡಿಕೊಳ್ಳಲ್ಲ ಹೇಳು

ಆತ್ಮಬಾಬು : ಇವರು ಪಕ್ಕದಳ್ಳಿಯಲ್ಲಿರೋ ಹುಡುಗಿನ ಹೆಂಗೆ ಹಾರಿಸಿಕೊಂಡು ಹೋಗೋದು ಅಂತ ಪ್ಲಾನ್ ಮಾಡ್ತಾರೆ (ಜನರು ಹೋ ಎಂದು ಕೂಗುತ್ತಾರೆ)

ಬೈರ : ಹೌದೇನ್ಲಾ

ರಾಜು : ಹೂಂ (ನಾಚಿಕೊಳ್ಳುತ್ತಾನೆ) ಹಾವಾಡಿಗಪ್ಪ ಹಂಗೆ ವಸಿ ಆತ್ಮಕೆ ಕೇಳಿಬಿಡು ನನ್ನದು ಅವಳ ಜೊತೆಗೆ ಮದುವೆ ಆಗತ್ತೋ ಇಲ್ಲವೋ ಅಂತ

ಹಾವಾಡಿಗ : ಕ್ಷಮಿಸಿ ನಮ್ಮ ಬಾಬುದು ಆತ್ಮ ನಿಮ್ಮ ಮನಸ್ಸಿನಲ್ಲಿರೋದು ಹೇಳ್ತೇ ಅಷ್ಟೆ ಭವಿಷ್ಯಗೆ ನುಡಿಯಲ್ಲ

ಬೈರ : ಅಲ್ಲ ಕನ್ಲಾ ಹಾರಿಸಿಕೊಂಡು ಹೋದ್ಮೇಲೆ ಮದುವೆನೂ ಆಗುತ್ತೆ ಹನಿಮೂನ್ ಆಗುತ್ತೆ ಬಿಡ್ಲಾ

ರಾಜು : ಹಂಗಂತಿಯಾ

ಹಾವಾಡಿಗ : ಹೇ ಬಾಬು ಬಾ ಇಲ್ಲಿ ಇವರನ್ನು ನೋಡು (ಒಂದಿಷ್ಟು ಜನ ತಲೆ ಮ್ಯಾಲೆ ಗಂಟು ಮೂಟೆ ಹೊತ್ತು ಕೊಂಡು ನಿಂತಿದ್ದಾರೆ)

ಆತ್ಮಬಾಬು : ನೋಡ್ದೆ

ಹಾವಾಡಿಗ : ಇವರು ಎಲ್ಲಿ ಹೊಂಟ್ವಾರೆ

ಆತ್ಮಬಾಬು : ಅವರಿಗೆ ಈ ಊರಿನಲ್ಲಿ ಮಾಡೋದಕ್ಕೆ ಕೆಲಸ ಇಲ್ಲಂತ ಬೆಂಗಳೂರಿಗೆ ಗುಳೆ ಹೊಂಟಾವ್ರೆ

ಹಾವಾಡಿಗ : ಬೆಂಗಳೂರಿಗೆ ಆ ಕ್ರಾಂಕ್ರೀಟ್ ಕಾಡಿಗೆ!? ಎನಮ್ಮ ಅಲ್ಹೋಗಿ ಏನ್ಮಾಡ್ತೀರಿ

ಕಮಲಮ್ಮ : ಏನಾದ್ರೂ ಮಾಡೋದು ಗುಂಡಿ ತಗೆಯೋದು ಮಣ್ಣು ಎತ್ತಿಹಾಕೋದು ಗಾರೆ ಕೆಲಸ ಮಾಡೋದು

ಹಾವಾಡಿಗ : ಬೆಂಗಳೂರಿನಲ್ಲಿ ಎಲ್ಲಿರುತ್ತೀರಾ ಅಂತಹ ದೊಡ್ಡೂರಿನಲ್ಲಿ

ಬಸವಣ್ಣ : (ಕಮಲಮ್ಮ ಗಂಡ) ಎಲ್ಲಿಯಾದ್ರು ರಸ್ತೆ ಬದಿಯಲ್ಲಿ ಒಂದು ಗುಡಿಸಲ ಹಾಕೊಂಡು ಇದ್ರಾಯಿತ್ತು.

ಹಾವಾಡಿಗ : ಹಂಗಾದ್ರೆ ನಿಮ್ಮ ಮಕ್ಕಳ ಸೂಲ್ಕು

ಕಮಲಮ್ಮ : ಏನು ಮಾಡೋದು ಅವರ ಹಣೆಬರಹದಲ್ಲಿ ಅಕ್ಷರ ಬರಿದಿಲ್ಲ

ಹಾವಾಡಿಗ : ಅಲ್ಲಮ್ಮ ಗುಳೆ ಯಾಕ ಹೋಗಬೇಕು. ನಿಮ್ಮೂರಿನಲ್ಲಿ ಕೆಲಸ ಮಾಡಲಿಕ್ಕೆ ಆಗಲ್ಲವಾ ?

ಬಸವಣ್ಣ : ನಮ್ಮೂರಿನಲ್ಲಿ ಕೆಲಸ ಏನು ಕೆಲಸ ಇದೆಯಪ್ಪ ಹೊಲಮನಿ ಕೆಲಸಗಳು ನಿಂತು ಹೋಗ್ಯಾವು. ಮಳೆ ಇಲ್ಲದ ಬೆಳೆ ಇಲ್ಲ. ಮಳೆ ಬಂದರೂ ವರ್ಷ ಪೂರ್ತ ಮಾಡೋಕೆ ಕೆಲಸ ಎಲ್ಲಿರುತ್ತೆ. ಒಂದು ಅರು ತಿಂಗಳು ಕೆಲಸ ಸಿಕ್ಕರೆ ನಮ್ಮ ಪುಣ್ಯ. ಅದಕ್ಕೆ ನಾವು ಗುಳೆ ಹೊಂಟೇವು

ಹಾವಾಡಿಗ : ಹೇ ಬಾಬು ನಮ್ಮ ಹಳ್ಳಿ ಜನ ಗುಳೆ ಹೋಗದಂಗೆ ಏನ್ಮಾಡಬೇಕು

ಆತ್ಮಬಾಬು : ಗ್ರಾಮ ಪಂಚಾಯಿತಿಯಲ್ಲಿ ರಾಷ್ಟ್ರೀಯ ಮಹಾತ್ಮಗಾಂಧಿ ಉದ್ಯೋಗ ಖಾತರಿ ಯೋಜನೆಯ ಅಡಿಯಲ್ಲಿ ಕೆಲಸ ಕೊಡಬೇಕು. ಅದು ಒಂದು ಕುಟುಂಬಕ್ಕೆ 100 ದಿನದ ಕೆಲಸ ಕೊಡಬಹುದು

ಅಧ್ಯಕ್ಷ : ಏನ್ರೀ ಸೆಕ್ರಟರಿ ಈ ಹಾವಾಡಿಗೆ ನಮ್ಮ ಬುಡಕ್ಕೆ ಹಾವು ಬಿಡೋಂಗೆ ಕಾಣುತ್ತೆ

ಸೆಕ್ರಟರಿ : ಆ ಕಮಲಮ್ಮ ತನಗೆ ಕೆಲಸಬೇಕು ಅಂತ ಅರ್ಜಿ ಕೊಟ್ಟಿದ್ದಳು

ಅಧ್ಯಕ್ಷ : ಅದಕ್ಕೆ ನೀವೇನು ಹೇಳಿದ್ರಿ

ಸೆಕ್ರಟರಿ : ಈ ವರ್ಷ ಯಾವುದೇ ಕೆಲಸಗಳು ಇಲ್ಲಂತ ಹೇಳಿ ಅರ್ಜಿಯನ್ನು ಹರಿದು ಹಾಕಿಬಿಟ್ಟೆ

ಅಧ್ಯಕ್ಷ : ಒಳ್ಳೆ ಕೆಲಸ ಮಾಡಿದಿರಿ ಬಿಡಿ

| | | |
|---|---|---|
| ಹಾವಾಡಿಗ | : | ಏನಮ್ಮ ನಿಮ್ಮೂರಿನಲ್ಲಿ ಕೆಲಸ ಮಾಡಬಹುದಲ್ಲ ಗುಳೇ ಯಾಕೋಗಬೇಕು |
| ಕಮಲಮ್ಮ | : | ಅಯ್ಯೋ ಅದು ನಮ್ಗೂ ಗೊತ್ತು. ಜಾಬ್‌ಕಾಡನ್ನು ಮಾಡಿಸಿದ್ದೇವೆ.ಬ್ಯಾಂಕಿನಲ್ಲಿ ಜಂಟಿ ಖಾತೆನೂ ಮಾಡಿಸಿದ್ದೇವೆ. ಕೆಲಸ ಕೊಡಿ ಅಂತ ಪಂಚಾಯಿತಿಗೆ ಅರ್ಜಿ ಕೊಟ್ಟಿದ್ದೇವೆ |
| ಆತ್ಮಬಾಬು | : | ಅರ್ಜಿ ಕೊಟ್ಟ ಹದಿನೈದು ದಿನದಲ್ಲಿ ಕೆಲಸ ಕೊಡದಿದ್ರೆ ನಿರುದ್ಯೋಗ ಭತ್ಯೆ ಕೊಡಬೇಕು. |
| ಉಪಾಧ್ಯಕ್ಷ | : | ಕೇಳಿ ಅಧ್ಯಕ್ಷರೇ ನಾನು ಹೇಳಿದ್ರೆ ಅಂತೊಂದು ರೂಲೀಸೇ ಇಲ್ಲ ಅಂದ್ರಿ |
| ಅಧ್ಯಕ್ಷ | : | (ಉಪಾಧ್ಯಕ್ಷನ ಹತ್ತಿರ ಬಂದು) ನೀನು ಈಗ ಸುಮ್ಮಿರಪ್ಪ ಆಮೇಲೇ ಮಾತಾಡೋಣ |
| ಬಸವಣ್ಣ | : | ಹೌದಾ ಇದು ನಮಗೊತ್ತೇ ಇರಲಿಲ್ಲ. ನಿರುದ್ಯೋಗ ಭತ್ಯೆ ಕೊಡ್ತಾರೆ ಅಂತಾನೂ ನಮಗೆ ಯಾರು ಹೇಳಿಲ್ಲ. ಇಲ್ಲೇ ಇದ್ದಾರಲ್ಲ ಅಧ್ಯಕ್ಷರು ಸೆಕ್ರಟರಿ ಉಪಾಧ್ಯಕ್ಷರು. |
| ಸೆಕ್ರಟರಿಟ | : | ಅಯ್ಯಯ್ಯೋ ಅಂತ ಯೋಜನೆ ಈ ಗ್ರಾಮ ಪಂಚಾಯಿತಿಗೆ ಮಂಜೂರು ಆಗಿಲ್ಲ |
| ಅಧ್ಯಕ್ಷ | : | ಆಗಿದ್ರೆ ನಾವು ಬಿಡ್ತಾ ಇದ್ದವಾ ಎಲ್ಲರಿಗೂ ನಿರುದ್ಯೋಗ ಭತ್ಯೆ ಕೊಡುತ್ತಿದ್ದವು. ಅಲ್ಲವೇನ್ರಿ ಉಪಾಧ್ಯಕ್ಷರೆ. (ಕಣ್ಣು ಮಿಟಕಿಸುತ್ತಾನೆ) |
| ಉಪಾಧ್ಯಕ್ಷ | : | ಅಹ್ ಹೌದು ಹೌದು. |
| ಏಜೆಂಟು | : | (ಅಧ್ಯಕ್ಷನಿಗೆ) ಅಣ್ಣ ಈ ಆಟ ನಿಲ್ಲಿಸೋದು ಒಳ್ಳೇದು ಇಲ್ಲ ನಾವು ಇಲ್ಲಿಂದ ಹೊಂಟೋಗದು ಒಳ್ಳೇದು |
| ಅಧ್ಯಕ್ಷ | : | ಅಹುದು ಕನ್ಲಾ.  ಯಾಕೋ ಕೊಳಕಮಂಡಲ ನಮ್ಮನ್ನೆ ನೆಕ್ಕೋ ಹಾಗೆ ಕಾಣುತ್ತೆ. ಹಾಳಾದ್ದು ಆ ಆತ್ಮಕ್ಕೆ ನಮ್ಮ ಮನಸ್ಸಿನಾಗೆ ಇರೋದು ಗೊತ್ತಾಗುತ್ತೆ ನಡಿ ಹೋಗೋಣ.. |
| ಆತ್ಮಬಾಬು | : | ನೀವು ಹೋಗುತ್ತವೆ ಅಂದರೂ ಜನ ಬಿಡೋಲ್ಲ. |
| ಅಧ್ಯಕ್ಷ | : | ಯಾರು ಅದು |
| ಅತ್ಮಬಾಬು | : | ನಾನು ಬಾಬು ಆತ್ಮಬಾಬು |
| ಬೈರ | : | ತಗಳಪ್ಪ ಅಧ್ಯಕ್ಷರನ್ನೆ ಹಿಡಿದುಕೊಂಡು ಬಿಡ್ತು. |
| ಹಾವಾಡಿಗ | : | ನೋಡಿ ಸ್ವಾಮಿ ನೀವು ನಮಗೆ ಮೋಸ ಮಾಡಬಹುದು, ಜನರಿಗೆ ಮೋಸ ಮಾಡಬಹುದು, ನಮ್ಮ ಬಾಬುನ ಆತ್ಮಕ್ಕೆ ಮೋಸ ಮಾಡಕ್ಕಾಗಲ್ಲ. ನಿಮ್ಮ ಆತ್ಮಕ್ಕೆ ಮೋಸ ಮಾಡಕ್ಕಾಗಲ್ಲ |
| ಆತ್ಮಬಾಬು | : | ಉದ್ಯೋಗ ಖಾತರಿ ಯೋಜನೆ ಹಣವನ್ನು ಗುಳುಂ ಅಂತ ನುಂಗಾಕೆ ಪ್ಲಾನ್ ಮಾಡಿದ್ದಾರೆ |
| ಅಧ್ಯಕ್ಷ | : | ಎಲ್ಲಾ ಸುಳ್ಳು ಓಟು ಹಾಕಿದ ಜನ ನೀವು ನನ್ನ ತಂದೆ ತಾಯಿ ಇದ್ದಂಗೆ ಈ ಸಿ.ಎಮು ನಿಮಗೆ ಮೋಸ ಮಾಡ್ತೇನಾ |
| ಆತ್ಮಬಾಬು | : | ನಿಮ್ಮ ಗ್ರಾಮದಲ್ಲಿ ಕೆಲಸ ಇಲ್ಲಂದ್ರೆ ಬೇರೆ ಗ್ರಾಮಪಂಚಾಯಿತಿಯಲ್ಲಿ ಕೆಲಸ ಕೊಡಿಸಬಹುದಲ್ಲ ಸೆಕ್ರಟರಿಗಳೇ |
| ಸೆಕ್ರಟರಿ | : | ಕೊಡಿಸಬಹುದು |
| ಬಸವಣ್ಣ | : | ನೋಡಿ ಅಧ್ಯಕ್ಷರೆ ಇಲ್ಲೇ ಬೇರೆ ಕಡೆಗೆ ಕೆಲಸ ಕೊಡಿಸಬಹುದಂತೆ. ಇಲ್ಲೇ ನಮ್ಮೂರ ಸುತ್ತ ಮುತ್ತ ಕೆಲಸ ಕೊಡಿಸೋದಾದ್ರೆ ನಾವ್ಯಾಕೆ ಕಾಣದೂರಿಗೆ ಗುಳೆ ಹೋಗುತ್ತೇವೆ ಹೇಳಿ |
| ಅಧ್ಯಕ್ಷರು | : | ಹೌದಾ ಸೆಕ್ರಟರಿಗಳೇ, ನೀವು ನನಗೆ ಈ ವಿಷಯ ಹೇಳಲೇ ಇಲ್ಲ |
| ಆತ್ಮಬಾಬು | : | ಅವರು ನಿಮಗೆ ಹೇಳಿದ್ರಲ್ಲ |
| ಅಧ್ಯಕ್ಷರು | : | ಹೌದಾ . . . . ಸೆಕ್ರಟರಿಗಳೇ ಅಯ್ಯೋ ನಾನು ಮರ್ರುಬಿಟ್ಟೇವ್ನಿ |
| ಹಾವಾಡಿಗ | : | ಮರ್ರಿಲ್ಲ ಮರ್ತಂಗೆ ನಾಟ್ಕ ಆಡುತ್ತೀರಿ |
| ಬೈರ | : | ಹೌದಪ್ಪೋ ನಮ್ಮ ಅದ್ಯಕ್ಷರು ಯಾವಾಗಲೂ ಬಯಲು ನಾಟ್ಕದಾಗೆ ಶಕುನಿ ಪಾರ್ಟು ಮಾಡುತ್ತಿದ್ದರು. |

ಆತ್ಮಬಾಬು : ಆ ವಯ್ಯನ ಕೈಯಲ್ಲಿರೋ ಡಬ್ಬ ತೆಗೀರಿ

ಹನುಮ : ಬಿತ್ತಲ್ಲ ಗಾಳ ಏಜೆಂಟ್‌ಗೆ

ಅಧ್ಯಕರು : ನೋಡು ಹಾವಾಡಿಗಪ್ಪ ನಿಮ್ಮ ಆತ್ಮಕ್ಕೆ ಕೈ ಮುಗ್ತೀನಿ. ನನ್ನ ಬಗ್ಗೆ ಇನ್ನ ಏನೂ ಹೇಳೋದು ಬ್ಯಾಡ ನಮ್ಮ ಮನೆಗೆ ಬನ್ರಿ ನಿಮಗೆ ಕೈತುಂಬಾ ಕೊಟ್ಟು ಹೊಟ್ಟೆ ತುಂಬಾ ಊಟ ಹಾಕಿಸ್ತಿನಿ

ಆತ್ಮಬಾಬು : ಬ್ಯಾಡಣ್ಣ ಬೇಡ, ನಮಗೆ ಕಟ್ಟಿಹಾಕಿ ಹೊಡಿಯೋದಕ್ಕೆ ಪ್ಲಾನ್ ಮಾಡುತ್ತಾನೆ

ಹಾವಾಡಿಗ : ಹೇ ಬಾಬು ನಮಗೆ ಯಾರು ಏನು ಮಾಡಾಕ್ಕಾಗಲ್ಲ. ಸತ್ಯ ನಮ್ಮ ಪರ್ವಾಗಿಇದೆ. ಈ ಊರು ಜನರು ನಮ್ಮ ಪರ್ವಾಗಿ ಇದ್ದಾರೆ

ಜನರು : ಹೌದು ನಿಮ್ಮ ಆಟ ಮುಂದುವರಿಸಿ

ಆತ್ಮಬಾಬು : ಹಂಗಾರೆ ಆ ಡಬ್ಬ ತಗೆದು ನೋಡಿ

ಸೆಕ್ರಟರಿ : ಅದರಲ್ಲೇನಿಲ್ಲ ಎಲ್ಲಾ ಕಾಗದ ಪತ್ರಗಳು (ಬೈರ ಮತ್ತು ಹನುಮ ಬಂದು ಸೂಟ್‌ಕೇಸನ್ನು ತೆಗೆದು ನೋಡುತ್ತಾರೆ ಅದರಲ್ಲಿ ಉದ್ಯೋಗ ಚೀಟಿಗಳು)

ಬಸವಣ್ಣ : ಅಯ್ಯೋ ಜಾಬ್‌ಕಾರ್ಡುಗಳು, ಅವತ್ತು ನಮ್ಮತ್ರ ಮಾಡಿಸಿ ಈ ಊರಾಗೆ ಯಾವುದೇ ಕಾಮಗಾರಿ ಇಲ್ಲ ಸುಮ್ಮೆ ಇವುನ್ನ ಇಟ್ಕೊಂಡು ಏನು ಮಾಡ್ತೀರಿ ನನಗೆ ಕೊಟ್ಟುಬಿಡಿ. ನಿಮಗೆ 3000 ಕೊಡ್ತೀನಿ ಅಂತಂದು ತಗೆದುಕೊಂಡು ಹೋದ.

ಆತ್ಮಬಾಬು : ನಿಮ್ಮ ಹೆಸರನಲ್ಲಿ ಅವನ ಸಂಬಂಧಿಕರನ್ನ, ಅಧ್ಯಕ್ಷರ ಸಂಬಂಧಿಕರನ್ನ ಈ ಸೆಕ್ರಟರಿ ಸಂಬಂಧಿಕರನ್ನ ಕರೆದುಕೊಂಡು ಬಂದು ಕೆಲಸ ಮಾಡಿಸ್ತಾನೆ

ಉಪಾಧ್ಯಕ್ಷ : ಹೌದೇನ್ರೀ ಅಧ್ಯಕ್ಷರೇ ನನಗೂ ಹೇಳಿದ್ರೆ ನನ್ನೆಂಡ್ತಿ ಕಡೆಯವರನ್ನು ಕರೆಸುತ್ತಿದ್ದೆ

ಅಧ್ಯಕ್ಷ : ಈಗೇನಾಯಿತು ಕರೆಸಿ ನನ್ನ ಹೆಣ ಎತ್ತಾಕೆ

ಹಾವಾಡಿಗ : ಅಲ್ಲರಿ ನಿಮಗೆ ಸೇರಬೇಕಾದ ಉದ್ಯೋಗನಾ ಬೇರೆಯವರಿಗೆ ಮಾರಿಕೊಂಡು ನಿಮ್ಮ ಕೈಯಲ್ಲಿದ್ದ ಕೆಲಸನಾ ಕಳೆದುಕೊಂಡು ಬಿಟ್ಟರಿ

ಮುದುಕಿ : ಈಗ ಗೊತ್ತಾಯಿತು ಬಿಡಪ್ಪ ಈ ಏಜೆಂಟು ನಮ್ಮೂರಿನಾಗೆ ಬೇರೆಯವರನ್ನ ಕರೆದುಕೊಂಡು ಬಂದು ಕೆಲಸ ಮಾಡಿಸೋನು. ಈಗ ಗೊತ್ತಾಯಿತೇನ್ರೋ ಇವರೆಂತಾ ಮೋಸಗಾರರು ಅಂತ.

ಹಾವಾಡಿಗ : ನೋಡಿದ್ರಲ್ಲ ಸ್ವಾಮಿ ನಮ್ಮ ಆಟನ ಇಲ್ಲಿಗೆ ನಮ್ಮ ಆಟ ಮುಗಿತು

ಜನರು : ಅಲ್ಲಪ್ಪ ಕೊಳಕಮಂಡಲ ಹೆಬ್ಬಾವು ತೋರಿಸ್ತೇನಿ ಅಂದ್ರಲ್ಲ

ಮುದುಕಿ : ಹೇ ಮೂದೇವಿಗಳೆ ಇವೆ ಕೊಳಕು ಹೆಬ್ಬಾವುಗಳು ರೊಕ್ಕ ನುಂಗೋ ಕೊಳಕುಮಂಡಲಗಳು ನಮ್ಮ ನಿಮ್ಮ ಬದುಕನ್ನೆ ನೆಕ್ಕಿ ವಿಷ ಮಾಡೋ ಕೊಳಕು ಮಂಡಲಗಳು. ಊರು ಉದ್ದಾರ ಮಾಡಿಕೊಳ್ಳಿ ಅಂತ ಸರಕಾರ ಯೋಜನೆ ಮಾಡಿದ್ರೆ ಈ ಲಫಂಗರು ಅವರು ಉದ್ದಾರ ಮಾಡಿಕೊಳ್ಳಾಕೆ ಪ್ಲಾನ್ ಮಾಡುತ್ತಾರೆ. ಈ ಏಜೆಂಟು ನನಗೆ ಗೊತ್ತಿದಂಗೆ ಈ ಊರಾಗೆ ಏನು ಮಾಡ್ತಿದ್ದ ಎಮ್ಮೆ ಕಾಯಿತ್ತಿದ್ದ. ಇವತ್ತು ಎಂಎಲ್‌ಎ ಕಾರು ಇಟ್ಕಂಡಂಗೆ ಕಾರ್ ಇಟ್ಕೋಂಡವ್ನೆ. ಅಸ್ತಿಪಾಸ್ತಿ ಮಾಡಕೊಂಡು ಪಟ್ಟಣದಾಗೆ ಬದುಕುತ್ತಾನೆ. ನಮ್ಮೂರಿಗೆ ಕೊಳ್ಳೆ ಹೊಡಿಯೋದಕ್ಕೆ ಬರ್ತಾನೆ. ಯಾರೆ ಅಧ್ಯಕ್ಷ ಬಂದರೂ ಈ ವಯ್ಯನೇ ನಮ್ಮೂರು ಕೆಲಸ ಮಾಡಿಸೋದು. ಎಂಎಲ್‌ಎ ಈ ವಯ್ಯನ ಮಾತು ಕೇಳ್ತಾನಂತೆ. ಹಾವಾಡಿಗಪ್ಪ ನೀನು ಬಂದು ನಮ್ಮೂರ ಕೊಳಕುಮಂಡಲ, ಹೆಬ್ಬಾವುಗಳನ್ನು ತೋರಿಸಿಬಿಟ್ಟೆ.

ಆತ್ಮಬಾಬು : ಥ್ಯಾಂಕ್ಸ್ ಅಜ್ಜಿ

ಮುದುಕಿ : ಟ್ಯಾಂಕು ಯಾರಾದು

ಹಾವಾಡಿಗ : ನಮ್ಮ ಅಫೀಸರು ಕಣಮ್ಮ . . . . ದಯಾಶಂಕರ ಬನ್ನಿ (ಹಾವಾಡಿಗ ಡ್ರಸ್ ತಗೆಯುತ್ತಾನೆ)

ಸೆಕ್ರಟರಿ : ಅಧ್ಯಕ್ಷರೆ ಸಿಇಓ ಸಾಹೇಬ್ರು . . . . ಮುಗೀತು ನಂ ಕಥಿ

ಸಿಇಓ : ಇನ್ನೂ ಮುಗಿಯಿಲ್ಲ ಇನ್ನ ಮೇಲೇ ಪ್ರಾರಂಭ. (ದಯಾಶಂಕರ ಬುಟ್ಟಿಯಿಂದ ಎದ್ದು ಬರುತ್ತಾನೆ. ಜನರು ಬೆರಗಾಗುತ್ತಾರೆ ಚಪ್ಪಾಳೆ ತಟ್ಟುತ್ತಾರೆ) ದಯಾಶಂಕರ ಇವರ ಮೇಲೆ ತಕ್ಷಣ ಎನ್‌ಕ್ವರಿ ಕಂಡೆಂಟ್ ಮಾಡಿ. ಈ ಜಾಬ್ ಕಾರ್ಡ್‌ಗಳನ್ನೆಲ್ಲ ಹಂಚಿಬಿಡಿ. ಅರ್ಜಿಕೊಟ್ಟವರಿಗೆಲ್ಲ ನಿರುದ್ಯೋಗ ಭತ್ಯೆ ಕೊಡಿ.  ನೋಡಿ ಮಹಾಜನಗಳೆ ಊರು ನಿಮ್ಮದು ಯೋಜನೆಗಳು ನಿಮ್ಮವು. ಸರಕಾರ ಪ್ರಾರಂಭ ಯೋಜನೆಗಳು ಸರಿಯಾಗಿ ಅನುಷ್ಟಾನ ಆಗೋ ಹಾಗೆ ಮಾಡೋ ಜವಾಬ್ದಾರಿ ನಮ್ಮದು. ಮಧ್ಯೆದಲ್ಲಿ ಇಂತಹ ಕೀಚಕರು ಹುಟ್ಟಿ ಸರಕಾರದ ಯೋಜನೆಗಳು ನಿಮ್ಮ ಹತ್ತಿರ ಬಾರದಾಗೆ ನೋಡಿಕೊಂಡು ಬಿಡ್ತಾರೆ. ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಬಾಳ ಒಳ್ಳೆಯ ಯೋಜನೆ ಈ ಯೋಜನೆಯನ್ನು ಸರಿಯಾಗಿ ಗ್ರಾಮದೋರು ಉಪಯೋಗ ಮಾಡಿಕೊಂಡ್ರೆ. ಯಾರು ಕೆಲಸವಿಲ್ಲಂತ ಗುಳೆ ಹೋಗಬೇಕಾಗಿಲ್ಲ. ಹಳ್ಳಿ ಜನರಿಗೆ ಉದ್ಯೋಗದ ಅವಶ್ಯಕತೆ ಇದೆ ಅಂದಾಗ ಗ್ರಾಮಪಂಚಾಯಿತಿ ಊರಿನ ಅಭಿವೃಧಿಯಾಗುವಂತ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಈ ಮಹಾತ್ಮಗಾಂಧಿ ಉದ್ಯೋಗ ಖಾತರಿ ಯೋಜನೆಯಲ್ಲಿ ಕೆಲಸ ಕೊಡಬಹುದು.  ನಿಮ್ಮೂರಿನ ಇಬ್ಬರು ಯುವಕರು ನಮ್ಮತ್ರ ಬಂದು 'ನಮ್ಮೂರಿನಲ್ಲಿ ಅನ್ಯಾಯ ನಡೀತ್ತಿದೆ ಅಂತ ನಮ್ಮ ಗಮನಕ್ಕೆ ತಂದರು' ನಾವು ಈ ಪ್ಲಾನ್ ಮಾಡಿ ನಿಮಗೆ ನಿಮ್ಮೂರಿನ ಹೆಬ್ಬಾವುಗಳನ್ನು ತೋರಿಸಿದ್ದೇವು

ಜನರು : ಹೇ ಹಾಕ್ರೋ . . . . ಅವರಿಗೆ (ಹೊಡೆಯಲು ಮುಂದೆ ಬರುತ್ತಾರೆ)

ಸಿಇಓ : ಬೇಡ ಬೇಡ ಅದೆಲ್ಲ ಮಾಡಬ್ಯಾಡಿ ತಪ್ಪು ಮಾಡಿದವರಿಗೆ ಕಾನೂನನಲ್ಲಿ ಶಿಕ್ಷೆ ಇದ್ದೇ ಇದೆ. ನೀವು ಮತ್ತೊಂದು ತಪ್ಪು ಮಾಡಬೇಡಿ. ಎಲ್ಲಿವರೆಗೆ ನೀವುಗಳು ಎಚ್ಚರವಾಗಿರೋಲ್ಲವೋ ಅಲ್ಲಿತಂಕ ಇಂತಹ, ಕೊಳಕಮಂಡಲಗಳು, ಹೆಬ್ಬಾವು ಕಾಳಿಂಗ ಸರ್ಪಗಳು ಬೆಳೆಯುತ್ತಲೇ ಇರುತ್ತಾವೆ.

ಅಧ್ಯಕ್ಷ : ಸಾರ್ ನಿಮಗೆ ಸುದ್ದಿಕೊಟ್ಟವನು ಯಾರು ಸಾರ್ ತೋರಿಸಿ ಸಾರ್ ಅವನ್ನ

ಸಿಇಓ : ಅವನು ಪರಮಾತ್ಮ

ಮುದುಕಿ : ಪುಣ್ಯಾತ್ಮ ಕಣಪ್ಪ ನೀನು ನಮ್ಮ ಕಣ್ಣು ತೆರಿಸಿಬಿಟ್ಟೆ.

**ಹಾಡು :**

*ಬೇಡ ಬೇಡವೋ ದೂರದ ಬೆಟ್ಟ*
*ಕಟ್ಟುಬಾರೋ ಇಲ್ಲೇ ಕನಸಿನ ಅಟ್ಟ*
*ಅಂಗೈಯಲ್ಲಿದೆ ಬದುಕಿನ ಅರಮನೆ*
*ಬೇಡೆನ್ನು ನೀ ಅರಗಿನ ಅರಮನೆ.*
*ಅರಿತು ನಡೆದರೆ ಹಸನ ಬದುಕು*
*ಮುಡಿಕಿ ನಡೆದರೆ ನರಕ ಬದುಕು.*
*ಆಕಾಶಕೆ ಏಣಿ ಹಾಕೋದು ಸಾಕು*
*ಗ್ರಾಮದೊಳಗೆ ಅಡಗಿದೆ ಬಂಗಾರದ ಬದುಕು.*
*ಗ್ರಾಮದ ಕೆಲಸ ನಿನ್ನ ಕೆಲಸ ಅದಕೆ ನೀ ಅರಸ*
*ಗ್ರಾಮದುದ್ಧಾರ ನಿನ್ನ ಉದ್ದಾರ ನೀನೇ ಸೂತ್ರಧಾರ*
*ಕನಸು ಕಟ್ಟಿಕೊ ಕಣ್ಣೊಳಗೆ ನನಸು ಮಾಡಿಕೊ ಊರೊಳಗೆ*
*ವಿಷಗಾಳಿ ಬರದಂಗೆ ನೋಡಿಕೊ ಊರೊಳಗೆ*

* * *

# ನಾಟಕ

**– ಡಿ.ಎಸ್. ಚೌಗ್ಲೆ**

## ದೃಶ್ಯ–1

(ಜೋಗತಿ ಉದೋ, ಉದೋ ಜೋಗತಿ ಹಾಡು, ಕುಣಿತ ನಿಲ್ಲುತ್ತದೆ. ಜಯಕುಮಾರ ಮಹಾಂತ ಮತ್ತು ಅವರ ಗೆಳೆಯರ ಕಡೆಗೆ ಬರುವನು.)

ಜಯಕುಮಾರ : ಹಾಯ್ ಮಾಂಟೋ, ರುದ್ರ ಅಂಡ್ ಭರಮಾ . . . . ಹೌ ಆರ್ ಯು ಮೈ ಗೈಸ್ ! ಐ ಮೀನ್ ಹೇಗಿದ್ದೀರಿ?

ಮಹಾಂತ ಮಾಸ್ತರ : (ವಿಡಂಬನಾತ್ಮಕವಾಗಿ) ನಾವ, ಹಿಂಗದೀವಿ ಬಿಡಪ . . . . ಆದರ ತಮ್ಮ ಪರಿಚಯ ಆಗಲಿಲ್ಲ. ಯಾವ ಗ್ರಹದ ಜೀವಿಗಳು ? ಐ ಮೀನ್ ಯಾವ ದೇಶದೋರು ಅಂತ? ಆಫ್ರಿಕಾನೋ ಇಲ್ಲ ನೈಜೇರಿಯಾನೋ ?

ಜಯಕುಮಾರ : ಏಯ್ ಯು ಗೈಸ್, ಡೋಂಟ್ ಬಿ ಸಿಲ್ಲಿ (ರುದ್ರ–ಭರಮಾರಿಗೆ) ರುದ್ರಾ ಆ್ಯಂಡ್ ಭಮ್ಮು ! ನಿಮಗೂ ನನ್ನ ಗುರುತ ಸಿಗಲಿಲ್ಲೇನು ?

ರುದ್ರ : ಕೆಂಪ ಮಸಡ್ಯಾವರಷ್ಟ ಇಂಗ್ಲೀಷ್ ಮಾತಾಡತಾರ ಅಂದಕೊಂಡಿದ್ನಿ . . . . ಇಂವ (ಭರಮಾ ರುದ್ರನ ಮಾತನ್ನ ತಟ್ಟನೆ ತಡೆದು)

ಭರಮಾ : ಕರಿ ಮಸಡಿ ಮಂಗ್ಯಾ ! (ನಗುವರು.)

ಜಯಕುಮಾರ : ಹೆಯ್, ಡೋಂಟ್ ಬಿ ಜೋಕಿಂಗ್ ಯಾರ್ ! ಯು ನೋ, ಐ ಆ್ಯಮ್ ಯುವರ್ ಫ್ರೆಂಡ್, ಕ್ಲಾಸ್‌ಮೇಟ್– ನಾನ್ ಮೆಟ್ರಿಕ್ ಜಾಯಕೋ ! ಅಂದರ ಜಯಕುಮಾರ !

(ಅಚ್ಚರಿಯಿಂದ ಎಲ್ಲರೂ ಆತನನ್ನು ಅಪ್ಪುವರು.)

ಮಾಸ್ತರ : ಅಬಬಬ ! ಏನಲೇ ಇದು ನಿನ್ನವತಾರ ಜಯಾ ಸೂಳಿಮಗನ . . . . ಪೂರ ಬದಲಾಗಿದ್ದಿ ?

ಭರಮಾ : ಎಮ್ ಟೀವ್ಯಾಗ ಬರೋ ಆಫ್ರಿಕಾದ ಸಿಂಗರ್ ತರಹ ಆಗ್ಯಾನ ಮಗಾ.

ರುದ್ರ : ಇವನಾಪ್ಪನ ಮೊದಲs ಇದ್ದಲಿ ಜತಿ ಬೀಗತನ. ಆಮ್ಯಾಲ ಅದಕ್ಕೊಂದು ಈ ಅವತಾರದ ಸಿಂಗಾರ ! (ನಗುವರು)

ಜಯಕುಮಾರ : ಮಹಾಂತಣ್ಣ ಮಾಸ್ತರಕಿನಾದರು ಮಾಡತಾನ. ಆದರ ನೀವ ? ಕಲಿತೂ ಖಾಲಿ . . . . ಉದ್ಯೋಗ ದಂಧಾ ಇಲ್ಲ. ಮನ್ಯಾಗ ಉಣ್ಣೋದು ಪಿರಿಪಿರಿ ಅಡ್ಡ್ಯಾಡೋದು. ಆದರ ನಾನು ನೋಡು ! ಮ್ಯಾಟ್ರಿಕ್ ನಾಪಾಸ. ಆದರೂ ಛಲೋದಂಗ ಕಮಾಯಿಸತೀನಿ. (ರುದ್ರ–ಭರಮಾರಿಗೆ) ನೀವು ಬರ್‍ರಿ ಗೋವಾಕ್ಕ. ಅಲ್ಲಿ ನಿಮಗ ಉದ್ಯೋಗ ಖಾತರಿಯಾಗಿ ಸಿಕ್ಕೆ ಸಿಗತದ.

ಭರಮಾ : ನಮಗಿಲ್ಲಿ ಉದ್ಯೋಗ ಖಾತರಿ ಅದs ಅಪ್ಪs ! ಸರಕಾರ ಅದನ್ನ ನಮ್ಮ ಹಕ್ಕು ಮತ್ತು ಅಧಿಕಾರ ಅಂತನ ಕಾಯಿದೆಶಿರ ಮಾಡಿ ಬಿಟ್ಟೇದ, ಗೊತ್ತೈತಿಲ್ಲೋ ?

ಜಯಕುಮಾರ : (ವ್ಯಂಗ್ಯ) ಗೊತ್ತೈತಿ ಬಿಡು, ನಿಮ್ಮ ಉದ್ಯೋಗ ಖಾತ್ರಿ ಯೋಜನಾ. ಅಲ್ಲಿ ಕೆಲಸ ಕೊಡಲಿಲ್ಲಂತsನ ನಾನು ಬ್ಯಾಸತ್ತು ಕೆಲಸ ಹುಡುಕಿಕೊಂಡ ಗೋವಾಕ್ಕ ಹೋಗಿದ್ದು.

ಭರಮಾ : ಯಾಕ ? ಮಾಸ್ತರ ನೀವಾದ್ರೂ ತಡಿ ಬಾರದಿತ್ತ ಇವ್ನ

ಮಾಸ್ತರ : ಹುಂ ! ಇಂವ ಗೋವಾಕ್ಕ ಗುಳೇ ಹೋಗೋದ ತಡೀಲಾಕ ನಾನಿವನನ್ನ ಗ್ರಾಮ ಪಂಚಾಯತಿ ಸೆಕ್ರೆಟರಿ ಕಡಿಗಿ ಕರಕೊಂಡು ಹೋದಿನಿ. ಅಲ್ಲಿ 'ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ-ಕರ್ನಾಟಕ' ಇದರ ವಿವರ ನೀಡಿ ಹೆಸರನ್ನ ನೊಂದಾಯಿಸಿದಿನಿ. ಉದ್ಯೋಗ ಚೀಟಿ ಹೆಸರು ಹೊಂದಿದ ಕುಟುಂಬದ ಎಲ್ಲ ಸದಸ್ಯರು, ಅಂದರ ಮಕ್ಕಳನ್ನ ಬಿಟ್ಟು ಕೆಲಸ ಮಾಡಬೋದು. ಅದು ಸಹ ನೂರು ದಿನಗಳು.

ರುದ್ರ : ಉದ್ಯೋಗ ಅಪೇಕ್ಷ ಮಾಡಿದ 15 ದಿನಗಳ ಒಳಗಾಗಿ ಅವರೇನು ಉದ್ಯೋಗ ಕೊಡಲಿಲ್ಲ. ಈ ಮಗಾ ಜೈಕ್ಯಾನಿಗಿ ತಾಳ್ಮೇನೇ ಇಲ್ಲ. ಓಡಿ ಹ್ವಾದ, ಹೌಂದಲ್ಲೊ? (ತಡೆದು) ಆದರ ಯಾರಿಗೂ ಪರಿಹಾರನು ಸಿಗಲಿಲ್ಲ.

ಮಾಸ್ತರ : ಹೌದ, ಇಂವಗ ತಾಳ್ಮೆನೆ ಇಲ್ಲ. ಅಪೇಕ್ಷಿಸಿದ ಉದ್ಯೋಗವನ್ನ 15 ದಿನಗಳಲ್ಲಿ ನೀಡದಿದ್ದರ ಅರ್ಜಿದಾರರಿಗೆ ಆರ್ಥಿಕ ವರ್ಷದ ಮೊದಲ 30 ದಿನಗಳಿಗೆ ದಿನಗೂಲಿಯ ಶೇಕಡ 25 ರಷ್ಟು, ಉಳಿದ ಅವಧಿಗೆ ದಿನಗೂಲಿಯ ಶೇಕಡ 50 ರಷ್ಟನ್ನು 'ನಿರುದ್ಯೋಗ ಭತ್ಯೆ' ಅಂತ ಪಡಕೊಳ್ಳೊ ಹಕ್ಕ ಅದ.

ರುದ್ರ : ಅಗದೀ ಬರೋಬ್ಬರ ಅದ. ಆದರ ಮಹಾಂತಣ್ಣ. ನೋಂದಾಯಿತ ಸ್ತ್ರೀಯರಿಗೆ ಕನಿಷ್ಠ ಒಂದು ಮೂರರಷ್ಟಿರುವ ಹಂಗ ಆದ್ಯತೆ ಪ್ರಕಾರ ಕೆಲಸ ಕೊಡಬೇಕು. ಆದರ ಈ ಅಧ್ಯಕ್ಷ, ಸೆಕ್ರೆಟರಿ ಏನೋ ಮಸಲತ್ತ ಮಾಡಾಕತ್ತಾರ. ಆ ಕೆಲಸಾನs ಕೊಡತಿಲ್ಲ !

ಮಾಸ್ತರ : ಅದಷ್ಟ ಅಲ್ಲ . . . . ಉದ್ಯೋಗವನ್ನ ಸಾಧ್ಯವಾದಷ್ಟು ಗ್ರಾಮ ವ್ಯಾಪ್ತಿಯೊಳಗs 5 ಕಿ.ಮೀ. ಅಂತರದೊಳಗ ಕೊಡಬೇಕು. ಒಂದು ವೇಳೆ ದೂರ ಕೊಟ್ಟರ ಕೂಲಿ ದರದ ಶೇಕಡ 10 ರಷ್ಟು ಹೆಚ್ಚುವರಿ ಹಣಾನ ಸಾರಿಗೆ ಮತ್ತು ಜೀವನ ವೆಚ್ಚಂತ ಕೊಡಬೇಕು ಅಂತ ಕಾಯಿದೇನs ಅದ.

ಜಖಿುಕುಮಾರ : ನನಗೂ ಖಿಖಿದು ಸಖಿಶಖಿು ಇದೆ . 100ರೂ ಅದು ವರ್ಷದಾಗ 100ದಿನ ಅಖಿದ್ರ ಖಿಟ್ಟು 10000ರೂಪಾಯಿ ಅಖಿದ್ರ ನಾನು ಗೋವಾದಾಗ ಬರೀ 2ತಿಖಿಗಲದಾಗ 12000ರೂ ದುಡಿತೀನಿ.

ಮಾಸ್ತರ : ನೋಡಾಪ್ಪ ಜಖಿುಕುಮಾರ ಗೋವಾಕ್ಕಗೋಗಿ 12000 ದುಡಿತಿ ಬಾಖಿಬೆಗೋದ್ರೆ 24000 ದುಬೈದಾಗ ಇನ್ನೂ ಹೆಚ್ಚು ಅಮೇರಿಕಾಗೋದ್ರೆ ಅದಕ್ಕಿಖಿತ ಹೆ ಚ್ಚು ದುಡಿತಿ ಹಖಿಗಖಿತ ಕಳ್ಳುಬಳ್ಳಿ ಬಿಟ್ಟು ಎಷ್ಟುದಿನ ಅಖಿತ ಇರ್ತಿ. ಈ ಖಿೋಜನೆಖಿು ಮುಖ್ಯ ಗುರಿ ಏನು ಅಖಿದ್ರ ಹಸಿದವರಿಗೆ ಹಸಿವು ನಿಗಿಸುವುದು. ನಿನ್ನಖಿತಹ ಶೋಕಿಗಾರರಿಗೆ ಅಲ್ಲ

ಜಖಿುಕುಮಾರ : ಬೈಬ್ಯಾಡ್ರಿ ಸಾರ್ ಖಿೋಜನೆಖಿುಲ್ಲಿ ಇಷ್ಟೆಲ್ಲಾ ಐತಿ ಅಖಿತ ಮೊದಲೆ ನನಗ್ ಹೇಳಿದ್ರಾ ನಾನ್ಯಾಕ್ ಗೋವಾಕ್ ಖಿಡ್ಹೋಗ್ತಿದ್ದೆ.

ಮಾಸ್ತರ : ಅಲ್ಲಪ್ಪ ನಿನಗೆಲ್ಲಿ ಕೇಳೋಕೆ ಪುರುಸೋತ್ತು ಇತ್ತು.

ರುದ್ರ : ಖಿೂಕಖಿದ್ರ ಆಗ ಮೀಸಲಾತಿ ಕೋಟಾದಾಗ ನಮ್ ಪಖಿಚಾಖಿುತಿಗೆ ನಿರ್ಮಲ ಅನ್ನೊರು ಅಧ್ಯಕ್ಷರಾಗಿದ್ರು ಪಾಪ ಆಕೇನೂ ಕಷ್ಟದಾಗ ಬೆಳೆದಿದ್ಲಖಿತ ಬಡವರನ್ ಕಖಿಡ್ರೆ ಬಹಳ ಕನಿಕರ ಆಕೆಗೆ, ಹೇಖಿಗಾರ ಮಾಡಿ ಕಷ್ಟದಾಗ ಇರೋವರ್ಗೆ ಸಹಾಖಿು ಮಾಡ್ಬೇಕ್ಕಖಿತ್ತೇಳಿ ದೊಡ್ಡ ಮನಸ್ಸಿತ್ತ ಆಕೆಗೆ ಅದಕ್ಕ ಮಾಸ್ರರ್ ಹೇಳಿದ್ದು ಬಡವರಿಗೆ ಸಹಾಖಿು ಮಾಡಿದ್ಲು ಅಖಿತ.

ಭರಮಾ : ಮುಖಿದೆ ಖಿೋಜನ ಬೆಳೆಖಿುವ ಸಖಿದರ್ಭದಾಗ ನಮ್ಮ ಅಧ್ಯಕ್ಷರು ಹೆರಿಗೆಗೆ ಅಖಿತ ತವರು ಮನೆಗೆ ಹೋದ್ರು. ಆಗ ಏಜೆಖಿಟ ಧರೆಖಿುಪ್ಪ, ಸೆಕ್ರೆಟರಿ ಶಖಿಕರಪ್ಪ, ನಿರ್ಮಲಬಾಖಿು್ ಅವರ

ಯಜಮಾನರು ಆದ ನಿಂಗನಗೌಡರ ಮಾತ್ ಕೇಳಿ ಫೈಲ್ ಗೆಲ್ಲಾ ಸೈನ್ ಮಾಡಿಸಿದು. ಬಿಟ್ಟನಲ್ಲಿ ಎಲ್ಲಾ ಕಾನೂನು ಕಾಯ್ದೆ ಗಳನ್ನು ಗಾಳಿಗೆ ತೂರಿ ಊರಿಗೆ ಊರೆ ಲಕ್ಷ್ವ ಹೊಡೆಯಿಗೆ ಮಾಡ್ಯಾರ.

ರುದ್ರಿ : ನಿರ್ಮಲ ಅವರು ಹೆರಿಗೆ ಮುಗಿಸ್ಕೊಂಡು ಬಂದು ನೊಡ್ತಾರೆ ಎಲ್ಲಾ ಲೆಕ್ಕಾನೂ ಎಪ್ರಾ ತಪ್ರಾ

ಭರಮಾ : ಆ ದಿನ ನಿರ್ಮಲಮ್ಮನ ಮನೆಯಲ್ಲಿ ಏನಾಯ್ತು ಅಂದ್ರೆ [ನಿರ್ಮಲಮ್ಮ ಮತ್ತು ಆಕೆಯ ಗಂಡನ ನಡುವೆ ಜಗಳವಾಡುತಿರುವ ದ್ರಶ್ಯ]

ನಿರ್ಮಲ : [ಸ್ವಗತ] ಅಲ್ಲಾ ಉದ್ಯೋಗ ಖಾತ್ರಿ ಯೋಜನೆ ಬಂದು ನಮ್ಮ ಜನಕೆಲ್ಲಾ ಒಳ್ಳೇದೇ ಆಗಿತ್ತು. ಆದರೆ ಈಗ ಲೆಕ್ಕಾ ಎಲ್ಲಾ ನೋಡಿದ್ರೆ ಯಪ್ರಾ ಆಗೀದೆ.

ನಮ್ಮ ಯಜಮಾನ್ರು, ಸೆಕರೆಟರಿ, ಕಂಟ್ರಾಕ್ಟರರ ಸೇರ್ಕೊಂಡು ನಮ್ಮ ಹಳ್ಳಿ ಜನಕ್ಕೆ ಮೋಸ ಮಾಡ್ತಾ ಅವ್ರೆ, ನಾನು ನಮ್ಮ ಊರ್ ಜನರ ನಂಬಿಕೆಉಳ್ಸಕೊ ಬೇಕು. ನಾನೇನ್ಮಡ್ಲಿ

ನಿಂಗೆಗೌಡ : ನೀನೆನು ಮಾಡ್ ಬ್ಯಾಡ ಈಗ ಸೆಕರೆಟರಿ ಬರ್ತಾರೆ ಫೈಲ್ ತರ್ತಾರೆ ಕಣ್ ಮುಚ್ಕಂಡು ಒಂದು ಸೈನ್ ಹಾಕು.

ನಿರ್ಮಲಾ : ಮೊದ್ಲು ಬರ್ಲಿ ಕಾಗದ ಪತ್ರ ನೋಡಿ ಆಮೇಲೆ ಸೈನ್ ಮಾಡ್ತೀನಿ.

ನಿಂಗೇಗೌಡ : ನೋಡೋದು ಇಲ್ಲ, ಗಿಡೋದು ಇಲ್ಲ. ನಾನೆಲ್ಲನು ಸರಿ ಮಾಡ್ತೀನಿ.ಮೊದ್ಲು ಸೈನ್ ಹಾಕು. ನಿನ್ನನ್ನ ಎಲೆಕ್ಷನ್ ಗೆ ನಿಲ್ಸಾಕೆ ಎಷ್ಟು ಖರ್ಚು ಮಾಡಿದ್ದೀನಿನ ಗೊತ್ತಾ. ಲಕ್ಷ, ಲಕ್ಷ ಕೊಟ್ಟದ್ದಿನಿ ಅದ್ನೆಲ್ಲಾ ಯಾರ್ಬ ಕೊಡ್ತಾರಡ. ನಿಮ್ಮಪ್ಪ ಕೊಡ್ತಾನಾ.

ನಿರ್ಮಲಾ : ನಮ್ಮಪ್ಪ ಯಾಕ್ ಕೊಡ್ ಬೇಕು, ಹಂಗಿದ್ರೆ ನೀವೇ ನಿಂತ್ಕಂಡು ಗೆಲ್ಲಬೇಕಿತ್ತು.

ನಿ. ಗೌಡ : ಅದೇ ಆಗಿದ್ ಎಡವಟ್ಟು,ಸರ್ಕಾರ ಮಹಿಲಾ ಮೀಸಲಾತಿ ತಂದು ನನ್ ವಾರ್ಡಗೆ ನಿನ್ನ ನಿಲ್ಸದೆ. ಉದ್ಯೋಗ ಖಾತ್ರಿ ಯೋಜನೆ ಬರುತ್ತೆ, ದುಡ್ಡು ಮಾಡ್ಬಹುದು ಅಂತನೇ ನಿನ್ನ ನಿಲ್ಸದೆ.

ನಿರ್ಮಲಾ : ಬ್ಯಾಡ ಕಣ್ರಿ ಹಳ್ಳಿ ಜನಕ್ಕೆ ಮೋಸ ಮಾಡೋದು ಬ್ಯಾಡ,ನಮಗೆನ್ ಕಮ್ಮಿ 20 ಎಕರೆ ಜಮೀನಿದೆ. ದುಡ್ಡು ಅದನ್ನೆ 40ಎಕರೆ ಮಾಡ್ಬಹುದು.

ನಿ,ಗೌಡ : ಬಾಯ್ಮುಚ್ಚು ಹೇಳಿದ್ ಕೆಲ್ಸ ಮಾಡು ಇಲ್ದಿದ್ರೆ . . . . . (ಹೊಡೆಯಕೊಗುವನು)

ಸೆಕ್ರೆಟರಿ : ಇಂಜನಿಯರ್ ಸಾಹೇಬರೆ ನಮ್ ಅಧ್ಯಕ್ಷರು ನೋಡಿದ್ರೆ ಲೆಕ್ಕ ಪಕ್ಕ-ಬುಕ್ಕ ತಗೋ ಬಾ ಅಂತಾರೆ,ಅವರು ನೋಡಿದ್ರೆ ನ್ಯಾಯ ನೀತಿ ಅಂತ ಸಾಯ್ತಾರೆ

ಇಂಜನಿಯರ್ : ನೀವು ಚಿಂತೆ ಮಾಡ್ ಬ್ಯಾಡಿ ಅಧ್ಯಕ್ಷರ ಯಜಮಾನ್ರು ನಮ್ ಕೈಯಲ್ಲಿ ಇರೋವರ್ಗೆ ನಮ್ಮನ್ ಯಾರು ಏನೂ ಮಾಡಕಾಗಲ್ಲ

ನಿ. ಗೌಡ : ಸೆಕರೆಟರಿಗೆ ನಮಸ್ಕಾರ ಹಾ. . . ಸೈನ್ ಮಾಡಿಸ್ಕೊಳ್ಳಿ

ಸೆಕರೆಟರಿ : ಅಮ್ಮಾ ತಗೊಳ್ಳಿ ಲೆಕ್ಕಾದ ಪುಸ್ತಕಕ್ಕೆ ಸೈನ್ ಮಾಡಿ

ನಿರ್ಮಲಾ : ಸೈನ್ ಮಾಡ್ಬೇಕಾ ಸೈನು (ಎಂದು ಫೈಲನ್ನು ದೂರಕ್ಕೆ ಎಸೆಯುವಳು)

ನಿ.ಗೌಡ : ಸೈನ್ ಮಾಡ್ ಬೇಕೆಂದ್ರೆ ಮಾಡ್ಬೇಕು (ಹೊಡೆಯಲು ಮತ್ತೊಮ್ಮೆ ಕೈಯೆತ್ತುವನು)

ನಿರ್ಮಾಲಾ : ಮಾಡಲ್ಲ ಅಖಿದ್ರೆ ಮಾಡಲ್ಲ ನಮ್ ಹಳ್ಳಿ ಜನಕ್ಕೆ ಮೋಸ ಮಾಡಲ್ಲ (ನಿರ್ಮಲಳನ್ನು ಕೋಪದಿಖಿದ ಗೌಡ ಮನೆಯಿಖಿದ ಹೊರ ತಳ್ಳುತ್ತಾನೆ)

ಭರಮಾ: : ಇದಿಷ್ಟು ಆದಿನ ನಡೆದ ಕತೆ. ನಿರ್ಮಲಮ್ಮ ಸುಮ್ನೆ ಕೂರ್ಲಿಲ್ಲ ಅನ್ಯಾಖಿಯುವನ್ನು ಹೋಗಲಾಡಿಸ್ಬೇಕು, ಸತ್ಯವನ್ನು ಹೊರತರಬೇಕು ಅಖಿತ ನಮ್ಮೂರಿನ ಹೋರಾಟಗಾರ ವಿಶಾಲಪ್ಪನಮನೆಗೆ ಹೋಗುತ್ತಾಳೆ ಅಲ್ಲಿ. . . . (ವಿಶಾಲಪ್ಪನ ಮನೆ, ಅಲ್ಲಿಗೆ ನಿರ್ಮಲಮ್ಮನ ಆಗಮನ)

ವಿಶಾಲಪ್ಪ : ನಮಸ್ಕಾರ ನಿರ್ಮಲ ಬಾಖಿರ್ೕರ ಬರ್ರಿ ಬರ್ರಿ ಖಿಳ ಬರ್ರಿ ಏನ್ ಸಮಾಚಾರ ಬಖಿದಿದ್ದು

ನಿರ್ಮಲ : ನೋಡ್ರಿ ವಿಶಾಲಪ್ಪನವರೆ ನಮ್ಮ ಖಿಯಜಮಾನ್ರು ಸೆಕ್ರೆಟ್ರಿ ಇಖಿಜಿನಿಖಿಯರ್ ಸೇರಿ ಉದ್ಯೋಗ ಖಾತ್ರಿ ಖಿಯೋಜನೆಗೆ ಸಖಿಬಖಿದಿಸಿದಖಿತೆ ಬಡವರಿಗೆ ಕೂಲಿ ಕಾರ್ಮಿರಿಗೆ ಅನ್ಯಾಖಿಯ ಮಾಡಲ್ಲಿಕಾತರ. ನನಗೆ ಚೆಕ್‌ಗಳಿಗೆ ಸೈನ್ ಮಡ್ರಿ ಅಖಿಥ ಖಿತ್ತಾಖಿಯ ಮಾಡ್ಲಿಕಾತರ

ವಿಶಾಲಪ್ಪ : ಚೆಕ್ಕಿಗೆ ಸೈನ್ ಮಾಡಿದ್ರ?

ನಿರ್ಮಲ : ಇಲ್ಲ.

ವಿಶಾಲಪ್ಲ : ಬಹಳ ಖಿಳ್ಳೆ ಕೆಲಸ ಮಾಡಿದಿರ ಬಾಖಿಯರ. ನಾನು ಸುಮಾರು ದಿನಗಳಿಖಿದ ನೋಡ್ಲಿಕಾತಿನಿ. ಆ ಮೂರು ಜನರು ಸೇರಿ ಜನಕ್ಕೆ ಮೋಸ ಮಾಡ್ಲಿಕಾತರ ನೀವು ಸಹಾಖಿಯ ಮಾಡಖಿಗಿದ್ರ ನಾನು ಖಿಖಿದು ಪ್ಲಾನ್ ಮಾಡ್ತಿನಿ.

ನಿರ್ಮಲ : ಬಡ ಬಗ್ಗರಿಗೆ ಖಿಳ್ಳೆದು ಆಗುವಖಿಗಿದರ್ರ ನಾನು ಸಹಾಖಿಯ ಮಾಡ್ತಿನಿ ಹೇಳ್ರಿ ನಾ ಏನ್ ಮಾಡ್ಬೇಕು?

ವಿಶಾಲಪ್ಪ : ನೋಡ್ರಿ ಬಾಖಿಯರ ಆ ಮೂವರು ಮಾಡಿರು ಭ್ರಷ್ಟಚಾರವನ್ನ ಬಖಿಯಲಿಗೆಳಿಬೇಕಖಿತ ನಾನು ಮಾಹಿತಿ ಹಕ್ಕಿನಡಿ ಕಾಗದ ಪತ್ರಗಳನ್ನ ತಖಿಯಾರು ಮಾಡಿದಿನಿ ನಿಮ್ಮೆಜಮಾನ್ರು ತಾಯಿ ಖಿಯಲ್ಲಮನ ಭಕ್ತರಾಗಿದ್ದಾರೆ ಅವರು ತಾಯಿ ಮುಖಿದೆ ಸುಳ್ಳು ಹೇಳಲ ಅಖಿಥ ಇಡೀ ಊರಿಗೂರೆ ಹೊಗಳುತ್ತದೆ. ಮುಳ್ಳನ್ನ ಮುಳ್ಳಿನಿಖಿದ ತೆಗಿ ಬೇಕು ನನ್ನ ಮಾತಿನ ಅರ್ಥ. . .

ನಿರ್ಮಲ : ಹಾ; ಅರ್ಥ ಆಖಿಯ್ತು ರೀ.

ವಿಶಾಲಪ್ಪ : ಈಗ ನೀವು ಹೋಗಿ ಖಿಯಲ್ಲಮ್ಮನ ಗುಡಿಖಿಯಲ್ಲಿ ಪಖಿಚಾಯಿತಿನಿ ಸೇರಲು ಊರ ಜನಕ್ಕೆ ಡಖಿಗೂರ ಸಾರಸ್ರಿ.

ಭರ್ಮ : ಹಿಖಿಗಾಖಿಯ್ತುಖಿತೆ ನೋಡ್ರಿ.

(ಆ ಸಮಖಿಯದಲ್ಲಿ ಖಿಬ್ಬ ಡಖಿಗುರ ಹೋಡೆಖಿಯುತ್ತಾ ಬರುತ್ತಾನೆ.)

ಡಖಿಗುರಗಾರ : ಇವತ್ತು ಗುಡಿ ತಾವ ನಮ್ಮ ಅಧ್ಯಕ್ಷಮ್ಮ ಮತ್ತು ವಿಶಾಲಪ್ಪಾನೋರು ಸಭೆ ಸೇರ್ತಾರ, ಎಲ್ಲರೂ ಬರಬೇಕು

ರುದ್ರ : ಅದಕ್ಕ ಇವತ್ತ ಗ್ರಾಮ ಪಂಚಾಯಿತಿಗಿ ನಮ್ಮ ಸಾಮಾಜಿಕ ಕಾರ್ಯಕರ್ತ ವಿಶಾಲಪ್ಪ\ಮುತ್ತಿಗಿ ಹಾಕೋರು ಇದ್ದಾರ . . . .

ಮಾಸ್ತರ : ಆಂ ! ಹೌದಲ್ಲ ಮರೆತಿದ್ದೆ. ಈ ಜಾಯಿಕೋ ಐ ಮೀನ್ ಜಯಕುಮಾರನ ಗದ್ದಲದೊಳಗ ! ಗೊತ್ತಾಗಲಿಲ್ಲ. ನಡಿರಿ ಅತ್ತ ಹೋಗೋಣ. (ಹೊರಡುವರು)

## ದೃಶ್ಯ-2

(ಮೂರು ನಾಲ್ಕು ಜನ ಜೋಗತಿಯರು. ಕೊರಳಲ್ಲಿ ಕವಡಿಸರ, ಮುತ್ತಿನ ಸರ ಹಾಕಿಕೊಂಡು ಹಣೆತುಂಬ 'ಭಂಡಾರ' ಬಳೆದು ಚೌಡಕಿ ನುಡಿಸುತ್ತ ಪದವೊಂದನ್ನು ಹಾಡುವರು.)

ಚೌಡಕಿಪದ : ತಂದಾನೆ ತಾನೋ ತಾನೆ ತಂದಾನೋ ತಾನ
ತಾನ ತಂದಾನೊ ತಾನೆ ತಾನೋ
ಹೊರಟೇವ ನಾವ ಹೋರಾಟ ಖಾತ್ರಿ
ದೊರಿಲಿಲ್ಲ ನಮಗ ನೋಡಿರಿ ಉದ್ಯೋಗ ಖಾತರಿ

(ಚೌಡಕಿ ಪದ ಮುಗಿಯುತ್ತಿದ್ದಂತೆ ಜೋಗವ್ವ ಒಬ್ಬಳಲ್ಲಿ ಎಲ್ಲವ್ವ ಮೈಯಲ್ಲಿ ಬರುವಳು. ಆರಂಭದಲ್ಲಿ ರಣಹಲಗೆ ವಾದನ, ಚೌಡಕಿ ವಾದನದ ಲಯಕ್ಕೆ 'ಅಹ . . . . ಅಹ . . . . ಅಹ . . . . ಹ್ಞಾಂ' ಎನ್ನುತ್ತ ಎರಡ್ಮೂರು ನಿಮಿಷ ಕುಣಿಯುವಳು. ಎಲ್ಲರೂ ದಂಗಾಗುವರು. ಒಬ್ಬ ಜೋಗಪ್ಪ ಅಲ್ಲಿರುವ ಎಲ್ಲರಿಗೂ ಭಂಡಾರವನ್ನು ಹಣೆಗೆ ಹಚ್ಚ ತೊಡಗುವನು...ನಿಧಾನಕ್ಕೆ ಎಲ್ಲವ್ವ ಮೈಯಲ್ಲಿ ಬಂದವಳು ಮಾತಾಡ ತೊಡಗುವಳು. ಒಂದಷ್ಟು ಜನ ಕಾಲಿಗೆ ಧಡಾನೆ ಬೀಳುವರು. ತಮ್ಮ ಅರ್ಜ ಕೇಳುವರು.)

ವ್ಯಕ್ತಿ-1 : ಅವ್ವ, ನನತಾಯೆ, ಈ ಮೋರ್ಚಾದೊಳಗsನೂ ನೀ ನನ್ನ ಭಕ್ತರನ್ನ ಮರೆತಿಲ್ಲ . . . . (ಜೋರಾಗಿ) 'ಎಲ್ಲವ್ವ ನಿನ್ನ ಮ್ಯಾಲಕ ಉಧೋ ಉಧೋ ಉಧೋs' ನನ್ನ ಅರ್ಜ ಕೇಳು ತಾಯಿ . . . .

ಎಲ್ಲವ್ವ : ಲೋ ಮಗನs ನಾ ಮೋರ್ಚಾದೊಳಗsನ ಯಾಕ ಬಂದ್ನಿ ಹೇಳು ?

ವ್ಯಕ್ತಿ-1 : ಯಾಕ ತಾಯಿ ?

ಎಲ್ಲವ್ವ : ಕಾರಣ . . . . ಮನುಷ್ಯ ಮಣ್ಣಿನ ಋಣ, ನೀರಿನ ಋಣ, ಗಾಳಿ ಬೆಳಕಿನ ಋಣ ತೀರಿಸದs ಕೃತಘ್ನನಾಗಿ, ರಾಕ್ಷಸನಾಗಿ ಮನಸ್ಯಾರನ್ನ ತಿಂದ ಹಾಕಲಿಕ್ಕ ಹತ್ಯಾನ. ಅದಕ್ಕ ನಿಮ್ಮ ಕಷ್ಟ ಕೇಳಾಕ ಬಂದೇನೋ ಮಗನs !

ಎಲ್ಲವ್ವ : ಲೋ ಭಕ್ತ . . . .

ನಿಂಗನಗೌಡ : ತಾಯಿ ಆಜ್ಞಾ ಮಾಡವ್ವ . . . .

ಎಲ್ಲವ್ವ : ನಿನ್ನ ಹೆಂಡತಿ ಮುಗ್ದೆ. ಈ ಹಳ್ಳಿಯ ಏಳ್ಗೆಗೆ ಧಡಪಡಿಸೋಳು. ಗ್ರಾಮ ಸ್ವರಾಜ್ಯದ ಕನಸು ಕಾಣೋಳು . . . . ಅವಳಿಲ್ಲದ ವೇಳೆಯೊಳಗ ನೀವು ಮಾಡಿದ್ದು ಸರಿಯೇನು ?

ನಿಂಗನಗೌಡ : (ಅಂಜುತ್ತ, ಅಳಕುತ್ತ) ನಾವು . . . . ನಾವೂ ಛಲೋನs ಮಾಡಾಕತ್ತೀವಿ ತಾಯಿ . . . .

ನಿರ್ಮಲಾ : ಅದೇನ್ ಚಲೊ ಮಾಡಿದಿರೋ ಅದನ್ನ ನಾನ್ ಜನಕ್ಕ್ ಈಗಾಗ್ಲೆ ಹೇಳಿಖಿಯಾಖಿಯ್ತು . . . .(ನಿ.ಗೌಡ ಸಿಟ್ಟನಿಖಿದ ಏಖಿರ್ಯ ಅನ್ನುವವನು ಆಗ)

ಎಲ್ಲವ್ವ : . . . ಲೋ ವಿಶಾಲಪ್ಪ . . . .
(ತಟ್ಟನೆ ವಿಶಾಲಪ್ಪ ಕುಲಕರ್ಣಿ ಮುಂದೆ ಬರುವನು.)

ವಿಶಾಲಪ್ಪ : ತಾಯೆ . . . . ಅಪ್ಪಣೆ ಆಗಲಿ . . .

ಎಲ್ಲವ್ವ : ನಿನ್ನ ಕಾಗದ ಪತ್ರದೊಳಗ ಏನದ ಅದನ್ನ ನೀನು ಹೇಳ್ತಿಯೋ, ಏನು ನಾನs ಹೇಳಿಬಿಡಲೋ?

ವಿಶಾಲಪ್ಪ : ಆಯಿತು . . . . ತಾಯೇ ನಾನs ಸಭಾಕ್ಕ ಹೇಳತೀನಿ . . . . ತಪ್ಪಿದ್ದಲ್ಲಿ ನೀ ಒಪ್ಪಿಸು . . . .

ಎಲ್ಲವ್ವ : ಹುಂ. (ಒಮ್ಮೆ ಸುತ್ತಿದಂಗೆ 'ಉಹುಂ ಉಹುಂ' ಎಂದು ಸುತ್ತ ತೊಡಗುವಳು. ಬಳಿಕ ಶಾಂತವಾಗಿ ಸುತ್ತುವಳು.)


ವಿಶಾಲ : ಅಧ್ಯಕ್ಷರ ಮತ್ತು ಕಾರ್ಯದರ್ಶಿಗಳ, ತಾಯಿ ಸಾಕ್ಷಾತ್ ಸವದತ್ತಿ ಎಲ್ಲವ್ವನ ಸಾಕ್ಷಿಯಾಗಿಟ್ಟು ಹೇಳತೀನಿ. ಇವು ಮಾಹಿತಿ ಹಕ್ಕಿನಡಿ ನಾನು ತಂದ ಕಾಗದ ಪತ್ರಗಳು. ಅಧ್ಯಕ್ಷರ, ನೀವಿಲ್ಲದಾಗ ನಡೆದ ಕಾರುಬಾರು. 'ಮಹಾತ್ಮಾ ಗಾಂಧಿ ಹೆಸರಿನ ಈ ಗ್ರಾಮೀಣ ಉದ್ಯೋಗ ಖಾತರಿ ಯೋಜನಾ ಕಾಮಗಾರಿಗಳನ್ನ ಬಯಸಿ ಬಂದ ಬಡಕೂಲಿಗಳಿಗೆ ಕೊಟ್ಟಿಲ್ಲ. ಪಂಚಾಯತಿ ವ್ಯಾಪ್ತಿಯ ದಿಬ್ಬನಹಟ್ಟಿ, ಪರೂರ, ಬೆಡಗಿನಹಳ್ಳದ ಬಹುತೇಕ ಕಾಮಗಾರಿಗಳಲ್ಲಿ ಅಪರಾ ತಪರಾ ಆಗೇದ . . . .

| | | |
|---|---|---|
| ನಿರ್ಮಲಾ | : | (ಎಲ್ಲವ್ವ ಮಧ್ಯೆ ಪ್ರವೇಶಿಸಿ) ಜೆ.ಸಿ.ಬಿ.ಯಂತ್ರ ಬಳಸಿ ಕಾಮಗಾರಿ ಮಾಡೇರಿ. ಇದನ್ನ ಮಾಡಿಸಲಿಕ್ಕೆ ಸೆಕ್ರೆಟರಿಗಳಿಗಿ ಗೌಡರs ನಿರ್ದೇಶಿಸಿದಾರ. |
| ವಿಶಾಲಪ್ಪಾ | : | (ಅಲ್ಲಿದ್ದ ಒಬ್ಬೊಬ್ಬರನ್ನು ತೋರಿಸುತ್ತ) ಇಂವ ಚರಂಡಿ ಕೆಲಸ ಮಾಡ್ಯಾನ ರೊಕ್ಕ ಚುಕ್ತಾ ಆಗಿಲ್ಲ. ಕೇಳಿದರ ಈ ತ್ರಿಮೂರ್ತಿಗಳು ಖೊಟ್ಟಿ ಸಬೂಬು ಹೇಳತಾ ಬಂದಾರ. |
| ಜಯಕುಮಾರ | : | ಓಹ್ ಮೈ ಗಾಡೆಸ್ ಎಲ್ಲವ್ವ . . . . ಈ ಶೋಷಣ ತಡಕೊಳ್ಳದs ನಾ ಗೋವಾಕ್ಕ ಹ್ವಾದ್ನಿ. ಸಿನ್ಸಿಯರಲಿ ಐ ಸೆಲ್ಯೂಟ್ ಯು. (ವಿಶಿಷ್ಟವಾಗಿ ವಂದಿಸುವನು.) |
| ಮಹಾಂತ | : | ಎಲ್ಲವ್ವ ನಿನ್ನಲ್ಲಿ ಒಂದು ಅರ್ಜ ಮಾಡಕೋತೀನಿ |
| ಎಲ್ಲವ್ವ | : | ಕೇಳು ಮಗನs . . . . |
| ಮಹಾಂತ | : | ಊರ ಜನರ ಕಣ್ಣೊಳಗ ಮಣ್ಣೆರಚಿದವರ ಇವರ ಇನ್ನಷ್ಟ ಕಾರಸ್ಥಾನಗಳನ್ನು ಅರಹೋ ತಾಯಿ...ನೀ ಸಾಕ್ಷಾತ್ ದೇವಿ . . . . ನೀ ಎಲ್ಲ ಬಲ್ಲವಳು...ಎಲ್ಲವ್ವ ಅನಿಸಿಕೊಂಡಿದ್ದಿ. |
| ವಿಶಾಲ | : | ಸರಕಾರಿ ಶಾಲೆಯೆದರು ಗುಂಡಿ ತೊಡಿಸ್ಯಾರ, ಶಾಲಾಭಿವೃದ್ಧಿಗೆ 2 ಲಕ್ಷ ತೋರಿಸ್ಯಾರ...ಆದರ ಅಲ್ಲಿ ಕಾಮಗಾರಿಯ ಸುಳಿವೇ ಇಲ್ಲ, ಮಾತಾಯಿ ! |
| ವ್ಯಕ್ತಿ 5 | : | (ಕೋಪದಿಂದ) ಎಲ್ಲರ ಅವ್ವ ಎಲ್ಲವ್ವ, ಸಾಕ್ಷಾತ್ತಾಗಿ ನಮಗ ಮೋಸ ಮಾಡಿ ಹಣ ಹೊಡೆದದ್ದನ್ನ ಹೇಳ್ಯಾಳ...ಎಲ್ಲ ನೋಡತ ನಿಂತೀರಲ . . . . ಹೂಂ ತಗೊಳ್ರಿ ಒಬ್ಬೊಬ್ಬರನ್ನ . . . . (ಕೆಲವರು ನುಗ್ಗುವರು.)<br>(ತಕ್ಷಣ ನಿಂಗನಗೌಡ, ಶಂಕರಪ್ಪ, ಧರೆಪ್ಪ ಎಲ್ಲವ್ವಳ ಕಾಲಿಗೆ ಬೀಳುವರು. ನಿರ್ಮಲ ಎಲ್ಲರಿಗೂ ತಡೆಯುವಳು.) |
| ನಿರ್ಮಲ | : | ತಡಿರಿ . . . . ತಡಿರಿ . . . . ಶಾಂತರಾಗಿರಿ. ಕಾಯಿದೆ ಕೈಯ್ಯಾಗ ತಗೋಬ್ಯಾಡ್ರಿ . . . . ತಾಯಿನs ಇದಕ್ಕೊಂದು ದಾರಿ ತೋರಿಸಲಿ . . . . (ಕೆಲವರು 'ಎಲ್ಲವ್ವ ನಿನ್ನ ಹೆಸರಿಗೆ ಉಧೋ ಉಧೋ ಕೂಗುವರು.) |
| ಎಲ್ಲವ್ವ | : | ಇಲ್ಲ ಮಗಳs, ನಾನು ಹೇಳೋ ಸತ್ಯಾನ ಹೇಳಿದ್ನಿ ಇನ್ನ ಕಾಯಿದೆಶಿರ ಕೆಲಸ ನಿನ್ನದು . . . . |
| ನಿರ್ಮಲ | : | ಬಂಧುಗಳs ನಡೆದದ್ದಕ್ಕೆಲ್ಲ ನೀವs ಸಾಕ್ಷಿ ಅದೀರಿ. ನಾನು ಮೇಲಿನ ಅಧಿಕಾರಿಗಳಿಗೆ ಸೂಚನಾ ಮಾಡ್ತೀನಿ...ಇದರ ತನಿಖೆ ನಿಷ್ಪಕ್ಷಪಾತವಾಗಿ ಆಗಿ ತಪ್ಪಿತಸ್ಥರು ನನ್ನ ಗಂಡನೆ ಆಗಿದ್ರು ಶಿಕ್ಷೆ ಆಗಲಿ . . . . ಇದರ ಹಿಂದಿರೋ ಎಲ್ಲ ಶಕ್ತಿಗಳಿಗೂ ದಂಡನೆ ಆಗಲಿ . . . . ಇದು ತಾಯಿ ಸವದತ್ತಿ ಎಲ್ಲವ್ವನ ಮೇಲೆ ಪ್ರಮಾಣ ಹೇಳ್ತಿನಿ . . . . (ಎಲ್ಲರೂ ಖುಷಿಯಿಂದ ಚಪ್ಪಾಳೆ ತಟ್ಟುವರು. ಮೈಯಲ್ಲಿ ದೇವರು ಬಂದವಳು– 'ಉಹುಂ, ಅಹ, ಅಹ ಹ್ಞಾಂ' ಎಂದು ಕಣ್ಣು ಬೆಳ್ಳಗೆ ಮಾಡುವಳು. (ಹಾಡು :- ಹೊರಟೇವ್ ನಾವ್ ಹೋರಾಟ ಖಾತ್ರಿ) |

(ಮುಖದಲ್ಲಿ ನಗು, ಎದುರಿಗೆ ಜಯಕುಮಾರ ಜಾನಪದ ಹಾಡೊಂದಕ್ಕೆ ಹೆಜ್ಜೆ ಹಾಕುತ್ತ ಸರಳ ಜಾನಪದ ಶೈಲಿಯ ಉಡುಗೆಯಲ್ಲಿ ಬರುವನು.)

| | | |
|---|---|---|
| ಮಹಾಂತ | : | ಅರೆ, ಜಯಕುಮಾರ, ಐ ಮೀನ್ ಜಾಯಕೋ ಇದೇನಿದು ಹೊಸ ಅವತಾರ ! |
| ಜಯಕುಮಾರ | : | ಈಗ ಜಾಯಕೋ ಅಲ್ಲ, ಕೇವಲ ಜಯಕುಮಾರ ಮಾಂತಣ್ಣ. ನಾನೀಗ ಇಲ್ಲೇ ಇರಬೇಕಂತ ತೀರ್ಮಾನಿಸಿದೀನಿ. |
| ಮಹಾಂತ | : | ವಾವ್ ! ಗ್ರೇಟ್. ಗೋವಾ ? |
| ಜಯಕುಮಾರ | : | ನಾನು ಗೋವಾಕ್ಕ ಹೋಗೋದಿಲ್ಲ. ಇಲ್ಲಿ ನನ್ನ ಬೇರುಗಳಿದಾವ . . . . ನನ್ನದs ಜನ ಇದ್ದಾರ . . . . ಅನ್ಯಾಯದ ವಿರುದ್ಧ ಹೋರಾಡೋ ನಿನ್ನಂಥೋರ ಇದಾರ. ಮತ್ತ ನನ್ನದೂ ಸ್ವಲ್ಪ ಜಮೀನ ಐತಿ. ಉದ್ಯೋಗ ಖಾತ್ರಿ ಈಗ ಖಾತರಿಯಾಗಿನs ಸಿಗತೇತಿ. ನಮ್ಮ ಹಕ್ಕು ಅಧಿಕಾರಗಳನ್ನ ಇನ್ನ ಮ್ಯಾಲ ಯಾರು ಕಸಿದುಕೊಳ್ಳೋ ಧೈರ್ಯ ಮಾಡಲಾರರು. ಗೋವಾದೊಳಗ ಪರದೇಶಿತನ ಅನುಭವಿಸೋದಕ್ಕಿಂತ ನಮ್ಮವರ ನಡುವ ಸುಖ ದುಃಖ ಹಂಚಿಕೊಂಡ ಬದುಕಬೋದಲ್ಲ. (ಹಾಡು:- ಗುಳೇ ಹೋಗೋ ಮಖಿದಿಗೆಲ್ಲಾ) |

* * *




# KARNATAKA VIKAS : JANUARY 2012 SPECIAL ISSUE

A Monthly Magazine for Rural Development and Panchayat Raj Department, Government of Karnataka

**Regd. No. KA/BGGPO/2531/2012-14, Licence to post "Without Prepayment" WPP-32**

**RNI No. 28103/1976 Total No. of Page 124. Posted at Bangalore GPO on 9th,10,11th of every month**



**Despatcher**

**OFFICE OF THE CHIEF EDITOR, KARNATAKA VIKAS**

Rural Development and Panchayat Raj Department, Government of Karnataka

No. 309, 3rd Floor, Gate No.1, Multistoried Building, Dr. Ambedkar Veedhi, Bengaluru-560 001





**Printed at : GEETANJALI GRAPHICS**

**B-71 (New No. 84), KSSIDC Indl. Estate, 6th Block, Rajajinagar, Bengaluru-10. Tel : 23404232 / 4235 1346**